VEC, Library
003161

VEC, Library
003161

80

ಶಂಕರ

VECKAN1071

VIJAYA EVENING COLLEGE.
LIBRARY
BANGALORE-4.
ACCN. NO. 3161
SECTION
COST Rs. 15/=
Date 19.2.72 Librarian.

ಸಿದ್ಧೇಶ್ವರ ಪುರಾಣ

ಶಾಂತೇಶನ

ಸಿದ್ಧೇಶ್ವರ ಪುರಾಣ

ಸಂಪಾದಕರು :

ಬಿ. ನಂ. ಚಂದ್ರಯ್ಯ, ಎಂ.ಎ.,

ಶರತ್ ಪ್ರಕಾಶನ

೭೪, ೭ ನೇ ಮೇನ್, ಸರಸ್ವತಿಪುರಂ

ಮೈಸೂರು-೯

ಮೊದಲನೆಯ ಮುದ್ರಣ–೧೯೭೧. ೧೦೦೦ ಪ್ರತಿಗಳು

Shantesha's Siddheshwara Purana, Edited by Sri. B. N. Chandraiah, M.A., Lecturer in Kannada, Maharaja's College Mysore, and Published by Sharath Prakashana, Saraswathi Puram, Mysore-9.

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ.

ಗ್ರಂಥಾಲಯ ಪ್ರತಿ : ಇಪ್ಪತ್ತುರೂಪಾಯಿ

ಸಾಧಾರಣ ಪ್ರತಿ : ಹದಿನೈದುರೂಪಾಯಿ

ಮುದ್ರಣ :

ಶ್ರೀ ಮೀರಾ ಪ್ರಿಂಟರ್ಸ್, ಮೈಸೂರು.

ಅ ರ್ಪ ಣೆ

ಸಿದ್ಧಗಂಗಾ ಮಠಾಧ್ಯಕ್ಷರೂ, ಶ್ರೇಷ್ಠ ವಿದ್ವನ್ಮಣಿಗಳೂ, ದಾಸೋಹಮೂರ್ತಿಗಳೂ,
ಶಿವಯೋಗಿಗಳೂ ಆದ

ಶ್ರೀ|| ನಿ|| ಪ್ರ|| ಸ್ವಾ|| ಶ್ರೀ|| ಶ್ರೀ|| ಶಿವಕುಮಾರಸ್ವಾಮಿಗಳು

ಅವರಿಗೆ

ಕವಿ ಕಾವ್ಯ

'ಸಿದ್ಧೇಶ್ವರ ಪುರಾಣ'ವನ್ನು ಬರೆದ ಕವಿ ಶಾಂತೇಶ. ಅಮರಗುಂಡದ ಮಲ್ಲಿಕಾರ್ಜುನ ಪಂಡಿತನ ಘನ ದಿವ್ಯಾಜ್ಞೆಯಿಂದ ಶೂಲವನ್ನಡರಿದ ಗುರುಭಕ್ತನ ವಂಶದಲ್ಲಿ ಹುಟ್ಟಿದವನು. ಈತನ ತಂದೆ ಗುಬ್ಬಿಯ ಮಲ್ಲಣಾರ್ಯ. ತನ್ನ ತಂದೆಯಂತೆಯೇ ಕಾವ್ಯ, ಶಾಸ್ತ್ರಾದಿಗಳಲ್ಲಿ ವಿಶೇಷ ಪಾಂಡಿತ್ಯವನ್ನು ಗಳಿಸಿಕೊಂಡು ಖ್ಯಾತಿಯನ್ನು ಗಳಿಸಿದ ಕವಿ. ವಿರಕ್ತ ತೋಂಟದಾರ್ಯನು ವಾರ್ಧಕ ಷಟ್ಪದಿಯಲ್ಲಿ ಬರೆದ ತೋಂಟದ ಸಿದ್ಧೇಶ್ವರ ಪುರಾಣದ ಕಥಾನಾಯಕರಾದ ಸಿದ್ಧಲಿಂಗ ಶಿವಯೋಗಿಗಳ ಚರಿತ್ರೆಯನ್ನು ಭಾಮಿನಿ ಷಟ್ಪದಿಯಲ್ಲಿ ಒಂದು ಸಾವಿರ ಪದ್ಯಗಳಲ್ಲಿ ಬರೆದಿದ್ದಾನೆ. ಶಾಲೀವಾಹನ ಶಕ ೧೪೮೩ ನೆಯ ರೌದ್ರಿ ಸಂವತ್ಸರದಲ್ಲಿ ಅಂದರೆ ಕ್ರಿ.ಶ. ೧೫೬೧ ರಲ್ಲಿ ಈ ಗ್ರಂಥವನ್ನು ರಚಿಸಿದೆನೆಂದು ಕವಿಯು ಹೇಳಿಕೊಂಡಿದ್ದಾನೆ.

ಈ ಗ್ರಂಥದ ಆರಂಭದ ಪದ್ಯಗಳಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಸ್ತೋತ್ರವನ್ನು ಮಾಡಿದ ಮೇಲೆ ತನ್ನ ವಿಷಯವನ್ನು ಕುರಿತು ಈ ಕೆಳಗಿನ ಪದ್ಯಗಳಲ್ಲಿ ಈ ರೀತಿ ಹೇಳಿಕೊಂಡಿದ್ದಾನೆ :

ಅಮರಗುಂಡದ ಮಲ್ಲಿಕಾರ್ಜುನ
ನಮಲ ಘನ ದಿವ್ಯಾಜ್ಞೆಯಿಂ [ವಿ]
ಕ್ರಮದೆ ಶೂಲವನಡರಿದುರು ಗುರುಭಕ್ತನನ್ವಯದೆ
ಅಮರ್ದು ರಾಜಿಸಿ ಸಕಲ ಶಾಸ್ತ್ರಾ
ಗಮಗಳಂ ನೆರೆ ತಿಳಿದು ಮತ್ತಂ
ವಿಮಲ ವಾತೂಲಕ್ಕೆ ಟೀಕಂ ಮಾಡೆ ಧರೆಯಲ್ಲಿ ॥ ೧-೧೫ ॥

ಲಾಲಿಸಲ್ಗಣ ಭಾಷ್ಯರತ್ನ [ಸು]
ಮಾಲೆಯಂ ಮಾಡುತ್ತೆ ಮತ್ತೆ ವಿ
ಶಾಲ ಚರಸೇವೆಯೊಳು ವರ್ತಿಸಿ ಷಟ್ಸ್ಥಲದೊಳಿರ್ಪಾ
ಲೋಲ ಗುಬ್ಬಿಯ ಮಲ್ಲಣಾರ್ಯನ
ಶಾಲಿ ಪುತ್ರಂ ಶಿವನ ಮಹಿಮೆಯ
ಲೀಲೆಯಿಂ ಪ್ರಕಟಿಸುವನವನ ವಿಶೇಷವೆಂತೆನಲು ॥ ೧-೧೬ ॥

ಧರಣಿಯೊಳ್ಸಂಸ್ಕೃತ ಮಹಾ ಬಂ
ಧುರದ ಕರ್ಣಾಟಕಂಗಳಾದಿಯ
ಸರಸ ಶಾಸ್ತ್ರಂಗಳು ಮುಖೋದ್ಗತವಾಗಿ ರಾಜಿಸುವ

ವರ ಬಸವ ಪೌರಾಣದತಿಶಯ
ದುರುತರದ ಘನ ಮಲ್ಲಣಾರ್ಯನ
ಪರಮಪುತ್ರಂ ಶಾಂತದೇಶಿಕನೊರೆದನೀ ಕೃತಿಯಂ ॥ ೧-೧೭ ॥

ಶರಣ ಲೋಚನ ಕೈರವಕೆ ಹಿಮ
ಕಿರಣನೆನಿಸುವ ಗುಮ್ಮಳಾಪುರ
ದುರತರದ ಶಾಂತೇಶನಂಘ್ರಿಯನೆನ್ನ ಮನದಲ್ಲಿ
ಹರುಷದಿಂದಂ ನೆನೆದು ಸಿದ್ಧೇ
ಶ್ವರನ ಕೃತಿಯ ಮಾಳ್ಪೆನೆನ್ನಯ
ಗುರು ಗಣೇಶ್ವರ ಮೂರ್ತಿಯಂ ಭಾವಿಸುತೆ ರಚಿಸುವೆನು ॥ ೧-೧೮ ॥

ಈ ಮೇಲಿನ ಪದ್ಯಗಳಿಂದ ಕವಿ ಶಾಂತೇಶನು ಎಂಥ ವಿದ್ವನ್ಮಣಿಗಳ ಮಧ್ಯೆ ಬೆಳೆದಿದ್ದಾನೆ ಎಂಬುದನ್ನು ಕಂಡಾಗ ಕವಿಯ ಪಾಂಡಿತ್ಯವನ್ನೂ ಊಹಿಸಿಕೊಳ್ಳಬಹುದು. ಇಲ್ಲಿ ಬಂದಿರುವ ಅಮರಗುಂಡದ ಮಲ್ಲಿಕಾರ್ಜುನ ಪಂಡಿತ, ಗುರುಭಕ್ತನ ವಂಶ, ಗುಬ್ಬಿಯ ಮಲ್ಲಣ್ಣ, ಅವನ ಪೌತ್ರ ಗುಬ್ಬಿಯ ಮಲ್ಲಣಾರ್ಯ ಒಬ್ಬೊಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಅದರಲ್ಲೂ ವೀರಶೈವ ಸಿದ್ಧಾಂತವನ್ನು ನಿರೂಪಿಸಿದವರಲ್ಲಿ ಶ್ರೇಷ್ಠ ವರ್ಗದ ವಿದ್ವಾಂಸರು, ಪಂಡಿತರು.

ಅಮರಗುಂಡದ ಮಲ್ಲಿಕಾರ್ಜುನ ಪಂಡಿತರು ಅಮರಗುಂಡದಲ್ಲಿದ್ದುಕೊಂಡು ಭಕ್ತರಿಗೆ ಪುರಾಣವನ್ನು ಹೇಳಿ ಅದರ ಅರ್ಥವನ್ನು ವಿವರಿಸುತ್ತ ಜ್ಞಾನದಾಸೋಹಿಗಳಾಗಿದ್ದರು. ಈ ಅಮರಗುಂಡವೇ ಈಗಿನ 'ಚಟಕಪುರಿ' ಅಥವಾ 'ಗುಬ್ಬಿ'. ತೋಂಟದ ಸಿದ್ಧಲಿಂಗ ಶಿವಯೋಗಿಗಳ ಗುರುಗಳಾದ ಗೋಸಲ ಚನ್ನಬಸವೇಶ್ವರರು ಶಿವಯೋಗ ಸಮಾಧಿಯಲ್ಲಿರುವ ಪುಣ್ಯಸ್ಥಳ, ಈ ಗುಬ್ಬಿ. ಇಂಥ ಪವಿತ್ರ ಪುಣ್ಯಕ್ಷೇತ್ರವಾದ ಗುಬ್ಬಿಯಲ್ಲಿ ಶಾಂತೇಶನ ಪೂರ್ವಜರು ಜನಿಸಿದರು. ಈ ಹಿರಿಯರೂ ಸಾಮಾನ್ಯರೇನಲ್ಲ. ಗುರುಭಕ್ತನು ತನ್ನ ಗುರುಗಳಾದ ಅಮರಗುಂಡನ ಮಲ್ಲಿಕಾರ್ಜುನ ಪಂಡಿತರು ಒಮ್ಮೆ ತಮ್ಮ ಶಿಷ್ಯರನ್ನು ಕುರಿತು ಮಂಚವನ್ನೇರಲು ಹೇಳಿ ತಾವು ನೆಲದಲ್ಲಿ ಕುಳಿತರು. ಆಗ ಶಿಷ್ಯರೆಲ್ಲ ಮಂಚದ ಮೇಲೆ ಕೂರದೆ ನೆಲದ ಮೇಲೆ ಕೂರಲು, ಗುರುಭಕ್ತನು ಗುರುಗಳ ಆಜ್ಞೆಯಂತೆ ಮಂಚವನ್ನೇರಿ ಕುಳಿತನು. ಆಗ ಶಿಷ್ಯರೆಲ್ಲ ಆತನನ್ನು ಗುರುದ್ರೋಹಿ ಎಂದಾಗ ಅವರ ಮಾತನ್ನು ಒಪ್ಪಿ, ಮತ್ತೊಮ್ಮೆ ಶೂಲವನ್ನೇರುವಂತೆ ಕೇಳಿದಾಗ ಆಗಲೂ ಗುರುಭಕ್ತನೇ ಹಸನ್ಮುಖದಿಂದ ಗುರುವಾಜ್ಞೆಯನ್ನು ಪಾಲಿಸಿ ಶೂಲವನ್ನೇರಿದ ವೀರನಿಷ್ಠ ಗುರುಭಕ್ತ. ಅಷ್ಟೇ ಅಲ್ಲದೆ ಒಂದು ದಿನ ಗುರುಪೂಜೆಗೆಂದು ಹೂ ತರಲು ಅತ್ಯಂತ ಸಡಗರದಿಂದ ಹೋಗುವಾಗ ತನ್ನ ಪಾದವು ಗುರುಪಾದುಕೆಯನ್ನು ಸೋಕಲು ತನ್ನ ಪಾದವನ್ನೇ ಕತ್ತರಿಸಿಕೊಂಡು, ಗುರುಗಳು ಬರುವಾಗ ಎದ್ದು ನಮಸ್ಕರಿಸಬೇಕೆಂದು

ಪ್ರಯತ್ನ ಪಡುತ್ತಿರುವುದನ್ನು ಕಂಡ ದಿವ್ಯಯೋಗಿ ಗುರು ಮಲ್ಲಿಕಾರ್ಜುನ ಪಂಡಿತರು ಅವನಿಗೆ ಪಾದ ಬರುವಂತೆ ಕರುಣಿಸಿದರು. ಇಂಥ ಗುರುಭಕ್ತಾರ್ಯನ ಪುತ್ರ ದೇಶಿಕ ಪಟ್ಟವರ್ಧನ ಸೌಂದರ್ಯ ಮಲ್ಲಿಕಾರ್ಜುನ ಪಂಡಿತ. ಈತನ ಮಗನೇ ಶಿವನನ್ನು ಮಾತನಾಡಿಸಿದ ನಾಗನಾಥಾರ್ಯ. ಈತನ ಮಗ ಅಸುರಗುಂಡಾರ್ಯ. ಈತನು ಸರ್ಪವನ್ನು ಲಿಂಗಕ್ಕೆ ಛತ್ರಿಯನ್ನಾಗಿ ಮಾಡಿದುದಲ್ಲದೆ, ಶೂದ್ರನಿಂದ ವೇದವನ್ನು ಓದಿಸಿ ಆತನನ್ನು ಭಕ್ತನನ್ನಾಗಿ ಪರಿವರ್ತಿಸಿದ. ಈ ಅಸುರಗುಂಡಾರ್ಯನ ವಂಶದಲ್ಲಿ ಹುಟ್ಟಿದವನೇ ಶಾಂತೇಶ ಕವಿಯ ಪ್ರಪಿತಾಮಹನಾದ ಗುಬ್ಬಿಯ ಮಲ್ಲಣ್ಣ ಅಥವಾ ಮಲ್ಲಣಾರ್ಯ. ಈತ ಗಣಭಾಷ್ಯರತ್ನಮಾಲೆಯನ್ನೂ ವಾತೂಲ ತಂತ್ರಕ್ಕೆ ಟೀಕೆಯನ್ನೂ ಬರೆದಿದ್ದಾನೆ.

ಗಣ ಭಾಷ್ಯರತ್ನಮಾಲೆ ಕನ್ನಡ ಸಾಹಿತ್ಯದ ಅಮೂಲ್ಯ ಗ್ರಂಥಗಳಲ್ಲಿ ಒಂದು. ಕವಿಯೇ ಹೇಳಿರುವಂತೆ "ಇದು ಪರಮ ವೀರಶೈವ ಸಿದ್ಧಾಂತ ತತ್ವಜ್ಞಾನಂ, ಇದು ವೀರಶೈವ ಪ್ರತಿಷ್ಠಾಪನಾಚಾರ್ಯ, ಇದು ದಿವ್ಯ ವೇದಾಂತ ಶಿರೋಮಣಿ, ಇದು ಸಮಸ್ತ ಶಾಸ್ತ್ರ ಮುಖ್ಯ ಮುಖ ದರ್ಪಣ, ಇದು ಮಹಾಜ್ಞಾನ ಪ್ರವರ್ಧನ ಪರಮಾನುಭಾವ ಸಂಬೋಧೆ, ಇದು ಸರ್ವಾಚಾರ ಸಂಪನ್ನ ಸಮಾರೂಢ ಸಂಗ್ರಹ, ಇದು ರಾಜಯೋಗ ಸಾಧ್ಯ ಸನ್ನಿಧಾನ, ಇದು ರಸಾಮೃತ ಪ್ರಸನ್ನ ಪ್ರಸಾದ, ಇದು ಅಜ್ಞಾನತಿಮಿರಾಂಜನ ಮಪ್ಪ ಮಹಾಪ್ರಸಂಗ." ಎರಡನೆಯದಾಗಿ ವಾತುಲಾಗಮದ ಶುದ್ಧಾಖ್ಯ ತಂತ್ರಕ್ಕೆ ಬರೆದಿರುವ ಟೀಕು : ಇದರಲ್ಲಿ ತತ್ವಭೇದ, ವರ್ಣಭೇದ, ಚಕ್ರಭೇದ, ವರ್ಗಭೇದ, ಮಂತ್ರಭೇದ, ಪ್ರಣವಭೇದ, ಬ್ರಹ್ಮಭೇದ, ಅಂಗಭೇದ, ಮಂತ್ರಜಾತ, ಮಂತ್ರ ಕೀಲಕಗಳೆಂಬ ದಶಪಟಲಗಳಿವೆ. ಈ ಆಗಮ ಗ್ರಂಥದ ಆದಿಯಲ್ಲಿ ಶಿವ ಸಾಧಕರಿಗೆ ಹಿತವಾಗುವ ಪ್ರಯೋಜನಕ್ಕಾಗಿ ವಾತುಲವೆಂಬ ಮಹಾಗಮದಲ್ಲಿಯ ಸಾರ ಗ್ರಂಥಕ್ಕಿಂತಲೂ ಸಾರವಾದ ಗ್ರಂಥವನ್ನು ಲೇಸಾಗಿ ಉದ್ಧರಿಸಿ, ಸಾವಿರ ಗ್ರಂಥದೊಡನೆ ಕೂಡಿ ಭುಕ್ತಿ ಮುಕ್ತಿಗಳನ್ನು ಕೊಡುವಂತಹ ಸಮಸ್ತ ಶಿವ ಜ್ಞಾನವನ್ನುಳ್ಳ ಶುದ್ಧಾಖ್ಯ ತಂತ್ರವು ದಧಿಯಲ್ಲಿ ಬೆಣ್ಣೆ ಹೇಗೋ ಹಾಗೆ ತಮ್ಮಿಂದ ಉದ್ಧರಿಸಲ್ಪಟ್ಟಿತೆಂದು ಶಿವನು ಸುವ್ರತನಾದ ಷಣ್ಮುಖನಿಗೆ ಹೇಳಿದ ಹಾಗೆ ನಿರೂಪಿತವಾಗಿದೆ.[1]

ಇವನ ಪೌತ್ರ, ಕವಿಶಾಂತೇಶನ ತಂದೆ ಗುಬ್ಬಿಯ ಮಲ್ಲಣಾರ್ಯ 'ಭಾವಚಿಂತಾರತ್ನ' ಮತ್ತು 'ವೀರಶೈವಾಮೃತ ಮಹಾಪುರಾಣ' ಗ್ರಂಥಗಳನ್ನು ರಚಿಸಿದ ಕವಿ. ಭಾವಚಿಂತಾರತ್ನದಲ್ಲಿ ಪ್ರಣವ ಪಂಚಾಕ್ಷರಿಯ ಮಹಿಮೆಯನ್ನು ತಿಳಿಸಲೋಸುಗ ಸತ್ಯೇಂದ್ರಚೋಳನ ಕತೆಯನ್ನು ದ್ರಾವಿಡದೊಳೊರೆದುದಂ ಕನ್ನಡದಿ ಪೇಳ್ದಂ'. ಎರಡನೆಯದಾಗಿ ವೀರಶೈವಾಮೃತ ಪುರಾಣ, ವೀರಶೈವ ಧರ್ಮದ ಕೈಪಿಡಿ, ಒಂದು ರೀತಿಯಲ್ಲಿ ಅದೊಂದು ವಿಶ್ವ

1. ಭಾವ ಚಿಂತಾರತ್ನ ಸಂಗ್ರಹ—ಸಂ.ಶ್ರೀ. ಸಿ. ಮಹಾದೇವಪ್ಪ. ಎಂ.ಎ.,

ಕೋಶ. ಇದು ಶಿವನ ಪಂಚವಿಂಶತಿ ಲೀಲೆಗಳು ವೇದ ಪುರಾಣ ಶಾಸ್ತ್ರಗಳ ವಚನಾರ್ಥ, ಪುರಾತನ ನೂತನ ಭಕ್ತರ ಚರಿತ್ರೆ, ಶೈವ ವೀರಶೈವ ತತ್ವವಿಚಾರ, ಧರ್ಮಾಧರ್ಮ ಸ್ವರೂಪ, ಬಸವ ಪುರಾಣ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ ಮೊದಲಾದ ಪುರಾಣ ಕಾವ್ಯಗಳ ಕಥಾ ಸಂಗ್ರಹ ಇತ್ಯಾದಿ ವಿವಿಧ ವಿಷಯಗಳ ಸಾರ ಸಂಗ್ರಹ. ದಕ್ಷಿಣ ಕೈಲಾಸವೆನಿಸಿಕೊಂಡ ಕಕುದ್ಗಿರಿ (ಶಿವಗಂಗೆ) ಯಲ್ಲಿ ಶ್ರೀ ಮರುಳಾಚಾರ್ಯರ ಪ್ರವರವನ್ನು ಹೊಂದಿದ ಶೀಲಪಟ್ಟಸ್ಥಲ ಹಲಗೆಯಾಚಾರ್ಯರು ತಮ್ಮ ಶಿಷ್ಯನಾದ ಕೆಂಚವೀರಾಪ್ಪನಿಗೆ ಮಾಡಿದ ಬೋಧೆಯನ್ನು ನಿರೂಪಿಸುವುದೇ ಈ ಗ್ರಂಥದ ಮೂಲ ಉದ್ದೇಶ. ಸಕಲಾಗಮ ವಿಶಾರದನಾದ ಶೀಲವಂತಾರ್ಯನ ಶಿಷ್ಯನಾದ ಹಲಗೆಯಾಚಾರ್ಯನು ಗುಬ್ಬಿಯ ಮಲ್ಲಣಾರ್ಯನನ್ನು ಕರೆಸಿ "ಮಹಾಕವಿಯಾದ ಮಲ್ಲಣಾರ್ಯನೇ, ಶ್ರೇಷ್ಠವಾದ ವೀರಶೈವ ಮತ ಸಂಬಂಧವಾದ ಆಚಾರದ ಮತ್ತು ಶಿವನ ಮಹಿಮೆಯನ್ನು ವೇದ ಪುರಾಣಾಗಮಾದಿ ಸಮ್ಮತಿಯಿಂದ ಕೂಡಿರುವಂತೆ ಒಂದು ಗ್ರಂಥವನ್ನು" ರಚಿಸೆಂದು ಪ್ರೇರಿಸಿದ ಫಲವಾಗಿ ರೂಪುಗೊಂಡ ಉದ್ಗ್ರಂಥ ವೀರಶೈವಾಮೃತ ಮಹಾ ಪುರಾಣ.

ಇದರ ಆಧಾರದಿಂದ ಕವಿಯ ವಂಶವನ್ನು ಹೀಗೆ ರೇಖಿಸಬಹುದು.

ಅಮರ ಗುಂಡ (ಗುಬ್ಬಿ)ದ ಮಲ್ಲಿಕಾರ್ಜುನ ಪಂಡಿತ (ಗುರು)
|
ಗುರುಭಕ್ತ (ಪಟ್ಟಶಿಷ್ಯ)
|
ದೇಶಿಕಪಟ್ಟವರ್ಧನ ಸೌಂದರ್ಯ ಮಲ್ಲಿಕಾರ್ಜುನ ಪಂಡಿತ
|
ನಾಗನಾಥಾರ್ಯ
|
ಅಮರಗುಂಡಾರ್ಯ
|
ಇವನ ವಂಶದಲ್ಲಿ ಹುಟ್ಟಿದವನು
ಗುಬ್ಬಿಯ ಮಲ್ಲಣ್ಣ (ಮಲ್ಲಣಾರ್ಯ)
|
ಗುರುಭಕ್ತ + ಸಪ್ಪೆಯಮ್ಮ
|
ಗುಬ್ಬಿಯ ಮಲ್ಲಣಾರ್ಯ
|
ಶಾಂತೇಶ.

ಇಂಥ ವೇದಾಗಮ ಪುರಾಣಗಳಲ್ಲಿ ಕನ್ನಡ–ಸಂಸ್ಕೃತ ಭಾಷೆಗಳಲ್ಲಿ ಪರಿಣತರಾದ, ಪ್ರಕಾಂಡ ಪಾಂಡಿತ್ಯವನ್ನು ಗಳಿಸಿಕೊಂಡು ಪ್ರಖ್ಯಾತರಾದ ಕವಿಗಳ ವಂಶದಲ್ಲಿ ಹುಟ್ಟಿದವನು ಶಾಂತೇಶ. ಅಲ್ಲದೆ ಈತನ ಪ್ರಪಿತಾಮಹನಾದ ಗುಬ್ಬಿಯ ಮಲ್ಲಣ್ಣನು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯರಲ್ಲಿ ಒಬ್ಬನಾಗಿದ್ದ. ಅಂತೆಯೇ ಈ ಎಲ್ಲ ಹಿರಿಯ ವಿದ್ವಾಂಸರ ಸಂಸ್ಕಾರದ ಪ್ರಭಾವ ಸಹಜವಾಗಿಯೇ ಶಾಂತೇಶನಲ್ಲಿ ಮೂಡಿ ಬಂದಿದೆ. ಅವನ ಕಾವ್ಯದ ಉದ್ದಕ್ಕೂ ಇದರ ಪರಿಣಾಮವನ್ನು ಕಾಣುತ್ತೇವೆ. ಶಾಂತೇಶನು ತನ್ನ ವಂಶದ ಮಹಾನುಭಾವರಾದ ಈ ಹಿರಿಯರನ್ನು ನೆನೆದ ಮೇಲೆ ಶರಣ ಲೋಚನಕೈರವಕೆ ಹಿಮಕಿರಣನೆನಿಸುವ ಗುಮ್ಮಳಾಪುರದ ಶಾಂತೇಶನನ್ನು ನೆನೆದು ತನ್ನ ಗುರು ಗಣೇಶ್ವರ ಮೂರ್ತಿಯನ್ನು ಭಾವಿಸುತ್ತ ಸಿದ್ಧೇಶ್ವರನ ಕೃತಿರಚನೆ ಮಾಡುವೆನೆಂದು ಕವಿ ಹೇಳಿಕೊಂಡಿದ್ದಾನೆ. ಅನಂತರ ಶಿವ ಗೌರಿಯರನ್ನು ನೆನೆದು, ಪರಮ ಷಟ್ಸ್ಥಲ ಮಾರ್ಗಾನುಚಾರಿಗಳಿಂದ ಪ್ರಭುದೇವರು, ಬಸವಣ್ಣ, ಚನ್ನಬಸವಣ್ಣ ಇವರುಗಳನ್ನು ಸ್ತುತಿಸಿ, ಷಡಾನನ, ವೀರೇಶ, ಭೃಂಗಿರಿಟಿ, ಪಾಲ್ಕುರಿಕೆ ಸೋಮೇಶ್ವರ ಮೊದಲಾದ ಅಖಿಳ ಶರಣರನ್ನು ನೆನೆದು ಇಂಥವರ ಹರಕೆ ನನ್ನಲ್ಲಿರುವಾಗ ಭುವಿಯಲ್ಲಿದಕೆಣೆಯಿಲ್ಲದ ಸರ್ವಬಾಧಾರಹಿತವಾದ ಈ ಕೃತಿ ಅತಿಸೇವ್ಯವೆಂದು ಹೇಳಿಕೊಳ್ಳುತ್ತಾನೆ.

ಸನ್ನುತ ಮಲ್ಲಣಾರ್ಯನ ಕಂದನಾದ ಶಾಂತನು ಅಮಲಾನಂದದಿಂದ ತೋಂಟದ ಸಿದ್ಧದೇಶಿಕನ ಚಂದದಗ್ಗದ ಕೃತಿಯನ್ನು ಬರೆಯಲು ತನಗೆ ಸಹಕಾರಿಗಳು ಬೇಕೆಂದು ಚಿಂತಿಸುತ್ತಿರುವಾಗ :

ತೋಂಟದಾರ್ಯನ ಕರುಣದಮಲ ಲ
ಲಾಟ ಲೋಚನ ಮೂರ್ತಿ ಷಟ್ಸ್ಥಲ
ದಾಟದೊಳು ವರ್ತಿಸುವ ಸುರತರು ಚಂದ್ರಶೇಖರನು
ಕೋಟಲೆಯ ಮಾಣಿಸುತೆ ನುಡಿದಂ
ಸಾಟಿಯಿಲ್ಲೆನಿಸುವೆನು ಕೃತಿಯಂ
ಮಾಟನಿಪ್ಪೆಮ್ಮಾಜ್ಞೆಯೊಳು ನೀಂ ಪೇಳ್ವುದೆಂದೆನಲು ॥೧–೩೦॥

ಷಟ್ಸ್ಥಲದಾಟದೊಳು ವರ್ತಿಸುವ ಸುರತರು ಚಂದ್ರಶೇಖರದೇವರಾಜ್ಞೆಯನ್ನು ಶಿರದೊಳಾಂತು ಹೇಳಿದೆನೇ ಹೊರತು ತಂದ್ರಿ ರಹಿತನಾದ ತೋಂಟದಾರ್ಯ ಯತೀಂದ್ರನನ್ನು ಬಣ್ಣಿಸುವೊಡೆನ್ನಳವೇ ಎಂದು ತನ್ನ ವಿನಯವನ್ನು ಮೆರೆದಿದ್ದಾನೆ. ಈ ಚಂದ್ರಶೇಖರನೇನೂ ಸಾಮಾನ್ಯನಲ್ಲ. ಈತನು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪಟ್ಟಶಿಷ್ಯರಲ್ಲಿ ಒಬ್ಬ. ಶಿವಯೋಗಿಗಳು ತನಗೆ ಬೋಧಿಸಿದ ತತ್ವವನ್ನೆ ಶಾಂತೇಶನ ಮೂಲಕ ಷಟ್ಪದಿಯ ರೂಪದಲ್ಲಿ ಬರೆಸುತ್ತಾನೆ. ಈತನು ಕಾಮಾರಿಯರಿ ಷಡ್ವರ್ಗಮಂ ಕೆಡಿಸಿ, ಭಾವಜಾಂತಕನಾಗಿ ವರ್ತಿಸಿ, ಸದಾ ಷಟ್ಸ್ಥಲಾನುಸಾರಿಯಾಗಿ

ಪಂಚ ಮಂತ್ರವೆ ಗಾತ್ರವಾದನ
ಪಂಚ ತತ್ವಾದಿಗಳ ಬಲ್ಲನ
ಪಂಚ ಪಂಚೀಕೃತಿಯನರಿದನ ತನುವಿಕಾರಗಳ
ಮುಂಚೆ ಜರಿದನ ಮಾಯೆಯಂ ಸಲೆ
ವಂಚಿಸಿರ್ದನ ಶರಣ ಸೃಷ್ಟಿಯ
ನಂಚಿತವೆ ತಿಳಿದವನ ಸನ್ನುತ ಚಂದ್ರಶೇಖರನ ||೧-೩೩||

ಆಜ್ಞೆಯನ್ನು ಶಿರದೊಳಾಂತು ಚಂದ್ರಶೇಖರನು ಸಾಂಗವಾಗಿ ಹೇಳಿದ ಬೋಧೆಯನ್ನು ಕಾವ್ಯದಲ್ಲಿ ಹೇಳುತ್ತೇನೆ. ಪ್ರಾಜ್ಞರು ಅಹುದೆಂಬ ರೀತಿಯಲ್ಲಿ ಹೇಳುತ್ತೇನೆ; ಅಜ್ಞರು ಅರಿಯದಿದ್ದರೆ ಕುಂದೇನು. ಶಿವಭಕ್ತರು ಇದನ್ನು ನೋಡಿ ಮೇಳವಿಸಿ ತಿದ್ದುವುದು, ಲಾಲಿಸಿ ಕೇಳುವುದು ಎಂದೂ ಹೇಳುತ್ತಾನೆ.

ಪ್ರತಿಯೊಂದು ಸಂಧಿಯ ಅಂತ್ಯದಲ್ಲಿ :

ಇದು ವಿಮಲ ಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರ
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣವ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವುದು ||

ಎಂದು ಹೇಳಿಕೊಂಡಿದ್ದಾನೆ. ಇದರಿಂದ ಕವಿಯ ಹೆಸರು 'ಶಾಂತೇಶನೆಂದೂ, ರಚಿಸಿದ ಕಾವ್ಯ ಸಿದ್ಧೇಶ್ವರ ಪುರಾಣವೆಂದೂ' ಈತನ ತಂದೆ ಮಲ್ಲಣಾರ್ಯನೆಂದೂ ಸ್ಪಷ್ಟವಾಗುತ್ತದೆ. ಶಾಂತೇಶನಿಗೆ ಶಾಂತ, ಶಾಂತದೇಶಿಕ ಶಾಂತೀಶ್ವರ ಎಂಬ ಹೆಸರುಗಳೂ ಇವೆಯೆಂಬುದು ಆತನ ಕೃತಿಯಿಂದಲೇ ತಿಳಿದು ಬರುತ್ತದೆ.

ಈತನು ತನ್ನ ಈ ಕೃತಿಯಲ್ಲಿ ಪ್ರಧಾನವಾಗಿ ಭುವನಕೋಶ, ಧರ್ಮಾಧರ್ಮ ವಿಚಾರ, ಶಿವನ ಪಂಚವಿಂಶತಿ ಲೀಲೆಗಳು, ಷಟ್ಸ್ಥಲ ಕ್ರಮ ಮುಂತಾದುವುಗಳನ್ನು ಕಾವ್ಯ ರೂಪದಲ್ಲಿ ಹೇಳಿದ್ದಾನೆ.

ತೋಂಟದ ಸಿದ್ಧಲಿಂಗ ಶಿವಯೋಗಿಗಳ ಜೀವನ ಚರಿತ್ರೆ :

ಭಾರತ ಪ್ರಧಾನವಾಗಿ ಋಷಿ-ಮುನಿಗಳ ದೇಶ ; ವೇದ-ಉಪನಿಷತ್ತುಗಳನ್ನು ಉದ್ಘೋಷಿಸಿದ ರಾಷ್ಟ್ರ. ಧರ್ಮ, ನ್ಯಾಯ, ಸತ್ಯ, ಅಹಿಂಸೆಗಳನ್ನು ಬೋಧಿಸಿ ಆಚರಿಸಿ ಮಾನವ ಜನಾಂಗಕ್ಕೆ ಬೆಳಕನ್ನು ನೀಡಿ ಮಾನವನ ಗುರಿಯತ್ತ ಮನುಷ್ಯನನ್ನು ಕೊಂಡೊಯ್ಯುವ ಕಾರ್ಯದಲ್ಲಿ ಸಫಲವಾಗಿದ್ದ ನಾಡು. ಸಹಸ್ರ ಸಹಸ್ರ ವರ್ಷಗಳಿಂದಲೂ

ಸತ್ಯ ಪಥದಲ್ಲಿ ಚಲಿಸುತ್ತಿದ್ದ ಈ ದೇಶದಲ್ಲಿ ಧರ್ಮಕ್ಕೆ ಗ್ಲಾನಿಯುಂಟಾದಾಗಲೆಲ್ಲ, ಆ ಧರ್ಮದ ಉದ್ಧಾರಕ್ಕಾಗಿ ಸಾಕ್ಷಾತ್ ಭಗವಂತನೇ ನಾನಾ ರೂಪಗಳಲ್ಲಿ ಅವತರಿಸಿದ್ದಾನೆ. ಧರ್ಮವನ್ನು ಎತ್ತಿ ಹಿಡಿದಿದ್ದಾನೆ. ಭೂಮಿಯಲ್ಲಿ ಅವತರಿಸುವ ಭಗವಂತ ಹೀಗೇ, ಈ ರೀತಿಯಲ್ಲಿಯೇ ಹುಟ್ಟಿ ಬರುತ್ತಾನೆಂದು ಹೇಳುವಂತಿಲ್ಲ. ಒಟ್ಟಿನಲ್ಲಿ ಭಗವಂತನ ಅಂಶವನ್ನೇ ಹಂಚಿಕೊಂಡು ಅವತರಿಸುವ ಮನುಷ್ಯನು ಮತ್ತೆ ಅವನಲ್ಲಿಯೇ ಲೀನವಾಗುವ ತನಕ ತನ್ನ ಲೌಕಿಕ ಜೀವನದಲ್ಲಿಯೇ ಆಧ್ಯಾತ್ಮವನ್ನು ಸಾಧಿಸುತ್ತಾನೆ.

ಧರ್ಮಭಾರತದ ಒಂದಂಗವಾದ ಕರ್ನಾಟಕದಲ್ಲಿಯೂ ಆಗಾಗ್ಗೆ ಸಮಾಜದಲ್ಲಿ ಅಧರ್ಮ, ಅನ್ಯಾಯ, ಅನಾಚಾರ, ಅಶಾಂತಿ, ಅತೃಪ್ತಿ, ಜಿಹಾಸೆ, ನಿರಾಸೆ, ಜುಗುಪ್ಸೆಗಳು ಮೂಡಿದಾಗಲೆಲ್ಲ ಮಹಿಮಾ ಪುರುಷರು ಜನಿಸಿ ಭೂಲೋಕದಲ್ಲಿ ಭಕ್ತಿಯನ್ನು ಬಿತ್ತಿ ಆ ಮೂಲಕ ಶಾಂತಿ-ತೃಪ್ತಿ ಸಮೃದ್ಧಿಯನ್ನು ನೆಲೆಗೊಳಿಸಿ ಕಣ್ಮರೆಯಾಗಿದ್ದಾರೆ. ಕ್ರಿ.ಶ ೧೨ನೆಯ ಶತಮಾನದಲ್ಲಿ ಇಂಥ ಮಹಿಮನೊಬ್ಬನು ಜನಿಸಿ ತನ್ನ ಆತ್ಮೋನ್ನತಿಯ ಜೊತೆಗೆ ತನ್ನ ಸುತ್ತ-ಮುತ್ತಲ ವಾತಾವರಣವನ್ನೂ ಉನ್ನತಗೊಳಿಸಿ, ಜನಜೀವನದಲ್ಲಿ ಭಕ್ತಿಯ ದೀಪ್ತಿಯನ್ನು ಬೆಳಗಿಸಿ ಇಡೀ ಸಮಾಜವನ್ನೇ ತೊಳೆದ ಜಗಜ್ಯೋತಿ ಬಸವೇಶ್ವರ. ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಯ್ಯ, ಅಕ್ಕಮಹಾದೇವಿ, ಮುಕ್ತಾಯಕ್ಕ ಮುಂತಾದ ಶರಣ–ಶರಣೆಯರ ಅನುಭಾವ ಗೋಷ್ಠಿಯಲ್ಲಿ ಸಮಾಜದ ಜಟಿಲ ಸಮಸ್ಯೆಗಳನ್ನು ಚರ್ಚಿಸಿ, ಬಿಡಿಸಿ ಸಮಾಜೋದ್ಧಾರಮಾಡಿ ಭಕ್ತಿಯ ಸಿರಿ ಬೆಳೆಯನ್ನು ಬೆಳೆದ ; ಚನ್ನಬಸವಣ್ಣನ ನೇತೃತ್ವದಲ್ಲಿ ಷಟ್ಸ್ಥಲವನ್ನು ರೂಪಿಸಿ ಪ್ರಚಾರ ಮಾಡುವ ವ್ಯವಸ್ಥೆಯನ್ನು ಮಾಡಿದ. ಹೀಗೆ ಪ್ರಾರಂಭವಾದ ಭಕ್ತಿಕ್ರಾಂತಿ ಅನಂತರದಲ್ಲೂ ಹರಿಹರ-ರಾಘವಾಂಕ–ಕೆರೆಯ ಪದ್ಮರಸ ಮುಂತಾದ ಕವಿಗಳ ಮೂಲಕ ಮುಂದುವರಿದು ಆ ತತ್ವ ಚಿರಸ್ಥಾಯಿಯಾಗಿ ನಿಲ್ಲಲು ಅನುಕೂಲವಾಯಿತು. ಇದೇ ಮಾರ್ಗದಲ್ಲಿ ನಡೆದು ಮಧ್ಯ ಕಾಲದಲ್ಲಿ ಸಮಾಜದಲ್ಲಿ ಉಂಟಾಗಿದ್ದ ಹ್ರಾಸ, ತುಮುಲ–ಗೊಂದಲಗಳ ಮಧ್ಯೆ ಕ್ಷಣ ಕಾಲ ನಿಂತು ಹೋಗಿದ್ದ ಭಕ್ತಿವಾಹಿನಿಯನ್ನು ಹರಿಸಿ, ಸಮಾಜದಲ್ಲುಂಟಾಗಿದ್ದ ಅನಾಚಾರ–ವ್ಯಭಿಚಾರಗಳನ್ನು ತೊಡೆದು, ವಾಮ ಪಂಥವನ್ನು ಹತ್ತಿಕ್ಕಿ ಷಟ್ಸ್ಥಲ ಸಿದ್ಧಾಂತವನ್ನುದ್ಧರಿಸಿ, ದೇಶದಲ್ಲೆಲ್ಲ ಬಿತ್ತರಿಸಿ ಆ ಪರಂಪರೆಯನ್ನು ಮುಂದುವರಿಸಿದ ಕೀರ್ತಿ ಸಿದ್ಧಲಿಂಗ ಶಿವಯೋಗಿಗಳಿಗೆ ಸಲ್ಲುತ್ತದೆ.

"ಸಾಮಾನ್ಯವಾಗಿ ನಿಸ್ವಾರ್ಥ ನಿರ್ವಂಚನೆಯಿಂದ ಲೋಕ ಕಲ್ಯಾಣಕ್ಕಾಗಿ ಪ್ರಾಮಾಣಿಕವಾಗಿ ಶ್ರಮಿಸಿದ ವ್ಯಕ್ತಿಗಳ ಬಗ್ಗೆ ಅವರಿಂದ ಹಲವಂದಗಳಲ್ಲಿ ಉಪಕೃತರಾದ ಪ್ರಜೆಗಳು ತಮ್ಮ ಕೃತಜ್ಞತೆಗಳನ್ನು ಹೃತ್ಪೂರ್ವಕವಾಗಿ ಸಮರ್ಪಿಸುತ್ತಾರೆ. ಹೀಗೆ ಸಮರ್ಪಿಸುವಾಗ ಆ ವ್ಯಕ್ತಿಯು ಸಾಧಿಸಿದ ಒಂದೊಂದು ಮಹತ್ಕಾರ್ಯಗಳು ಅವರ ಮನಸ್ಸಿನಲ್ಲಿ ಹಸುರಾಗಿ ಉಳಿದಿರುವುದರಿಂದ ಆ ವ್ಯಕ್ತಿ ಶಕ್ತಿಯನ್ನು ಕುರಿತು ಮನತುಂಬಿ ಹಾಡುತ್ತಾರೆ, ಪ್ರಶಂಸಿಸುತ್ತಾರೆ, ಶ್ರದ್ಧಾ–ಭಕ್ತಿಗಳಿಂದ ಪೂಜಿಸುತ್ತಾರೆ. ಶ್ರದ್ಧೆ

ಭಕ್ತಿಗಳು ಜನ ಮನದಲ್ಲಿ ಉದಯಿಸಿದಾಗ ಅವುಗಳ ಜೊತೆಯಲ್ಲಿಯೇ ಆ ವ್ಯಕ್ತಿ ಅಮಾನುಷ, ಅತಿಮಾನವ ಎಂಬ ಕಲ್ಪನೆಯೂ ಮೂಡಿ ಬರುತ್ತದೆ. ಅಮಾನುಷನೆನಿಸಿದ ಈ ವ್ಯಕ್ತಿ ದೈವೀ ಭಾವನೆಯಿಂದ ಕೂಡಿದವನಾಗಿ ಮಾನವನ ಸಾಮಾನ್ಯ ಮಾನಸಿಕ ಅಂತ ರ್ವ್ಯಾಪಾರಗಳಿಗೆ ನಿಲುಕದ, ಮಹಿಮಾನ್ವಿತವಾದ ಬೆರಗುಗೊಳಿಸುವಂಥ ಅಸಾಧಾರಣ ಕೃತ್ಯಗಳನ್ನೆಸಗುತ್ತಾನೆ. ಇಂಥ ಅದ್ಭುತ ಕಾರ್ಯಗಳನ್ನು ಆಗು ಮಾಡಿದಾಗ ತಮ್ಮ ಶಕ್ತಿಗೆ ಹೊರತಾದ ಘಟನೆಗಳನ್ನು ಕಂಡ ಜನ ಅದಕ್ಕೆ ಮುಗ್ಧರಾಗುತ್ತಾರೆ; ಮೋಹ ಗೊಳ್ಳುತ್ತಾರೆ; ಶ್ರದ್ಧೆಯಿಂದ ತಲೆ ಬಾಗುತ್ತಾರೆ. ಅವನನ್ನು ಮಹಾಪುರುಷ, ಕಾರಣಿಕ ಪುರುಷ ಎಂದು ಹೊಗಳುತ್ತಾರೆ. ಆ ಘಟನೆಗಳನ್ನು ಕುರಿತು ಚಿಂತಿಸುತ್ತಾರೆ. ಅಮಾನುಷ ಕೃತ್ಯಗಳೆಂದು ಕರೆಯುತ್ತಾರೆ. ಅವುಗಳಿಗೆ 'ಪವಾಡ'ದ ಪಟ್ಟವನ್ನು ಕಟ್ಟುತ್ತಾರೆ. ಅಲ್ಲಿಂದ ಮುಂದೆ 'ಪವಾಡ'ಗಳ ಹೆಸರಿನಲ್ಲಿ ಆ ಘಟನೆಗಳು ಒಂದಕ್ಕೆ ನೂರಾಗಿ ಬೆಳೆದು ಆ ವ್ಯಕ್ತಿಯ ಅತಿಮಾನವತೆಗೆ ಸಂಕೇತಗಳಾಗಿ ನಿಂತು ಅವನನ್ನು 'ಪವಾಡ ಪುರುಷ' ನೆಂದು ಕರೆಯುವಂತಾಗುತ್ತದೆ. ಆ ವ್ಯಕ್ತಿಯ ಮಾನವ ಮಟ್ಟದಲ್ಲಿ ನಿರ್ವಹಿಸಲಾದ ಇತರ ಕಾರ್ಯಗಳನ್ನೆಲ್ಲ ಬದಿಗೊತ್ತಿ ಪವಾಡಗಳನ್ನೇ ಮುಂದು ಮಾಡಿ ಪವಾಡ ಪುರುಷನ ಮಹಿಮೆಯನ್ನು ಮೆರೆಯುತ್ತಾರೆ. ಕಾಲಗತಿಯಲ್ಲಿ ಪವಾಡಗಳೆಂದರೆ ಬೇರೆ ಯಾವುದೋ ಅರ್ಥಹೀನವಾದ ಕವಿಗಳಿಂದ ಉತ್ಪ್ರೇಕ್ಷಿಸಲ್ಪಟ್ಟ ಊಹಾ ಪ್ರಪಂಚದ ಸ್ವ ಕಪೋಲ ಕಲ್ಪಿತ ಪ್ರಸಂಗಗಳು ಎಂಬ ಕಲ್ಪನೆ ಮೂಡಿ ಬರುತ್ತದೆ. ಇದರಿಂದ ಕೊನೆಗೆ ಆ ವ್ಯಕ್ತಿಯ ಸ್ಫುಟ ವ್ಯಕ್ತಿತ್ವವೇ ಮರೆಯಾಗುವ ಸಂದರ್ಭ ಒದಗುತ್ತದೆ."[1]

ಹೀಗೆ ಜನರು ಒಂದು ರೀತಿಯಲ್ಲಿ ಇಂಥ ಮಹಿಮಾಪುರುಷರ ಜೀವನದ ಐತಿಹಾಸಿಕ ವಿಷಯಗಳನ್ನು ಮರೆ ಮಾಡಲು ಕಾರಣರಾದರೆ, ವಿಶೇಷವಾಗಿ ವೀರಶೈವರಲ್ಲಿ ಸ್ವತಃ ಕವಿಯಾಗಲಿ, ವಚನಕಾರರಾಗಲಿ ತಮ್ಮ ಪೂರ್ವಜೀವನದ ಐತಿಹಾಸಿಕ ವಿಷಯಗಳನ್ನು ಹೇಳಿ ಕೊಳ್ಳದೆ, ತಾವು ಗುರುಗಳ ಕೈಯಿಂದ ಶಿವ ದೀಕ್ಷೆಯನ್ನು ಪಡೆದು ಕೊಂಡ ಮೇಲೆ ತಮ್ಮನ್ನು 'ಗುರುಕರಕಮಲ ಸಂಜಾತ'ರೆಂದು ಸಂಬೋಧಿಸಿಕೊಂಡು ತಮ್ಮ ಮುಂದಿನ ಜೀವನದ ಪ್ರತಿಯೊಂದು ಸಂದರ್ಭದಲ್ಲಿಯೂ ಗುರುಗಳನ್ನೇ ಮುಂದೆ ಮಾಡಿಕೊಂಡು ಹೋಗುತ್ತಾರೆ. ಸಿದ್ಧಲಿಂಗ ಶಿವಯೋಗಿಗಳೂ ತಮ್ಮ ಗುರುಕಾರುಣ್ಯ ಸ್ಥಲದ ವಚನದಲ್ಲಿ 'ಗುರುವೇ ತಾಯಿ, ಗುರುವೇ ತಂದೆ, ಗುರುವೇ ಬಂಧುಗಳು ; ಗುರುವಿನಿಂದ ಪರವಿನ್ನಾರೂ ಇಲ್ಲ.[2] ಎಂದು ಹೇಳುತ್ತಾರೆ. ಹೀಗೆ ಗುರುವೇ ತಂದೆ, ತಾಯಿ, ಬಂಧು–ಬಳಗ ಎಂದು ಹೇಳಿಕೊಂಡು ಶಿವಾಶ್ರಯದಲ್ಲಿ ಹುಟ್ಟಿ, ಭವಾಶ್ರಯವನ್ನು ನೆನೆ

1. ಬಸವ ಪವಾಡ–ಸಂ.ಬಿ.ಸಂ. ಚಂದ್ರಯ್ಯ. ಎಂ.ಎ., ಪು. 38–39.

2. ಷ. ಜ್ಞಾ. ಸಾ–ವ. 167–8, —ಸಂ. ಡಾ॥ ಆರ್.ಸಿ. ಹಿರೇಮಠ. ಎಂ.ಎ. ಪಿಎಚ್.ಡಿ.,

ಯದೆ, ಗುರುವಿನಿಂದ ಉಪದೇಶವನ್ನು ಪಡೆದು, ಗುರು ಪುತ್ರನೆನೆಸಿಕೊಂಡ ಬಳಿಕ ಪೂರ್ವದ ತಾಯಿ, ತಂದೆಯೆಂದು, ಬಂಧುಗಳೆಂದು, ಮಲಸಂಬಂಧವ ನೆನೆಯಲಾಗದೆಂದು ಹೇಳಿ ಕೊಂಡಿರುವುದರಿಂದ ಅವರ ಜೀವನದ ವಿಷಯದಲ್ಲಿಯೂ ಹೆಚ್ಚಿನ ಐತಿಹಾಸಿಕ ಸಂಗತಿ ಗಳನ್ನು ತಿಳಿಯುವುದು ಕಷ್ಟವಾಗಿದೆ. ಆದರೂ ಕೆಲವು ಗ್ರಂಥಗಳ ಸಹಾಯದಿಂದ ಸಾಧ್ಯವಾದಷ್ಟು ಮಟ್ಟಿಗೆ ಅವರ ಜೀವನ ಚರಿತ್ರೆಯನ್ನು ರೂಪಿಸಬಹುದಾಗಿದೆ.

ವಿಜಯ ನಗರದ ರಾಜನಾದ ಪ್ರೌಢದೇವರಾಯನು ಆಳಿದ ಮೇಲೆ ವಿರೂಪಾಕ್ಷ ರಾಯ (೧೪೬೭-೧೪೭೮) ನ ಕಾಲದಲ್ಲಿ ನಿರಂಜನ ಗಣೇಶ್ವರನೊಡನೆ ವರಗಣೇಶ್ವರರೇ ಳ್ನೂರ್ವರಂ ಕೂಡಿಕೊಂಡು ಭೂಮಿಯಲ್ಲಿ ಹುಟ್ಟಿ ಜಂಗಮ ಸ್ಥಲವಾಂತು ಪರಮ ಷಟ್ಸ್ಥಲವನುದ್ಧರಿಸೆಂದು ಹೇಳಿ ಕಳುಹಿಸಲು (ಈಶ್ವರನು) ಪರಮ ಗೋಸಲ ಚನ್ನಬಸ ವೇಶ್ವರನ ಹಸ್ತಸರಸಿರುಹದಿಂದ ನಿರಂಜನ ಗಣೇಶ್ವರನು ಉದಿಸಿ ಸಿದ್ಧೇಶನೆಂಬ ಹೆಸರನ್ನು ಪಡೆದು ಷಟ್ಸ್ಥಲವನ್ನುದ್ಧರಿಸಿದನೆಂದು ಚೆನ್ನಬಸವ ಪುರಾಣದಿಂದ ತಿಳಿದು ಬರುತ್ತದೆ. ಆದುದರಿಂದ ಈ ಅವಧಿಯಲ್ಲಿ ಇವರು ಬಾಳಿರಬಹುದೆಂದು ತಿಳಿಯುತ್ತ ದೆ.

ಈ ಕಾವ್ಯದಲ್ಲಿ ದೊರೆಯುವ ಆಧಾರದ ಜೊತೆಗೆ ಸಿದ್ಧಲಿಂಗ ಶಿವಯೋಗಿಗಳ ವಿಷಯದಲ್ಲಿ ರಚಿತವಾಗಿರುವ ಕುಣಿಗಲ್ ತಾಲ್ಲೂಕಿನ ೪೯ ನೆಯ ಶಿಲಾಶಾಸನವೂ ಇವರ ಕಾಲ ನಿರ್ಣಯದ ದೃಷ್ಟಿಯಿಂದ ಕ಼ಾಗೂ ಇತರ ದೃಷ್ಟಿಗಳಿಂದ ಬಹಳ ಮಹತ್ವಪೂರ್ಣ ವಾದುದು. ಈ ಶಾಸನದ ಕಾಲವನ್ನು ಕ್ರಿ.ಶ. ೧೪೮೦ ಎಂದು ಊಹಿಸಿದ್ದಾರೆ. ಇದೇ ಶಾಸನದಲ್ಲಿ ಇವರು ಸಮಾಧಿ ಹೊಂದಿದ ವಿಷಯವೂ ಹೇಳಲ್ಪಟ್ಟಿರುವುದರಿಂದ ಇವರು ಸಮಾಧಿ ಹೊಂದಿದ ಕಾಲ ಹಾಗೂ ಶಾಸನವನ್ನು ಪ್ರತಿಷ್ಠಾಪಿಸಿದ ಕಾಲ ಎರಡಕ್ಕೂ ಮಧ್ಯೆ ಅಲ್ಪ ಕಾಲದ ಅಂತರವಿರಬಹುದೆಂಬುದನ್ನು ಈ ಶಾಸನಾಧಾರದಿಂದಲೇ ಊಹಿಸ ಬಹುದಾಗಿದೆ. ಆದರೆ ಸಿದ್ಧಲಿಂಗೇಶ್ವರ ಸಾಂಗತ್ಯವನ್ನು ಬರೆದ ಹೇರಂಬ ಕವಿಯು ಸಾಂಗತ್ಯದ ಕೊನೆಯಲ್ಲಿ ಶಿವಯೋಗಿಗಳೇ ಮಠದ ಮುಂದೆ ಶಿಲಾ ಶಾಸನವನ್ನು ನಿಲ್ಲಿಸಿ ಅಲ್ಪ ಕಾಲದಲ್ಲಿಯೇ ಕೈವಲ್ಯ ಹೊಂದಿದರೆಂದು ಹೇಳಿದ್ದಾನೆ. ಇದು ಅಸಂಭವವಾದರೂ ಅವರ ಸಮಾಧಿ ಹಾಗೂ ಶಾಸನದ ಪ್ರಸ್ಥಾಪನ–ಎರಡೂ ಘಟನೆಗಳು ಅಲ್ಪಾವಧಿ ಯಲ್ಲಿಯೇ ಜರುಗಿ ಹೋಗಿರಬೇಕೆಂದು ತಿಳಿಯಬಹುದಾಗಿದೆ. ಆದುದರಿಂದ ಶಿವಯೋಗಿ ಗಳು ಸಮಾಧಿಯನ್ನು ಹೊಂದಿದುದೂ, ಅವರ ವಿಷಯಕವಾದ ಶಾಸನವನ್ನು ಕೆತ್ತಿ ಸಿದುದೂ ಕ್ರಿ.ಶ. ೧೪೮೦ ಒಂದೇ ವರುಷವೆಂದು ಇಟ್ಟುಕೊಳ್ಳಲು ಅಭ್ಯಂತರವಿಲ್ಲವೆಂದು ತೋರುತ್ತದೆ ಎಂದು ಡಾ|| ಆರ್. ಸಿ. ಹಿರೇಮಠ ಅವರು ಅಭಿಪ್ರಾಯ ಪಡುತ್ತಾರೆ.

ಸಿದ್ಧಲಿಂಗ ಶಿವಯೋಗಿಗಳು ತಾವು ಇಹಲೋಕಕ್ಕೆ ಬಂದ ಕಾರ್ಯವನ್ನು ಯಶ ಸ್ವಿಯಾಗಿ ನಿರ್ವಹಿಸಿ ಷಟ್ಸ್ಥಲವನ್ನುದ್ಧರಿಸಿ ಸಮಾಧಿ ಹೊಂದಿದುದು ಎಡೆಯೂರಿ ನಲ್ಲಿಯೇ, ಎಂಟು ಜಡೆಯ ಚಿಟ್ಟಗ ದೇವರು ಕಟ್ಟಿಸಿದ ಮಠದಲ್ಲಿಯೇ ಎಂಬುದು ಇದೇ ಶಾಸನದ ೨೫-೩೨ ಪಂಕ್ತಿಗಳಲ್ಲಿ ಹೇಳಿರುವ ಮಾತುಗಳಿಂದ ಗೊತ್ತಾಗುತ್ತದೆ. ಈ

ಶಾಸನದ ಪ್ರಕಾರ ಚನ್ನವೀರಪ್ಪ ಒಡೆಯರ ವಂಶಾವಳಿಯನ್ನು ಹೀಗೆ ರೂಪಿಸಬಹುದು :

ಚನ್ನರಾಯ ಒಡೆಯರು
|
ಲಿಂಗಪ್ಪ ಒಡೆಯರು
|
ಚನ್ನವೀರಪ್ಪ ಒಡೆಯರು
(ಸತಿ ಪಾರ್ವತಮ್ಮ)

ಈ ವಂಶದಲ್ಲಿ ಮೂರನೆಯವರಾದ ಚನ್ನವೀರಪ್ಪ ಒಡೆಯರು ದಂಪತಿ ಸಮೇತರಾಗಿ ಎಂಟು ಜಡೆಯ ಬಗೆಯ ಚಿಟ್ಟಗ ದೇವರಿಗೆ ತಮ್ಮ ಭಕ್ತಿಯನ್ನು ಸಲ್ಲಿಸಿ ಅವರ ಮೂಲಕ ಎಡೆಯೂರಿನಲ್ಲಿ ಕಲ್ಲು ಮಠವನ್ನು ಕಟ್ಟಿಸಿದ ಮೇಲೆ ಶಿವಯೋಗಿಗಳು ಈ ಮಠದಲ್ಲಿಯೇ ಶಿವಯೋಗ ಸಮಾಧಿಗೆ ಸಲ್ಲುತ್ತಾರೆ. ಅಲ್ಲದೆ ಈ ವಂಶದ ಮೊದಲಿಗರಾದ ಚನ್ನರಾಯ ಒಡೆಯರು ಶಿವಯೋಗಿಗಳ ಪಾದ ಪದ್ಮಾರಾಧಕರಾಗಿದ್ದರೆಂದೂ ಈ ಶಾಸನದಿಂದ ತಿಳಿದು ಬರುವುದರಿಂದ ಸಿದ್ಧಲಿಂಗೇಶ್ವರರು ಇವರ ಕಾಲದಲ್ಲಿ ಪೂಜನೀಯ ಸ್ಥಾನವನ್ನಲಂಕರಿಸಿದ್ದರಲ್ಲದೆ ಮೂರನೆಯವರಾದ ಚನ್ನವೀರಪ್ಪ ಒಡೆಯರ ಕಾಲದಲ್ಲಿಯೂ ಬದುಕಿದ್ದರೆಂದ ಮೇಲೆ, ತಲೆಮಾರಿಗೆ ೨೫ ವರ್ಷಗಳಂತೆ ಭಾವಿಸಿದರೂ ಮೂರು ತಲೆ ಮಾರುಗಳಲ್ಲಿ ಬದುಕಿದ್ದ ಯತಿಗಳು ಸುಮಾರು ೭೫ ವರ್ಷಗಳ ದೀರ್ಘ ಜೀವನವನ್ನು ಬಾಳಿರುವರೆಂದು ಅರ್ಥವಾಗುತ್ತದೆ. ಇದು ಇವರ ಉತ್ತರ ಜೀವನದ ಅಂದರೆ, ಶಿವ ದೀಕ್ಷೆ ಪಡೆದ ಮೇಲಿನ ಕಾಲಾವಧಿ. ಇವರ ಬಾಲ್ಯ ಹಾಗೂ ಸಾಧನೆಯ ಜೀವನದ ಅವಧಿಯನ್ನೂ ಪರಿಗಣಿಸಿದರೆ ಬಹುಶಃ ಸಿದ್ಧಲಿಂಗ ಶಿವಯೋಗಿಗಳು ೮೫–೯೦ ವರ್ಷಗಳ ತುಂಬು ಜೀವನವನ್ನು, ಸಾರ್ಥಕ ಬಾಳುವೆಯನ್ನು ನಡೆಸಿರುವರೆಂದರೆ ತಪ್ಪಾಗಲಾರದೇನೋ ! ಅಂದರೆ "ಸಿದ್ಧಲಿಂಗ ಶಿವಯೋಗಿಗಳು ಕ್ರಿ.ಶ. ೧೪೦೦ ರಲ್ಲಿ ಇಲ್ಲವೇ ಒಂದೆರಡು ದಶಕ ತತ್ಪೂರ್ವದಲ್ಲಿ ಭೂಮಿಗೆ ಅವತರಿಸಿರುವರು" ಎಂದು ಡಾ|| ಆರ್.ಸಿ. ಹಿರೇಮಠ ಅವರು ಅಭಿಪ್ರಾಯ ಪಡುತ್ತಾರೆ. ಕವಿಚರಿತಕಾರರು ಚನ್ನಬಸವ ಪುರಾಣದ ಆಧಾರದ ಮೇಲೆ ಇವರ ಕಾಲ ಸುಮಾರು ೧೪೭೦ ಎಂದು ಅಭಿಪ್ರಾಯ ಪಡುತ್ತಾರೆ.

ಸಿದ್ಧಲಿಂಗ ಶಿವಯೋಗಿಗಳು ಚನ್ನಬಸವೇಶ್ವರದೇವರ ಕರಕಮಲದಲ್ಲಿ ಉತ್ಪತ್ತಿಯಾದ ಶಿಶು ಸಿದ್ಧಲಿಂಗ ನಾನಯ್ಯ' ಎಂದು ತಮ್ಮ ವಚನವೊಂದರಲ್ಲಿ ಹೇಳಿಕೊಳ್ಳುತ್ತ ತಮ್ಮ ಹಿಂದಿನ ಗುರು ಪರಂಪರೆಯನ್ನು ಹೇಳಿಕೊಳ್ಳುತ್ತಾರೆ.

ಅನಾದಿ ಗಣೇಶ್ವರನ ಶಿಷ್ಯ ಆದಿ ಗಣೇಶ್ವರ ;
ಆದಿ ಗಣೇಶ್ವರನ ಶಿಷ್ಯ ನಿರ್ಮಾಯನೆಂಬ ಗಣೇಶ್ವರ ;
ನಿರ್ಮಾಯನೆಂಬ ಗಣೇಶ್ವರನ ಶಿಷ್ಯರು ನಿರಂಜನನೆಂಬ ಗಣೇಶ್ವರ ;
ನಿರಂಜನನೆಂಬ ಗಣೇಶ್ವರನ ಶಿಷ್ಯರು ಜ್ಞಾನಾನಂದನೆಂಬ ಗಣೇಶ್ವರನು ;

ಜ್ಞಾನಾನಂದನೆಂಬ ಗಣೇಶ್ವರನ ಶಿಷ್ಯರು ಆತ್ಮ ಗಣೇಶ್ವರನು ;
ಆತ್ಮ ಗಣೇಶ್ವರನ ಶಿಷ್ಯರು ಅಧ್ಯಾತ್ಮ ಗಣೇಶ್ವರ ;
ಅಧ್ಯಾತ್ಮ ಗಣೇಶ್ವರನ ಶಿಷ್ಯರು ರುದ್ರನೆಂಬ ಗಣೇಶ್ವರ ;
ರುದ್ರನೆಂಬ ಗಣೇಶ್ವರನ ಶಿಷ್ಯರು ಬಸವಪ್ರಭುದೇವರು ;
ಬಸವಪ್ರಭುದೇವರ ಶಿಷ್ಯರು ಆದಿಲಿಂಗ ದೇವರು ;
ಆದಿಲಿಂಗದೇವರ ಶಿಷ್ಯರು ಚೆನ್ನವೀರೇಶ್ವರದೇವರು ;
ಚೆನ್ನವೀರೇಶ್ವರ ದೇವರ ಶಿಷ್ಯರು ಹರದನ ಹಳ್ಳಿಯ ಗೋಸಲ ದೇವರು ;
ಹರದನ ಹಳ್ಳಿಯ ಗೋಸಲ ದೇವರ ಶಿಷ್ಯರು ಶಂಕರ ದೇವರು ;
ಶಂಕರ ದೇವರ ಶಿಷ್ಯರು ದಿವ್ಯಲಿಂಗದೇವರು ;
ದಿವ್ಯಲಿಂಗದೇವರ ಶಿಷ್ಯರು ಚೆನ್ನಬಸವೇಶ್ವರ ದೇವರು ;
ಚೆನ್ನಬಸವೇಶ್ವೇರ ದೇವರ ಕರ ಕಮಲದಲ್ಲಿ ಉತ್ಪತ್ತಿಯಾದ ಶಿಶು ಸಿದ್ಧಲಿಂಗ ನಾನಯ್ಯ.

* * * * * *

ಎಂದು ಹೇಳಿಕೊಂಡಿರುವ ಈ ವಚನದ ಆಧಾರದಿಂದ ಸಿದ್ಧಲಿಂಗ ಶಿವಯೋಗಿಗಳ ಗುರು ಪರಂಪರೆಯನ್ನು ಈ ರೀತಿಯಲ್ಲಿ ರೇಖಿಸಬಹುದು :

1 ಅನಾದಿ ಗಣೇಶ್ವರ
|
2 ಆದಿ ಗಣೇಶ್ವರ
|
3 ನಿರ್ವಾಣಯ ಗಣೇಶ್ವರ
|
4 ನಿರಂಜನ ಗಣೇಶ್ವರ
|
5 ಜ್ಞಾನಾನಂದ ಗಣೇಶ್ವರ
|
6 ಆತ್ಮ ಗಣೇಶ್ವರ
|
7 ಅಧ್ಯಾತ್ಮ ಗಣೇಶ್ವರ
|
8 ರುದ್ರ ಗಣೇಶ್ವರ
|
9 ಬಸವಪ್ರಭು ದೇವರು
|
10 ಆದಿಲಿಂಗ ದೇವರು
|
11 ಚೆನ್ನವೀರೇಶ್ವರ ದೇವರು
|
12 ಹರದನಹಳ್ಳಿಯ ಗೋಸಲ ದೇವರು
|
13 ಶಂಕರ ದೇವರು
|
14 ದಿವ್ಯಲಿಂಗ ದೇವರು
|
15 ಚೆನ್ನಬಸವೇಶ್ವರ ದೇವರು
|
16 ತೋಂಟದ ಸಿದ್ಧಲಿಂಗ ಶಿವಯೋಗಿಗಳು.

ವಿರಕ್ತ ತೋಂಟದಾರ್ಯರ ಸಿದ್ಧೇಶ್ವರ ಮಹಾಪುರಾಣದಲ್ಲಿಯೂ ಇದೇ ರೀತಿಯಲ್ಲಿ ಅವರ ಗುರು ಪರಂಪರೆಯನ್ನು ಹೇಳಿದೆ. ಅಂತೆಯೇ ಈ ಗುರು ಚೆನ್ನಬಸವದೇಶಿಕನ ಕರಕಮಲ ಸಂಜಾತರಾಗಿ ಸಿದ್ಧಲಿಂಗ ಯತಿಗಳು ಮೆರೆಯುತ್ತಾರೆ.

ಸಿದ್ಧಲಿಂಗ ಯತಿಗಳ ವಿಷಯದಲ್ಲಿ ಬರೆದಿರುವ ಗ್ರಂಥಗಳಲ್ಲೆಲ್ಲ ಅವರ ಈ ಗುರು ಪರಂಪರೆಯ ಆರಂಭದ ವಿಷಯದಲ್ಲಿ ಒಂದು ಕತೆ ಪ್ರಚಲಿತವಾಗಿದೆ. ಅದು ಈ ರೀತಿ ಇದೆ.

ಅಡಿಕೆಯನ್ನು ಮಾರುವುದಕ್ಕೆಂದು ಎತ್ತುಗಳ ಮೇಲೆ ಹೇರನ್ನು ಹೊರಿಸಿಕೊಂಡು ಮಧುರೆಗೆ ಹೋಗುತ್ತಿದ್ದ ವರ್ತಕರ ಗುಂಪೊಂದು ಮಾರ್ಗ ಮಧ್ಯದಲ್ಲಿದ್ದ ಮಹಾರಣ್ಯ ದಲ್ಲಿ ಬೀಡುಬಿಟ್ಟು ಅಡಿಗೆ ಮಾಡುವುದಕ್ಕೆಂದು ಅಲ್ಲಿಯೇ ಇದ್ದ ಕಲ್ಲಿನ ಪಕ್ಕದಲ್ಲಿ ಅದನ್ನು ಶಿವಲಿಂಗವೆಂದು ತಿಳಿಯದೆ, ಮತ್ತೊಂದು ಕಲ್ಲನಿಟ್ಟು ಆ ಒಲೆಯ ಮೇಲೆ ಮಡಕೆ ಯನ್ನಿಟ್ಟು ಬೆಂಕಿ ಉರಿಸಲು ಸ್ವಲ್ಪ ಹೊತ್ತಿನಲ್ಲಿಯೇ ಉರಿಯುತ್ತಿದ್ದ ಉರಿ ಆರಿ ತಣ್ಣಗಾ ಗಲು ಆಶ್ಚರ್ಯಗೊಂಡು ಅದನ್ನು ಪರೀಕ್ಷಿಸಿದ ಪಚಕನು ಮೊದಲೇ ಅಲ್ಲಿದ್ದ ಕಲ್ಲಿನಿಂದ ಸುರಿಯುತ್ತಿದ್ದ ಅಮೃತವನ್ನು ಕಂಡು ಅಚ್ಚರಿಗೊಂಡು ಅದು ಶಿವಲಿಂಗವೆಂಬುದನ್ನು ಕಂಡಾಗ ಭಯ ಭಕ್ತಿಯಿಂದ ತನ್ನ ತಪ್ಪನ್ನು ಪ್ರಾರ್ಥಿಸಿಕೊಂಡರು. ಬೇರೆ ಒಲೆ ಯನ್ನು ಹೂಡಿ ಅಡಿಗೆಯನ್ನು ಮಾಡಿ ಪ್ರಸಾದನ್ನು ಲಿಂಗಕ್ಕೆ ನೈವೇದ್ಯ ಮಾಡಿ ಲಿಂಗ ದಿಂದ ಅಮೃತ ಸುರಿಯುವುದನ್ನು ಕಂಡು ಅದಕ್ಕೆ ಅಮೃತೇಶ್ವರ ಲಿಂಗವೆಂದು ನಾಮ ಕರಣ ಮಾಡಿದರು. ಅನಂತರ ಅಡಿಕೆಯ ಹೇರಿಗೆ ಕೈ ಹಾಕಿ ನೋಡಿದಾಗ ಅಡಿಕೆಯೆಲ್ಲಾ ಅಳಲೆಕಾಯಿ ಆಗಿರುವುದನ್ನು ಕಂಡ ಶೈವ ಬಣಂಜಿಗರು ಮತ್ತಷ್ಟು ವಿಸ್ಮಯಂಬಟ್ಟು ಇರ್ಬಗೆಯಿಂ ಕೆಟ್ಟೆವು ಎಂದು ಶಿವನಲ್ಲಿ ಮೊರೆಯಿಡಲು ಮತ್ತೆ ಅಡಿಕೆ ಎಂದಿನಂತಾಗಲು ಅದಕ್ಕೆ ಅಳಿಲೇಶ್ವರನೆಂದು ನಾಮಕರಣ ಮಾಡಿ ಮಧುರೆಗೆ ಹೋಗಿ ಅಡಿಕೆಯನ್ನು ವಿಕ್ರ ಯಿಸಿದಾಗ ಒಂದಕ್ಕೆ ಹದಿನಾರರಷ್ಟು ಲಾಭ ಬರಲು ಸಂತೋಷಗೊಂಡ ವರ್ತಕರು ಅಲ್ಲಿಗೆ ಮರಳಿ ಬಂದು ಅಲ್ಲಿ ಭವ್ಯವಾದ ಶಿವಾಲಯವನ್ನು ನಿರ್ಮಿಸಿ, ಸಮಯಾಚಾರಕ್ಕಾಗಿ ಒಂದು ಮಠವನ್ನು ಕಟ್ಟಿಸಿ, ಅದರಲ್ಲಿ 'ಅನಾದಿ ಗಣೇಶ್ವರ' ನೆಂಬ ಚರಮೂರ್ತಿಯನ್ನು ಕರೆತಂದು ನಿಲ್ಲಿಸಿದರು. ಆಲ್ಲಿಯೇ ಒಂದು ಪಟ್ಟಣವನ್ನು ಕಟ್ಟಿಸಿ ಅದಕ್ಕೆ 'ವಾಣಿಜ್ಯ ಪುರಿ' ಅಥವಾ 'ಹರದನ ಹಳ್ಳಿ' ಯೆಂದು ಹೆಸರಿಟ್ಟು ತಾವೂ ಅಲ್ಲಿಯೇ ಇರತೊಡಗಿದರು. ಮುಂದೆ ಇದೇ ಲಿಂಗಕ್ಕೆ 'ದಿವ್ಯಲಿಂಗೇಶ್ವರ' ಎಂಬ ಹೆಸರೂ ಬಂದಿತು. ಇಲ್ಲಿಂದ ಅಂದರೆ ಅನಾದಿ ಗಣೇಶ್ವರರಿಂದ ಸಿದ್ಧಲಿಂಗ ಶಿವಯೋಗಿಗಳ ಗುರು ಪರಂಪರೆ ಹರದನ ಹಳ್ಳಿ ಯಲ್ಲಿಯೇ ಪ್ರಾರಂಭವಾಯಿತೆಂದು ಈ ಕತೆಯ ಆಧಾರದಿಂದ ಹೇಳಬಹುದು. ಅಂದರೆ ಈ ಹದಿನಾರು ತಲೆಮಾರಿನ ಗುರು ಪರಂಪರೆಯನ್ನು ಹಿಂದಿನಂತೆಯೇ ಲೆಕ್ಕಹಾಕಿ ಹೇಳುವುದಾದರೆ ಈ ಪರಂಪರೆಯಲ್ಲಿ ಮೊದಲಿಗರಾದ ಅನಾದಿ ಗಣೇಶ್ವರರು ಕ್ರಿ.ಶ. ೧೦೦೦–೧೦೫೦ ರ ಅವಧಿಯಲ್ಲಿ ಜೀವಿಸಿರಬೇಕೆಂದು ಹೇಳಬಹುದು.

ಈ ಕತೆಯ ಪ್ರಕಾರ ಆಕಾಲಕ್ಕೆ ಅಂದರೆ ಬಸವ ಪೂರ್ವಯುಗದಿಂದಲೇ ಸ್ಥಾವರ ದೇವಾಲಯಗಳನ್ನು ಕಟ್ಟಿಸುವ ಸಂಪ್ರದಾಯವು ಇದ್ದು, ಆ ದೇವಾಲಯಗಳಲ್ಲಿ ಸಾವಾಸಿಗಳೂ ಸಮಯಾಚಾರಿಗಳೂ ವಾಸಿಸುತ್ತಿದ್ದರೆಂಬುದು ತಿಳಿಯುತ್ತದೆ. ಅನೇಕ ಶಾಸನಗಳೂ ಈ ಭಾವನೆಗೆ ಪುಷ್ಟಿಯನ್ನು ಕೊಡುತ್ತವೆಯಾದುದರಿಂದ ಸಿದ್ಧಲಿಂಗ ಶಿವಯೋಗಿಗಳ ಗುರುಪರಂಪರೆ ಬಸವ ಪೂರ್ವಯುಗದಿಂದಲೇ ಪ್ರಾರಂಭವಾಗುವುದೆಂದು ಹೇಳಿದರೆ ಆಶ್ಚರ್ಯ ಪಡಬೇಕಾದುದಿಲ್ಲ. ಸಿದ್ಧಲಿಂಗ ಶಿವಯೋಗಿಗಳೂ ಪ್ರಭುದೇವರ ಪರಂಪರೆಯ ವಿರಕ್ತರು. ಸ್ವಯಂ ನಿರಂಜನ ಗಣೇಶ್ವರರು. ಅಂತೆಯೇ ಅವರ ಗುರುಪರಂಪರೆಯೂ ಉಜ್ವಲವಾದುದು. ಬಸವ ಪೂರ್ವಯುಗದಿಂದಲೇ ನಡೆದು ಬಂದದು. ಈ ಪರಂಪರೆಯಲ್ಲಿ ಬಂದ ಎಲ್ಲ ಗುರುಗಳೂ ಐತಿಹಾಸಿಕ ವ್ಯಕ್ತಿಗಳೇ ಆಗಿದ್ದು ಒಬ್ಬೊಬ್ಬರೂ ಅಸಾಧಾರಣ ಕಾರ್ಯಗಳನ್ನೆಸಗಿ ಹೋಗಿದ್ದಾರೆ. ಇಂಥ ಭವ್ಯ ಗುರುಪರಂಪರೆಯಲ್ಲಿ ಬಂದ ಹದಿನೈದನೆಯ ಗುರುಗಳಾದ ವಾಣಿಜ್ಯಪುರದ ದಿವ್ಯ ಲಿಂಗಕ್ಕೆ ಕ್ರಿಯಾಮೂರ್ತಿಗಳಾದ ಶಿವಾನುಭವ ಚರವರ್ಯರಾದ ಚನ್ನಬಸವದೇವರ ಕರ ಕಮಲ ಸಂಜಾತರು ತೋಂಟದ ಸಿದ್ಧಲಿಂಗ ಶಿವಯೋಗಿಗಳು.

ವಿಜಯನಗರದ ಪ್ರೌಢದೇವರಾಯನು (೧೪೧೯-೧೪೪೭) ತೀರಿಕೊಂಡ ಮೇಲೆ ಅವನ ಕಾಲದಲ್ಲಿ ಪ್ರಸಿದ್ಧರಾಗಿದ್ದ ನೂರೊಂದು ವಿರತರೂ ನಿರವಯವನ್ನೈದಿದರು. ಅನಂತರ ವಿರೂಪಾಕ್ಷರಾಯನ (೧೪೬೭-೧೪೭೮) ಆಳ್ವಿಕೆ ಬಂತು. ಪ್ರೌಢದೇವರಾಯನಾದ ಮೇಲೆ ಸಿಂಹಾಸನಕ್ಕೆ ಯಾರು ಉತ್ತರಾಧಿಕಾರಿಯಾಗಬೇಕೆಂಬ ಯಾದವೀಕಲಹ ಪ್ರಾರಂಭವಾಗಿ ವಿರೂಪಾಕ್ಷರಾಯನು ಪಟ್ಟಕ್ಕೇರುವುದಕ್ಕೆ ಮುನ್ನ ದೇಶದಲ್ಲಿ ಅನಾಯಕತ್ವ, ಅರಾಜಕತ್ವ ತಲೆದೋರಿ ಅಶಾಂತಿ ನೆಲೆಸಿತ್ತು. ವೀರಶೈವಾಚಾರವಡಗಿತ್ತು. ಇಂಥ ದುರ್ಭರ ಸನ್ನಿವೇಶದಲ್ಲಿ ದೇಶದಲ್ಲಿ ಶಾಂತಿ ನೆಲೆಸಿ ವೀರಶೈವಾಚಾರವನ್ನು ಉದ್ಧರಿಸಲು ಈಶನು,

........ನಿರಂಜನ ಗಣೇಶನೊಡನೆ
ವರ ಗಣೇಶ್ವರರೇಳ್ನೂರ್ವರಂ ಕೂಡಿಕೊಂ
ಡಿರದೆ ಭೂಮಿಯೊಳುದಿಸಿ ಜಂಗಮಸ್ಥಲವಾಂತು
ಪರಮ ಷಟ್ಸ್ಥಲವನುದ್ಧರಿಸೆಂದು ಕಳುಹಲವರೊಡಗೂಡಿ ಭೂಮಿಗಿಳಿದು ‖ ೪೩ ‖

* * * * * *

ಪರಮ ಗೋಸಲ ಚೆನ್ನಬಸವೇಶ್ವರನ
ಸರಸೀರುಹದಿಂದಾ ನಿರಂಜನ ಗಣೇಶ್ವರಂ
ಹರುಷದಿಂದೊಗೆದು ಸಿದ್ಧೇಶ ನಾಮವನಾಂತು[1].... ‖ ೪೪ ‖ಮೆರೆಯುತ್ತಾರೆ.

ಸಿದ್ಧಲಿಂಗಯತಿಗಳು ಎಂಟು ವರ್ಷದ ಶಿಶುವಾಗಿ ಅವತರಿಸಿ ಬಂದರೆಂದು ವೀರ ಶೈವ ಕವಿಗಳು ಇವರ ಬಗ್ಗೆ ಬರೆದಿರುವ ಕಾವ್ಯಗಳಲ್ಲೆಲ್ಲ ಹೇಳಿದ್ದಾರೆ. ಸಕಲ ಲೋಕ ಜನಹಿತಾರ್ಥವಾಗಿ ಸರ್ವ ಜನರಿಗೆ ಮುಕುತಿ ಕೊಡುವೆನೆಂದು ಎಂಟು ವರ್ಷದ ಬಾಲಕ ರಾಗಿ ಭೂಮಿಯಲ್ಲಿಹುಟ್ಟಿದ ಶಿವಯೋಗಿಗಳು ತಾವೇ ನೇರವಾಗಿ ವಾಣಿಜ್ಯ ಪುರಿ ಅಥವಾ ಹರದನ ಹಳ್ಳಿಗೆ ಬಂದು ಅಲ್ಲಿದ್ದ ಗುರುಸಾರ್ವಭೌಮರೆನಿಸಿದ ಚೆನ್ನಬಸವ ಯತಿವರರ ಅಡಿಗೆರಗಿ ಕರಕಮಲವನ್ನು ಮುಗಿದು ತನಗೆ ಶಿವದೀಕ್ಷೆಯನ್ನು ಕರುಣಿಸಬೇಕೆಂದು ಬೇಡಿ ಕೊಳ್ಳುತ್ತಾರೆ. ಪರನು ಪರಂಜ್ಯೋತಿ ಸ್ವರೂಪಿಯಾದ ನಿನಗೆ ನಾನು ದೀಕ್ಷೆ ಯನ್ನು ಕೊಡಲಾರೆನೆಂದಾಗ ನಾನು ನಿಮ್ಮ ಶಿಶುವೆಂದು ತಿಳಿದು ನೋಡಿ ನನಗೆ ತಾವು ದೀಕ್ಷೆಯನ್ನು ಕೊಡಬೇಕೆಂದು ಬೇಡುತ್ತಾರೆ.[2]

....ಪರಮೇಶ್ವರನಂ ಧ್ಯಾನಿಸುವ ಚೆನ್ನಬಸವೇಶ್ವರನ ಹೃತ್ಕಮಲಕರ್ಣಿಕಾವಾಸ ದಲ್ಲಿ ಪ್ರಜ್ವಲಿಸುತಿರ್ಪ ನಿರ್ಮಲ ವಸ್ತು ತಾನೆ ಬಹಿಷ್ಕರಿಸಿ ಶಿಶುರೂಪಿಂ ಶಿಷ್ಯನಪ್ಪೆನೆಂದು ಚೆನ್ನಬಸವೇಶ್ವರನನೆ ಗುರುವೆಂದು ಆ ಗುರು ಶಿಷ್ಯರೆಂಬುಭಯವು ತಾನೆಯಾಗಿ ಭೇದ ವಳಿದು ಪೂಜಕತ್ವವ ನಟಿಸವೇಳ್ಕೆಂದು ನಿರಾಭಾರ ವೀರಶೈವ ದೀಕ್ಷೆಯಂ ಕೊಡುವ ಶ್ರೀ ಗುರುವಿನ ಪದಕಮಲಕ್ಕೆರಗಿ ಕರಕಮಲ ಮುಕುಳಿತನಾಗಿರ್ಪ ಬಾಲಕನಂ ಶಿಷ್ಯನಂ ಮಾಳ್ಪೆನೆಂದು ಚನ್ನಬಸವೇಶ್ವರಂ....ಮಂತ್ರ ವಿಧಾನದೊಡನೆ....ಶಿಷ್ಯನಂ ಸ್ವೀಕರಿಸಿ.... ಸಮಗದ್ದುಗೆಯೊಳ್ ಮೂರ್ತಿಗೊಳಿಸಿ....ಶಿವತತ್ವವನರಿವರಿವಿನ ಲಿಂಗಮಂ ಕಟ್ಟಿ........ ಪರಬ್ರಹ್ಮದ ಶಿಶುನಂ ಸಲಹುವಂತೆ ಸಲಹುತಿರ್ದ"[3]

ಸ್ವಯಂ ಸಿದ್ಧಲಿಂಗೇಶ್ವರರೇ ತಮ್ಮ ವಚನದಲ್ಲಿ ತಮ್ಮ ಗುರುಪರಂಪರೆಯನ್ನು ಹೇಳಿ ಕೊಳ್ಳುತ್ತ"ಚೆನ್ನಬಸವೇಶ್ವರ ದೇವರ ಕರಕಮಲದಲ್ಲಿ ಉತ್ಪತ್ತಿಯಾದ ಶಿಶು ಸಿದ್ಧಲಿಂಗ ನಾ ನಯ್ಯ"ಎಂದು ಹೇಳಿಕೊಂಡಿರುವುದನ್ನು ಹಿಂದೆಯೇ ಹೇಳಿದೆ. ವೀರಶೈವ ಪರಂಪರೆಯಂತೆ ಇಲ್ಲಿ ಎಲ್ಲಿಯೂ ಯಾರೂ ಸಿದ್ಧಲಿಂಗ ಯತಿಗಳ ತಂದೆ–ತಾಯಿಗಳ ಹೆಸರನ್ನು ಹೇಳದೆ ಗುರು ಗೋಸಲಚೆನ್ನಬಸವೇಶ್ವರರ ಕರಕಮಲ ಸಂಜಾತರೆಂದೇ ಹೇಳಿ ಮುಂದೆ ಹೋಗಿ ದ್ದಾರೆ. ಆದರೆ ಬ್ರಾಹ್ಮಣ ಕವಿಯಾದ ಹೇರಂಬನು ಮಾತ್ರ ಇವರ ತಂದೆ–ತಾಯಿಗಳ ಹೆಸರನ್ನೂ ಅವರ ಬಾಲ್ಯ ಜೀವನವನ್ನೂ ತನ್ನ 'ಸಿದ್ಧಲಿಂಗೇಶ್ವರ ಸಾಂಗತ್ಯ' ಗ್ರಂಥದಲ್ಲಿ ಹೇಳಿದ್ದಾನೆ. "ಹರದನಹಳ್ಳಿಯಲ್ಲಿ ವಾಸವಾಗಿದ್ದ ಮಲ್ಲಿಕಾರ್ಜುನ ಮತ್ತು ಜ್ಞಾನಾಂಬೆ ಎಂಬ ದಂಪತಿಗಳು ಪುತ್ರ ಸಂತಾನಾಪೇಕ್ಷಿಗಳಾಗಿ ಗುರುಗಳಾದ ಚನ್ನಬಸವದೇವರಲ್ಲಿಗೆ ಬಂದು ತಮ್ಮ ಅಪೇಕ್ಷೆಯನ್ನು ಗುರುಗಳಲ್ಲಿ ನಿವೇದಿಸಿಕೊಳ್ಳಲು ಅವರಿತ್ತ ಪ್ರಸಾದ ಮಹಿಮೆಯಿಂದ ಗಂಡು ಮಗುವನ್ನು ಪಡೆದು ಆ ಮಗುವಿನ ಅಸಾಧಾರಣ ವರ್ಚಸ್ಸನ್ನು

---

1. ಚ. ಬ. ಪು. ಸಂಧಿ. 63, ಪದ್ಯ 43-44, 2ಸಿ. ಸಮ. ಪು ಸಂಧಿ. 2. ಪ. 37, 3. ಷ.ವ. ಸಂಧಿ. 2 ವಚನ 18.

ಕಂಡ ತಂದೆ-ತಾಯಿಗಳು ಅವನಿಗೆ ಸಿದ್ಧಲಿಂಗನೆಂದು ನಾಮಕರಣ ಮಾಡಿದರು. ಕೆಲ ಕಾಲ ಕಳೆದ ಮೇಲೆ ಆತನನ್ನು ಶಾಲೆಗೆ ಕಳುಹಿಸಿದಾಗ ಶಿವಧ್ಯಾನಾಸಕ್ತನಾದ ಈ ಬಾಲಕನು ಓದು ಬರಹದಲ್ಲಿ ಆಸಕ್ತಿಯನ್ನು ತೋರಿಸದೆ ಸಂಸಾರದ ಅನಿತ್ಯತೆ ಹಾಗೂ ಅಧ್ಯಾತ್ಮ ಜೀವನದ ಸಾರವನ್ನು ತನ್ನ ಸಂಗಾತಿಗಳಿಗೆ ಬೋಧಿಸುತ್ತಿದ್ದನು. ಇದನ್ನು ಕಂಡ ಶಾಲೆಯ ಉಪಾಧ್ಯಾಯರು ಇವನಿಂದ ಶಾಲೆಯ ಇತರ ಹುಡುಗರೂ ಕೆಟ್ಟು ಹೋಗುವರೆಂದು ಭಾವಿಸಿ ಅವನನ್ನು ಅವರ ತಂದೆ-ತಾಯಿಗಳಿಗೆ ಒಪ್ಪಿಸಿದರು. ಆಗ ಅವನ ತಂದೆ-ತಾಯಿಗಳು ತಮ್ಮ ಮಗುವಿನಲ್ಲಿದ್ದ ಅಸದೃಶ ಶಕ್ತಿಯನ್ನು ಗುರುತಿಸಿ ತಮ್ಮ ಮಗುವನ್ನು ಗುರು ಗೋಸಲಚನ್ನಬಸವೇಶ್ವರರ ಸನ್ನಿಧಿಯಲ್ಲಿ ಒಪ್ಪಿಸುತ್ತಾರೆ." ಬ್ರಾಹ್ಮಣ ಕವಿಯಾದ ಹೇರಂಬನು ವೀರಶೈವ ಕವಿಗಳು ಹೇಳದೆ ಕೈಬಿಟ್ಟ ವಿಷಯವನ್ನು ಹೇಳಿ ನಮಗೆ ಮಹದುಪಕಾರ ಮಾಡಿದ್ದಾನೆ. ಪ್ರಾಯಃ ಕ್ರಿ.ಶ. ೧೫೬೦ ರ ಸುಮಾರಿನಲ್ಲಿ ಅಂದರೆ ಸಿದ್ಧಲಿಂಗ ಶಿವಯೋಗಿಗಳ ಅಪರಜೀವನದ ಹತ್ತಿರ ಹತ್ತಿರ ಜೀವಿಸಿದ್ದಿರಬಹುದಾದ ಹೇರಂಬನಿಗೆ ಯತಿವರರ ತಂದೆ-ತಾಯಿಗಳ ವಿಷಯ ತಿಳಿದಿರಲು ಶಕ್ಯವಿದೆ. ವೀರಶೈವ ಕವಿಗಳಿಗೆ ಈ ವಿಷಯ ತಿಳಿದಿರಲಿಲ್ಲವೆ ? ತಿಳಿದಿತ್ತೋ ಇಲ್ಲವೋ ಯಾರಿಗೆ ಗೊತ್ತು ? ಒಂದು ವೇಳೆ ತಿಳಿದಿದ್ದರೂ, ತಮ್ಮ ಪರಂಪರೆಯಂತೆ, ಬೇಕೆಂತಲೇ ಮರೆಮಾಚಿರಲು ಸಾಕು.

ಒಟ್ಟಿನಲ್ಲಿ ಸಿದ್ಧಲಿಂಗ ಶಿನಯೋಗಿಗಳಿಗೆ ಗುರು ಗೋಸಲಚನ್ನಬಸವೇಶ್ವರರಿಂದ ಶಿವ ದೀಕ್ಷೆ, ಮಂತ್ರೋಪದೇಶಗಳಾದವು. ಗುರು ಚನ್ನಬಸವೇಶ್ವರಂ....ಮಂತ್ರ ವಿಧಾನದೊಡನೆ....ಶಿಷ್ಯನಂ ಸ್ವೀಕರಿಸಿ....ಸಮುಗದ್ದುಗೆಯೊಳ್ ಮೂರ್ತಿಗೊಳಿಸಿ ಶುದ್ಧ ಸಿದ್ಧ ಪ್ರಸಾದಾನದಾನತ್ರಯವು ನೀನೆಯೆಂದು ಸೂಚಿಸುವಂತೆ ಸಿದ್ಧಲಿಂಗನೆಂಬ ಪೆಸರಿಂಕರೆದು.... ಚನ್ನಬಸವೇಶ್ವರಂ ತನ್ನ ಹಸ್ತ ಸರಸಿಜಸಂಜಾತನಾದ ನಿರ್ಮಳ ಶಿಶುವಿಂಗೆ ಪರಮ ಶಾಂತಿಯೆಂಬುದಕದಿಂ ಮಜ್ಜನಕೆರೆದು ಚಿದ್ಭಸಿತಮಂ ಪಣೆಗಿಟ್ಟು ಏಕೋಭಾವಮೆಂಬ ಏಕಮುಖ ರುದ್ರಾಕ್ಷೆಯಂ ಕೊರಲೊಳ್ಕಟ್ಟಿ ಶಿವತತ್ವವನರಿವರಿವಿನ ಲಿಂಗಮಂಕಟ್ಟಿ ಪರಮಜ್ಞಾನವೆಂಬ ಬಾಯಿವೆಣ್ಣೆಯನಿಕ್ಕಿ ದ್ವೈತಾ ದ್ವೈತಾಗಮಂಗಳೆಂಬ ಜನರ ದೃಷ್ಟಿ ನೆಡದಂತೆ ಶಿವಾದ್ವೈತವೆಂಬ ತಿಲಕವನ್ನಿಟ್ಟು ಸದ್ಭಕ್ತಿಯೆಂಬ ಮೊಲೆವಾಲಂ ಕೊಟ್ಟು ಮಹಾಜ್ಞಾನವೆಂಬ ತೊಟ್ಟಿಲೊಳ್ಮಲಗಿಸಿ ಚಿನ್ನಾದವೆಂಬ ಜೋಗುಳೆಯಂ ಪಾಡಿ ಪರಬ್ರಹ್ಮದ ಶಿಶುವಂ ಸಲಹುವಂತೆ ಸಲಹುತಿರ್ದ ಶಿಶುವಿಂಗೆ ನವ ವಿಧ ಭಕ್ತಿಗಳ್ ಬಲಿದು ನವವರ್ಷಂಗಳಾಗೆ ಮತ್ತಂ ವೇದ ಶಾಸ್ತ್ರಾಗಮೋಪನಿಷತ್ಪುರಾಣಂಗಳೆಲ್ಲಂ ಜಿಹ್ವಾಗ್ರದೊಳ್ನೆಲಸಿರುತ್ತಂ ಸಿದ್ಧೇಶ್ವರಂ...." ದೀಕ್ಷೆಯಂ ಪಡೆದು ಅನನ್ಯ ಭಕ್ತಿಯಿಂದ ಗುರುಗಳ ಸೇವೆ ಮಾಡುತ್ತಾರೆ.

ತಮ್ಮದೇ ಆದ ರೀತಿಯಲ್ಲಿ ತಮ್ಮ ಅನನ್ಯ ಭಕ್ತಿಯನ್ನು ಗುರುಗಳಲ್ಲಿ ಸಮರ್ಪಿಸುತ್ತ ಹೊತ್ತಾರೆ ಎದ್ದು ಪರಬ್ರಹ್ಮ ಜ್ಞಾನಿಯೆನಿಸಿದ ಸಿದ್ಧಲಿಂಗಯತಿವರರು ಪುಷ್ಪ

ಗಳನ್ನು ತಿರಿದು ತಂದು ಗುರುವಿನಡಿಯಲ್ಲಿ ಮಾಲೆಗಳನ್ನು ಸೂಡಿ ಅಸಂಖ್ಯಾತ ಶರಣ ರಂತೆ ಅಷ್ಟ ವಿಧ ಪೂಜೆಯನ್ನು ಮಾಡುತ್ತಾ ಮಾಡುತ್ತಾ ಇರುವಾಗಲೇ ದೀಪಕ್ಕೆ ಎಣ್ಣೆ ಇಲ್ಲದಂತಾದರೆ ನೀರನ್ನೇ ಎರೆದು ದೀಪ ಉರಿಸುತ್ತ ಶಿವಪೂಜೆ ಮಾಡುತ್ತಿದ್ದರು. ಇಂಥ ಕಾರಣಿಕ ಪುರುಷರು ತಂದು ನೀಡಿದ ನೈವೇದ್ಯವನ್ನೆಲ್ಲ ಕಲ್ಲ ಬಸವನು ಸೇವಿಸುತ್ತಿದ್ದನು. ಈ ರೀತಿಯಲ್ಲಿ ಅಘಟನ ಘಟನಾಸಾಮರ್ಥ್ಯವನ್ನು ಪಡೆದ ಶಿವಯೋಗಿಗಳ ತೇಜಸ್ಸಿ ನಿಂದ ಪ್ರಭಾವಿತರಾಗಿ ಅವರಲ್ಲಿದ್ದ ಚಿತ್ಕಳೆಯನ್ನು ಗುರುತಿಸಿದ ಗುರುಗಳು ಈತನಿಗೆ ತನ್ನ ಚರಪಟ್ಟಾಧಿಕಾರವನ್ನು ವಹಿಸಿಕೊಡಬೇಕೆಂದೂ, ಮುಂದೆ ಇವನಿಂದ ಇನ್ನೂ ಷಟ್ಸ್ಥ ಲೋದ್ಧಾರವಾಗಿ ಅದು ಲೋಕದಲ್ಲಿ ನೆಲೆಸಿಲ್ಲಬೇಕಾಗಿರುವುದರಿಂದ ಈತನನ್ನು ದೇಶಾಂತ ರಕ್ಕೆ ಕಳುಹಿಸ ಬೇಕೆಂದೂ ಮನಸ್ಸಿನಲ್ಲಿ ನಿಶ್ಚಯಿಸಿ, ಸಿದ್ಧಲಿಂಗ ಯತಿಗಳನ್ನು ಅತ್ಯಂತ ಅಕ್ಕರೆಯಿಂದ ತಮ್ಮ ಬಳಿಗೆ ಕರೆದು ತಮ್ಮ ಚರಪಟ್ಟಾಧಿಕಾರನ್ನು ಅವರಿಗೆ ವಹಿಸಿ ಕೊಡುತ್ತಾರೆ. ಆಗ ಶಿವಯೋಗಿಗಳು ಆ ಪಟ್ಟವನ್ನು ಗುರುಗಳಲ್ಲಿಯೇ ಬಿಟ್ಟು ಮಹಾ ಶಿಷ್ಯನಂತೆ ನಡೆದುಕೊಂಡು, ನನ್ನನ್ನು ನೆನೆಸಿ ಕೊಂಡಾಗ ನಾನು ನಿಮಗೆ ಕಾಣಿಸಿ ಕೊಳ್ಳುವೆನೆಂದು ತಂದೆ–ತಾಯಿಗಳಿಗೆ ಹೇಳಿ ಷಟ್ಸ್ಥಲವನ್ನುಂಟುಮಾಡಲೆಂದು ಶಿವನಿಂ ಕಳುಹಿಸಿಕೊಂಬ ರೇಣುಕ ಗಣೇಶ್ವರನಂತೆ ಬಸವಾದಿ ಪ್ರಮಥರಂ ಬೋಧಿಸಲೆಂದು ಹರನಿಂ ಕಳುಹಿಸಿಕೊಂಬ ಅಲ್ಲಮಾ ಪ್ರಭುವಿನಂತೆ ಶ್ರೀ ಗುರುವಿನ ಪಾದ ಕಮಲಗಳಿಗೆ ನಮಸ್ಕಾರ ಮಾಡಿ ಸಮಸ್ತ ಜಂಗಮ ದೇವರ್ಸಹಂ ದೇಶಾಟನೆಗೆ ಹೊರಡುತ್ತಾರೆ. ಆಗ ಅವರ ಜೊತೆಯಲ್ಲಿ ಘನ ಮಹಿಮಾಶಾಲಿಗಳೂ, ಶರಣ ಕುಲ ದೀಪಕರೂ ಎಂದು ಖ್ಯಾತ ನಾಮರಾದ ಘನಲಿಂಗದೇವರು, ಶಾಂತಮಲ್ಲಿಕಾರ್ಜುನ, ಬತ್ತಲೇಶ, ರಾಚವಟ್ಟೆ ದೇವರು, ಶಿವಪೂಜೆಯಾರ್ಯ ಅಥವಾ ಬೋಳಬಸವೇಶ, ಸಿದ್ಧನಂಜೇಶ್ವರ, ಕಂಬಳಿ ದೇವರು, ಚನ್ನದೇವರು, ದೊಡ್ಡಸಿದ್ಧಲಿಂಗೇಶ್ವರ, ಕಂಕಣದೇವರು, ಲಂಬಕರ್ಣ ದೇವರು, ಸಿದ್ಧಮಲ್ಲೇಶ್ವರ, ಗುಮ್ಮಳಾಪುರದ ವರಸಿದ್ಧಲಿಂಗೇಶ್ವರ, ಎಡತೊರೆಯ ಪುರದ ಗುರುಸಿದ್ಧ ವೀರಣ್ಣೊಡೆಯರು, ಶಿವಘನ ಲಿಂಗ ದೇವರು, ಚಿಕ್ಕ ಮಲ್ಲೇಶ್ವರರು, ಮರುಳಸಿದ್ಧೇಶ್ವರ, ಚಂದ್ರಶೇಖರರು, ಶಿವ ಸುರಗಿಯಾರ್ಯ, ಬೆಡಗಿನ ಪರ್ವತೇಶ್ವರ, ಪಟ್ಟಣದ ದೇವರು, ಜಗುನಿಯ ಮರುಳು ದೇವರು, ಸಪ್ಪೆಯಾರ್ಯ, ಮಳೆಯ ದೇವರು, ಉಪ್ಪಿನ ಹಳ್ಳಿಯಾರ್ಯ, ಜೋಲಿಯಾ ಬಸವೇಶ್ವರ, ರಾಚವಟ್ಟೆಯ ಕೋರಿಯ ಸಿದ್ಧ ಬಸವೇಶ್ವರ, ಹಿರಣ್ಯಾರ್ಯ, ಶೀಲವಂತಾರ್ಯ, ಕೊಡಗಿಯ ಹಳ್ಳಿಯಾರ್ಯ, ಕಿತ್ತಾವರದ ಚನ್ನಮಲ್ಲೇಶ್ವರ, ಘಟ್ಟಿ ಸಿದ್ಧಯ್ಯ, ಚಿಟ್ಟಿಗ ಯತೀಶ್ವರ, ಕಟ್ಟೆಯ ಪುರದ ನಂಜದೇವ, ಹುಚ್ಚು ಪರ್ವತದೇವ, ದೊಡ್ಡ ಸಿದ್ಧಯ್ಯ, ರೇವಣಸಿದ್ಧದೇವರು ಮುಂತಾದ ಶರಣರೆಲ್ಲರೂ ಹೊರಟರು. ೧೪೭೦ ರಲ್ಲಿ ರಚಿತವಾದುದೆಂದು ಹೇಳಲಾಗಿರುವ ಎಡೆಯೂರಿನ ಸಿದ್ಧಲಿಂಗೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಶಿಲಾಶಾಸನದಲ್ಲಿ ಈ ಮೇಲೆ ಹೇಳಿರುವ ಅನೇಕರ ಹೆಸರುಗಳು ಬಂದಿವೆ.

ಇವರಾದಿಯಾಗಿ ಏಳುನೂರು ಜನ ವಿರತರನ್ನು ಜೊತೆಯಲ್ಲಿ ಅಲ್ಲಲ್ಲಿ ಕೂಡಿಕೊಂಡು

ಅಲ್ಲಲ್ಲಿ ನಾನಾ ಪವಾಡಮಂ ಮೆರೆವುತಿರ
ಲಲ್ಲಲ್ಲಿ ಗಣನಾಥರುದಿಸಿ ಚರರೂಪಿನಿಂ
ದಲ್ಲಲ್ಲಿ ಪೂಜೆಗೊಳುತ್ತೈದಿ ತೋಂಟದ ಯತಿಯಸಾರಲತಿ ಪ್ರೀತಿಯಿಂದೆ ||
ಮೆಲ್ಲ ಮೆಲ್ಲನೆ ತೋಂಟದಾರ್ಯರಾ ವಿರತರೊಳ್
ಬಲ್ಲ ಬಲ್ಲರೊಳು ತತ್ವಾನುಭಾವಂಗಳಿಂ
ಸೊಲ್ಲು ಸೊಲ್ಲಿಗೆ ಪರಮ ಷಟ್ಸ್ಥಲವನುಸಿರುತ್ತ

ತನ್ನ ಕಾರ್ಯವನ್ನು ಪ್ರಾರಂಭಿಸಿದ ಯತಿವರರು ದಕ್ಷಿಣಕ್ಕೆ ನಡೆದು ಕಂಚಿ, ಕಾಳಹಸ್ತಿ, ಚಿದಂಬರಗಳನ್ನು ಸಂದರ್ಶಿಸಿ ಅರುಣಾಚಲಕ್ಕೆ ಬಂದು ಅರುಣಾಚಲೇಶ್ವರನನ್ನು ಪೂಜಿಸಿದಾಗ ಆತನು ಪ್ರತ್ಯಕ್ಷನಾಗಿ ತನ್ನ ಕೊರಳಲ್ಲಿದ್ದ ಪಂಚತಾಪಡವೆಂಬ ರತ್ನಾಹಾರವನ್ನು ಸಿದ್ಧಲಿಂಗೇಶ್ವರರ ಕೊರಳಿಗೆ ಹಾಕುತ್ತಾನೆ. ಬೆಳಗ್ಗೆ ಪೂಜೆಗೆಂದು ಬಂದ ಅರ್ಚಕರು ಇದನ್ನು ಕಂಡು ರಾಜನಿಗೆ ದೂರು ಹೇಳಿದಾಗ ಯತಿವರರು ಅದನ್ನು ಹಿಂತಿರುಗಿಸಿ ಮತ್ತೆ ಅರುಣಾಚಲೇಶ್ವರನಿಂದಲೇ ಅವರೆಲ್ಲರೆದುರಿಗೆ ಪಡೆದು ರಾಜನಾದಿಯಾಗಿ ಎಲ್ಲರನ್ನೂ ಪರಿವರ್ತಿಸುತ್ತಾರೆ. ಅಲ್ಲಿಂದ ಗೋದಾವರೀತೀರಕ್ಕೆ ಬಂದು ಅಲ್ಲಿನ ದ್ವಿಜನಿಗೆ ಪ್ರಸಾದದ ಮಹತ್ವವನ್ನು ಪ್ರತ್ಯಕ್ಷ ತ್ರಿಯಂಬಕೇಶ್ವರನಿಂದಲೇ ಹೇಳಿಸುತ್ತಾರೆ. ಅಲ್ಲಿಯೇ ಹತನಾಗಿದ್ದ ತುರುಷ್ಕರಾಜನಿಗೆ ಪ್ರಾಣದಾನ ಮಾಡುತ್ತಾರೆ.

ಅಲ್ಲಿಂದ ಸಹ್ಯಾದ್ರಿಗೆ ಬಂದು ಮಹಾಬಲೇಶ್ವರಲಿಂಗದ ಮೇಲ್ಭಾಗದಿಂದ ಹರಿದು ಬರುತ್ತಿದ್ದ ಕೃಷ್ಣವೇಣಿಯನ್ನು ಕಂಡು, ಆ ಲಿಂಗದ ನೆತ್ತಿಯ ಮೇಲೆಯೇ ಕಾಲು ತೊಳೆದು ಆ ಪಾದೋದಕದಿಂದ ಶಿವಾರ್ಚನೆ ಮಾಡುವುದನ್ನು ಕಂಡು ರೇಗಿದ ಅರ್ಚಕರು ಲಿಂಗ ಶುದ್ಧಿ ಮಾಡಲು ಹೊರಟಾಗ ಬರುತ್ತಿದ್ದ ನೀರೇ ಬತ್ತಿಹೋಗಲು ಪುನಃ ಲಿಂಗದ ಆಜ್ಞೆಯ ಮೇರೆಗೆ ಸಿದ್ಧಲಿಂಗ ಶಿವಯೋಗಿಗಳನ್ನು ಪ್ರಾರ್ಥಿಸಿ ನೀರನ್ನು ಪಡೆಯುತ್ತಾರೆ. ಅನಂತರ ಓಜೇಶ್ವರದಲ್ಲಿ ಉತ್ತುಂಗಯೋಗಿಯ ಗರ್ವವನ್ನು ಕಳೆದು, ಉಳುವೆಯಲ್ಲಿ ಶರಣರು ಬಯಲಾದ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಜನಾರ್ದನ ಜೀಯನ ಮದವನ್ನು ಇಳಿಸಿ, ತುಳುವ ದೇಶಕ್ಕೆ ಹೋಗಿ ಕಾರ್ಕಳದಲ್ಲಿ ಜೈನರಿಗೆ ಸನ್ಮತಿಯನ್ನು ಕರುಣಿಸಿ, ಕಾವೇರಿಗೆ ಬಂದು ಲಿಂಗಾರ್ಚನೆ ಮಾಡಿ, ದಾರಿ ಬಿಟ್ಟ ಕಾವೇರಿಯನ್ನು ದಾಟಿ ಮಾರ್ಗ ಮಧ್ಯದಲ್ಲಿ ಅನೇಕ ಪವಾಡಗಳನ್ನು ಮೆರೆಯುತ್ತ ರಾಮೇಶ್ವರಕ್ಕೆ ಬರುತ್ತಾರೆ. ಅಲ್ಲಿ ಲಿಂಗವನ್ನು ಪೂಜಿಸಿ, ತನ್ನ ಶಿಷ್ಯರಿಗೆ ರಾಮಲಿಂಗ, ಹನುಮಲಿಂಗಗಳ ಪೂರ್ವ ಕತೆಗಳನ್ನು ಹೇಳಿ, ಕೀಳು ಮಲೆಯೊಳಕ್ಕೆ ಬಂದು ಅಲ್ಲಿನ ರಾಣಿಗೂ, ಹೆಂಗಸರಿಗೂ ಬುದ್ಧಿ ಕಲಿಸಿ, ಅವರಿಗೆ ಶಿವಭಕ್ತಿಯ ಮಾರ್ಗವನ್ನು ಬೋಧಿಸಿ ಕೊಡಗು ಕೊಂಕಣ ದೇಶಗಳ ಮೂಲಕ ಉಡುಪಿಗೆ ಬಂದು ಅಲ್ಲಿನ ಕೃಷ್ಣ, ಶಂಕರನಾರಾಯಣ ಕೊಲ್ಲೂರ ಮೂಕಾಂಬಿಕೆ

ಮುಂತಾದ ಪುಣ್ಯ ಕ್ಷೇತ್ರಗಳ ದರ್ಶನ ಮಾಡಿ ಪ್ರಜೆಗಳಿಗೆ ಕಂಟಕಪ್ರಾಯನಾಗಿದ್ದ ಇರುಲನೆಂಬ ವ್ಯಾಧನನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿ ಪರಶುರಾಮ ಕ್ಷೇತ್ರಕ್ಕೆ ಬರುತ್ತಾರೆ. ಅಲ್ಲಿ ಶಿವ ಭಕ್ತನ ಭಕ್ತಿಯನ್ನು ಸ್ವೀಕರಿಸಿ ಅವನ ಮನೆಗೆ ಚಾರ್ವಾಕರಿಟ್ಟ ಬೆಂಕಿಯಿಂದ ಮನೆ ಸುಟ್ಟರೂ ಅವನನ್ನು ಸುಡದಂತಿರಿಸಿ ಚಾರ್ವಾಕರಿಗೆ ಬುದ್ಧಿ ಕಲಿಸಿ ಅವರಿಗೆ ಶಿವಾಚಾರ ಮಾರ್ಗವನ್ನು ಬೋಧಿಸುತ್ತಾರೆ.

ದಕ್ಷಿಣದ ಸಂಚಾರವನ್ನು ಮುಗಿಸಿಕೊಂಡು ಉತ್ತರಾಭಿಮುಖವಾಗಿ ಹೊರಟು ಮಾರ್ಗ ಮಧ್ಯದಲ್ಲಿ ಅನೇಕ ಪವಾಡಗಳನ್ನು ಮೆರೆಯುತ್ತ ಕಾಶಿಗೆ ಬಂದು, ಅಲ್ಲಿ ಹರಿಶ್ಚಂದ್ರರಾಯನಿದ್ದ ಸ್ಥಳವನ್ನು ಸಂದರ್ಶಿಸಿ ಹಿಮಾಲಯ ಪರ್ವತ ಪ್ರದೇಶಕ್ಕೆ ಬರುತ್ತಾರೆ. ಅಲ್ಲಿ ಕೇದಾರೇಶ್ವರನ ಅವತಾರ, ಗೌರಿಯ ಜನನ, ದಕ್ಷಯಾಗಧ್ವಂಸಗಳ ಕತೆಗಳನ್ನು ತಮ್ಮ ಶಿಷ್ಯರಿಗೆ ಹೇಳುತ್ತಿರಲು ಗೊಲ್ಲನೊಬ್ಬನ ಧ್ವನಿಯನ್ನು ಕೇಳಿಅಲ್ಲಿಗೆ ಧಾವಿಸಿ ಹುಲಿ ಹಿಡಿದಿದ್ದ ಹಸುವನ್ನು ರಕ್ಷಿಸಿ, ಗೊಲ್ಲನ ದೊಡ್ಡಿಗೆ ಹೋಗಿ ಅವನ ಭಕ್ತಿಗೆ ಮೆಚ್ಚಿ ಅವನ ಗೋವುಗಳನ್ನು ಕಾದು ಮತ್ತೆ ತನ್ನವರನ್ನು ಸೇರಿಕೊಂಡು ವಿದ್ಯಾನಗರಕ್ಕೆ ಬಂದು ಸೋಮವಾರದ ಬಸವಮ್ಮನೆಂಬ ಶಿವಶರಣೆಯ ಸತ್ಕಾರವನ್ನು ಸ್ವೀಕರಿಸಿ ಗಂಗೆಗಿಂತ ಜಂಗಮ ಪಾದೋದಕವೇ ಶ್ರೇಷ್ಠವೆಂಬುದನ್ನು ಸಿದ್ಧಪಡಿಸುತ್ತಾರೆ.

ಅಲ್ಲಿಂದ ಸ್ವದೇಶಾಭಿಮುಖವಾಗಿ ಪ್ರಯಾಣ ಮಾಡುತ್ತಿರುವಾಗ ಆಂಧ್ರ ದೇಶಕ್ಕೆ ಬಂದು ಅಲ್ಲಿನ ನೀರುಗಂಟಿಗೆ ಸಹಾಯ ಮಾಡಿ, ಪಂಪಾ ವಿರೂಪಾಕ್ಷನ ದರ್ಶನವನ್ನು ಪಡೆದು, ವಿರೂಪಾಕ್ಷನೆಂಬ ಜಂಗಮನಿಗ ಉಪದೇಶವನ್ನಿತ್ತು, ಕಣಿಯ ಕಲ್ಲೂರ ಭೂಪನ ಅಹಂಕಾರವನ್ನು ಕಳೆದು ಗೂಳೂರು ಮಠಕ್ಕೆ ಬಂದಾಗ ಅವರಲ್ಲಿದ್ದ ಶಿಷ್ಯನೊಬ್ಬನು 'ನಮ್ಮ ಸಿದ್ಧಲಿಂಗೇಶ್ವರರಿಗೆ ಸರಿಸಮರಾದ ಜಂಮಮರು ಬೇರೊಬ್ಬರಿಲ್ಲ' ಎಂದು ಸಾರಲು ಅವನ ನಾಲಗೆಯೇ ಬಿದ್ದು ಹೋಯಿತು. ಶಿವಭಕ್ತರಾದವರೆಲ್ಲರೂ ಒಂದೇ, ಅವರಲ್ಲಿ ಮೇಲು–ಕೀಳನ್ನೆಣಿಸಬಾರದೆಂದು ಬುದ್ಧಿ ಕಲಿಸಿ ಅವನಿಗೆ ಮರಳಿ ನಾಲಗೆಯನ್ನು ಕೊಡುತ್ತಾರೆ. ಕೇತ್ಸಮುದ್ರಕ್ಕೆ ಬಂದು ಆ ಗ್ರಾಮದ ಬಳಿ ಇದ್ದ ಅರೆ ಕಲ್ಲು ಬಂಡೆಯಲ್ಲಿ ತಮ್ಮ ಪಾದದಿಂದ ಒತ್ತಿ ಗಂಗೆಯನ್ನು ಬರಿಸಿ ದ್ರಾವಿಡ ದೇಶದಿಂದ ಬಂದ ವೀರಣ್ಣಾರ್ಯನ ವಿಷ ವ್ಯಾಧಿಯನ್ನು ಆ ಸಿದ್ಧಗಂಗೆಯಲ್ಲಿ ಮೀಯಿಸಿ ಕಳೆದು ಅವನಿಗೆ ಕನ್ನಡ ಭಾಷೆಯನ್ನು ಕಲಿಸುತ್ತಾರೆ.

ಅನಂತರ ಕನ್ನಡ ನಾಡಿಗೆ ಬಂದು ಶರಣರ ಮುಕುರವೆನಿಸಿದ ಕನ್ನಡಿಗರ ಕಾಶಿಯಾದ ಕಲ್ಯಾಣದ ಬಸವೇಶ್ವರ ದೇವಾಲಯದಲ್ಲಿ ತಂಗಿದ್ದಾಗ ಅಲ್ಲಿ ದೊಡ್ಡದೊಂದು ಜಾತ್ರೆಯೇ ನೆರೆದು ವೃಷಭಾಲಯದಲ್ಲಿ ಪೂಜೆ ನಡೆಯುತ್ತದೆ. ಅಲ್ಲಿ ಶಿಲಾ ವೃಷಭನು ಕನ್ಯೆಯು ತಂದಿಟ್ಟ ತುಪ್ಪವನ್ನು ಸವಿಯುವಂತೆ ಮಾಡಿ, ತುಮಕೂರಿಗೆ ಬಂದು ತುಂಬೆ ಹೂವಿನ ಮಳೆಗರೆಯುವಂತೆ ಮಾಡುತ್ತಾರೆ. ದೇವರಾಯನದುರ್ಗ, ಚೆನ್ನರಾಯಪಟ್ಟಣ, ಗೂಳೂರು ಮೊದಲಾದ ಸ್ಥಳಗಳಲ್ಲಿ ಒಂದೇ ರಾತ್ರಿ ದರ್ಶನವಿತ್ತು, ಹಾಗಲವಾಡಿಯ

ಮುದಿಯ ಭೂಪಾಲನನ್ನು ಅನುಗ್ರಹಿಸಿ, ಕುಣಿಗಲಿನಲ್ಲಿ ಕುಹಕಿಯಾದ ಲಿಂಗಣ್ಣೊಡೆಯನು ಕೊಟ್ಟ ಸಾವಿರ ಎಳ ನೀರುಗಳನ್ನೂ ಭೂತಗಳಿಗೆ ಕುಡಿಸಿ, ಹುಲಿಯೂರು ದುರ್ಗಕ್ಕೆ ಬಂದು ಅಲ್ಲಿದ್ದ ಮಾಹೇಶ್ವರ ಜ್ವರವನ್ನು ಹೋಗಲಾಡಿಸಿ, ಅಲ್ಲಿಯೂ ಸಿದ್ಧ ಗಂಗೆಯನ್ನು ಬರಿಸಿ, ವಿಧವೆಯೊಬ್ಬಳಿಗೆ ಮಾಂಗಲ್ಯ ಭಾಗ್ಯವನ್ನು ಕರುಣಿಸಿ, ಅಲ್ಲಿನ ಜೈನರಿಗೆ ಬುದ್ಧಿ ಕಲಿಸಿ, ಹೊಳಲುಗುಂದದ ಮಾಯಾದೇವಿಯ ಮಂದಿರದಲ್ಲಿ ದೇವಿಯಿಂದ ಭಿಕ್ಷೆಯನ್ನು ಪಡೆಯುತ್ತಾರೆ. ಮತ್ತೆ ಹರದನ ಹಳ್ಳಿಗೆ ಬಂದು ತಂದೆ-ತಾಯಿಗಳಿಗೆ ದರ್ಶನವಿತ್ತು, ಗುರುಗಳ ಸನ್ನಿಧಿಗೆ ಹೋಗಿ ನಮಸ್ಕರಿಸಲು ಗುರುಗಳು ಆನಂದ ಪರವಶರಾಗಿ ಸಿದ್ಧಲಿಂಗೇಶ್ವರರ ಸತ್ಕೀರ್ತಿಪ್ರಭೆಯು ಪೃಥ್ವಿಯಲ್ಲಿ ಶಾಶ್ವತವಾಗಿ ಪಸರಿಸುತ್ತಿರಲೆಂದು ಆಶೀರ್ವಾದ ಮಾಡಿದರು. ಹುಟ್ಟೂರಿನಲ್ಲಿ ಕೆಲ ದಿನಗಳು ತಂಗಿದ್ದು ಮತ್ತೆ ದೇಶ ಸಂಚಾರ ಹೊರಟು ಸಿದ್ಧಗಂಗೆಗೆ ಬಂದು ಅಲ್ಲಿನ ಕಲ್ಲಿನಲ್ಲಿ ಗಂಗೆಯನ್ನು ಬರಿಸಿ ಆ ಕ್ಷೇತ್ರಕ್ಕೆ ಸಿದ್ಧಗಂಗೆಯೆಂದು ಹೆಸರಿಟ್ಟು ಬಂಡಿ ಹಳ್ಳಿಗೆ ಬಂದು ಪ್ರಜಾ ಪೀಡಕವಾಗಿದ್ದ ಘೋರ ಸರ್ಪವನ್ನು ಪಾತಾಳಕ್ಕೆ ಹೋಗುವಂತೆ ಹೇಳಿ ಕಳುಹಿಸಿ ತಾವು ಕಗ್ಗರೆಗೆ ಬರುತ್ತಾರೆ.

ಕಗ್ಗರೆಯ ಸಮೀಪದಲ್ಲಿದ್ದ ಉಪವನದಲ್ಲಿ ಶಿವಯೋಗಿಗಳು ಬರುತ್ತಿರುವಾಗ ಆ ಊರ ಭಕ್ತನಾದ ನಂಬೆಣ್ಣ ಮತ್ತು ಗೌಡನಾದ ಗಿರಿಗೌಡರು ಅವರನ್ನು ಕಂಡು ತಾವು ನಮ್ಮೂರಿಗೆ ದಯಮಾಡಿಸಿ ಪೂಜೆ ಸ್ವೀಕರಿಸಬೇಕೆಂದು ಬಿನ್ನವಿಸಿಕೊಂಡಾಗ, ಮುಂದಾಗುವುದನ್ನು ಅರಿತಿದ್ದ ಸಿದ್ಧಲಿಂಗೇಶ್ವರರು ಎಷ್ಟು ಬೇಡವೆಂದರೂ ಅವರನ್ನು ಒಪ್ಪಿಸಿ ಅಲ್ಲಿಯೇ ಇದ್ದ ಮಾವಿನ ಮರದಡಿಯಲ್ಲಿ ಗದ್ದುಗೆ ಹಾಕಿ ಕೂರಿಸಿ ಊರೊಳಗೆ ಹೋಗಿ ದೈವದವರನ್ನೆಲ್ಲ ಕರೆತರಬೇಕೆನ್ನುವಷ್ಟರಲ್ಲಿಯೇ ಕೆಂಚ, ದೊಡ್ಡರೆಂಬ ಶಬರರು ಬಂದು ಕಗ್ಗೆರೆಗೆ ಮುತ್ತಿಗೆ ಹಾಕಿದಾಗ ಜನರೆಲ್ಲ ಚದುರಿ ಹೋಗಿ ನಿಡ್ಡುಗಲ್ಲರಸರ ಸಹಾಯವನ್ನು ಪಡೆಯುತ್ತಾರೆ. ನಂಬೆಣ್ಣನ ಭಕ್ತಿಯ ಔತಣವನ್ನು ಸ್ವೀಕರಿಸಿದ್ದ ಸಿದ್ಧಲಿಂಗೇಶ್ವರರು ಬೇರೆಲ್ಲಿಯೂ ಹೋಗದೆ ಆ ಮಾವಿನ ಮರದಡಿಯಲ್ಲಿಯೇ ಶಿವಯೋಗ ನಿದ್ರಾಮುದ್ರಿತರಾದರು. ಹಾಗೆಯೇ ಆರು ತಿಂಗಳವರೆಗೆ ಶಿವಯೋಗಾನುಷ್ಠಾನದಲ್ಲಿರುವಾಗ ಅವರ ದೇಹದ ಸುತ್ತ ಹುತ್ತು ಬೆಳೆಯಿತಂತೆ. ಆರು ತಿಂಗಳು ಕಳೆದ ಮೇಲೆ ಕಗ್ಗರೆಯ ಗೌಡರು ಶಬರಾಧಿನಾಥನ ನಂಬುಗೆ ಪಡೆದು ಪುನಃ ಕಗ್ಗರೆಯನ್ನು ಕಟ್ಟಿಸಿ ನಂಬೆಣ್ಣ ಮೊದಲಾದ ಭಕ್ತರು ಬಂದು ಕಗ್ಗರೆಯಲ್ಲಿ ನೆಲಸುತ್ತಾರೆ. ಆ ಊರಿನ ಭಕ್ತರೆಲ್ಲರೂ ಆ ತೋಟಕ್ಕೆ ಹೋಗಿ ತಾವು ಸಿದ್ಧಲಿಂಗ ಯತಿಗಳನ್ನು ಕೂರಿಸಿದ್ದ ಜಾಗದಲ್ಲಿ ಹುತ್ತ ಬೆಳೆದಿರುವುದನ್ನು ಕಂಡು ವಿಸ್ಮಯಂಬಟ್ಟು ಶಿವಯೋಗಿಗಳಲ್ಲಿ ಪ್ರಾರ್ಥನೆಯನ್ನು ಸಲ್ಲಿಸಲು ಅವರು ಭಕ್ತರ ಪ್ರಾರ್ಥನೆಯನ್ನು ಮನ್ನಿಸಿ ಅವರ ಭಕ್ತಿಯನ್ನು ಸ್ವೀಕರಿಸಲೆಂದು ಎಚ್ಚೆತ್ತು ಅವರೊಂದಿಗ ಕಗ್ಗೆರೆಯನ್ನು ಪ್ರವೇಶಿಸುತ್ತಾರೆ. ಇಲ್ಲಿ ಇವರು ಶಿವಯೋಗ ಸಮಾಧಿಯಲ್ಲಿ ಸಂದಕಾಲದ ಅವಧಿಯ ವಿಷಯದಲ್ಲಿ ಎರಡು ಅಭಿಪ್ರಾಯ

ಗಳಿರುವಂತೆ ಕಾಣುತ್ತವೆ. ಶಬರರ ಧಾಳಿಯಿಂದ ಕಂಗೆಟ್ಟು ಊರನ್ನು ಬಿಟ್ಟು ಹೋದ ಜನರು ಆರು ತಿಂಗಳ ಮೇಲೆ ಮರಳಿ ಬಂದರೆಂದೂ, ಅಲ್ಲಿಯವರೆಗೆ ಅಂದರೆ ಆರು ತಿಂಗಳ ಕಾಲದವರೆಗೆ ಶಿವಯೋಗಿಗಳು ಹುತ್ತಿನಲ್ಲಿ ಶಿವಯೋಗ ಸಮಾಧಿಯಲ್ಲಿದ್ದರೆಂದೂ ಸಿದ್ಧೇಶ್ವರ ಮಹಾಪುರಾಣ, ತೋಂಟದಾರ್ಯರಗಳೆ, ಷಟ್ಸ್ಥಲ ವಲ್ಲಭ, ನಿರಂಜನ ಜಂಗಮ ವಂಶ ದರ್ಪಣಗಳು ಹೇಳಿದರೆ, ನಿರಂಜನ ವಂಶ ರತ್ನಾಕರ ಮತ್ತು ಸಿದ್ಧಲಿಂಗ ಸಾಂಗತ್ಯಗಳು ಈ ಅವಧಿಯನ್ನು ಹನ್ನೆರಡು ವರ್ಷಗಳೆಂದೂ, ಶರಣ ಚರಿತಾಮೃತವು ಏಳೆಂಟು ವರುಷಗಳೆಂದೂ ಹೇಳುತ್ತವೆ. ಆದರೆ ಊರು ಬಟ್ಟು ಹೊರಗೆ ಹೋಗಿ ಹನ್ನೆರಡು ವರ್ಷಗಳು ಬೇರೆ ಕಡೆಯಲ್ಲಿದ್ದು ಪುನಃ ತಮ್ಮೂರಿಗೆ ಮರಳಿ ಬಂದು ನೆಲಸಿದರೆಂದು ಹೇಳುವುದು ಅಷ್ಟೊಂದು ಸಮಂಜಸವೆಂದು ತೋರುವುದಿಲ್ಲ. ಇಷ್ಟು ದೀರ್ಘಕಾಲ ಬೇರೆ ಕಡೆಯಲ್ಲಿ ಬಾಳಿದವರು ಅಲ್ಲಿಯೇ ನೆಲೆಯೂರುವುದು ಹೆಚ್ಚು ಸ್ವಾಭಾವಿಕವಾಗಿದೆ. ಆದುದರಿಂದ ಬೇಡರ ದಾಳಿ ಮುಗಿದ ಮೇಲೆ ನಾಲ್ಕಾರು ತಿಂಗಳಲ್ಲಿ ಅವರು ಮರಳಿ ಬಂದಿರುವರೆಂಬುದು ಹೆಚ್ಚು ಸಮಂಜಸವಾದುದೆಂದು ಡಾ॥ ಆರ್.ಸಿ. ಹಿರೇಮಠರು ಹೇಳುತ್ತಾರೆ. ಅಂದಮೇಲೆ ಅವರು ಸಮಾಧಿಯಲ್ಲಿ ನಿರತರಾಗಿದ್ದ ಕಾಲ ಆರು ತಿಂಗಳು ಎಂದು ಹೇಳಬಹುದು.

ಕಗ್ಗೆರೆಯ ಜನರು ತಮ್ಮ ವನವಾಸದಿಂದ ಮರಳಿ ಬಂದು ತಮ್ಮ ಪುದುವಾಳ್ಕೆಯನ್ನು ಪ್ರಾರಂಭಿಸಿದ ಮೇಲೆ ಅಲ್ಲಿ ಒಂದು ಕೌತುಕ ನಡೆಯುತ್ತದೆ. ನಂಜಣ್ಣಸೆಟ್ಟಿಯ ಹಸುವೊಂದು ಪ್ರತಿನಿತ್ಯವೂ ಬಂದು ಶಿವಯೋಗಿಗಳ ಮೇಲೆ ಕಟ್ಟಿದ್ದ ಹುತ್ತದ ಮೇಲೆ ಹಾಲನ್ನು ಕರೆದು ಹೋಗುತ್ತಿರುತ್ತದೆ. ಈ ರಹಸ್ಯವನ್ನು ತಿಳಿಯಲು ತಮ್ಮ ಮನೆಯ ದನಗಾಹಿಯೊಂದಿಗೆ ಹೋಗಿ ನಿಜಸ್ಥಿತಿಯನ್ನು ಅರಿತು ಅಚ್ಚರಿಗೊಂಡ ನಂಜಣ್ಣನಿಗೆ ತಾವು ಊರು ಬಿಡುವುದಕ್ಕೆ ಮುನ್ನ ಶಿವಯೋಗಿಗಳಲ್ಲಿ ಭಕ್ತಿಯಿಂದ ನಿವೇದಿಸಿಕೊಂಡಿದ್ದ ಮಾತುಗಳು ನೆನಪಿಗೆ ಬಂದು ದುಗ್ಧ ಧಾರೆಯನ್ನೆರೆದು ಹುತ್ತವನ್ನು ಕರಗಿಸಿ ಶಿವಯೋಗ ನಿದ್ರಾಮುದ್ರೆಯಲ್ಲಿದ್ದ ಸಿದ್ಧಲಿಂಗಶಿವಯೋಗಿಗಳನ್ನು ಕಂಡು ನೆರೆದಿದ್ದ ಭಕ್ತರೆಲ್ಲ ಹರ್ಷಾತಿರೇಕದಿಂದ ಶಿವಯೋಗಿಗಳನ್ನು ಕೊಂಡಾಡಲು ಅವರು ಎಚ್ಚೆತ್ತು ಕಣ್ದೆರೆದು ಜನರಿಗೆ ದರ್ಶನವನ್ನೀಯುತ್ತಾರೆ. ಅಂದಿನಿಂದ ಮುಂದೆ ಅವರು ತೋಂಟದ ಸಿದ್ಧಲಿಂಗ ಶಿವಯೋಗಿಗಳೆಂದು ಪ್ರಖ್ಯಾತರಾಗುತ್ತಾರೆ.

ಅಲ್ಲಿಂದ ಅತ್ಯಂತ ವೈಭವದಲ್ಲಿ ಶಿವಯೋಗಿಗಳನ್ನು ಏಳುನೂರು ವಿರತರು ಸಹಿತ ಮೆರವಣಿಗೆಯಲ್ಲಿ ಕರೆದುಕೊಂಡು ಕಗ್ಗೆರೆಯನ್ನು ಪ್ರವೇಶಿಸಿ ಆ ಊರಿನಲ್ಲೆಲ್ಲ ಅವರ ಮೆರವಣಿಗೆ ಮಾಡಿಸುತ್ತಾರೆ. ಶಿವಯೋಗಿಗಳ ಶಿವಪೂಜೆ, ಪಾದಾರ್ಚನೆ ಮುಗಿದ ಮೇಲೆ ನಂಜಣ್ಣನ ಭಕ್ತಿಯನ್ನು ಸ್ವೀಕರಿಸಿ, ಜಂಗಮರು ಸಹವಾಗಿ ಶಿವತತ್ವಾನುಭಾವ ಗೋಷ್ಠಿಯಿಂದಿರ್ಪ ಸಮಯದಲ್ಲಿ, ಎಡೆಯೂರು ಗ್ರಾಮದ ಮೃಡಭಕ್ತರು ಬಂದು ಬಿನ್ನಹ ಮಾಡಿ ಒಡನೆ ಕೊಂಡೊಯ್ಯುತ್ತಾರೆ. ಆ ಗ್ರಾಮದಲ್ಲಿದ್ದ ಉಗ್ರಾಕ್ಷನ ಭಕ್ತ ಸಿದ್ಧರಾಮಯ್ಯನು ಶೀಘ್ರದಿ ಸಿದ್ಧೇಶ್ವರರಿಗೆ ಉಗ್ರಾಂಬಕ ಪೂಜೆಗೆಂದು ಭಸಿತವನಿಡಲು ಆತನ ಮನೆಗೆ ಹೋಗಿ ಮೃದು ಗದ್ದುಗೆಯಲ್ಲಿ ಮಂಡಿಸಿ ಶಿವಪೂಜೆಮಾಡಿ, ಅಲ್ಲಿ ನೆರೆದಿದ್ದ

ಜಂಗಮದೊತ್ತೊತ್ತೆಯಂ ನೋಡಿ ಹರ್ಷಚಿತ್ತರಾಗಿ ಪರಮಜ್ಞಾನದ ವಿಭೂತಿಯನ್ನು ಸೂಕ್ಷ್ಮಾಂಗದಲ್ಲಿ ಧರಿಸಿ, "....ಸಿದ್ಧಲಿಂಗೇಶ್ವರರು ಇಷ್ಟಲಿಂಗದ ಅಷ್ಟವಿಧಾರ್ಚನೆಯನ್ನು ಮಾಡಿ....ಪ್ರಾಣಲಿಂಗದಲ್ಲಿ ಚಿತ್ಪ್ರಭೋನ ಪಂಚೇಂದ್ರಿಯಂಗಳು ಸಿಕ್ಕಿ ನೆನೆವ ಮನಂ ನಷ್ಟವಾಗಿ ಕಾರಣ ತನುವಿನ ಭಾವದಿಂ ಗ್ರಹಿಸಿದ ಭಾವದ ಪಂಚೇಂದ್ರಿಯಂಗಳು ಭಾವ ಲಿಂಗ ಪೂಜೆಯಲ್ಲಿಯೆ ಸಿಕ್ಕಿ ಅಭಾವ ನಿರ್ಭಾವವಾಗಿ ಒಳ ಹೊರಗೆ ತೆರಹಿಲ್ಲದೆ ನಿವಾತ ಜ್ಯೋತಿಯಂತೆ ದೀಪವನೊಳಕೊಂಡ ಸ್ಫಟಿಕದ ಘಟದಂತೆ ಮತ್ತಂ ಲಿಂಗದಲ್ಲಿ ಮನವ ನಿಂಬಿಟ್ಟು.... ಸಿದ್ಧಲಿಂಗೇಶ್ವರಂ ತನುತ್ರಯದಲ್ಲಿ ಲಿಂಗತ್ರಯ ಪೂಜೆಯಂ ಜಾಗ್ರ ಸ್ವಪ್ನ ಸುಷುಪ್ತಿಯಿಂ ನಿಬ್ಬೆರಗುವಟ್ಟು....ಭಕ್ತತತಿಯೆಬ್ಬಿಸೆ ಚಿತ್ರಿತ ಪುತ್ರನಂತೆ....ನಿಃಶಬ್ದ ದೊಳಿರುತ್ತೆ....ಆಚಾರ ಲಿಂಗವೆ ದೇಹವಾಗಿ ಗುರುಲಿಂಗವೆಯಾತ್ಮನಾಗಿ ಶಿವಲಿಂಗವೆ ಪ್ರಾಣವಾಗಿ ಚರಲಿಂಗವೆಯಿಂದ್ರಿಯಂಗಳಾಗಿ ಪ್ರಸಾದಲಿಂಗವೆ ವಿಷಯಂಗಳಾಗಿ ಮಹಾ ಲಿಂಗವೆ ತೃಪ್ತಿಯಾಗಿ ಆ ತೃಪ್ತಿ ಘನವಾದುಬ್ಬಸದಿಂ ಕಳವು ಸೊಕ್ಕೆಯುಸಿರ್ನಿಂದು ನುಡಿಯಡಗಿರ್ದಪನೊಯೆಂದು" ಭಕ್ತರು ಸಂದೇಹ ಪಡುವಂತೆ ಶಿವಯೋಗ ನಿದ್ರೆ ಯಲ್ಲಿದ್ದು ಭಕ್ತರು ನಾನಾ ವಿಧವಾದ ಭಕ್ತಿಗೀತೆಗಳನ್ನು ಬಹಳ ದೀರ್ಘಕಾಲ ಹಾಡಿದ ಮೇಲೆ ಎಚ್ಚರುತ್ತಾರೆ. ಈ ರೀತಿಯಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳು ಏಳು ನೂರು ವಿರತರನ್ನು ಜೊತೆಗೂಡಿಕೊಂಡು ಭಾರತಾದ್ಯಂತ ಸುತ್ತಾಡಿ ಜನರಿಗೆ ಷಟ್ಸ್ಥಲ ಸಿದ್ಧಾಂತದ ಉಪದೇಶ ಮಾಡಿದರು. ಅಲ್ಲಲ್ಲಿ ಸಿಕ್ಕಿದ ಜೈನ, ವೈಷ್ಣವ, ಶೈವ ಮೊದ ಲಾದ ಧರ್ಮದವರನ್ನು ವಾದದಲ್ಲಿ ಸೋಲಿಸಿ ವೀರಶೈವ ಧರ್ಮದ ತಿರುಳಾದ ಷಟ್ಸ್ಥಲ ತತ್ವದಲ್ಲಿ ಅದ್ಭುತವಾದ ಕ್ರಾಂತಿಯನ್ನುಂಟು ಮಾಡಿದರು. ಅಲ್ಲಮನ ಅಪರಾವತಾರಿಗಳೇ ಆದ ಸಿದ್ಧಲಿಂಗ ಶಿವಯೋಗಿಗಳು ಮತ್ತೊಮ್ಮೆ ಷಟ್ಸ್ಥಲೋದ್ಧಾರವನ್ನು ಮಾಡಿ ಶಿವ ಭಕ್ತಿಯನ್ನು ಉಳಿಸಿ ಬೆಳೆಸಿ ನಾಡಿನ ಜನ ಮನದಲ್ಲಿ ಆ ಪ್ರಭೆಯನ್ನು ಬೆಳಗಿದರು.

ಕೊನೆಯಲ್ಲಿ ತಾವು ಎಡೆಯೂರಿನಲ್ಲಿರುವಾಗ ತಮ್ಮ ಶಿಷ್ಯರಲ್ಲೊಬ್ಬರಾದ ಬೋಳ ಬಸವೇಶ್ವರರಿಗೆ ಚರಪಟ್ಟವನ್ನು ಕಟ್ಟಿ ತಮಗಾಗಿ ನಿರ್ಮಿಸಲಾಗಿದ್ದ ಎಡೆಯೂರ ಕಲ್ಲು ಮಠದಲ್ಲಿ ನಿರ್ವಿಕಲ್ಪ ಸಮಾಧಿಯನ್ನು ಪಡೆಯುತ್ತಾರೆ. ಇದರ ವಿವರವನ್ನು ಕುಣಿಗಲ್ ತಾಲ್ಲೂಕಿನ ೪ನೆಯ ಶಾಸನದಲ್ಲಿ ಕೊಡಲಾಗಿದೆ. ಇದರಲ್ಲಿರುವ ಕೆಲವಂಶಗಳನ್ನು ಇಲ್ಲಿ ಕೊಡಲಾಗಿದೆ. ಎಂಟು ಜಡೆಯ ಗೋತ್ರದ ಪಟ್ಟದ ಚಿಟ್ಟಿಗ ದೇವರು ಸಿದ್ಧಲಿಂಗ ಶಿವಯೋಗಿಗಳ ಶಿಷ್ಯರು. ಈ ದೇವರ ಶಿಷ್ಯರಲ್ಲೊಬ್ಬರಾದ ಚನ್ನವೀರಪ್ಪ ಒಡೆಯರು ಸಿದ್ಧ ಲಿಂಗೇಶ್ವರರ ಪಾದ ಪದ್ಮಾರಾಧಕರಾಗಿದ್ದು ಅವರಿಗೊಂದು ಮಠವನ್ನು ಕಟ್ಟಿಸಬೇಕೆಂದು ಭಕ್ತಿಯನ್ನು ಗುರು ಚಿಟ್ಟಿಗದೇವರಿಗೆ ಅರ್ಪಿಸುತ್ತಾರೆ. ಚಿಟ್ಟಿಗದೇವರು ಇವರ ಇಷ್ಟ ದಂತೆ ಎಡೆಯೂರಿನಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳಿಗಾಗಿ ಒಂದು ಕಲ್ಲು ಮಠ ವನ್ನು ಕಟ್ಟಿಸುತ್ತಾರೆ. ಅಲ್ಲಿ ಶಿವಯೋಗಿಗಳು ತಮ್ಮ ಶಿಷ್ಯರಲ್ಲೊಬ್ಬರಾದ ಬೋಳ ಬಸ ವೇಶ್ವರರಿಗೆ ಷಟ್ಸ್ಥಲಾಂತರ್ಗತವಾದ ಏಕೋತ್ತರಶತಸ್ಥಲದ ಸಿದ್ಧಾಂತವನ್ನು ಬೋಧಿಸಿ,

ತಮ್ಮ ನಿರಂಜನ ಪಟ್ಟವನ್ನು ಅವರಿಗೆ ಕಟ್ಟಿ, ಸಪ್ಪೆದೇವರು, ಉಪ್ಪಿನ ಹಳ್ಳಿಯಸ್ವಾಮಿ ಗುಮ್ಮಳಾಪುರದ ಸಿದ್ಧಲಿಂಗ ದೇವರು, ಶೀಲವಂತ ದೇವರು, ಬೋಳ ಬಸವಾರ್ಯರೇ ಮೊದಲಾದ ತಮ್ಮ ಶಿಷ್ಯರಿಗೆಲ್ಲ ಮೋಕ್ಷಮಾರ್ಗವನ್ನರುಹಿ ಎಡೆಯೂರ ಕಲ್ಲು ಮಠದಲ್ಲಿ ನಿರ್ವಿಕಲ್ಪ ಸಮಾಧಿಯನ್ನು ಪಡೆಯುತ್ತಾರೆ. ಇವರ ಬಗ್ಗೆ ಬರೆದಿರುವ ಪುರಾಣ ಕಾವ್ಯ ಗಳಲ್ಲೆಲ್ಲ ಇದೇ ವಿಷಯವನ್ನೇ ಹೇಳಿದ್ದಾರೆ.

ವ್ಯಕ್ತಿತ್ವ :

ಹದಿನೈದನೆಯ ಶತಮಾನದುದ್ದಕ್ಕೂ ಶತಾಯುಷಿಗಳಾಗಿ ಬಾಳಿರಬಹುದಾದ, ಪರಿ ಪೂರ್ಣ ಜೀವನವನ್ನು ನಡೆಸಿ ಷಟ್ಸ್ಥಲಿಗಳಾದ, ತೋಂಟದ ಸಿದ್ಧಲಿಂಗ ಶಿವಯೋಗಿಗಳ ವ್ಯಕ್ತಿತ್ವ ಘನವಾದುದು, ಮಹಿಮಾನ್ವಿತವಾದುದು. ಶ್ರೀ ಗುರುವಿನ ಪದತಲದಲ್ಲಿ ಕುಳಿತು ಗುರುಪೂಜೆಯ ಮೂಲಕ ಶಿವಪೂಜೆಯನ್ನು ಮಾಡಿ, ವ್ಯಕ್ತಿಯ ಆತ್ಮ ವಿಕಾಸ ವನ್ನು ಮಾಡಿಕೊಂಡು ವ್ಯಷ್ಟಿಯ ಉನ್ನತಿಯಲ್ಲಿಯೇ ತುಷ್ಟಿವಡೆಯದೆ ಸಮಷ್ಟಿಯ ಉದ್ಧಾರಕ್ಕೂ ಪ್ರಯತ್ನಿಸಿ, ಯಶಸ್ವಿಯಾದ ಪುಣ್ಯಜೀವಿ. ದೇಶದಲ್ಲಿ ತಾಂಡವವಾಡು ತ್ತಿದ್ದ ಅನಾಚಾರ, ಅತ್ಯಾಚಾರ, ಹಿಂಸೆ, ನಿರಾಶೆ, ಅಶಾಂತಿಯನ್ನು ಅಡಗಿಸಿ, ಶಿವಭಕ್ತಿ ಯನ್ನು ನೆಲೆಗೊಳಿಸಿ ಷಟ್ಸ್ಥಲದ ಉದ್ಧಾರಮಾಡಿ, ದೇಶದಲ್ಲಿ ಶಾಂತಿಯನ್ನು ನೆಲೆಸು ವಂತೆ ಮಾಡಿದ ಮಹಾಚೇತನ. ಷಟ್ಸ್ಥಲಾಂತರ್ಗತವಾದ ಏಕೋತ್ತರ ಶತಸ್ಥಲವನ್ನು ಪರಿಷ್ಕರಿಸಿ ಪ್ರತಿಪಾದಿಸಿದ ಮಹಾಜ್ಞಾನಿ. ಸಂಸಾರದ ಅನಿತ್ಯತೆ ಅಸಾರತೆಯನ್ನರಿತು ಜೀವ-ಭಾವದ ಭ್ರಮೆಯನ್ನು ಕಳೆದು, ಅಹಂಕಾರ ಮಮಕಾರಗಳ ಮಾಣಿಸಿ ನಿರಹಂ ಕಾರಿಯೆಂದೆನಿಸಯ್ಯ ಎಂದು ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವಿನಲ್ಲಿ ಪ್ರಾರ್ಥಿಸಿ ಕೊಳ್ಳುವ ವಿನಯಶಾಲಿ. ಆಡಂಬರದ ಭಕ್ತರನ್ನು ದಿಟ್ಟತನದಿಂದ ಖಂಡಿಸುವ ಧೈರ್ಯ ಶಾಲಿ. ಒಟ್ಟಿನಲ್ಲಿ ಸಮಸ್ತ ಸದ್ಗುಣಗಳ ಸಮಾವೇಶಿಯಾಗಿ ಪರಮ ಪರಂಜ್ಯೋತಿ ಸ್ವರೂಪ ವಾದ ಪ್ರಣವಸ್ವರೂಪಿ ಸಿದ್ಧಲಿಂಗ ಶಿವಯೋಗಿ. ಇವರ ಅಮಿತವಾದ ಈ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಷಟ್ಸ್ಥಲಜ್ಞಾನ ಸಾರಾಮೃತದಲ್ಲಿ ಹಿಡಿದಿಟ್ಟಿರುವ ಅವರ ಅನುಭವದ ನುಡಿ.

ಸಾಮಾನ್ಯವಾಗಿ ಸಾಧನಾ ಮಾರ್ಗದಲ್ಲಿ ಒಬ್ಬ ವ್ಯಕ್ತಿ ಚರಿಸಬೇಕಾದರೆ ಅವನ ಜೀವನದಲ್ಲಿ ಆತನಿಗೆ ಯಾವುದೋ ರೀತಿಯ ಅತೃಪ್ತಿ, ನಿರಾಶೆ ಮೂಡಿ ಬರುವುದು ಅನಿ ವಾರ್ಯವೇನೋ ಎಂದು ತೋರುತ್ತದೆ. ಆತನಿಗೆ ಭೌತಿಕ ಪ್ರಪಂಚದ ಯಾವ ವಸ್ತುವಿ ನಿಂದಲೂ ಆ ಅತೃಪ್ತಿ, ನಿರಾಶೆಮಾಯವಾಗಿ ತೃಪ್ತಿ, ಶಾಂತಿ ದೊರೆಯದಾಗ ಈ ಪ್ರಪಂಚದ ಯಾವ ವಸ್ತುವೂ ಅವನ ಆಸೆಯನ್ನು ಈಡೇರಿಸದಿದ್ದಾಗ, ಮನಸ್ಸಿನ ಹಸಿವು ಹಂಬಲ ಪೂರೈಸದಿದ್ದಾಗ ಆತ ಅಲೌಕಿಕವಾದ ಶಕ್ತಿಯಲ್ಲಿ ಅಚಲವಾದ ನಂಬಿಕೆ, ಶ್ರದ್ಧೆ, ಭಕ್ತಿ ಯನ್ನು ಮನದಲ್ಲಿ ಮೂಡಿಸಿಕೊಂಡು ಆ ಶಕ್ತಿಯ ಆರಾಧನೆ-ಉಪಾಸನೆಯಲ್ಲಿ ತನ್ನ ನೈಜ ರೂಪವನ್ನು ಕಂಡುಕೊಂಡು ಮನಸ್ಸಿನ ಅಸೀಮವಾದ ಆಸೆ, ಹಂಬಲಗಳನ್ನು ಈಡೇರಿಸಿ

ಕೊಳ್ಳುತ್ತಾನೆ. ಈ ರೀತಿಯಲ್ಲಿ ಪ್ರಪಂಚದ ಎಲ್ಲವಸ್ತುಗಳ ಬಗೆಗೂ ತಿರಸ್ಕಾರ ಮೂಡಿ ಅಲೌಕಿಕ ಶಕ್ತಿಯಲ್ಲಿ ವಿಶ್ವಾಸ ಮೂಡಿ ನಿಜಸ್ವರೂಪವನ್ನು ಕಂಡುಕೊಳ್ಳಬೇಕಾದರೆ ಅದಕ್ಕೆ ಮಹಾ ಸಾಹಸವನ್ನೇ ಮಾಡಬೇಕಾಗುತ್ತದೆ. ಅದಕ್ಕೆ ಮಹಾಚೈತನ್ಯದ ಪ್ರೇರಣೆಯೂ ಅನಿವಾರ್ಯವಾಗುತ್ತದೆ. ಇಂಥ ಅಸಿಧಾರಾವ್ರತವೆನಿಸಿದ ಭಕ್ತಿಸಾಧನೆಯ ಮಾರ್ಗದಲ್ಲಿ ಚರಿಸಿ ಮುಕ್ತರಾದ ಶಿವಶರಣರ ಚೇತನ ಇಂಥದು. ಈ ಶರಣರ ಮಾರ್ಗದಲ್ಲಿ ನಡೆದು ಬಂದ ಸಿದ್ಧಲಿಂಗ ಶಿವಯೋಗಿಗಳ ಆತ್ಮವೂ ಇಂಥ ನಿರಾಸೆ, ಅತೃಪ್ತಿಯ ಫರ್ನೇಸ್ ಆಗುತ್ತದೆ. ಸಂಸಾರದ ತಾಪತ್ರಯ ಈ ಯತಿಗಳನ್ನೂ ಅಂಡಲೆಯುತ್ತದೆ. ಅಂತೆಯೇ

ಕಾಮದಿಂದ ಕರಗಿದೆನಯ್ಯಾ, ಕ್ರೋಧದಿಂದ ಕೊಱಗಿದೆನಯ್ಯಾ;
ಲೋಭ ಮೋಹಗಳಿಂದ ಅತಿ ನೊಂದೆನಯ್ಯಾ;
ಮದ ಮತ್ಸರಗಳಿಂದ ಬೆದಬೆದನೆ ಬೆಂದೆನಯ್ಯಾ;
ಅಹಂಕಾರ ಮಮಕಾರದಿಂದ ಮತಿ ಮಂದನಾಗಿರ್ದೆನಯ್ಯಾ;
ಇದು ಕಾರಣ,
ಎನ್ನ ಕಾಮಾದಿ ಷಡುವರ್ಗಂಗಳ ಕಳದು
ಅಹಂಕಾರ ಮಮಕಾರಂಗಳ ಮಾಣಿಸಿ
ನಿರಹಂಕಾರಿಯೆಂದೆನಿಸಯ್ಯಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ ! ॥ ೨೭ ॥

ಶಿವಯೋಗಿಗಳ ಮನಸ್ಸನ್ನೂ ತನು–ಮನ–ಧನವಿಕಾರಗಳು ಅಂಡಲೆಯುವುವಂತೆ. ಇವರಿಗೆ ಹಗಲು ಹಸಿವಿನ ಚಿಂತೆಯಂತೆ, ಇರುಳು ವಿಷಯದ ಚಿಂತೆಯಂತೆ, ಇವರ ಮನಸ್ಸು ಸದಾ ಹೊನ್ನು–ಹೆಣ್ಣು–ಮಣ್ಣು ನೆನೆನೆನೆದು ಶಿವನನ್ನು ನೆನೆಯಲೊಲ್ಲದಂತೆ, ಸುರಚಾಪದಂತೆ ತೋರಿ ಅಡಗುವ ಅನಿತ್ಯವಾದ ಸಂಸಾರದ ಕರ್ಮ ಅವರನ್ನು ಮೋಕ್ಷಹೀನರನ್ನಾಗಿ ಮಾಡಿತಂತೆ. ಸಂಸಾರದಲ್ಲಿ ಸವೆಸವೆದು ಅವಿವೇಕಿಯಾದ ಅವರ ಅವಿವೇಕವನ್ನು ಕಳೆದು ಶಿವತತ್ವ ವಿವೇಕವನ್ನಿತ್ತು ಕರುಣಿಸಬೇಕಂತೆ, ಅಂತೆಯೇ :

ಅಹಂಕಾರಭಾವ, ಅವಿದ್ಯಾಭಾವ
ಜ್ಞಾನಾಜ್ಞಾನಭಾವ, ಜ್ಞಾನ ವಿಕೃತಭಾವ
ವರ್ತನ ವಿಕೃತಿ ಭಾವ, ಮೋಹನ ವಿಕೃತಿಭಾವ ಎಂಬ
ಭ್ರಾಂತಿ ಭಾನವ ಮಾಣಿಸಯ್ಯಾ
ಇಂದ್ರಿಯಭಾವ ವಿಷಯಭಾವ
ಭೂತಭಾವ, ಕರಣಭಾವ
ವಿಶ್ವತೈಜಸ ಪ್ರಾಜ್ಞನೆಂಬ
ಜೀವಭಾವದ ಭ್ರಮೆಯ ಕಳೆಯಯ್ಯಾ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ! ॥ ೩೨ ॥

ಎಂದು ತಮ್ಮ ನೆಚ್ಚಿನ, ಮೆಚ್ಚಿನ ದೈವವನ್ನು ಅಂಗಲಾಚಿ ಬೇಡಿಕೊಳ್ಳುತ್ತಾರೆ. ಹೀಗೆ ಅನನ್ಯ ಭಕ್ತಿಯಿಂದ, ಏಕೋಭಾವದಿಂದ ಅಂಗಲಾಚಿ ಬೇಡುತ್ತಿರುವ ಭಕ್ತನ ಪ್ರಾರ್ಥನೆಯನ್ನು ಭಕ್ತಿಪ್ರಿಯ, ಭಕ್ತಪರಾಧೀನನೆನಿಸಿದ ಪರಶಿವನು ಕೇಳದೆ ಕಿವುಡಾಗಿರಲು ಸಾಧ್ಯವೇ! ತನ್ನನ್ನೇ ಭಕ್ತನಿಗೆ ಸಮರ್ಪಿಸಿಕೊಳ್ಳುತ್ತಾನೆ. ಏಕೋಭಾವದಿಂದ ಪ್ರಾರ್ಥಿಸಿದ ಭಕ್ತನಲ್ಲಿ ಏಕದೇಹಿಯಾಗಿ, ಎರಡೊಂದಾಗಿ ಬೆರೆಯುತ್ತಾನೆ. ಬೆಳಗಿನ ಸುಳುಹನ್ನೂ ತೋರುತ್ತಾನೆ. ಬೆಳಗು ಬೆಳಗೇ ಆದ ಆ ಪರಮ ಪರಂಜ್ಯೋತಿಯನ್ನು ತನ್ನೊಳಗೇ ಅರಿತ ಶಿವಯೋಗಿಗಳು :

ಮುಚ್ಚಿದ ಕಣ್ಣು ತೆಱದುದ ಕಂಡೆ;
ಕಿಚ್ಚಿನ ಜ್ವಾಲೆ ಕಱವುದ ಕಂಡೆ;
ಮೃತ್ಯುಗಳ ಮೊತ್ತ ಕಿತ್ತೋಡುವುದ ಕಂಡೆ;
ಕತ್ತಲೆ ಬೆಳಗಾದುದ ಕಂಡೆ;
ಬಿಚ್ಚಿ ಬೇಱಲ್ಲದ ಬೆಳಗೆನ್ನನೊಳಕೊಂಡು
ನಿತ್ಯ ಪ್ರಸನ್ನನಾದೆನಯ್ಯಾ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ! ॥ ೧೦೦ ॥

ಎಂದು ಮನತುಂಬಿ ಹಾಡಿದ್ದಾರೆ.

ಮರವೆಯ ತಮನ ಕಳೆಯಯ್ಯಾ
ಅಱುಹಿನ ಜ್ಯೋತಿಯ ಬೆಳಗಯ್ಯಾ
ಅಱುಹಿನ ಜ್ಯೋತಿಯ ಬೆಳಗಿ,
ನಿಮ್ಮ ಕುರುಹ ಕಂಡು ಕೂಡುವ
ತುರೀಯಾವಸ್ಥೆಯ ಸುಖವಕೊಡು ಕಂಡಾ
ಮಹಾಲಿಂಗ ತಂದೆ
ಕೊಡದಿರ್ದಡೆ ನೀನೆನಗೆ ಪ್ರಮಥರಾಣೆ;
ಬಸವಣ್ಣ ನಾಣೆ

ಎಂದು ಪ್ರಮಥರ ಮೇಲೆ, ಬಸವಣ್ಣನ ಮೇಲೆ ಆಣೆಯಿಟ್ಟು ಶಿವನನ್ನೇ ಪರೀಕ್ಷೆಗೊಳಗು ಮಾಡಿ,

ಹೃದಯಕಮಲ ಕರ್ಣಿಕಾವಾಸದಲ್ಲಿ
ದಿಟಪುಟಜ್ಞಾನ ಉದಯವಾಗಿ ಧಿಕ್ಕರಿಸಲಾಗಿ,
ಸಟೆ ದೂರವಾಗಿ ನಿವರ್ಜಿತವಾದವು ನೋಡಾ.
ಕುಟಿಲ ಕುಹಕ ಅಟಮಟ ಅಭ್ರಚ್ಛಾಯವಳಿದು ಹೋಗದ ಮುನ್ನ,

ಸ್ಫಟಿಕ ಪ್ರಜ್ವಲಾಕಾರವಾಯಿತ್ತು ನೋಡಾ.
ಆ ಶಿವಜ್ಞಾನ ಪ್ರಭೆಯೊಳಗೆ ನಿಟಿಲ ಲೋಚನನೆಂಬ ನಿತ್ಯನ ಕಂಡು,
ಅದೇ ಎನ್ನ ನಿಜವೆಂದು ಬೆರಸಿ ಅಭಿನ್ನಸುಖಿಯಾಗಿರ್ದೆನಯ್ಯಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ || ೮೪ ||

ಮಿಂಚಿನ ಪ್ರಭೆಯಲ್ಲಿ ಪಂಚವದನನ ಕಂಡೆನಯ್ಯಾ
ಸಂಚವಿಲ್ಲದೆ ನಿರೀಕ್ಷಿಸಲು ಪಂಚಪಂಚೀ ಕೃತಿಯ ಪ್ರಪಂಚು ಪರಿಹಾರವಾಗಿ
ನಿಃಪ್ರಪಂಚ ನಿರ್ಲೇಪನಾದೆನು ನೋಡಾ
ಮಹಾಲಿಂಗ ಗುರು ಶಿವಸಿದ್ಧೇಶರ ಪ್ರಭುವೆ ! || ೮೫ ||

ಶಿವಯೋಗಿಗಳು ತಮ್ಮ ಹೃದಯಕಮಲಕರ್ಣಿಕಾವಾಸದ ಮಧ್ಯದಲ್ಲಿ ಮಿಂಚಿನ ಪ್ರಭೆಯಂತೆ ಹೊಳೆಯುವ ಪಂಚವದನನನ್ನು ಕಾಣುತ್ತಾರೆ. ಕಂಡು ಶಿವಯೋಗ ಸಮಾಧಿಯಲ್ಲಿ ಮುಳುಗುತ್ತಾರೆ. ಹೀಗೆ ಶಿವಯೋಗವನ್ನು ಸಂಪಾದಿಸಿದ ಸಿದ್ಧಲಿಂಗ ಶಿವಯೋಗಿಗಳಿಗೆ ಶರಣ ಬೇರೆಯಲ್ಲ ಲಿಂಗಬೇರೆಯಲ್ಲ.

ಸ್ಫಟಿಕದ ಘಟದೊಳಗೆತ್ತಿದ ಜ್ಯೋತಿ,
ಒಳಹೊರಗೊಂದೆ ಸ್ವಯವಾಗಿ ಪ್ರಜ್ವಲಿಸುವಂತೆ,
ಎನ್ನೊಳಗಿಪ್ಪಾತನೂ ಹೊರಗಿಪ್ಪಾತನೂ ಒಂದೆ ವಸ್ತುವೆಂಬ
ಆದ್ಯಂತವು ಕಾಣಬಂದಿತ್ತು ನೋಡಾ.
ಆ ಪರತತ್ವವೇ ಶರಣ ತಾನೇ ನೋಡಾ.
ಬೇರೊಂದು ಸ್ವರೂಪಲ್ಲ ಕಾಣಾ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ ! || ೮೬ ||

ಎಂದು ಪರತತ್ವವಾದ ಲಿಂಗ ಮತ್ತು ಶರಣನ ಅಭಿನ್ನತೆಯನ್ನು ಕುರಿತು ಹಾಡುತ್ತಾರೆ. ಆದುದರಿಂದಲೇ :

ಬಸವ ಮೊದಲಾದ ಪ್ರಮಥರೆಲ್ಲರೂ ಪ್ರಸಾದವ ಎನ್ನಲ್ಲಿ ಸಂಬಂಧಿಸಿ,
ನಿನ್ನ ಕೃಪಾ ಪ್ರಸಾದವ ಎನ್ನಲ್ಲಿ ಮೂರ್ತಿಗೊಳಿಸಿ,
ಇನ್ನಾವುದಕ್ಕೂ ಅಂಜವೇಡಾ ಎಂದು,
ನೀನು ನಿನ್ನ ಪ್ರಮಥರು ಎನ್ನ ಆಜ್ಞಾಪಿಸಿ ಮರ್ತ್ಯಕ್ಕೆ ಕಳುಹಿದಿರಿಯಾಗಿ,
ಕಳುಹಿದ ಭೇದವ ಶಿವಜ್ಞಾನೋದಯದಿಂದ ಅರಿದು
ಸಿದ್ಧಲಿಂಗನೆಂಬ ನಾಮ ಎನಗೆ ನಿನ್ನಿಂದ ಬಂದಿತೆಂಬುದ ಅರಿದು
ಸಿದ್ಧಲಿಂಗನೆಂಬ ನಾಮ ಎನಗೆ ನಿನ್ನಿಂದ ಬಂದಿತೆಂಬುದ
ಅರಿದೆನು ಕಾಣಾ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ ! || ೮೭ ||

ಎಂದು ಬಸವಣ್ಣ ಮೊದಲಾದ ಪ್ರಮಥರು ಸಾಧಿಸಿದ ನಿಲವು, ಲಿಂಗ-ಶರಣನ ಸಂದಿಲ್ಲದ ಭಾವವನ್ನು ತೋರಿದ್ದಾರೆ, ಅಂತೆಯೇ :

ಬಸವಣ್ಣನ ಪ್ರಸಾದದಿಂದ ಭಕ್ತಿ ವೈರಾಗ್ಯ ಸಂಪನ್ನನಾದೆನಯ್ಯ
ಚೆನ್ನಬಸವಣ್ಣನ ಪ್ರಸಾದದಿಂದ ಷಟ್ಸ್ಥಲಜ್ಞಾನ ಸಂಪನ್ನನಾದೆನಯ್ಯಾ
ಪ್ರಭುದೇವರ ಪ್ರಸಾದದಿಂದ ಪರಶಿವತತ್ವಸ್ವರೂಪವೇ ಎನ್ನಸ್ವರೂಪ
ವೆಂದರಿದು
ಸಮಸ್ತ ಸಂಸಾರಪ್ರಪಂಚ ಕೊಡಹಿದೆನು ನೋಡಾ
ನೀಲಲೋಚನೆಯಮ್ಮನ ಪ್ರಸಾದದಿಂದ ನಿಜಲಿಂಗೈಕ್ಯನಾದೆನಯ್ಯಾ
ಮಹಾದೇವಿಯಕ್ಕಗಳ ಪ್ರಸಾದದಿಂದ
ಸುತ್ತಿದ ಮಾಯಾಪಾಪವ ಹರಿದು ನಿರ್ಮಾಯನಾಗಿ ನಿರ್ವಾಣ ಪದದಲ್ಲಿ
ನಿಂದೆನಯ್ಯಾ
ಸಿದ್ಧರಾಮಯ್ಯನ ಪ್ರಸಾದದಿಂದ ಶುದ್ಧಶಿವತತ್ವವ ಹಡೆದೆನಯ್ಯಾ
ಮೋಳಿಗೆಯ ಮಾರಿತಂದೆಗಳ ಪ್ರಸಾದದಿಂದ
ಕಾಯದ ಕಳವಳವನಳಿದು ಕರ್ಮನಿರ್ಮಲನಾಗಿ
ವೀರ ಮಹೇಶ್ವರನಾದೆನು ನೋಡಾ
ಇವರು ಮುಖ್ಯವಾದ ಏಳುನೂರೆಪ್ಪತ್ತಮರಗಣಂಗಳ ಪರಮ
ಪ್ರಸಾದದಿಂದ
ಎನ್ನಕರಣಂಗಳೆಲ್ಲವೂ ಲಿಂಗಕರಣಂಗಳಾಗಿ
ಕರಣೇಂದ್ರಿಯಂಗಳ ಕಳೆದುಳಿದು
ಇಂದ್ರಿಯಂಗಳಿಗೆ ನಿಲುಕದ ಸ್ಥಾನದಲ್ಲಿರ್ದು
ಪರಮಾನಂದ ಪ್ರಭಾವಮಯನಾಗಿರ್ದೆನು ನೋಡಾ.
ನಿಮ್ಮ ಶರಣರ ಪ್ರಸಾದದಿಂದ ನಾನು ಪ್ರಸಾದಿಯಾಗಿರ್ದೆನು ನೋಡಾ,
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ ! || ೫೩೭ ||

ಸಂದಿಲ್ಲದ ಲಿಂಗ-ಶರಣ ಭಾವವನ್ನು ಸಾಧಿಸಿಕೊಂಡ ಶಿವಯೋಗಿಗಳಿಗೆ ಚನ್ನಬಸವಣ್ಣನೇ ಅವರಂತರಂಗದ ಸುಜ್ಞಾನ ಪ್ರಾಣಲಿಂಗ, ಬಸವಣ್ಣನೇ ಅಂಗಲಿಂಗ, ಪ್ರಾಣಲಿಂಗ ,ಭಾವಲಿಂಗ, ಕೊನೆಗೆ ಸರ್ವಾಂಗ ಲಿಂಗವಾಗಿ ಪರಿಣಮಿಸಿ ಬಸವಲಿಂಗಾ ಬಸವಲಿಂಗಾ ಬಸವಲಿಂಗಾ ಎಂದು ಜಪಿಸಿ ಭವಾರ್ಣವವನ್ನು ದಾಟಿ ಬಸವನೆ ಪತಿಯಾಗಿ ತಾವೆ ಸತಿಯಾಗಿ 'ಶರಣಸತಿ ಲಿಂಗಪತಿ' ಭಾವವನ್ನು ಮೆರೆದು ನಿಜದಲ್ಲಿನಿಂದ ಶಿವಯೋಗಿಗಳು:

ಪಿಂಡ ಕರಗಿ ಅಖಂಡಮಯನಾದೆನು
ಅಮೃತ ಬಿಂದುವ ಸೇವಿಸಿ
ನಿತ್ಯಾನಿತ್ಯವ ಗೆದ್ದು

ನಿರ್ಮಲ ನಿರಾವರಣನಾದೆನು
ಸೀಮೆಯ ಮೀಱಿ ನಿಸ್ಸೀಮನಾದೆನು
ಪರವು ನಿರಂಜನನೊಡಗೂಡಿ
ಮಾಯಾರಂಜನೆಯಳಿದು
ನಿರಂಜನನಾಗಿರ್ದೆನು ಕಾಣಾ
ಸಮಸ್ತ ವಿಶ್ವಪ್ರಪಂಚಿಗೆ ಹೊಱಗಾಗಿ
ನಿಃ ಪ್ರಪಂಚ ನಿರ್ಲೇಪನಾಗಿರ್ದೆನು ಕಾಣಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ! ॥ ೩೮೦ ॥

ಹೀಗೆ ವಿಶ್ವಪ್ರಪಂಚಿಗೆ ಹೊರಗಾಗಿ ನಿಂತು ಮಾಯೆಯನ್ನು ನೀಗಿ ಅವಿರಳ ಬ್ರಹ್ಮವನೆಯಿದು ಅಡಗಿದ ಅಖಂಡ ಸುಜ್ಞಾನ ಜ್ಯೋತಿಯಲ್ಲಿ ತಾನಡಗಿ ಶಿವಯೋಗಿಯಾಗಿ ಈ ಶಿವಯೋಗದ ಸಿದ್ಧಿಯಿಂದ ನಿತ್ಯಾನಿತ್ಯವನ್ನು ಗೆದ್ದು

ಗಾಳಿ ಗಂಧವನಪ್ಪಿದಂತೆ, ಬಯಲು ಬಯಲನಪ್ಪಿದಂತೆ,
ಬೆಳಗು ಬೆಳಗನಪ್ಪಿ ಮಹಾಬೆಳಗಾದಂತೆ
ಶರಣ ಲಿಂಗವನಪ್ಪಿ, ಮಹಾಲಿಂಗವೇ ತಾನುತಾನಾಗಿ
ನಿರ್ವಯಲಾದೆನು ನೋಡಾ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ ! ॥ ೬೮೪ ॥

ಎಂಬ ಅದ್ವೈತ ಪರವಸ್ತು ತಾವೇ ಆಗುತ್ತಾರೆ.

ಅಂಗ ಲಿಂಗದಲ್ಲಡಗಿ, ಲಿಂಗ ಅಂಗದಲ್ಲಡಗಿ,
ಅಂಗ ಲಿಂಗವೆಂಬುಭಯ ಭಾವವಱತಲ್ಲಿ
ಅಱಹು ಅಱಹೆಂಬುವದು ಬಱದಾಯಿತ್ತು ನೋಡಾ.
ಅಱಹು ಅಱಹೆಂಬುವದು ಅಱದಾದಲ್ಲಿ
ಭಾವ ನಿರ್ಭಾವ ಬಯಲಾಗಿ
ಬಚ್ಚ ಬರಿಯ ಬಯಲೆಯಾಗಿರ್ದೆನು ಕಾಣಾ,
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ ! ॥ ೬೯೯ ॥

ಎಂದು ನುಡಿದ ಶಿವಯೋಗಿಗಳ ವಚನ ಷಟ್ಸ್ಥಲ ಸಿದ್ಧಾಂತದ ರೀತ್ಯಾ ಶಿವಯೋಗಿಗಳು ಪಡೆದ ಸಿದ್ಧಿಯ ದ್ಯೋತಕವಾಗಿದೆ.

ಲಿಂಗಾಂಗ ಸಾಮರಸ್ಯವೇ ಷಟ್ಸ್ಥಲ ಸಿದ್ಧಾಂತದ ರಹಸ್ಯ ; ಅಂದರೆ ಲಿಂಗನೇ ಸ್ಫುಲಿಂಗಗಳಾಗಿ ಸ್ಫೋಟಗೊಂಡು ಅಂಗವಾಗಿ ಭುವಿಯಲ್ಲಿ ಅವತರಿಸುತ್ತಾನೆ. ಹೀಗೆ ಲಿಂಗನೇ ಅಂಗನಾಗಿ ಅವತರಿಸಿದ ಶರಣ ಲೋಕಾಚಾರವನ್ನು ನಡೆದು ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯವೆಂಬ ಷಟ್ಸ್ಥಲ ಸೋಪಾನವನ್ನೇರಿ ಪುನಃ ಲಿಂಗನೇ ಆಗಿ ಪರಿಣಮಿಸುವುದು ಸ್ಥೂಲದೃಷ್ಟಿಯಲ್ಲಿ ಷಟ್ಸ್ಥಲ ಸಿದ್ಧಾಂತದ ತಿರುಳು.

ಅಂಗವೆಂದಡೆ ಶರಣ, ಲಿಂಗವೆಂದಡೆ ಶಿವ.
ಆ ಶರಣಂಗೆ ಆ ಲಿಂಗವು ಆವಾಗವೂ ಪ್ರಾಣವು ;
ಆ ಲಿಂಗಕ್ಕೆ ಆ ಶರಣ ಆವಾಗವೂ ಅಂಗವು.
ಈ ಶರಣ ಲಿಂಗವೆರಡಕ್ಕೂ ಬೀಜ ವೃಕ್ಷನ್ಯಾಯದ ಹಾಂಗೆ ಅಲ್ಲದೆ ಭಿನ್ನವಿಲ್ಲ.
ಶರಣನೆಂದಡೆ ಲಿಂಗ ; ಲಿಂಗವೆಂದಡೆ ಶರಣ

*　　*　　*　　*

ಈ ಷಟ್ಸ್ಥಲ ಮಾರ್ಗವು ದ್ವೈತಾದ್ವೈತದ ಪರಿವರ್ತನೆಯಲ್ಲ.
ಅದೇನು ಕಾರಣವೆಂದಡೆ
ಇದು ಶಿವಾದ್ವೈತವಾದಕಾರಣ.
ಈ ಲಿಂಗಾಂಗ ಸಂಬಂಧ ಸಮರಸೈಕ್ಯವ ತಿಳಿದ ಬಳಿಕ
ಬೊಮ್ಮ ಪರಬೊಮ್ಮವೆಂದು ಬೇಱುಂಟೆ ತಾನಲ್ಲದೆ ?
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ ! ॥ ೩೯ ॥

ಎಂದು ತಾವೇ ನುಡಿದಿರುವ ಷಟ್ಸ್ಥಲ ಸಿದ್ಧಾಂತದನ್ವಯ ಶಿವಯೋಗಿಗಳು ಲಿಂಗನ ಅಂಶವನ್ನು ಹಂಚಿಕೊಂಡು ಅಂಗಿಗಳಾಗಿ ಅವತರಿಸಿ, ಲೋಕಾಚಾರವನ್ನು ನಡೆದು, ಬಂದ ಉದ್ದೇಶವನ್ನು ಪೂರೈಸಿ ಲಿಂಗಿಯಾಗುತ್ತಾರೆ, ಶಿವಯೋಗವನ್ನು ಅನುಭವಿಸಿ ಆನಂದಿಗಳಾದ ಶಿವಯೋಗಿಗಳು ತಮ್ಮ ಶಿಷ್ಯರಿಗೂ ಅದನ್ನು ಅಷ್ಟೇ ಆನಂದದಿಂದ ವಿವರಿಸುತ್ತಾರೆ.

ಷಟ್ಸ್ಥಲ ದೇಹಿಗಳಾದ ಸಿದ್ಧಲಿಂಗ ಶಿವಯೋಗಿಗಳು ಅಲ್ಲಮಾದಿಗಳ ನಂತರ ಷಟ್ಸ್ಥಲವನ್ನುದ್ಧರಿಸಿದವರೆಂದು ಹಿಂದೆ ಹೇಳಿದೆ. ಇವರು ಮಾಡಿರಬಹುದೆನ್ನಲಾದ ಮತ್ತೊಂದು ಮಹತ್ಕಾರ್ಯವೆಂದರೆ ಷಟ್ಸ್ಥಲಾಂತರ್ಗತವಾದ 'ಏಕೋತ್ತರಶತ ಸ್ಥಲ'ದ ವಿಂಗಡಣೆ, ವಿವರಣೆ. ಇವರ ಷಟ್ಸ್ಥಲ ಜ್ಞಾನ ಸಾರಾಮೃತದಲ್ಲಿ ಏಕೋತ್ತರ ಶತಸ್ಥಲದ ಮಾದರಿಯಲ್ಲಿ ಆಯಾ ಸ್ಥಲಗಳ ಆದಿಯಲ್ಲಿ ಆ ಸ್ಥಲದ ವಿಷಯವನ್ನು ಕಿರಿದರಲ್ಲಿ ಅಲ್ಲಿನ ಸೂತ್ರಪದ್ಯಗಳಂತೆಯೇ ಹೇಳಿ ವಿವರಿಸಿರುವುದನ್ನು ಕಾಣುತೇವೆ. ಅಲ್ಲದೆ ಸಿದ್ಧಲಿಂಗ ಶಿವಯೋಗಿಗಳ ದೀಕ್ಷಾಗುರುಗಳಾದ ಗೋಸಲ ಚನ್ನಬಸವೇಶ್ವರ ಸ್ವಾಮಿಗಳೇ "ಕ್ಷೇತ್ರಜ್ಞ ಸುಮನೋವಾದ" ದ ತರ್ತೃಗಳೆಂದು ಭಾವಿಸಿ, ಅದರಲ್ಲಿ ಸರ್ವಶೂನ್ಯ ನಿರಾಲಂಬಸ್ಥಲ, ಶೂನ್ಯಲಿಂಗಸ್ಥಲ ಇವುಗಳಿಂದಲೇ ಸಿದ್ಧಾಂತ ನಿರೂಪಣೆ ಆರಂಭವಾಗುತ್ತದೆ. ಅಂದರೆ ಅಲ್ಲಮ, ಚನ್ನಬಸವಣ್ಣ ಮುಂತಾದ ಶರಣರ ಕಾಲದಿಂದಲೂ ನೂರೊಂದು ಸ್ಥಲಗಳು ಪ್ರಚಾರದಲ್ಲಿದ್ದರೂ ಇವರ ಕಾಲದಲ್ಲಿ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದ್ದು, ಈ ಷಟ್ಸ್ಥಲಾಂತರ್ಗತವಾದ ಏಕೋತ್ತರಶತಸ್ಥಲದ ಬಗ್ಗೆ ಒಂದು ಖಚಿತವಾದ

ನಿರ್ಧಾರಕ್ಕೆ ಬಂದಿರಲು ಸಾಕು. ಹೀಗೆ ತಮ್ಮ ಕಾಲದಲ್ಲಿ ನಡೆಯುತ್ತಿದ್ದ ಚರ್ಚೆಯನ್ನು ಗಮನಿಸಿದ್ದು, ಪ್ರಾಯಃ ಚರ್ಚೆಯಲ್ಲಿ ತಾವೂ ಭಾಗವಹಿಸಿ ಏಕೋತ್ತರಶತಸ್ಥಲದ ಕಲ್ಪನೆಗೆ ಒಂದು ಮೂರ್ತ ರೂಪವನ್ನು ಸಿದ್ಧಲಿಂಗಶಿವಯೋಗಿಗಳು ಕೊಟ್ಟಿರಲು ಸಾಕು. ಅಂತೆಯೇ ಷಟ್ಸ್ಥಲೋದ್ಧಾರದ ಜೊತೆಯಲ್ಲಿ ಷಟ್ಸ್ಥಲಾಂತರ್ಗತವಾದ ಏಕೋತ್ತರ ಶತಸ್ಥಲದ ರೂಪಕರೂ ಸ್ಥಾಪಕರೂ ಅಗಿ, ಏಕೋತ್ತರಶತಸ್ಥಲದ ಉದ್ಧಾರದ ಕೀರ್ತಿಯನ್ನೂ ಪಡೆದ. ಏಕೋತ್ತರ ಶಕಸ್ಥಲದ ಉದ್ಧಾರದ ಕೀರ್ತಿಯನ್ನು ಪಡೆದ, ಏಕೋತ್ತರಶತಸ್ಥಲದಪ್ರತಿ ಷ್ಠಾಪಕರಾಗುತ್ತರೆ.

ಹೀಗೆ ಪ್ರಭುದೇವರ ಅವತಾರವೆಂದು ಪ್ರಸಿದ್ಧರಾಗಿರುವ ತೋಂಟದ ಸಿದ್ಧಲಿಂಗ ಶಿವಯೋಗಿಗಳು ಶಿವಾನುಭಾವಿಗಳಾಗಿ, ಷಟ್ಸ್ಥಲ ಜ್ಞಾನಿಗಳಾಗಿ, ಏಕೋತ್ತರ ಶತ ಸ್ಥಲದ ನಿರೂಪಕರಾಗಿ, ಸಮಾಜವಿಮರ್ಶಕರಾಗಿ, ಸಮಾಜೋದ್ಧಾರಕರಾಗಿ, ಜನಮನದಲ್ಲಿ ಭಕ್ತಿಯ ಬೆಳಸನ್ನು ಬೆಳಸಿ, ನಾಡು-ನುಡಿಗೆ ಸೇವೆಯನ್ನು ಸಲ್ಲಿಸಿದವರು. ಖಿಲವಾಗು ತ್ತಿದ್ದಷಟ್ಸ್ಥಲ ಸಿದ್ಧಾಂತವನ್ನು, ವೀರಶೈವಧರ್ಮವನ್ನು ಪುನರುಜ್ಜೀವನಗೊಳಿಸಿ, ಏಳುನೂರು ಜನವಿರತರನ್ನು ಕೂಡಿಕೊಂಡು ದೇಶದ ಮೂಲೆ ಮೂಲೆಗಳಲ್ಲಿ ಸಂಚರಿಸಿ, ಮಹಾಮಹಾಮಹಿಮೆಗಳನ್ನು ಮೆರೆದು, ಜನಮನದಲ್ಲಿ ಧರ್ಮ ಜಾಗೃತಿಯನ್ನುಂಟು ಮಾಡಿದರು. ಎಷ್ಟರ ಮಟ್ಟಿಗೆ ಜನಮನವನ್ನು ಸೂರೆಗೊಂಡರೆಂದರೆ, ಮೈಸೂರರಸರಾದ ದೇವರಾಜವಡೆಯರ ಕಾಲದಲ್ಲಿ ದಳವಾಯಿ ನಂದಿನಾಥಯ್ಯನು ಶಿವಯೋಗಿಗಳ ಪ್ರಾರ್ಥನೆ ಮಾಡಿ ಕಿಕ್ಕೇರಿಯ ಮೇಲೆ ಯುದ್ಧಮಾಡಿ ಜಯಗಳಿಸಿದುದರಿಂದ ದೇವರಾಜ ವಡೆಯರು ತೋಂಟದ ಸಿದ್ಧೇಶ್ವರಸ್ವಾಮಿಗೆ ಗ್ರಾಮವೊಂದನ್ನು ದತ್ತಿಬಿಟ್ಟು ಶಿಲಾಶಾಸನವನ್ನು ನೆಡೆಸಿದರು[1] ಎಂದ ಮೇಲೆ ಶಿವಯೋಗಿಗಳ ವ್ಯಕ್ತಿತ್ವಕ್ಕೆ ಬೇರೊಂದು ಸಾಕ್ಷಿ ಬೇಕೆ! ಇಂಥ ಮಹಿಮರು ಮೆಟ್ಟಿದ ನೆಲ ಪವಿತ್ರವಾಗಿದೆ, ಪುಣ್ಯಕ್ಷೇತ್ರವೆನಿಸಿದೆ. ಒತ್ತಿದ ಕಲ್ಲು ಕರಗಿ ಪುಣ್ಯತೀರ್ಥವಾಗಿ ಹರಿದಿದೆ. ಆಡಿದ ನುಡಿ ಮಂತ್ರವಾಗಿದೆ, ನಡೆದುದೆ ಧರ್ಮವಾಗಿದೆ, ಅಂತೆಯೇಜಾತಿ, ಮತಭೇದವಿಲ್ಲದೆ ನಾಡಿನ ಕೋಟ್ಯಾಂತರ ಜನರ ಕೃತಜ್ಞತೆಗೆ ಪಾತ್ರ ರಾಗಿದ್ದಾರೆ. ಸುಮಾರು ೭೫ ಪವಾಡಗಳನ್ನು ಮೆರೆದರೆಂದು ಹೇಳಲಾದ ತೋಂಟದ ಸಿದ್ಧಲಿಂಗ ಶಿವಯೋಗಿಗಳನ್ನು ಸುಮಾರು ೪೫ ಜನ ಕವಿಗಳು ನೆನೆದು ತಮ್ಮ ಕಾವ್ಯ ಗಳಲ್ಲಿ ಅವರ ಸ್ತೋತ್ರ ಮಾಡಿದ್ದಾರೆಂದಮೇಲೆ ಅವರು ಎಂಥ ಮಹಿಮಾಶಾಲಿಗಳಾಗಿದ್ದ ರೆಂಬುದನ್ನೂ, ತಮ್ಮ ಅನಂತರದ ಕವಿಗಳ ಮೇಲೆ ಅವರು ಬೀರಿರುವ ಪ್ರಭಾವವೆಂತಹು ದೆಂಬುದನ್ನೂ ಊಹಿಸಿಕೊಳ್ಳಬಹುದು.

ಇವರು ಮೆರೆದಿರುವರೆಂದು ಹೇಳಲಾದ ೭೫ ಪವಾಡಗಳನ್ನು ತೋಂಟದಾರ್ಯರ

---

[1] E.c vol. XII. ಕುಣಿಗಲು ತಾಲ್ಲೂಕು 46 ನೆಯ ಶಿಲಾಶಾಸನ.

ರಗಳೆಯಲ್ಲಿ ವಿವರಿಸಿರುವಂತೆ ಮುಂದೆ ಕೊಟ್ಟಿದೆ. ಉಳಿದ ಕವಿಗಳು ಈ ಪವಾಡಗಳನ್ನೇ ಕುಗ್ಗಿಸಿ ಅಥವಾ ಹಿಗ್ಗಲಿಸಿ ವಿವರಿಸಿದ್ದಾರೆ.

ತೋಂಟದಾರ್ಯರ ರಗಳೆಯ ಸಾರಾಂಶ :

ಅನಾದಿ ನಿರಂಜನಗಣೇಶ್ವರನಾದ ಸಿದ್ಧಲಿಂಗ ಜನಹಿತಾರ್ಥವಾಗಿ ಭೂಲೋಕದಲ್ಲಿ ಜನಿಸುತ್ತಾನೆ. ಗೋಣಿಖೇಡದಲ್ಲಿ ಕುಂಬಳೇಶ್ವರನಿಗೆ ಭಕ್ತಿಮಾಡಿಮೆರದ. ಮಹಾಬಳೇಶ್ವರ ಲಿಂಗದುತ್ತಮಾಂಗದಲ್ಲಿ ಗಂಗೆ ಬತ್ತಲು ವಹಿಲದಿಂದ ಅದರ ನೆತ್ತಿಯಮೇಲೆ ಪಾದವಿಟ್ಟು ಗಂಗೆಯನ್ನು ತರಿಸಿದ. ಉಳುವೆಯಲ್ಲಿ ಕುಹಕಿ ದಾಸನೊಬ್ಬ ಗ್ರಹವನ್ನು ಬಿಡಲು ಅದನ್ನು ಭೀತಿಗೊಳಿಸಿದ. ಜೈನರು ವಾದಿಸಲು ಬಸವನು ಅವರನ್ನು ಬಾಧೆಗೊಳಿಸಿದ. ಗಾಳಿಪೂಜೆಯಲ್ಲಿ ಮಲ್ಲಿನಾಥನು ಜಂಗಮ ಸ್ವರೂಪನಾಗಿ ಬಂದು ಭಕ್ತಿಯನ್ನು ಮಾಡಿದ. ಕಾಶಿ, ಗಯೆ, ಪ್ರಯಾಗ, ಕೊಲ್ಲಿಪಾಕಿಪರ್ವತಾಳಿ ಲಿಂಗಕ್ಷೇತ್ರದಲ್ಲಿ ಚರಿಸಿ ಮೆರೆದ. ಕಗ್ಗೆರೆಯನ್ನು ಶಬರರು ಬಂದು ಮುತ್ತುವರೆಂದು ಹೇಳಿ ಆ ಊರಿನವರನ್ನು ಬೇರೆಡೆಗೆ ಕಳುಹಿಸಿದ. ಆಗ ಕಗ್ಗೆರೆಯಲ್ಲಿ ಆರು ತಿಂಗಳು ಆಭವಧ್ಯಾನದಲ್ಲಿರಲು ಹುತ್ತ ಬೆಳೆಯಿತು ಕ್ರೂರ ಸರ್ಪನರೂಪದಲ್ಲಿ ಈಶನು ಬಂದು ಗ್ರಹವನ್ನು ಕಾಯ್ದು ಚೋರರ ಭೀತಿಯನ್ನು ಬಿಡಿಸುವಂತೆ ಮಾಡಿದ. ಕಗ್ಗರೆಯಲ್ಲಿ ಭೂತಗಳೆರಡು ಸಿದ್ಧಲಿಂಗನನ್ನು ಪೂಜಿಸಲು ಶಾಪ ವಿಮೋಚನೆಹೊಂದಿ ಮೋಕ್ಷವನ್ನು ಪಡೆದವು. ಅಲ್ಲಿಯೇ ಸರ್ಪವೊಂದು ಯತಿಯನ್ನು ಕಚ್ಚಿಸಾಯಲು ಅದಕ್ಕೆ ಪ್ರಾಣವನ್ನಿತ್ತ. ಎಡೆಯೂರಿಗೆ ಹೋಗುವ ದಾರಿಯಲ್ಲಿದ್ದ ಮರಣ ಹೊಂದಿದ ಉರಗನಿಗೆ ಹರಣವನ್ನಿತ್ತು ಶಾಂತಿಗುಣವನ್ನು ಕೊಟ್ಟು ಮೆರೆದ. ಬೇಸಗೆಯಲ್ಲಿ ಎಡೆಯೂರಿನಲ್ಲಿ ನೀರಿಲ್ಲದಿರಲು ಜಲವನ್ನುಕ್ಕಿಸಿದ. ಅಲ್ಲಿಯ ಮನೆಯೊಂದು ಸುಟ್ಟು ಅದರಲ್ಲಿದ್ದ ಬೆಕ್ಕಿನಮರಿಗಳು ಸಾಯಲು ಅದಕ್ಕೆ ಪ್ರಾಣವನ್ನಿತ್ತು ಆ ತಾಯಿ ಬೆಕ್ಕಿನ ದುಃಖವನ್ನು ಪರಿಹರಿಸಿದ. ಆ ಊರಿನಲ್ಲಿ ಸಿಡಿಲು ಯತಿವರನ ಪಾದಪೂಜೆ ಮಾಡಲು ಅದಕ್ಕೆ ಮೋಕ್ಷವನ್ನಿತ್ತ.

ಹೊಳಲುಗುಂದದಲ್ಲಿ ಮಹಾದೇವಿಯ ಭಕ್ತಿ ಭಿಕ್ಷೆಯನ್ನು ಕೈಕೊಂಡು ನಾಗಶರಧಿ (ನಾಗ ಸಮುದ್ರ) ಯಲ್ಲಿರುವಾಗ ಮಳೆಬರಲು ಕಲ್ಲಿನಾಥನ ಗುಡಿಗೆ ಹೋದಾಗ ಹಾಕಿದ್ದ ಬೀಗವನ್ನು ಕಲ್ಲಿನಾಥನೇ ತೆರೆದು ಒಳಪುಗಿಸಿಕೊಂಡ. ದಾರಿಯಲ್ಲಿ ಹೋಗುತ್ತಿರುವಾಗ ತನ್ನಗಲಕ್ಕೂ ಪಸರಿಸಿ ಹರಿಯುತ್ತಿದ್ದ ನದಿಯು ಮರಳು ಕಾಣುವಂತೆ ದಾರಿಬಿಟ್ಟಿತು. ಸಿದ್ಧಲಿಂಗನ ವಿರತಿಯನ್ನು ಕಾಣಬೇಕೆಂದು ವ್ಯಾಘ್ರಪುರದ (ಹುಲಿಯೂರು) ದಾರಿಯಲ್ಲಿ ಶಂಕರನು ಶಬರವೇಶದಲ್ಲಿ ಬರಲು ವಸನವನ್ನಿತ್ತ. ವ್ಯಾಘ್ರಪುರದಲ್ಲಿ ಜ್ವರದಿಂದ ನರಳುತ್ತಿದ್ದ ಜನರ ಜ್ವರವನ್ನು ಬಿಡಿಸಿ ಕಾಪಾಡಿದ. ಚಿತ್ರಕಾಯಪುರದ ಹೇಮಗಿರಿಯ ಗೋತ್ರ ಕಮಲ ಭೂಜವು ಶತಪತ್ರಸಮೇತ ಕುಸುಮವನ್ನಿತ್ತು ಪೂಜಿಸಿತು. ಮುತ್ತುಗೂಡಿದ ಮೂಗುತಿಯನ್ನು ಮುಡಿಯಲ್ಲಿರಿಸಿ ಜ್ಯೋತಿಹಸ್ತವನ್ನೆತ್ತಿ ವ್ಯಾಘ್ರಪುರದಲ್ಲಿ ಮೆರೆದ.

ಸತ್ತ ಗಂಡನೊಂದಿಗೆ ಚಿಂತೆಯೇರಲೆಂದು ಹೊರಟ ಸತಿಯು ಬಂದು ವಂದಿಸಲು ಆಕೆಯ ಗಂಡನಿಗೆ ಪ್ರಾಣವನ್ನಿತ್ತು ಕಾಪಾಡಿದ. ಮೋದೂರಿಗೆ ಹೋಗುವ ದಾರಿಯಲ್ಲಿ ಕಣ್ಣು ಕಳೆದುಕೊಂಡಿದ್ದ ಕಳ್ಳರಿಗೆ ಕಣ್ಣುಗಳನ್ನಿತ್ತ. ಹೆಬ್ಬೂರಿನಲ್ಲಿ ಸುದತಿಯೊಬ್ಬಳು ಶಿಲೆಯ ಬಸವನ ಮುಂದೆ ಬಾಳೆಹಣ್ಣುಗಳನ್ನಿಟ್ಟಿರಲು ಕಲ್ಲಬಸವನು ಆ ಶೇಷವನ್ನು ಸವಿಯುವಂತೆ ಮಾಡಿದ. ಅದೇ ಊರಿನಲ್ಲಿ ಒಬ್ಬನು ಕಬ್ಬಿನ ತೋಟಕ್ಕೆ ನೀರಿಲ್ಲದಿರಲು ನೆಲವನ್ನು ಅಗಿಯುವಾಗ ಸಿದ್ಧಲಿಂಗನನ್ನು ನೆನೆಯಲು ನೀರನ್ನು ತೋರಿಸಿದ. ಹೇರೂರಿನಲ್ಲಿ ಜಂಬು ನೇರಿಲೆಯ ಭಕ್ತಿಯನ್ನು ಸವಿದ. ಹೊನ್ನುಡಿಕೆಯಲ್ಲಿ ನಾರಿಯೊಬ್ಬಳು ಬತ್ತಗುದಿಸುತ್ತಿರುವಾಗ ಘಟವು ಒಡೆಯಲು ಸಿದ್ಧನಾಣೆಯಿಟ್ಟಾಗ ಮೊದಲಿನಂತಾಯಿತು. ಚನ್ನಪಟ್ಟಣದ ದಾಸನೊಬ್ಬ ಸಿದ್ಧನನ್ನು ನೋಡಬಾರದೆಂದು ಮೊಗದಿರುಹಲು ಹಾಗೆ ಸ್ತಂಭನವಾಗುವಂತೆ ಮಾಡಿದ. ಈತನ ಪಾದಜಲದ ಭಾಂಡ ಕಲುಕುಣಿಕೆಯೊಳೊಡೆದು ನನ್ನಿಯಿಂದ ಲಿಂಗರೂಪಿನಲ್ಲುದಿಸಿತು. ಸದನಕಿದಿರು ನೂರುಬಾಳೆಗೊನೆ ಬಿಡಲು ಆಣೆಯಿಡಲು ಮುದದಿಂದ ಹಟ್ಟಿಯಲ್ಲಿ ಹಂಚಿದ ದಾಸನೋರ್ವನು ಲಿಂಗಪುರದಲ್ಲಿ ನಿಂದಿಸಲುವಾಸುದೇವ ಹಲ್ಲುಮುರಿವಂತೆ ಹೊಡೆದ. ವೃಷಭಪುರದಲ್ಲಿ ಮೊಸಲ ಬದನೆಕಾಯನ್ನು ಬೆಂಕಿಯಲ್ಲಿಡಲು ಬೇಯದಂತೆ ಮಾಡಿದ. ಸುಳ್ಳುಹೇಳದೆ ಆಕಾಯನ್ನು ತೋರಲು ಬಂಜೆಯಾದ ಆಕೆಗೆ ಸಂತಾನಫಲವನ್ನಿತ್ತು ಆಕಾಯನ್ನು ಆಕೆಗೇ ಮರಳಿಕೊಟ್ಟ. ಅಲ್ಲಿ ಜ್ವರದ ಭೀತಿಗೆ ಅಂಜಿ ಭಕ್ತರು ತಳಿಗೆಗಳನ್ನು ಕೊಡದೆ ಬೀಗವಿಕ್ಕಿರಲು ಬೀಗಗಳನ್ನು ತೆಗೆಸಿ ತಳಿಗೆಗಳನ್ನು ಕೊಡುವಂತೆ ಮಾಡಿದ. ತರುಣಿಯೊಬ್ಬಳು ರಾತ್ರಿಯಲ್ಲಿ ತಳಿಗೆಯಿಲ್ಲವೆಂದು ಕೊಡದಿರಲು ಅದು ಅದೃಶ್ಯವಾಗಲು ಮತ್ತೆ ಅದನ್ನು ತರಿಸಿ ಕೊಡಿಸಿದ. ಅದೇ ಊರಿನ ಮಲ್ಲಿಶೆಟ್ಟಿ ಸೆಜ್ಜೆಯಲ್ಲಿ ಲಿಂಗವಿಲ್ಲದೆ ತೀರ್ಥವನ್ನು ಕೊಡಲು ಆತನಿಗೆ ಲಿಂಗವನ್ನು ಕೊಟ್ಟು ಭಕ್ತರೆಲ್ಲ ಆರುಕೊಳಗ ಹಾಲನ್ನು ಶಿರದಲ್ಲಿ ಒತ್ತಿರಲು ಶಿರದ ರಂಧ್ರವು ಹೀರುವಂತೆ ಮೆರೆದ. ಅಲ್ಲಿನ ವನಿತೆಯೊಬ್ಬಳು ಶೇಷಕುಸುಮವನ್ನು ಕೊಡಲು ಸಾಕೆನಲು ಮಿರುಗುತ್ತಿದ್ದ ಲಿಂಗ ಬಯಲಾಯಿತು.

ತುಮಕೂರಿನಲ್ಲಿ ವೈಷ್ಣವನಿಗೆ ಭಸಿತ ಘುಟಿಕೆಯನ್ನು ಕೊಟ್ಟು ಲಿಂಗಮಾಡಿ ಅವನನ್ನು ಭಕ್ತನನ್ನಾಗಿ ಮಾಡಿದ. ಮಲ್ಲಿಯೆಂಬುವಳು ಆರು ಕೊಳಗ ಮೊಸಲಕ್ಕಿಯಲ್ಲಿ ಒಂದುಪಡಿಯಕ್ಕಿಯನ್ನು ತೆಗೆಯಲು ಎಲ್ಲವನ್ನೂ ಬಯಲು ಮಾಡಿದ. ಹರಕೆಯ ನಾಲ್ಕು ನೂರು ಬೆಲ್ಲದಲ್ಲಿ ನಂಟರಿಗೆಂದು ಒಂದ ತೆಗೆಯಲು ಅದನ್ನೆಲ್ಲ ಮಾಯ ಮಾಡಿದ. ಏಳುನೂರು ತೆಂಗಿನಕಾಯಲ್ಲಿ ಪ್ರಭುವಣಿಜ್ಯನು ಬಾಲಕನಿಗೆಂದು ಒಂದನ್ನು ಕೊಡಲು ಎಲ್ಲದರ ನೀರನ್ನೂ ಹಿಂಗಿಸಿದ. ಚರರಿಗೆ ಚೌಳುನೀರ ತೀರ್ಥವನ್ನು ಕೊಟ್ಟು ತಾನು ಸಿಹಿ ನೀರಿನ ತೀರ್ಥವನ್ನು ಇಟ್ಟುಕೊಳ್ಳಲು ಬಯಲುಮಾಡಿದ. ಮುದ್ದವಣಿಜನ ಅರಸಿ ಎಲ್ಲರಿಗೂ ಎರಡೆರಡರಂತೆ ಹೂಗಳನ್ನಿತ್ತು ತಾನು ಮಾತ್ರ ಬುಟ್ಟಿಯ ತುಂಬ ಹೂಗಳನ್ನು ಉಳಿಸಿಕೊಳ್ಳಲು ಎರಡನ್ನು ಮಾತ್ರ ಅವಳಿಗೂ ಉಳಿಸಿ ಉಳಿದುದನ್ನು ಮಾಯ

ಮಾಡಿದ. ಮಿಾಸಲಿರಿಸಿದ ನೆಲ್ಲವರೆಕಾಯನ್ನು ಭಕ್ತನೊಬ್ಬನು ಬೇಯಿಸಲು ಬೇಯದಂತೆ ಮಾಡಿದ. ಹರಕೆಪೆಗೆದ ಹೊಲದವರೆಕಾಯನ್ನು ಮತ್ತೊಬ್ಬನು ಬೇಯಿಸಲು ಅಗ್ನಿಗೆ ಆಜ್ಞೆಯಿತ್ತು ಮೆರೆದ. ಹಲಗೆಸೆಟ್ಟಿಯ ಮನೆಯಲ್ಲಿ ಕುಳಿತು ದ್ರೋಣಪುಷ್ಪ (ತುಂಬೆ ಹೂ)ದ ಮಳೆಯನ್ನು ಕರೆದ. ಗೋಣಿಕಾರ ಕುಲದ ನಾರಿಯೊಬ್ಬಳ ಹರವಿಯು ಕೆರೆಯ ಮಧ್ಯದಲ್ಲಿ ತೇಲಿಹೋಗಲು ಸಿದ್ಧನಾಣೆಯಿಡಲು ಮರಳಿ ಅವಳ ಕೈಸೇರುವಂತೆ ಮಾಡಿದ. ನೀರನ್ನು ತುಂಬಿ ಎತ್ತುತ್ತಿರಲು ಅದು ಏಳದೆ ಇರಲು ಆಣೆಯಿಡಲು ಸುಲಭವಾಗಿ ಮೇಲೇಳಲು ತಂದು ಪೂಜೆ ಮಾಡಿದಳು. ಪರುಷೆಯಲ್ಲಿ ನಡ್ವವೊಂದು ಬೆದರಿ ಓಡುತ್ತಿರಲು ಆಣೆಯಿಟ್ಟು ಮತ್ತೆ ಬರಿಸಿದ. ಸ್ಥಿರವಾಗಿ ತುಮಕೂರಿನಲ್ಲಿದ್ದ ರಾತ್ರಿಯಲ್ಲಿ ಕಣಿಯಕಲ್ಲೊಳಿರುತ ಮಾಡುವ ಭಕ್ತಿಯನ್ನು ಕೈಕೊಂಡು ಮೆರೆದರು.

ದೇವರಾಯ ಪತ್ತನದಲ್ಲಿ ರಾತ್ರೆ ತಿಗುಳನೊಬ್ಬನಿಗೆ ಒಲಿದು ಹೊಬನ್ನಿತ್ತಿಕೊಟ್ಟ. ಒಂಪೇ ರಾತ್ರಿಯಲ್ಲಿ ಮೂರು ಗ್ರಾಮಗಳಲ್ಲಿದ್ದು ಜಗಕ್ಕೆ ಆಶ್ಚರ್ಯವನ್ನುಂಟುಮಾಡಿದ. ಒಂದು ಅಳಗೆಯ ಅನ್ನವನ್ನು ಐನೂರು ಜಂಗಮರಿಗೆ ಉಣಿಸಿ ತೃಪ್ತಿಪಡಿಸಿದ. ಸಿದ್ಧಲಿಂಗನು ದೇವರಾಯ ಪಟ್ಟಣದ ಜನರು ಭಕ್ತಿಯನ್ನು ಸಲ್ಲಿಸುವಾಗ ಮಳೆ ಬರಲು ಭಕ್ತಿಯನ್ನು ಸಲ್ಲಿಸುವತನಕ ನಿಲ್ಲಿಸಿ ಮುಗಿದ ಮೇಲೆ ಮತ್ತೆ ಮಳೆ ಕರೆಸಿದ. ಪದಯುಗಳವನೊತ್ತಲು ಜಾತ್ಯಂಧನಿಗೆ ಕಣ್ಣುಗಳನ್ನಿತ್ತ. ಮಂಗವಾಡದಿಂದ ಪರ್ವಸೆಟ್ಟಿ ಲಿಂಗಯನ್ನು ಬರಲು ಅಂಗಭಾವವಳಿದು ಹರಣವಿತ್ತು ಮೆರೆದ. ತರುಣಿ ತಡೆದರೂ ಇರದೆ ಮಲ್ಲಿಸೆಟ್ಟಿಯು ತನ್ನ ಗುರುವಿಗೆ ಬಂದು ಎರಗಲು ಆಕೆಯ ಎಮ್ಮೆ ಸಾಯಲು ಮತ್ತೆ ಅದಕ್ಕೆ ಪ್ರಾಣವಿತ್ತ. ಬುರುಡುಗುಂಪೆಯಿಂದ ಗಬ್ಬಿರಾಜ ಬರಲು ಸತ್ತ ಅವನ ಕುದುರೆಗೆ ಪ್ರಾಣವನ್ನಿತ್ತ. ಭಿಕ್ಷವೃತ್ತಿರಾಯನು ಸಿದ್ಧಲಿಂಗನಿಗೆ ಕೊಟ್ಟ ಸ್ವರ್ಣಕಿರೀಟವನ್ನು ಚರನು ಕೇಳಲು ಕಿತ್ತುಕೊಟ್ಟ. ಅಕ್ಷಿಗನ ದಪ್ಪದಿಂದ ಅಳಿದ ಜಂಗಮನಿಗೆ ಎಲ್ಲರೂ ನೋಡುತ್ತಿದ್ದಂತೆಯೇ ಪ್ರಾಣವನ್ನಿತ್ತ. ಕುಂತಳದೇಶದಿಂದ ಸಿದ್ಧಲಿಂಗಯತಿವರನನ್ನು ನೋಡಬೇಕೆಂದು ಬಂದ ಚಕ್ಷುಹೀನ ಜಂಗಮಯ್ಯನಿಗೆ ಕಣ್ಣುಗಳನ್ನು ಕೊಟ್ಟ. ಹಲುಕೂರಿನಲ್ಲಿ ನಿಂದೆಮಾಡಿದ ಜೈನ ಚಿಕ್ಕನ ಮನೆ ಅಗ್ನಿಗಾಹುತಿಯಾಯಿತು. ಬೇಸಗೆಯಲ್ಲಿ ಸ್ನಾನಕ್ಕೆ ನೀರಿಲ್ಲದಂತಾಗಲು ಅಲ್ಲಿನ ಒಣಗಿದ ಬಾವಿಯಲ್ಲಿ ಗಂಗೆಯನ್ನು ಬರಿಸಿದ. ಕೇತ ಸಮುದ್ರದಲ್ಲಿ ಮೋಹಬಟ್ಟು ಆರುದಿನಗಳು ಅಲ್ಲಾಡದಂತಿರಲು ತನ್ನ ಆಣೆಯನು ಬಿಡಿಸಿ ಬಸವನನ್ನು ಕಳುಹಿಸಿದ. ಕೇತ ಸಮುದ್ರದಲ್ಲಿ ರಥವನ್ನೇರಿ ಬರುವಾಗ ರಥ ಮುರಿಯಲು ಕ್ಷಿತಿಯೊಳಾಣೆಯಿಟ್ಟಾಗ ಅದು ಸರಿಯಾಯಿತು.

ತಿಗುಳ ದೇಶದಿಂದ ಸ್ತುತಿಸುತ್ತ ಬಂದ ವೀರ ದೇಶಿಕನಿಗೆ ಹಿತವದಾದ ನಯನ ಚರಣವನ್ನಿತ್ತು ಮೆರೆದ. ಹೆಡ್ಡನಾದ ದ್ವಿಜನೊಬ್ಬನು ನಿಂದಿಸಲು ವಜ್ರದುಂಬಿಯನ್ನು ನಿರ್ಮಿಸಿ ಬಾಧೆಗೊಳಿಸಿದ. ಕೋಡಿ ಹಳ್ಳಿಯಲ್ಲಿ ಒಡ್ಡರೆಲ್ಲ ಹಬ್ಬಮಾಡಿ ಎಡೆಯ ದೊಡ್ಡ ರಾಶಿ ಮಾಡಿರಲು ಅದನ್ನು ಅದೃಶ್ಯಮಾಡಿ ಮೆರೆದ. ಬೆಳ್ಳಾವೆಯಲ್ಲಿ ಮಡದಿಯೊಬ್ಬಳು

ಒಲೆಯ ಮೇಲೆ ಪಾಕಕಿಟ್ಟಾಗ ಅದು ಉಕ್ಕಿದಾಗ ಆಣೆಯಿಡಲು ನಡಿಸಿ ಬರಿಸಿ ಮೆರೆದ ಸಿದ್ಧಲಿಂಗ. ಕಡಬದಲ್ಲಿ ಭಕ್ತರೊಬ್ಬರ ಮನೆಯಲ್ಲಿ ಮೂರ್ತಿಗೊಂಡಿರುವಾಗ ಭವಿಯೊಬ್ಬನು ಒಡನೆ ಬರಲು ಕದವು ಮುದ್ರಿಸಲ್ಪಟ್ಟಿತು. ವೇಸರಾಳಿಯಲ್ಲಿ ಲಿಂಗರೂಪಿನಲ್ಲಿ ಜನಿಸಿ ಲೋಕವನ್ನೆಲ್ಲ ವ್ಯಾಪಿಸುವಂಥ ಮಳೆಯನ್ನು ಕರೆದ. ಉರುಪಕೊಂಡದಲ್ಲಿ ಲಿಂಗ ರೂಪದಲ್ಲಿ ಸ್ಥಾಪ್ಯವಾಗಿ ಜನಕ್ಕೆಲ್ಲ ದರ್ಶನ ಕೊಟ್ಟ. ಬದಿರೆಯಲ್ಲಿ ಕುರುಬರೆಲ್ಲ ಸೇರಿ ಹಬ್ಬಮಾಡಿ ಯೆಡೆಯನ್ನಿಕ್ಕಲು ಬಯಲು ಮಾಡಿ ವರವನ್ನಿತ್ತ. ಮುಗುಳೂರಲ್ಲಿ ಸರ್ಪ ಕಚ್ಚಿದಾಗ ಚಿಕ್ಕಬಸವನು ಸಿದ್ಧಲಿಂಗನ ಆಣೆಯಿಡಲು ವಿಷವನ್ನು ಇಳಿಸಿ ಕಾಪಾಡಿದ. ಹೀಗೆ ಎಪ್ಪತ್ತೈದು ಮುಖ್ಯವಾದ ಮಹಿಮೆಗಳನ್ನು ತೋರಿ ಚಿಂತಿತಾರ್ಥವನ್ನಿತ್ತು ಜಗವನ್ನು ಸಲಹಿ ಮೆರೆದ ಶಿವಯೋಗಿ ಸಿದ್ಧಲಿಂಗ. ಜನನ, ಮರಣಗಳ ಬಾಧೆಯಿಂದ ನೋಯುತ್ತಿದ್ದ ಭಕ್ತತತಿಗೆ ಅಭಯವನ್ನಿತ್ತು, ಸಕಲ ಜಗತ್ತನ್ನು ನೆನಹುಸೂತ್ರದಿಂದ ಸಲಹಿ ವೀರಶೈವರಿಗೆ ಜ್ಞಾನಬೋಧೆಯನ್ನಿತ್ತು ಭಕ್ತ ಮೊದಲಾದ ಷಟ್ಸ್ಥಲ ಜ್ಞಾನ ಬೋಧೆಯನ್ನುಮಾಡಿ, ಕ್ಲೇಶಪಂಚಕಗಳನ್ನು ದಹಿಸಿ, ರೋಷ-ಪಾಶಗಳನ್ನು ಹಿಟ್ಟುಗುಟ್ಟಿ, ಈಶಭಾವದಲ್ಲಿ ಮನವ ಮುಟ್ಟಿ, ಷಟ್ಸ್ಥಲಜ್ಞ, ಶರಣ ಸೂಜ್ಞ ಶಿಷ್ಯಪಾಲ ಶಿವಗೆಮೂಲ, ಮಾಯಾಭಂಗ, ಮಂಗಲಾಂಗ ಸಿದ್ಧಲಿಂಗ ತನ್ನ ಮಹಿಮೆಯನ್ನು ಮೆರೆದನು.

ಷಟ್ಸ್ಥಲ ಸಿದ್ಧಾಂತ

ಷಟ್ಸ್ಥಲ ತತ್ವದಲ್ಲಿ ಶಿವನೇ ಸರ್ವೋತ್ತಮ, ಅವನೇ ಪರಮದೈವ, ಅವನೇ ಪರಾತ್ಪರನಾಗಿರುವುದರಿಂದ ಶಿವೈಕ್ಯವೇ ಈ ಸಿದ್ಧಾಂತದ ಸರ್ವೋನ್ನತವಾದ ಗುರಿ. ಲಿಂಗವು ಶಿವನ ಪ್ರತೀಕವೆಂದು ತಿಳಿದಿರುವುದರಿಂದ ಆ ಸ್ಥಿತಿಗೆ ಲಿಂಗೈಕ್ಯವೆಂದೂ ಕರೆಯುವುದುಂಟು. ಈ ತತ್ವದಲ್ಲಿ ಜೀವನಿಗೆ 'ಅಂಗ' ಎಂಬ ಹೆಸರಿರುವುದರಿಂದ ಜೀವ–ಶಿವ ಸಾಯುಜ್ಯಕ್ಕೆ ಲಿಂಗಾಂಗ ಯೋಗ ಅಥವಾ ಲಿಂಗಾಂಗ ಸಂಯೋಗ ಎಂದು ಕರೆಯುವರು. ಈ ಐಕ್ಯವು ಶಿವನೊಡನೆ ಶಿವನ ಸರ್ವವ್ಯಾಪಾರಗಳಲ್ಲಿಯೂ ಸಮವಾಗಿ ಇರುವುದರಿಂದ ಇದು ಸಮರಸೈಕ್ಯವೆನಿಸುವುದರಿಂದ ಜೀವನು ಆ ಸ್ಥಿತಿಯನ್ನು ಮುಟ್ಟಿದಾಗ ಪರಮಾನಂದವನ್ನನುಭವಿಸಲು ಸಮರ್ಥನಾಗುವನು. ಇದನ್ನು ಲಿಂಗಾಂಗ ಸಾಮರಸ್ಯವೆಂದೂ ಕರೆಯುತ್ತಾರೆ.

ಈ ಲಿಂಗಾಂಗ ಸಾಮರಸ್ಯವನ್ನು ಪಡೆಯಲು ಹೊರಟ ಸಾಧಕನ ಸಾಧನಾವಸ್ಥೆಗಳಲ್ಲಿ ಅರು ಸ್ಥಲಗಳನ್ನು ಮಾಡಿ ಅವುಗಳಿಗೆ ಷಟ್ಸ್ಥಲಗಳೆಂದು ಒಂದೊಂದಕ್ಕೂ ಬೇರೆ ಬೇರೆ ಹೆಸರುಗಳನ್ನು ಕೊಟ್ಟಿದ್ದಾರೆ ; ಅವೇ ಭಕ್ತಸ್ಥಲ, ಮಹೇಶಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ ಮತ್ತು ಐಕ್ಯಸ್ಥಲವೆಂಬ ಆರುಸ್ಥಲಗಳು. ಇವುಗಳಲ್ಲಿ 'ಐಕ್ಯಸ್ಥಲವೇ' ಸರ್ವಶ್ರೇಷ್ಠ. ಇದೇ 'ವಚನಸಿದ್ಧ'ನ ನಿಲವು ಎನ್ನಬಹುದು.

ಶಿವ-ಜೀವರ ಸಮರಸೈಕ್ಯವು ಅಲ್ಲಿ ಸಾಧಿತವಾಗಿರುವುದರಿಂದ ಅದಕ್ಕೆ ಐಕ್ಯಸ್ಥಲವೆಂಬ ಹೆಸರು ಬಂದಿದೆ. ಇದೇ ಶಿವೈಕ್ಯ, ಲಿಂಗೈಕ್ಯ, ನಿಜೈಕ್ಯ. ಇಲ್ಲಿ ಜೀವಸ್ವರೂಪವು ಸಂಪೂರ್ಣವಾಗಿ ನಷ್ಟವಾಗುವುದರಿಂದ, ಶೂನ್ಯರೂಪವಾಗುವುದರಿಂದ ಇದಕ್ಕೆ ಶೂನ್ಯ ಸಂಪಾದನೆ ಎಂಬ ಹೆಸರೂ ಉಂಟು.

ಈ ಸ್ಥಲಗಳು ಹೇಗೆ ಸಿದ್ಧವಾದವು ? ಅವುಗಳ ಲಕ್ಷಣಗಳೇನು ? ಸಾಧಕನು ಪರಮಾತ್ಮನೊಡನೆ ಮತ್ತು ಪರಮಾತ್ಮ ನಿರ್ಮಿತ ಸೃಷ್ಟಿಯೊಡನೆ ಯಾವ ಬಗೆಯ ಸಂಬಂಧವನ್ನಿಡುವನೋ, ಮತ್ತು ಯಾವ ಬಗೆಯಿಂದ ಆಚರಿಸುವನೋ ಆ ಬಗೆಗಳ ಲ್ಲಿಯೇ ಈ ಆರು ಭೇದಗಳು ಕಲ್ಪಿಸಲ್ಪಟ್ಟಿವೆ. ಸಾಧಕ ಮತ್ತು ಪರಮಾತ್ಮ ಇವರೇ ಜೀವ- ಶಿವರು. ಈ ಸಿದ್ಧಾಂತದಲ್ಲಿ ಇವರನ್ನೇ ಕ್ರಮವಾಗಿ ‘ಅಂಗ’ ಮತ್ತು ‘ಲಿಂಗ’ ಎಂದು ಕರೆಯುವರು. ನಿಃಕಲ ಶಿವತತ್ವವು ತನ್ನ ಶಕ್ತಿಯ ಚಲನ ಮಾತ್ರದಿಂದ ‘ಲಿಂಗ’ ಮತ್ತು ‘ಅಂಗ’ ಎಂದು ಎರಡು ತೆರನಾಯಿತು. ಲಿಂಗವು ಪುನಃ ಗುರು ಲಿಂಗ-ಜಂಗಮಲಿಂಗ- ಆಚಾರ ಲಿಂಗ ಎಂದು ಮೂರು ತೆರನಾಯಿತು. ಆ ಮೂರು ಮತ್ತೆ ಮಹಾಲಿಂಗ-ಪ್ರಸಾದಲಿಂಗ, ಜಂಗಮಲಿಂಗ ಅಥವಾ ವಾಚಕ ಲಿಂಗ-ಶಿವಲಿಂಗ, ಗುರುಲಿಂಗ- ಆಚಾರಲಿಂಗ ಎಂದು ಕ್ರಮವಾಗಿ ಒಂದೊಂದು ಎರಡು ತೆರನಾದವು. ಇದೇ ರೀತಿ ಅಂಗವು ಯೋಗಾಂಗ, ಭೋಗಾಂಗ, ತ್ಯಾಗಾಂಗ, ಎಂದು ಮೂರು ತೆರ ಆಗಿ, ಆ ಮೂರು ಮತ್ತೆ ಐಕ್ಯ-ಶರಣ, ಪ್ರಾಣಲಿಂಗಿ-ಪ್ರಸಾದಿ, ಮಹೇಶ-ಭಕ್ತ ಎಂದು ಒಂದೊಂದು ಎರಡು ತೆರ ಆದವು. ಹೀಗೆ ಒಟ್ಟು ಆರು ಲಿಂಗಸ್ಥಲಗಳೂ, ಆರು ಅಂಗ ಸ್ಥಲಗಳೂ ಆದವು. ಮುಖ್ಯವಾದ ಈ ಆರು ಸ್ಥಲಗಳ ಲಕ್ಷಣಗಳನ್ನು ನೋಡೋಣ.

ಭಕ್ತಸ್ಥಲ : ಲಿಂಗದಲ್ಲಿ ಸಂಪೂರ್ಣವಾದ, ಅನನ್ಯವಾದ ಪ್ರೇಮ, ಪ್ರೀತಿಯ ನ್ನಿಟ್ಟಿರಬೇಕು. ಅದರ ಬಗ್ಗೆ ತೀವ್ರವಾದ ಭಾವನೆಯಿರಬೇಕು, ಸಂತತವಾದ ಸ್ಮರಣ-ಮನನಗಳನ್ನು ಮಾಡಬೇಕು. ಸ್ವಾಧ್ಯಾಯ ಮತ್ತು ಪ್ರವಚನವಿರಬೇಕು. ಇಷ್ಟ ಲಿಂಗವನ್ನು ಬಿಟ್ಟು ಬೇರೆ ಯಾವುದರಲ್ಲೂ ಮನಸ್ಸು ಇರಬಾರದು. ಈ ಮನಸ್ಸು ಸದಾ ಭಗವಂತನ ಕಡೆಗೆ ತೈಲಧಾರೆಯಂತೆ ಹರಿಯಬೇಕು. ಆಗ ಲೌಕಿಕ ಅಡಚಣೆಗಳು ಬರುತ್ತವೆ. ಅವುಗಳನ್ನು ತ್ಯಜಿಸಬೇಕು. ಹೊತ್ತಾರೆ ಎದ್ದು ಪೂಜೆಮಾಡಬೇಕು, ದೈನಂದಿನ ಕಾರ್ಯಕ್ರಮಗಳನ್ನೆಲ್ಲ ಆಧ್ಯಾತ್ಮಿಕ ಚಿಂತೆನೆಯಲ್ಲಿ ಲೀನಗೊಳಿಸಬೇಕು. ಇಲ್ಲಿ ಲಿಂಗ- ಜಂಗಮವುವೊಂದೇ ಎಂಬ ಭಾವನೆಯುಂಟು. ಆದುದರಿಂದ ಶರಣರನ್ನು, ಜಂಗಮ ರನ್ನು ಸಂಪೂರ್ಣವಾಗಿ ದೇವರೆಂದೇ ಭಾವಿಸಿ ಪೂಜಿಸಬೇಕು ಇದೇ ಅವರ ಶ್ರದ್ಧೆ, ಜಂಗಮಪೂಜೆ, ಲಿಂಗಪೂಜೆ. ಬಸವಣ್ಣನವರಲ್ಲಿ ಎರಡೊಂದೇ ಎಂಬುದಿರಲಿ ಭಕ್ತನೇ ಮೇಲು ಎನ್ನುವವರೆಗೂ ಹೋಯಿತು. ಇದು ಇನ್ನೂ ಮುಂದುವರಿದು ಲಾಂಛನ ಕಂಡರೆ ನಂಬುವೆ, ಬ್ರಹ್ಮ ವಿಷ್ಣುಪದವಿಯ ಬೇಡೆ ಎನ್ನುವನರೆಗೂ ಹೋಗಿ ಭಕ್ತರ ಪಾದದ ಹಾವುಗೆಯ ಚರ್ಮವಾಗಿ ಮಾಡು ಎನ್ನುವವರೆಗೂ ಹೋಗಿ ಮುಟ್ಟಿತು.

ಸಾಧು ಸಜ್ಜನರ ಸಹವಾಸ ಸಾರ ಸಜ್ಜನರ ಸಂಗವಯ್ಯ...ಎಂದುಹಾಡಿದರು. ಇಲ್ಲಿ ಭಕ್ತ ಆಚಾರಲಿಂಗವನ್ನು ಪೂಜಿಸುವುದು 'ಸದ್ಭಕ್ತಿ' ಎಂಬ ಹಸ್ತದಿಂದ.

ಮಹೇಶ ಸ್ಥಲ : ಶಿವನಲ್ಲದೆ ಬೇರೊಂದಿಲ್ಲ ಎಂಬ ವಿಶ್ವಾಸ ದೃಢವಾಗಿ ಪೂರ್ಣ ನಿಷ್ಠೆಯಿಂದ ಲಿಂಗಜಂಗಮರ ಸೇವೆಮಾಡುವುದು ಈ ಸ್ಥಲದ ಮುಖ್ಯ ಲಕ್ಷಣ. 'ದೇವನೊಬ್ಬ ನಾಮ ಹಲವು' "ಏಕಂ ಸದ್ವಿಪ್ರಾ ಬಹುಧಾ ವದಂತಿ" 'ಪರಮ ಪತಿವ್ರತೆಗೆ ಗಂಡನೊಬ್ಬ' ಎಂಬ ಭಾವನೆ ಈ ಸ್ಥಲದಲ್ಲಿ ಕಂಡುಬರುತ್ತದೆ. ಕಾರಣ ಇವನಿಗೆ ಇಷ್ಟು ಹೊತ್ತಿಗೆ ಮನುಷ್ಯನ ಸ್ವಭಾವದ ಪರಿಚಯವಾಗಿರುತ್ತದೆ. 'ಬರ ಬರ ಭಕ್ತಿ ಮರೆಯಾಗಿ ತ್ತಯ್ಯಾ.......' ಎಂಬ ವಚನವನ್ನು ನೋಡಬಹುದು. ನಂಬಿಕೆ ಇಡುವುದಾದರೆ ಒಬ್ಬ ನಲ್ಲೇ ನಂಬಿಕೆ ಇಡು ಎನ್ನುತ್ತಾರೆ. ಹಿಡಿದುದ ಬಿಡದೆ ಗುರಿಯನ್ನು ಸಾಧಿಸುವುದೇ ಇವನ ಲಕ್ಷಣ. ಇಲ್ಲದಿದ್ದರೆ ನಡುನೀರೊಳದ್ದುವ ಕೂಡಲಸಂಗಮದೇವ. ಏಕದೈವ ನಿಷ್ಠೆ ಇದರ ಲಕ್ಷಣ. ಎಲ್ಲ ದೇವರೂ ಒಂದೇ. ಆದರೆ ತನ್ನ ಇಷ್ಟದೈವದಲ್ಲಿ, ವಿಶೇಷ ವಾದ, ವಿಶಿಷ್ಟವಾದ ಭಕ್ತಿ ಇರುತ್ತದೆ. ನೈತಿಕ ಶುದ್ಧಿ-ಮುಖ್ಯ. ನೀತಿಯಿಲ್ಲದೆ ಆಧ್ಯಾತ್ಮ ವಿಲ್ಲ. ಇಲ್ಲಿ ಕಾಮ-ಕಾಂಚನ ತ್ಯಾಗದ ವಿಷಯವನ್ನು ಒತ್ತಿಹೇಳುತ್ತಾರೆ. ಧರ್ಮ ವಿರೋಧವಾದುದಕ್ಕೆ....ಪರಸ್ತ್ರೀ.... ಪರಧನವೆಂಬ ಜೂದಿಂಗೆ ಅಂಜುವೆನಯ್ಯ ಎನ್ನುತ್ತಾರೆ. ಇಷ್ಟು ಹೊತ್ತಿಗೆ ಭಗವಂತನ ಬಗ್ಗೆ ಏಕ ಮುಖವಾದ ಭಕ್ತಿ, ಶ್ರದ್ಧೆ ಬೆಳೆಯುತ್ತಿರುತ್ತದೆ. ಇಂದ್ರಿಯಗಳನ್ನು, ಇಂದ್ರಿಯ ಭೋಗಗಳನ್ನು ಭಗವಂತನ ಹೆಸರಿನಲ್ಲಿ ಪಡೆದರೆ ಆಧ್ಯಾತ್ಮಿಕತ್ವ ಲಭಿಸುತ್ತದೆ. ಕರಣಗಳೆಲ್ಲ ಪರಶಿವಲಿಂಗದ ಕಿರಣಗಳು ಎನ್ನುತ್ತಾರೆ. ಇದನ್ನು 'ನೈಷ್ಠಿಕೀ ಭಕ್ತಿ' ಎಂದು ಕರೆಯುತ್ತಾರೆ.

ಪ್ರಸಾದಿ ಸ್ಥಲ: ಸಾಧನದಿಂದ ಎಲ್ಲವನ್ನೂ ಲಿಂಗಕ್ಕೆ ಅರ್ಪಿಸಿ ಬಳಿಕ ತಾನು ಸ್ವೀಕರಿಸುವುದು ಪ್ರಸಾದಿಯ ಲಕ್ಷಣ. ಸಾಮಾನ್ಯವಾಗಿ ವಿಕಾಸದ ಹಾದಿಯಲ್ಲಿ ಇನ್ನೂ ಮೊದಲ ಹೆಜ್ಜೆಯಲ್ಲಿರುವವರಿಗೆ ಅನೇಕ ವಿಷಯಗಳನ್ನು ಹೇಳಬೇಕಾಗುತ್ತದೆ. ಆದ್ದರಿಂದಲೇ ವಿಧಿನಿಯಮಗಳು ಬಹಳ ಉಂಟು. ಸಾಧಕ ತನ್ನ ಸಾಧನೆಯ ಮಾರ್ಗದಲ್ಲಿ ಮುಂದುವರಿಯುವಾಗ ಅನೇಕ ಕಾಲ ಒಂದೇ ಮೆಟ್ಟಲಲ್ಲಿ ನಿಲ್ಲಬೇಕಾಗುತ್ತದೆ. ಆದರೆ ಹಾಗೆ ನಿಲ್ಲಬಾರದು. ಇಲ್ಲಿಗೆ ಬರುವ ವೇಳೆಗೆ ಸಮರ್ಪಣ ಭಾವ ಬಂದಿರುತ್ತದೆ. ಪ್ರಸಾದವೆಂದರೆ ತೃಪ್ತಿ. ತನ್ನನ್ನು ತಾನು ಸಂಪೂರ್ಣವಾಗಿ ಭಗವಂತನಿಗೆ ಸಮರ್ಪಿಸಿ ಕೊಳ್ಳುತ್ತಾನೆ. ಸರ್ವಸಮರ್ಪಣ ಭಾವ ಇಲ್ಲಿ ಗೋಚರವಾಗುತ್ತದೆ. ಇದುವರೆಗೂ ಯಾವ ಯಾವುವು ಇಂದ್ರಿಯಗಳಾಗಿದ್ದುವೋ ಅವೆಲ್ಲ ಈಗ ಭಗವಂತನಿಂದ ಸ್ವೀಕೃತ ವಾಗಿವೆ (It becomes the touch of Almighty). ಸಕಲೇಂದ್ರಿಯಗಳಲ್ಲೂ ಭಗವಂತನ ಪ್ರತಿಷ್ಠಾಪನೆಯಾಗಿದೆ. ಆದುದರಿಂದ ಆತ ಸರ್ವಥಾ ತೃಪ್ತ. ನನ್ನ ಇಂದ್ರಿಯದ ಒಂದೊಂದು ಕರ್ಮವೂ ಭಗವಂತನಿಗಾಗಿ ನಡೆಯುತ್ತದೆ. ಎಲ್ಲ ಕರ್ಮಗಳ ಪ್ರಥಮದಲ್ಲಿ ಸಮರ್ಪಣೆ ಮಾಡುವುದು, ಸ್ಮರಿಸುವುದು. ತಾನು ಮಾಡಬೇಕು ಎಂಬು

ದೇನೂ ಇರುವುದಿಲ್ಲ. ಇಲ್ಲಿ ಇರುವ ಭಕ್ತನಿಗೆ ಹಿಂದಿನ ವಿಧಿನಿಯಮಗಳೇನೂ ಇರುವುದಿಲ್ಲ. ಹಿಂದಿನ ಸ್ಥಿತಿಯನ್ನೆಲ್ಲ ಮಾಡಬಹುದು. ಮಾಡಬೇಕೆಂಬ ನಿಯಮವೇನೂ ಇಲ್ಲ. ಕೃಪಾತತ್ವದಿಂದ ಆತ ಒಂದೊಂದು ಮೆಟ್ಟಿಲನ್ನು ಕ್ರಮವಾಗಿ ಹತ್ತಿಹೋಗಬೇಕಾದುದೇನೂ ಇಲ್ಲ.

ಪ್ರಾಣಲಿಂಗಿ ಸ್ಥಲ: ಇನ್ನು ಮುಂದಿನ ಮೆಟ್ಟಲುಗಳಲ್ಲಿ ಜ್ಞಾನ ಪ್ರಧಾನ. ಹಿಂದಿನವುಗಳಲ್ಲಿ ಭಕ್ತಿಪ್ರಧಾನ, ಶಾಸ್ತ್ರನಿಯಮಗಳು ಪ್ರಧಾನ. ಮನುಷ್ಯನಿಗೆ ಉಸಿರು ಹೇಗೋ ಭಕ್ತನಿಗೆ ದೇವರು ಹಾಗೆ. ಈಗ ಈತನಿಗೆ ಕೇವಲ ಇಷ್ಟಲಿಂಗದಲ್ಲಿಯೇ ದೇವರು ಕಾಣುವುದಿಲ್ಲ. ಒಳ–ಹೊರಗುಗಳಲ್ಲೆಲ್ಲಾ ಕಾಣುತ್ತಾನೆ. ಯಾವುದರ ಆರಾಧನೆಯಿಂದ ತನಗೆ ಮುಕ್ತಿ ಎಂದು ಭಾವಿಸಿದ್ದಾನೋ ಆ ಇಷ್ಟಲಿಂಗ ಆತನಿಗೆ ಸರ್ವವ್ಯಾಪಿಯಾಗಿ ಎಲ್ಲೆಲ್ಲೂ ಗೋಚರವಾಗುತ್ತದೆ. ತಾನು ಉಸಿರಾಡುವುದು ಅವನ ಉಸಿರನ್ನೇ ಎನ್ನುವುದು ಕಾಣುತ್ತದೆ. ಈ ಸ್ಥಿತಿಯ ಭಕ್ತಿಗೆ 'ಅನುಭವ ಭಕ್ತಿ' ಎನ್ನುತ್ತಾರೆ. ಪ್ರಾಣವು ಲಿಂಗವೇ ಆಗಿರುತ್ತದೆ. "ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆ, ಆಕಾಶ ಗಂಗೆಯಲ್ಲಿ ಮಜ್ಜನ, ಹೂವಿಲ್ಲದ ಪರಿಮಳದ ಪೂಜೆ, ಹೃದಯ ಕಮಲದಲ್ಲಿ ಶಿವ ಶಿವ ಎಂಬ ಶಬ್ದ, ಇದು ಅದ್ವೈತ ಕಾಣಾ ಗುಹೇಶ್ವರ."

ಶರಣ ಸ್ಥಲ: ಲಿಂಗಾಂಗ ಯೋಗದ ಅನುಭವಯುಕ್ತ ಜ್ಞಾನವೇ ಶರಣನ ಲಕ್ಷಣ. ಭಗವಂತನಲ್ಲಿ ಬಮುಕುತ್ತಿರುವವನೇ ಶರಣ. ಜ್ಞಾನ ಅವನ ಪ್ರಧಾನ ಲಕ್ಷಣ. ಮೋಹ ಹೋಗಿದೆ. ಆನು–ನೀನು ಎಂಬುದು ಬೇರೆ ತಾನಿಲ್ಲ, ತಾನು ಅರಿದ ಬಳಿಕ ಏನೂ ಇಲ್ಲ..... ದೇಹ–ಬುದ್ಧಿ ಹೋಗಿದೆ. ಇದು ವಸ್ತು–ಅವಸ್ತು, ಸಾರ-ಅಸಾರ ಎಂಬ ಭಾವನೆ ಹೋಗಿದೆ. ಅಂದರೆ ದ್ವಂದ್ವಾತೀತನಾಗಿದ್ದಾನೆ. 'ಆನಂದ ಭಕ್ತಿ' ಯಿರುತ್ತದೆ. '....ತನುವುಳ್ಳನ್ನಕ್ಕ ಗುರುವ ಹಾಡಿದೆ....'ಎಂಬ ವಚನವನ್ನು ನೆನೆಸಿಕೊಳ್ಳಬಹುದು. ಆತ್ಮಜ್ಞಾನದಲ್ಲಿ ಸಂಪೂರ್ಣವಾಗಿ ಲೀನವಾಗಿರುವ ಸ್ಥಿತಿ. ರಸ ಸ್ಥಿತಿಯೆಂದು ಬೇಕಾದರೂ ಕರೆಯಬಹುದು.

ಐಕ್ಯಸ್ಥಲ : ಇದುವರೆಗೂ ಅಂಗವಾಗಿದ್ದದ್ದು, ಅಂಗದ ಕೆಲವು ಲಕ್ಷಣಗಳನ್ನು ಹೊಂದಿದ್ದದ್ದು, ತನುಲಕ್ಷಣಕ್ಕೆ ಅಂಗದ ನಿಯಮಗಳಿಗೆ ಒಳಗಾಗಿದ್ದದ್ದು ಈಗ ದಾಟಿ ನಿಲ್ಲುವ ಸ್ಥಿತಿಗೆ ಬಂದಿದೆ. 'ಬಯಲು ಬಯಲಿನ ಸಂಗಮ,' 'ನದಿ ನದಿಯನ್ನು ಬೆರಸಿದಂತಾಯಿತ್ತು,' 'ಬೆಳಕು ಬೆಳಕಿನೊಡನೆ ಸೇರಿದಂತೆ'-ಎಂಬ ಸ್ಥಿತಿಗೆ ಬಂದಿದೆ. ಎಲ್ಲ ಗುಣಗಳು ಅಳಿದು ಒಂದು ಒಂದೇ ಆಗಿ ನಿಂತಿರುವುದು–ನೀರೊಳಗಿನ ಮಡಕೆಯಿದ್ದಂತೆ. ಲಿಂಗವೆನ್ನೆ ಲಿಂಗೈಕ್ಯವೆನ್ನೆ....'ಎಂಬ ವಚನದಂತೆ ಇಲ್ಲಿ ಸಾಧಿಸುವುದು ಸಮರಸತೆಯನ್ನೇ. ಎಲ್ಲೂ ವಿರಸವಾಗಿ ಕಾಣುವುದಿಲ್ಲ. ಅಂಶವೂ ಪೂರ್ಣ. ಪರಿಪೂರ್ಣತಾ ಭಾವದ ಸಿದ್ಧಿ. ಭಗವಂತನಲ್ಲಿ ಐಕ್ಯನಾಗಿರುವುದರಿಂದ ಈ ಸ್ಥಿತಿ ಬಂತು. ಶಿವತತ್ವಕ್ಕೆ ಸತ್

ಚಿತ್ ಆನಂದ ಎಂಬ ಮೂರು ಮುಖಗಳಿವೆ. ಈ ಮೂರು ಮುಖಗಳ ಜೊತೆಯಲ್ಲಿ ಆತನಿಗೆ ಸಮರಸತೆ ಉಂಟು— 'ಘೃತ ಘೃತವ ಬೆರಸಿದಂತೆ........'

ತೋಂಟದ ಸಿದ್ಧಲಿಂಗ ಶಿವಯೋಗಿಗಳು ಈ ಷಟ್ಸ್ಥಲ ಸಿದ್ಧಾಂತವನ್ನು ನಡೆದು ಆಚರಿಸಿ ಬೋಧಿಸಿ ಅದರ ಉದ್ಧಾರಮಾಡಿ ಲೋಕಾಚಾರವನ್ನು ಮೆರೆದು ಷಟ್ಸ್ಥಲ ಸಿದ್ಧಾಂತದ ಪ್ರಕಾರ ಸಂದಿಲ್ಲದ ಲಿಂಗಾಂಗ ಸಾಮರಸ್ಯದ ಶಿವಯೋಗ ಸಮಾಧಿಗೆ ಸಲ್ಲುತ್ತಾರೆ.

ಪುರಾಣಗಳಲ್ಲಿ ಭುವನಕೋಶ :

ಗಂಟೆಗೆ ಆರರಿಂದ ಎಂಟುಸಾವಿರ ಕಿ. ಮೀ. ವೇಗದಲ್ಲಿ ಚಲಿಸುತ್ತಿರುವ ಇಂದಿನ ವಿಜ್ಞಾನ ಪ್ರಪಂಚದಲ್ಲಿ ಪ್ರತಿಯೊಂದೂ ದ್ರುತಗತಿಯಲ್ಲಿ ಚಲಿಸುತ್ತ ಪರಿವರ್ತನೆ ಹೊಂದುತ್ತ ನಡೆಯುತ್ತಿದೆ. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಶೀಘ್ರ ಬದಲಾವಣೆಯನ್ನು ಮನುಷ್ಯ ಬಯಸುತ್ತಿದಾನೆ. ಇಂದಿನದು ನಾಳೆಗೆ ಹಳತು ಎನ್ನುವಷ್ಟರಮಟ್ಟಿನ ಭಾವನೆ ಜಾಗ್ರತವಾಗುತ್ತಿದ್ದು, ಹಳತರ, ರೂಢಿ-ಸಂಪ್ರದಾಯಗಳ ವಿಷಯದಲ್ಲಿ ಮನುಷ್ಯ ಇಂದು ತೀರ ಅಸಹನೆಯನ್ನು ತಳೆಯುತ್ತಿದ್ದಾನೆ. ಹಳತೆಲ್ಲ ಅರ್ಥಶೂನ್ಯ, ಜೀವನ ಮಾರ್ಗದಲ್ಲಿ ಕಂಟಕ ಎಂಬ ಭಾವನೆ ಬೇರೂರಿ ಹಳತನ್ನೆಲ್ಲ, ಅದು ಏನೇ ಆಗಲಿ, ಯಾರೇ ಆಗಲಿ, ತೂರಿಬಿಟ್ಟು ಹೊಸತರ ದಾಸನಾಗುತ್ತ ನಡೆದಿದ್ದಾನೆ. ವಿಜ್ಞಾನ ಸೃಷ್ಟಿಸಿಕೊಡುತ್ತಿರುವ ಹೊಸ ಆಶ್ಚರ್ಯಗಳೇ ಈತನ ವಿಶ್ವಾಸಕ್ಕೆ ಅರ್ಹವಾಗಿಬಿಟ್ಟವೆಯಾದುದರಿಂದ ಹೊಸದರ ಹೊಸ ಮೌಲ್ಯಗಳ ಸಂಪಾದನೆಗಾಗಿ ಆತುರನಾಗಿದ್ದಾನೆ, ಅದರ ಗಳಿಕೆಗಾಗಿ ಚಡಪಡಿಸುತಿದ್ದಾನೆ. ಇದರ ಪರಿಣಾಮವಾಗಿ ವಿಶ್ವದ್ದಿರಲಿ ನಮ್ಮ ಭಾರತದ ಸಂಪ್ರದಾಯಗಳು, ಋಷಿ ವಾಕ್ಯಗಳು, ಹಿಂದಿನ ಶಾಸ್ತ್ರಗಳು, ಪುರಾಣಗಳು ಬೆಲೆಯಿಲ್ಲವಾಗಿವೆ, ಅರ್ಥಶೂನ್ಯವಾಗಿವೆ. ಮೊದಲೇ ಸಾಮಾನ್ಯರಿಗೆ ಅರ್ಥವಾಗದ ಸಂಸ್ಕೃತ ಭಾಷೆಯಲ್ಲಿದ್ದ ಪುರಾಣಗಳು ಈಗಂತೂ ಇನ್ನೂ ಹೆಚ್ಚಿನ ಅವಜ್ಞೆಗೆ ಕಾರಣಗಳಾಗಿ ಪುರಾಣಗಳೆಂದರೆ ಮೂಗು ಮುರಿಯುವ, ಅಷ್ಟೇ ಏಕೆ, ಪುರಾಣದ ಹೆಸರೆತ್ತಿದವರನ್ನೇ ಹಾಸ್ಯ ಮಾಡುವ ನಗೆಯಾಡುವ ಸ್ಥಿತಿಗೆ ಹೋಗಿಬಿಟ್ಟವೆ. ಇವುಗಳ ಬಗ್ಗೆ ನಮ್ಮ ಯುವಜನರಿರಲಿ, ಕೆಲ ವಿದ್ವಾಂಸರಲ್ಲಿಯೂ ಅಸಡ್ಡೆಮೂಡಿ ಬಂದಿದೆ. ಪ್ರಾಯಃ ಇದು ದುರದೃಷ್ಟಕರವೆಂದು ಹೇಳಬೇಕಾಗುತ್ತದೆ.

ಅಂದಮಾತ್ರಕ್ಕೆ ಹೊಸದೆಲ್ಲ ಹುರುಳಿಲ್ಲದ್ದು, ಹಳತು ಮಾತ್ರ ಅರ್ಥಪೂರ್ಣವಾದುದ್ದೆಂದರ್ಥವಲ್ಲ. ಹಳತರ ತಳಹದಿಯ ಮೇಲೆ ಹೊಸ ಸೌಧವನ್ನು ನಿರ್ಮಿಸಬೇಕು ಎಂದಿಷ್ಟೇ ಅರ್ಥ. ಹಳತು-ಹೊಸತರ ಸಂಗಮವಾದರೆ ತಾನೆ ಹೊಸ ಧರ್ಮದುದಯ ! ಹಳತೆಲ್ಲವೂ ಸತ್ಯವಲ್ಲ, ಸತ್ಯವಾದುದನ್ನು ತ್ಯಜಿಸಬೇಕಾಗಿಯೂ ಇಲ್ಲ -ಹೊಸತೆಲ್ಲ ಅಸತ್ಯವೆಂದಲ್ಲ, ಅಸತ್ಯವಾದುದನ್ನೂ ಅಪ್ಪಿ ನಡೆಯಬೇಕಾದುದಿಲ್ಲ. ಈ ದೃಷ್ಟಿಯಿಂದ ನಮ್ಮ ಪುರಾಣಗಳಲ್ಲಿ ಕಂಡು ಬರುವ ಸತ್ಯ ಸಂಗತಿಗಳನ್ನು ನಾವು ಕಡೆಗಣಿಸಬೇಕಾದು

ದಿಲ್ಲ. ಅಮೆರಿಕನ್ನರು ಚಂದ್ರಲೋಕಕ್ಕೆ ಉಪಗ್ರಹವನ್ನು ಹಾರಿಸಿದಾಗ ನಮ್ಮ ಪಾರ್ಲಿಮೆಂಟ್ ಭವನದಲ್ಲಿ ನಡೆದ ಒಂದು ಚರ್ಚೆಯ ಮಹತ್ವವನ್ನು ಕಡೆಗಣಿಸುವಂತೆಯೇ ಇಲ್ಲ. ಆ ಚರ್ಚೆ–ಅಮೆರಿಕನರು ಉಪಗ್ರಹವನ್ನು ಹಾರಿಸುವುದಕ್ಕೆ ಮುಂಚೆ ಭಾರತದ ಹಳೆಯ ಶಾಸ್ತ್ರ ಗ್ರಂಥಗಳನ್ನು ಪರಿಶೀಲಿಸಿದರು, ಅವುಗಳ ಸಹಾಯವನ್ನು ಪಡೆದರು ಎಂಬುದು. ಈ ಹಿನ್ನೆಲೆಯಲ್ಲಿಯೂದರೂ, 'ಹಿತ್ತಲ ಗಿಡ ಮದ್ದಲ್ಲ' ಎಂಬ ಗಾದೆಯನ್ನು ಚರಿತಾರ್ಥಗೊಳಿಸದೆ ನಮ್ಮ ಪುರಾಣಗಳನ್ನು ಅಧ್ಯಯನ ಮಾಡುವ, ಅವುಗಳಲ್ಲಿ ಕಂಡು ಬರುವ ಸತ್ಯಾಸತ್ಯತೆಗಳನ್ನು ಪರಿಶೀಲಿಸುವತ್ತ ನಮ್ಮ ಗಮನವನ್ನು ಹರಿಸಿದರೆ ನಾವು ಭಾರತೀಯರಾಗಿ ಉಳಿಯಬಹುದು, ಭಾರತದ ಮಸ್ತಕವನ್ನು ಮೇಲಕ್ಕೇರಿಸಬಹುದೆಂದು ಕಾಣುತ್ತದೆ. ಮೂಲ ಸೃಷ್ಟಿಕಾರ್ಯದಲ್ಲಾಗಲಿ, ಪ್ರತಿಭಾನ್ವಿತ ವ್ಯಕ್ತಿಗಳ ಬಾಹುಳ್ಯದಲ್ಲಾಗಲಿ ಭಾರತ ಎಂದಿಗೂ ಹಿಂದುಳಿದಿರಲಿಲ್ಲ. ಇಂದು ಮುಂದುವರಿದವೆನ್ನಿಸಿಕೊಳ್ಳುವ ರಾಷ್ಟ್ರಗಳಿಗಿಂತ ಮುಂದೆಯೇ ಇತ್ತು. ನಿರಭಿಮಾನಿಗಳಾಗಿ ಭಾರತದ ಗತಶಕ್ತಿಯನ್ನು ನೆನೆಸಿಕೊಂಡು ನಗಬೇಕಾದುದಿಲ್ಲ, ಭಾರತದ ಶಕ್ತಿಯನ್ನು ಕಂಡು ಮೂಗು ಮುರಿಯ ಬೇಕಾದುದಿಲ್ಲ–ಈಶಕ್ತಿಯನ್ನು ಭಾರತ ಶಕ್ತಿಯನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ವ್ಯಯ ಮಾಡಿದರೆ ಸಾರ್ಥಕವಾದೀತು, ಭಾರತದ ಹಿರಿಮೆ–ಗರಿಮೆಗಳು ಹೆಚ್ಚಿಯಾವು. ಅಂತೆಯೇ ಭಾರತದ ಪುರಾಣಗಳಲ್ಲಿ ಕಂಡುಬರುವ ಐತಿಹಾಸಿಕ ಅಂಶಗಳನ್ನು ಪರಿಶೀಲಿಸುವ ಕಾರ್ಯವನ್ನು ಮಾಡುತ್ತ ಪುರಾಣಗಳ ಕಲ್ಪನೆಯಲ್ಲಿ ಸೃಷ್ಟಿತತ್ವ ಹೇಗಿದೆ, ಭೂಗೋಳದ ಅಥವಾ ಭುವನಕೋಶದ ಕಲ್ಪನೆ ಹೇಗಿದೆ? ಅದರಲ್ಲಿ ಎಷ್ಟರನುಟ್ಟಿನ ಸತ್ಯಾಂಶವಿದೆ ಎಂಬುದನ್ನು ಕೆದಕುವ ಅಲ್ಪಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ಇದೇ ಕೊನೆಯಲ್ಲ. ವಿಷಯದಲ್ಲಿ ನಡೆಯಬೇಕಾಗಿರುವ ಸಂಶೋಧನೆ ಅಷ್ಟಿಷ್ಟೆಂದು ಹೇಳುವಂತಿಲ್ಲ.

ಪುರಾಣಗಳಲ್ಲಿ ಭೂಗೋಳ ಮತ್ತು ಖಗೋಳಗಳ ವಿಷಯ ಬಹಳ ಸಾರವತ್ತಾದುದು. ಪುರಾಣಕಾರರು ಭೂಗೋಳದ ವಿಷಯವನ್ನು ಎರಡು ದೃಷ್ಟಿಗಳಿಂದ ವಿಚಾರಮಾಡಿದ್ದಾರೆ (೧)ಇಡೀ ವಿಶ್ವದ ಭೂಗೋಳ ಮತ್ತು (೨)ಭರತವರ್ಷದ ಭೂಗೋಳ. ಇವುಗಳಲ್ಲಿ ಮೊದಲನೆಯದರಲ್ಲಿ ಕಲ್ಪನೆಯ ಪ್ರಾಚುರ್ಯವೂ ಎರಡನೆಯದರಲ್ಲಿ ಸಂಪೂರ್ಣ ವಾಸ್ತವಿಕತೆಯೂ ಕಂಡುಬರುವುದೆಂದು ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ಆದರೆ ವಿಶ್ವದ ಭೂಗೋಳದ ಕಲ್ಪನೆಯಲ್ಲಿ ಜನರು ತಿಳಿದಿರುವಷ್ಟು ಕಾಲ್ಪನಿಕ ಅಂಶ ಕಂಡುಬರುವುದಿಲ್ಲ. ಇಂದಿನ ಅಣುಯುಗದಲ್ಲಿ ವೈಜ್ಞಾನಿಕ ದೃಷ್ಟಿಯಿಂದ ಸಂಶೋಧನೆ ನಡೆಸಿ ಕಂಡುಹಿಡಿದು ಹೊಸ ಅಂಶಗಳ ಬಗ್ಗೆ ನೀಡಿರುವ ವಿವರಣೆಯೆಲ್ಲ–ಭೂ–ಖಂಡದ ವಿಷಯದಲ್ಲಿ–ಪುರಾಣಕಾರರಿಗೂ ತಿಳಿದಿತ್ತು ಮತ್ತು ಅದರ ಯಥಾರ್ಥ ವಿವರಣೆಯನ್ನೂ ಅವರು ನೀಡಿದ್ದಾರೆ. ಆದರೆ ಇಂದು ದುರದೃಷ್ಟವಶಾತ್ ಅಂದು ಪುರಾಣಕಾರರು ಹೇಳಿರುವ ಸ್ಥಾನಗಳನ್ನು ನಿಸ್ಸಂದಿಗ್ಧವಾಗಿ ಗುರುತಿಸುವುದು ಸಂಪೂರ್ಣವಾಗಿ ಸಾಧ್ಯವಾಗುತ್ತಿಲ್ಲ.

ಪೃಥ್ವಿಯು ಸಪ್ತದ್ವೀಪಗಳಿಂದಾಗಿದೆ ಎಂಬ ಕಲ್ಪನೆ ಪುರಾಣದ ಭೂಗೋಳದ ಸ್ವಂತ ವೈಶಿಷ್ಟ್ಯವಾಗಿದೆ. ಈ ಸಪ್ತದ್ವೀಪಗಳಲ್ಲಿ ಕುಶದ್ವೀಪ, ಶಕದ್ವೀಪ, ಮತ್ತು ಜಂಬೂ ದ್ವೀಪಗಳನ್ನು ಖಚಿತವಾಗಿ ನಿಸ್ಸಂದಿಗ್ಧವಾಗಿ ಗುರುತಿಸಿದ್ದಾರೆ. ಕ್ಯಾಪ್ಟನ್ ಸ್ಪೀಕ್ ಎಂಬುವನು ಪುರಾಣಗಳಲ್ಲಿ ಹೇಳಿರುವ ಅಂಶಗಳ ಆಧಾರದಿಂದಲೇ ಆಫ್ರಿಕಾಖಂಡದಲ್ಲಿ ಹರಿಯುವ ನೈಲ್ ನದಿಯ ಉದ್ಗಮಸ್ಥಾನವನ್ನು ಪತ್ತೆ ಹಚ್ಚಿದ್ದಾನೆ ಎಂಬ ಅಂಶವನ್ನು ನಾವಿಲ್ಲಿ ಮರೆಯುವಂತಿಲ್ಲ. ಪುರಾಣದಲ್ಲಿ ಕುಶದ್ವೀಪ ಈ ನದಿಯ ಉದ್ಗಮಸ್ಥಾನ ವೆಂದು ಹೇಳಲ್ಪಟ್ಟಿದೆ. ಕುಶದೇಶ ಮತ್ತು ಕುಶಜನಾಂಗದ ಉಲ್ಲೇಖ ಪ್ರಸಿದ್ಧ ಫಾರಸಿ ಸಾಮ್ರಾಟ ಡೇರಿಯಸ್ಸ (ಕ್ರಿ.ಪೂ. ೫೨೨-೪೮೬) ನ ಅನೇಕ ಫಾರಸಿ ಅಭಿಲೇಖ ಗಳಲ್ಲಿ ಕಂಡುಬರುತ್ತದೆ. ಈ ಕುಶದ್ವೀಪವನ್ನು ಆಧುನಿಕ ನ್ಯೂಬಿಯಾ ಎಂದು ಭಾವಿಸಿ ಪೌರಾಣಿಕ ವರ್ಣನೆಗಳ ಆಧಾರದ ಮೇಲೆ ಕ್ಯಾಪ್ಟನ್ ಸ್ಪೀಕ್ ನೈಲ್ ನದಿಯ ಉಗಮಸ್ಥಾನವನ್ನು ಗುರುತಿಸಿದ್ದಾನೆ. ಆದ್ದರಿಂದ ಈ ಅಂಶ ಪೌರಾಣಿಕ ವರ್ಣನೆ ಗಳಲ್ಲಿ ಕಂಡುಬರುವ ಐತಿಹಾಸಿಕ ತಥ್ಯಗಳ ಸಂಕೇತವಾಗಿದೆ!

ಅಲ್ಲಿ ಕುಶರ ರಾಜ್ಯ ಕ್ರಿ.ಪೂ. ೨೨೦೦-೧೮೦೦ರ ಅವಧಿಯಲ್ಲಿ ಅಸ್ತಿತ್ವದಲ್ಲಿತ್ತು. ಗ್ರೀಕ್ ಲೇಖಕರು ವರ್ಣಿಸಿರುವ 'ಸಿಥಿಯಾ' ದೇಶವೇ ಶಕದ್ವೀಪವೆಂದು ಹೇಳುತ್ತಾರೆ. ಪುರಾಣಗಳಲ್ಲಿ ವರ್ಣಿಸಲ್ಪಟ್ಟಿರುವ ಶಕರಾಜ್ಯದ ಜಾತಿಗಳು ಮತ್ತು ನದಿಗಳ ವಿವರಣೆಗಳು ಕೇವಲ ಕಲ್ಪನೆಯ ಸೃಷ್ಟಿಯಾಗದೆ ವಾಸ್ತವಿಕ ಅನುಭವದ ಸತ್ಯಸಂಗತಿಗಳಾಗಿವೆ. ಹಿಂದೂಗಳು ವಲಸೆಹೋಗಿ ತಮ್ಮ ಸಭ್ಯತೆ ಮತ್ತು ಸಂಸ್ಕೃತಿಯ ವೈಜಯಂತಿಯನ್ನು ಹಾರಾಡಿಸಿದ ಭಾರತೀಯ ಉಪನಿವೇಶಗಳ ವರ್ಣನೆಯೂ ಪುರಾಣಗಳಲ್ಲಿ ವಿಸ್ತೃತ ವಾಗಿ ವಿವರಿಸಲ್ಪಟ್ಟಿದೆ. ವ್ಯಾಪಾರದ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾದ ಏಷ್ಯಾದ ಸಪ್ತನದಿಗಳ ವರ್ಣನೆಯೂ ಅಷ್ಟೇ ಯಥಾರ್ಥತೆಯಿಂದ ಕೂಡಿದೆ. ಮಧ್ಯ ಅಮೆರಿಕೆಯ ಮಯ-ಸಂಸ್ಕೃತಿಯ ಕ್ರೀಡಾಕ್ಷೇತ್ರ (ಆಡುಂಬೊಲ) ವೆನಿಸಿದ ಮೆಕ್ಸಿಕೋ ಮತ್ತು ಪೆರು ದೇಶದ ಭೂವೃತ್ತದಿಂದ ಕೂಡಿದ ಪಶ್ಚಿಮ ಗೋಳಾರ್ಧವೇ ಪುರಾಣಗಳಲ್ಲಿ ವರ್ಣಿಸಿರುವ ಪಾತಾಳಲೋಕವೆಂದೂ ಗುರುತಿಸಲಾಗಿದೆ.

ಆದ್ದರಿಂದ ಈ ಮೇಲಿನ ಕೆಲವು ಅಂಶಗಳು ಪುರಾಣದಲ್ಲಿ ವರ್ಣಿತವಾಗಿರುವ ಅಂಶಗಳು ಕೇವಲ ಕಾಲ್ಪನಿಕವಲ್ಲ, ಯಥಾರ್ಥತೆಯಿಂದ ಕೂಡಿವೆ ಎಂಬುದನ್ನು ತೋರಿಸುತ್ತವೆ. ಆದರೂ ಕೆಲವು ವಿಷಯಗಳ ಬಗ್ಗೆ ಇನ್ನೂ ನಿಸ್ಸಂದಿಗ್ಧವಾದ ಖಚಿತ ವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಒಂದು ಸಿದ್ಧಾಂತಕ್ಕೆ ಬರಲು ಸಾಧ್ಯವಾಗಿಲ್ಲ. ಒಂದು ನಕ್ಷೆಯನ್ನು ತಯಾರಿಸಲು ಸಾಧ್ಯವಾಗಿಲ್ಲ. ಆದಾಗ್ಯೂ ಪುರಾಣಗಳಲ್ಲಿ ಹೇಳಿರುವ ಭೂಗೋಳದ ವಿಷಯದಲ್ಲಿ ಕೆಲವು ಮುಖ್ಯವಾದ ಅಂಶಗಳನ್ನು ಕೊಡಲು ಪ್ರಯತ್ನಿಸಲಾಗಿದೆ.

ಪುರಾಣದಲ್ಲಿ ಭುವನಕೋಶ ಅತ್ಯಂತ ಮಹತ್ವಪೂರ್ಣವಾದ ವಿಷಯ. ಇದರಲ್ಲಿ

ಸಮಗ್ರ ವಿಶ್ವದ ಭೌಗೋಳಿಕವಾದ ಹೆಸರುಗಳು, ಅದರ ವಿಸ್ತಾರ ಹಾಗೂ ಸ್ವರೂಪದ ವಿವರವಾದ ವರ್ಣನೆ ಕಂಡು ಬರುತ್ತದೆ. ಈ ಭೂವೃತ್ತವನ್ನು ತಿಳಿಯಬೇಕಾದರೆ ಇದಕ್ಕೆ ಕೇಂದ್ರಸ್ಥಾನವಾದ ಮೇರುಪರ್ವತದ ವಿಷಯವನ್ನು ತಿಳಿದುಕೊಳ್ಳುವುದು ಅತ್ಯಾವಶ್ಯಕ.

ವಾಯುಪುರಾಣದಲ್ಲಿ ಸಮಗ್ರ ಪೃಥ್ವಿಯನ್ನು ಒಂದು ಕಮಲಕ್ಕೆ ಹೋಲಿಸಿ ಅದರ ಮಧ್ಯದ ಕರ್ಣಿಕೆಯನ್ನಾಗಿ ಪರಿಗ್ರಹಿಸಿದ್ದಾರೆ ಮೇರು ಪರ್ವತವನ್ನು :

ಅವ್ಯಕ್ತಾತ್ ಪೃಥವೀಪದಮ್ ಮೇರುಪರ್ವತ ಕರ್ಣಿಕಮ್.

—ವಾಯು ೩೪, ೩೭ .

ಅದೇ ವಾಯುಪುರಾಣದ ಇನ್ನೊಂದು ಕಡೆಯಲ್ಲಿ ಚಿನ್ನದ ಮೇರುಪರ್ವತವು ಮಹಾತ್ಮ ಬ್ರಹ್ಮನ ಗರ್ಭವೆಂತಲೂ, ಈ ಗರ್ಭದಿಂದ ಹೊರಟ ನೀರು ಸಮುದ್ರವೆಂತಲೂ ಶಿರ ಮತ್ತು ಮೂಳೆಗಳು ಪರ್ವತವೆಂತಲೂ ಹೇಳಿದೆ:

ಹಿರಣ್ಮಯಸ್ತು ಯೋ ಮೇರುಸ್ತಸ್ಯೋಲ್ಬಂ ತನ್ಮಹಾತ್ಮನ:

ಗರ್ಭೋದಕಂ ಸಮುದ್ರಾಶ್ಚ ಸಿರಾಧ್ಯಸ್ಥೀನಿ ಪರ್ವತಾ:॥. ವಾಯು. ೫,೦೪

ಇದೇ ರೀತಿ ಮತ್ಸ್ಯಪುರಾಣದಲ್ಲಿ ಮೇರುವನ್ನು ಅವ್ಯಕ್ತಜನ್ಮಾ ಬ್ರಹ್ಮನ ನಾಭಿ-ಬಂಧನವೆಂದು ಹೇಳಲಾಗಿದೆ. ಅಂದರೆ ಮೇರು ಪರ್ವತವು ಪೃಥ್ವಿಯ ನಾಭಿಯಾದುದರಿಂದ ಇದನ್ನು ಕೇಂದ್ರ ಅಥವಾ ಮೂಲವನ್ನಾಗಿ ಮಾಡಿಕೊಂಡು ಭುವನಕೋಶದ ರಚನೆಯನ್ನು ಮಾಡಿದ್ದಾರೆ.

ಪುರಾಣ ಪರಂಪರೆಗನುಸಾರವಾಗಿ ಮೇರುಪರ್ವತವು ಇಳಾವೃತ್ತ ವರ್ಷದ ಮಧ್ಯದಲ್ಲಿದ್ದು ಜಂಬೂದ್ವೀಪದ ಕೇಂದ್ರವೆಂದು ಪರಿಗಣಿತವಾಗಿದೆ. ಇಳಾವೃತ್ತದ ನಾಲ್ಕು ಕಡೆಗಳಲ್ಲಿ ನಾಲ್ಕು ಪರ್ವತಗಳು ಮೇರುವಿಗೆ ಆಲಂಬನವನ್ನು ನೀಡುವ ನಾಲ್ಕು ಕಂಬಗಳಂತೆ ಹರಡಿಕೊಂಡಿವೆ. ಪೂರ್ವದಲ್ಲಿ ಮಂದರ ಪರ್ವತ, ದಕ್ಷಿಣದಲ್ಲಿ ಗಂಧಮಾದನ ಪರ್ವತ ,ಪಶ್ಚಿಮದಲ್ಲಿ ವಿಪುಲಪರ್ವತ ಮತ್ತು ಉತ್ತರದಲ್ಲಿ ಸುಪಾರ್ಶ್ವ ಪರ್ವತಗಳು ಇವೆ. ಮೇರುಪರ್ವತದ ಸುತ್ತಲೂ ಹಬ್ಬಿರುವ ಇತರ ಪರ್ವತಗಳ ಉಲ್ಲೇಖವೂ ಪುರಾಣದಲ್ಲಿದೆ. ಮೇರುವಿನ ಉತ್ತರದಲ್ಲಿ ನೀಲ ಪರ್ವತ, ಅದರ ಉತ್ತರಕ್ಕೆ ಶ್ವೇತ ಪರ್ವತ, ಇದಕ್ಕೆ ಉತ್ತರದಲ್ಲಿ ಶೃಂಗೀಪರ್ವತ ಇವೆ ಮೇರುವಿನ ಪೂರ್ವದಲ್ಲಿ ಜಠರ ಪರ್ವತ ಹಾಗೂ ದೇವಕೂಟ ಪರ್ವತಗಳಿವೆ. ದಕ್ಷಿಣದಲ್ಲಿ ನಿಷಧ ಪರ್ವತ, ಇದಕ್ಕೆ ದಕ್ಷಿಣದಲ್ಲಿ ಹೇಮಕೂಟ ಪರ್ವತ, ಇದಕ್ಕೂ ದಕ್ಷಿಣದಲ್ಲಿ ಹಿಮವಾನ್(ಹಿಮಾಲಯ) ಪರ್ವತಗಳಿವೆ. ಪಶ್ಚಿಮದಲ್ಲಿ ಮಾಲ್ಯವಾನ್ ಮತ್ತು ಗಂಧಮಾದನ ಪರ್ವತಗಳಿವೆ. ಬೇರೆ ಬೇರೆ ಪುರಾಣಗಳಲ್ಲಿ ಈ ಪರ್ವತಗಳಿಗೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟು ನಾನಾ ರೀತಿಯಲ್ಲಿ ವರ್ಣಿಸಿರುವುದರಿಂದ ಮೇರುಪರ್ವತದ ವಿಷಯದಲ್ಲಿ ಖಚಿತವಾದ ಅಭಿಪ್ರಾಯಗಳನ್ನು ತಳೆಯುವುದು ಕಷ್ಟವಾದರೂ, ಮೇರು ಪರ್ವತದ ವಿಷಯದಲ್ಲಿ ಪುರಾಣಗಳಲ್ಲಿ ಕೊಡಲಾಗಿರುವ ವಿವರಗಳು ಪುರಾಣದಲ್ಲಿ ವರ್ಣಿತವಾಗಿರುವ ಭೂಗೋಳದ ಸ್ಥಿತಿಯ ಆಧಾರದ

ಮೇಲೆ ಆಧುನಿಕ ಭೂಗೋಲದ ಸ್ಥಿತಿಯನ್ನು ಊಹಿಸಿಕೊಳ್ಳುವುದಕ್ಕೆ ಅನುಕೂಲ ವಾಗಿವೆ.

ಮೇರು ಪರ್ವತ :

ಮೇರು ಪರ್ವತವನ್ನು ಗುರುತಿಸುವುದರಲ್ಲಿ ವಿದ್ವಾಂಸರು ಅನೇಕ ಅಭಿಪ್ರಾಯ ಗಳನ್ನು ತಳೆದಿದ್ದಾರೆ. ಮೇರುಪರ್ವತದಿಂದಲೇ ಅನೇಕ ಪರ್ವತಶ್ರೇಣಿಗಳು ಹೊರಟು ನಾನಾ ದಿಕ್ಕುಗಳಲ್ಲಿ ಹಬ್ಬಿರುವುದೇ ಮೇರುಪರ್ವತದ ವೈಶಿಷ್ಟ್ಯ. ಆದ್ದರಿಂದ ಅನೇಕ ವಿದ್ವಾಂಸರು ಈ ಮೇರು ಪರ್ವತವನ್ನು 'ಪಾಮಿರ್' ಪರ್ವತದ ಪ್ರತಿನಿಧಿ ಎಂದು ಭಾವಿಸಿ ದ್ದಾರೆ. ಡಾ|| ಹರ್ಷೆ ಎಂಬುವರು ತಮ್ಮ ಒಂದು ಸಂಶೋಧನಾತ್ಮಕ ಲೇಖನದಲ್ಲಿ ಮೇರು ಪರ್ವತವು ಅಲ್ತಾಯಿ ಪರ್ವತ ಕ್ಷೇತ್ರದಲ್ಲಿರುವ ಪರ್ವತವೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಅಲ್ತಾಯಿ ಪರ್ವತ ಶ್ರೇಣಿಯು ಏಷ್ಯಾದ ಭೂಪಠದಲ್ಲಿ ಪಶ್ಚಿಮ ಸೈಬೀರಿಯಾ ಹಾಗೂ ಮಂಗೋಲಿಯಾದಲ್ಲಿರುವುದೆಂದು ಕಂಡುಬರುತ್ತದೆ. ಹಿಮಾ ಲಯದ ಉತ್ತರಕ್ಕೆ ಮೇರು ಪರ್ವತವಿದೆ ಎಂದು ಪುರಾಣಗಳಲ್ಲಿ ಹೇಳಲ್ಪಟ್ಟಿದೆ. ಅಂದರೆ ಹಿಮಾಲಯ ಹಾಗೂ ಮೇರು ಪರ್ವತಗಳ ಮಧ್ಯೆ ಹೇಮಕೂಟ ಮತ್ತು ನಿಷಧ ಪರ್ವತ ಗಳು ಇವೆ. ಏಷ್ಯಾದ ಭೂಪಠದಲ್ಲಿ 'ಕೂಏನ್‌ಲೂನ್' ಹಾಗೂ 'ಥಿಏನ್‌ಶಾನ್' ಪರ್ವತ ಶ್ರೇಣಿಗಳು ಕಂಡುಬರುತ್ತವೆ. ಇವುಗಳನ್ನೇ ಕ್ರಮವಾಗಿ ಹೇಮಕೂಟ ಹಾಗೂ ನಿಷಧ ಪರ್ವತಗಳ ವರ್ತಮಾನ ರೂಪ ಎಂದು ಹೇಳಬಹುದು. ಡಾ|| ಹರ್ಷೆ ತಮ್ಮ ಈ ಸಿದ್ಧಾಂತವನ್ನು ರೂಪಿಸಲು ಅನೇಕ ಪ್ರೌಢವಾದ ಯುಕ್ತಿಗಳನ್ನು ನೀಡಿದ್ದಾರೆ ಮತ್ತು ಈ ಮೇರುಪರ್ವತವೇ ಆರ್ಯರ ಮೂಲನಿವಾಸಸ್ಥಾನ ಎಂದೂ ಹೇಳಿದ್ದಾರೆ. ಅವರ ತರ್ಕಗಳಲ್ಲಿ ಸಾಕಷ್ಟು ತಿರುಳು ಇದೆ. ಮಂಗೋಲರ ಭಾಷೆಯಲ್ಲಿ 'ಅಲ್ತಾಈ' ಶಬ್ದದ ಅರ್ಥ "ಸುವರ್ಣಪರ್ವತ" ಎಂದು. ಪುರಾಣಗಳಲ್ಲಿ ಎಲ್ಲ ಕಡೆಯಲ್ಲಿಯೂ ಸಾಮಾನ್ಯವಾಗಿ ಮೇರುವನ್ನು ಸುವರ್ಣಪರ್ವತವೆಂದೇ ಕರೆದಿದ್ದಾರೆ–ಹಿರಣ್ಮಯ ಪರ್ವತ ಸೌವರ್ಣ ಪರ್ವತ ಇತ್ಯಾದಿ. ಕೇವಲ ಹೆಸರಿನ ಸಾಮ್ಯವಷ್ಟೇ ಅಲ್ಲ ಪುರಾಣಗಳಲ್ಲಿ ವರ್ಣಿತ ವಾಗಿರುವ ಮೇರುಪರ್ವತದ ಭೌಗೋಳಿಕ ವರ್ಣನೆ–ಅದರ ಸುತ್ತಮುತ್ತಲ ನದಿಗಳು ಹಾಗೂ ಸುತ್ತಲೂ ಹಬ್ಬಿರುವ ಪರ್ವತ ಶ್ರೇಣಿಗಳ ವರ್ಣನೆಯೂ ಈ ಸಾಮ್ಯವನ್ನು ಪುಷ್ಟೀಕರಿಸುವುದಕ್ಕೆ ಪ್ರಮಾಣಗಳಾಗುತ್ತವೆ. ಮೇರು ಪರ್ವತದ ಮೇಲೆ ದೇವತೆಗಳ ನಿವಾಸವೆಂದೂ ಹೇಳುತ್ತಾರೆ. ಆದುದರಿಂದ ಅದು ಭೂಲೋಕದ ಸ್ವರ್ಗವೆಂದು ಕರೆಯುತ್ತಾರೆ. ಈ ಎಲ್ಲ ಅಂಶಗಳ ಆಧಾರವನ್ನೂ ಹುಡುಕಬಹುದು. ಸಿದ್ಧಾಂತ ವೇನೆಂದರೆ ಮೇರುಪರ್ವತ ಹಿಮಾಲಯದ ಉತ್ತರದಲ್ಲಿದೆ. ಬಹುಮಟ್ಟಿಗೆ ಪಶ್ಚಿಮ ಸೈಬೀರಿಯಾದಲ್ಲಿರುವ ಅಲ್ತಾಈ ಪರ್ವತವೇ ಮೇರುವಾಗಿರಬೇಕು.

ಚತುರ್ದ್ವೀಪಾ ವಸುಮತಿ :

ಪುರಾಣಗಳಲ್ಲಿ ಹೇಳಿರುವ 'ಭುವನಕೋಶ'ದ ಸಮೀಕ್ಷೆಯನ್ನು ಮಾಡಿದಾಗ

ಅದರಲ್ಲಿ ವಸುಮತಿಯ ಎರಡು ರೀತಿಯ ವಿವರಣೆಗಳು ಇರುವಂತೆ ಕಂಡುಬರುತ್ತದೆ. ಪೃಥ್ವಿಯಲ್ಲಿ ಮೇರುಪರ್ವತದ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ದ್ವೀಪಗಳಿವೆ ಎಂಬುದು ಪ್ರಾಚೀನ ಅಭಿಪ್ರಾಯವಾಗಿತ್ತು. ಆದರೆ ಮುಂದೆ ಸಪ್ತದ್ವೀಪಾ ವಸುಮತಿಯ ಕಲ್ಪನೆಯು ಜಾಗೃತವಾಗಿ ಪ್ರಾಚೀನ ಕಲ್ಪನೆಯ ಜೊತೆಯಲ್ಲಿ ಈ ಹೊಸಕಲ್ಪನೆಯೂ ಸೇರಿ ವರ್ಣನೆಗಳಲ್ಲಿ ಕೊಂಚ ಗೊಂದಲವುಂಟಾದಂತೆ ಕಂಡಬರುತ್ತದೆ. ವಾಯುಪುರಾಣ ದಲ್ಲಿರುವ ಈ ಕೆಳಗಿನ ಉಕ್ತಿಯು ಚತುರ್ದ್ವೀಪಾ ವಸುಮತಿಯ ಕಲ್ಪನೆಯು ಪ್ರಾಚೀನ ಎಂಬುದನ್ನು ತೋರಿಸುತ್ತದೆ.

ಪದ್ಮಾಕರಾ ಸಮುತ್ಪನ್ನಾ ಪೃಥಿವೀ ಸಘನದ್ರುಮಾ ।
ತದಸ್ಯ ಲೋಕ–ಪದ್ಮಸ್ಯ ವಿಸ್ತರೇಣ ಪ್ರಕಾಶಿತಮ್ ॥ ೪೫ ॥
ಮಹಾದ್ವೀಪಾಸ್ತು ವಿಖ್ಯಾತಾಶ್ಚತ್ವಾರಃ ಪತ್ರಸಂಸ್ಥಿತಾಃ ।
ತತಃ ಕರ್ಣಿಕಾ ಸಂಸ್ಥಾನೋ ಮೇರುರ್ನಾಮ ಮಹಾಬಲಃ ॥ ೪೬ ॥

ವಾಯುಪುರಾಣ ಅಧ್ಯಾಯ ૩೪.

ಮೇರು ಪರ್ವತದಿಂದ ಮಹಾದ್ವೀಪಗಳ ಸ್ಥಿತಿಯು ಸಂಕೇತಗೊಂಡಿದೆ. ಇದಕ್ಕೆ ಪೂರ್ವದಿಕ್ಕಿನಲ್ಲಿ ಭದ್ರಾಶ್ವ ಮಹಾದ್ವೀಪ, ದಕ್ಷಿಣದಲ್ಲಿ ಜಂಬೂದ್ವೀಪ ('ಭರತವರ್ಷ' ಎಂಬ ಹೆಸರಿನಲ್ಲಿ ವರ್ಣಿತವಾಗಿದೆ), ಪಶ್ಚಿಮದಲ್ಲಿ ಕೇತುಮಾಲ ಮತ್ತು ಉತ್ತರದಲ್ಲಿ ಉತ್ತರಕುರು :

ಸ ತು ಮೇರುಃ ಪರಿವೃತೋ ಭುವನೈರ್ಭೂತಭಾವನೈಃ
ಯಸ್ಯೇ ಮೇ ಚತುರೋ ದೇಶಾ ನಾನಾ ಪಾರ್ಶ್ವೇಷು ಸಂಸ್ಥಿತಾಃ
ಭದ್ರಾಶ್ವಂ ಭಾರತಂ ಚೈವ ಕೇತುಮಾಲಂ ಚ ಪಶ್ಚಿಮೇ
ಉತ್ತರಾಶ್ಚೈವ ಕುರವಃ ಕೃತಪುಣ್ಯ–ಪ್ರತಿಶ್ರಯಾಃ ॥

—ಮತ್ಸ್ಯ. ೧೧೨ ಅ; ೪೩-೪೪ ಶ್ಲೋ.

ಈ ನಾಲ್ಕು ಮಹಾದ್ವೀಪಗಳ ವರ್ತಮಾನ ಸ್ಥಿತಿಯನ್ನು ಊಹಿಸಬಹುದು. 'ಭ್ರದ್ರಾಶ್ವ'ದ ಶಬ್ದಾರ್ಥ ಕಲ್ಯಾಣಕಾರಕವಾದ ಕುದುರೆ ಎಂದು. ಬಹುಶಃ ಇದು ಚೈನಾ ದೇಶವನ್ನು ಸೂಚಿಸುತ್ತದೆ. ಭಾರತ ನಮ್ಮ ಭರತವರ್ಷವೇ. ಒಂದು ಕಾಲಕ್ಕೆ ಭಾರತವು ಹಿಮಾಲಯದ ದಕ್ಷಿಣಕ್ಕಿದ್ದುದರಿಂದಲೇ ಹೈಮವತ ವರ್ಷವೆಂದೂ ಪ್ರಖ್ಯಾತ ವಾಗಿತ್ತು. ವಂಕ್ಷುನದಿ (ಆಕಸ್ ನದಿ-ಆಮೂ ನದಿ ಮತ್ತು ಸಿರ್ ನದಿ) ಯ ಪ್ರದೇಶವೇ ಕೇತುಮಾಲ ಮಹಾದ್ವೀಪ. ಇದು ಮೇರುಪರ್ವತದ ಪಶ್ಚಿಮದಲ್ಲಿದೆ. ಅಲ್ಲಾ ಈ ಪರ್ವತದಿಂದ ಹಿಡಿದು ಉತ್ತರದ ಸಮುದ್ರದವರೆಗೂ ಹಬ್ಬಿರುವ ವಿಶಾಲವಾದ ದೇಶವೇ ಉತ್ತರ ಕುರು. ಇದರ ಸೌಖ್ಯ ಸಮೃದ್ಧಿಗಳ ವಿಸ್ತೃತವಾದ ವರ್ಣನೆಯನ್ನು ಪುರಾಣ ಗಳಲ್ಲಿ ಓದಿದಾಗ ಇದೊಂದು ಕಾಲ್ಪನಿಕ ಸ್ವರ್ಗಭೂಮಿಯೋ ಎಂಬಂತೆ ಕಾಣುತ್ತದೆ. ಆದರೆ ಇದೊಂದು ಮೇರು ಪರ್ವತದ ಉತ್ತರದಲ್ಲಿದ್ದ ಒಂದು ವಾಸ್ತವಿಕ ದೇಶವಾಗಿತ್ತು. ಸೈಬೀರಿಯಾದ ಪೂರ್ವ ಹಾಗೂ ಉತ್ತರ ಭಾಗವನ್ನೂ ಈ ಪ್ರದೇಶ ಒಳಗೊಂಡಿತ್ತು. ಭೌಗೋಳಿಕ ಪರಿವರ್ತನೆಗಳಿಂದಾಗಿ ಈ ಭಾಗವು ಅತ್ಯಂತ ಶೀತಮಯವೂ, ಮಂಜಿ

ನಿಂದ ಕೂಡಿದುದೂ ಆಗಿರುವುದರಿಂದ ಇಲ್ಲಿ ಜನರು ವಾಸಮಾಡುವುದಕ್ಕೆ ಯೋಗ್ಯವಾಗಿಲ್ಲ. ಆದರೆ ಒಂದುಕಾಲಕ್ಕೆ ಇದು ಅತ್ಯಂತ ಸಮೃದ್ಧಶಾಲಿಯಾದ ಪ್ರದೇಶವಾಗಿತ್ತು. ಇಂದಿಗೂ ಆ ಪ್ರದೇಶದಲ್ಲಿ ದೊರಕುವ ಅಮೂಲ್ಯವಾದ ಖನಿಜಗಳಿಂದ ಅದರ ಗತವೈಭವವನ್ನು ಊಹಿಸಿಕೊಳ್ಳಬಹುದು. ಇದೇ ಪುರಾಣಗಳಲ್ಲಿ ನಿರ್ದೇಶಿತವಾಗಿರುವ ಚತುರ್ದ್ವೀಪಾ ವಸುಮತಿಯ ಅಸ್ತಿತ್ವ.

ಈ ಪ್ರತಿಯೊಂದು ಮಹಾದ್ವೀಪದಲ್ಲಿಯೂ ಒಂದೊಂದು ವಿಶಿಷ್ಟವಾದ ಪರ್ವತ, ಒಂದುನದಿ, ಒಂದು ವೃಕ್ಷಕುಂಜ, ಒಂದು ಸರೋವರ, ಒಂದು ವೃಕ್ಷ ಹಾಗೂ ಆರಾಧನೆಗಾಗಿ ಒಂದು ವಿಶಿಷ್ಟ ರೂಪಧಾರಿ ಭಗವಂತ ಇಷ್ಟೆಲ್ಲವೂ ಇದ್ದವು. ಇದರ ಫಲವಾಗಿ ಈ ಮಹಾದ್ವೀಪಗಳು ಎಲ್ಲ ವಿಧವಾದ ಭೌಗೋಳಿಕ ಸಾಧನಗಳಿಂದ ಸಂಪನ್ನವಾಗಿದ್ದವು. ಇದರ ಸ್ಥಿತಿಯನ್ನು ಈ ಕೆಳಗಿನ ನಕ್ಷೆಯಲ್ಲಿ ಕಾಣಿಸಿದೆ:

ಚತುಷ್ಪತ್ರೀ ಭುವನಪದ್ಮ

೭ ವಟವೃಕ್ಷ
೬ ಮತ್ಸ್ಯಭಗವಂತ
೫ ಮಹಾಭದ್ರ ಸರೋವರ
೪ ಸಾವಿತ್ರ ವನ
೩ ಸೋಮಾ ನದಿ
೨ ಶೃಂಗೀ ಪರ್ವತ
೧ ಉತ್ತರ ಕುರು

೧ ಕೇತು ಮಾಲ
೨ ಋಷಭ ಪಾರಿಮಾತ್ರ ಪರ್ವತ
೩ ಚಕ್ಷು(ವಕ್ಷು)ನದಿ
೪ ವೈಭ್ರಾಜ ವನ
೫ ಶೀತೋದ ಸರಸ್ಸು
೬ ವರಾಹ ಭಗವಂತ
೭ ಅಶ್ವತ್ಥ ವೃಕ್ಷ

ಮೇರುಪರ್ವತ
ಇಳಾವೃತ್ತವರ್ಷ

೧ ಭದ್ರಾಶ್ವ
೨ ದೇವಕೂಟ ಪರ್ವತ
೩ ಸೀತಾ ನದಿ
೪ ಚೈತ್ರರಥ ವನ
೫ ಅರುಣೋದ ಸರಸ್ಸು
೬ ಹಯಗ್ರೀವ ಭಗವಂತ
೭ ಭದ್ರ ಕಾದಂಬ ವೃಕ್ಷ

೧ ಭಾರತ ವರ್ಷ
೨ ಕೈಲಾಸ–ಹಿಮವತ್ ಪರ್ವತ
೩ ಅಲಕನಂದಾ
೪ ನಂದನವನ
೫ ಮಾನಸ ಸರೋವರ
೬ ಕಚ್ಛಪ ಭಗವಂತ
೭ ಜಂಬೂವೃಕ್ಷ

ಸಪ್ತದ್ವೀಪಾ ವಸುಮತಿ:

ಭುವನಕೋಶದ ವಿಷಯದಲ್ಲಿ ಪೃಥ್ವಿಯು ನಾಲ್ಕುದ್ವೀಪಗಳಿಂದ ಸುತ್ತುವರಿಯಲ್ಪಟ್ಟಿದೆ ಎಂಬುದೇ ಪ್ರಾಚೀನವಾದ ಅಭಿಪ್ರಾಯ; ಆದರೆ ಪುರಾಣಗಳ ಹೊಸ ಸಂಸ್ಕ

ರಣದಲ್ಲಿ ಸಪ್ತದ್ವೀಪಗಳ ಸಿದ್ಧಾಂತವನ್ನು ಒಪ್ಪಿಕೊಳ್ಳಲಾಗಿದೆ. ಈ ಏಳು ದ್ವೀಪಗಳ ಕ್ರಮದ ವಿಷಯದಲ್ಲಿ ಪುರಾಣಗಳಲ್ಲಿ ಐಕ್ಯಮತ್ಯ ಕಂಡುಬರುವುದಿಲ್ಲ; ಆದರೆ ಸಪ್ತದ್ವೀಪಾ ವಸುಮತಿಯ ಸಿದ್ಧಾಂತ ಎಲ್ಲ ಪುರಾಣಗಳ ಒಂದು ಅತ್ಯಂತ ಮಹತ್ವಪೂರ್ಣವಾದ ಹಾಗೂ ಮಾನ್ಯವಾದ ರಹಸ್ಯವಾಗಿದೆ. ಈ ಕಲ್ಪನೆಗನುಗುಣವಾಗಿ ಜಂಬೂದ್ವೀಪವು ಮಧ್ಯದಲ್ಲಿದ್ದು ಏಳು ದ್ವೀಪಗಳಿಂದ ಸುತ್ತುವರಿಯಲ್ಪಟ್ಟಿದೆ ಮತ್ತು ಈ ಪ್ರತಿಯೊಂದು ದ್ವೀಪವೂ ಒಂದೊಂದು ಸಮುದ್ರದಿಂದ ಬೇರೆ ಬೇರೆ ಮಾಡಲ್ಪಟ್ಟಿದೆ. ಇವುಗಳ ಹೆಸರು ಈ ರೀತಿ ಇದೆ :

(೧) ಜಂಬೂದ್ವೀಪ (ಕ್ಷಾರ ಸಮುದ್ರ ಅಥವಾ ಲವಣೋದಧಿಯಿಂದ ಸುತ್ತುವರಿಯಲ್ಪಟ್ಟಿದೆ)

(೨) ಪ್ಲಕ್ಷ (ಗೋಮೇದಕ) ದ್ವೀಪ (ಇಕ್ಷುರಸ ಸಮುದ್ರದಿಂದ ಸುತ್ತುವರಿಯಲ್ಪಟ್ಟಿದೆ)

(೩) ಶಾಲ್ಮಲಿದ್ವೀಪ (ಸುರಾ ಸಮುದ್ರದಿಂದ ಸುತ್ತುವರಿಯಲ್ಪಟ್ಟಿದೆ)

(೪) ಕುಶದ್ವೀಪ (ಘೃತಸಮುದ್ರ ವೇಷ್ಟಿತವಾಗಿದೆ)

(೫) ಕೌಂಚದ್ವೀಪ (ದಧಿಸಮುದ್ರ ವೇಷ್ಟಿತವಾಗಿದೆ)

(೬) ಶಾಕದ್ವೀಪ (ಕ್ಷೀರ ಸಮುದ್ರ ವೇಷ್ಟಿತವಾಗಿದೆ)

(೭) ಪುಷ್ಕರದ್ವೀಪ (ಸ್ವಾದು ಜಲಸಮುದ್ರ ವೇಷ್ಟಿತವಾಗಿದೆ)

ಇವುಗಳಲ್ಲಿ ಮೊದಲನೆಯ ಅಥವಾ ಮಧ್ಯದಲ್ಲಿರುವ ಜಂಬೂದ್ವೀಪ ಒಂದು ಲಕ್ಷ ಯೋಜನ ವಿಸ್ತಾರವುಳ್ಳದಾಗಿದೆ. ಪ್ರತಿಯೊಂದು ದ್ವೀಪವೂ ತನ್ನ ಹಿಂದಿನ ದ್ವೀಪಕ್ಕಿಂತ ಎರಡರಷ್ಟು ವಿಸ್ತಾರವನ್ನುಳ್ಳದಾಗಿದೆ. ಅಂದರೆ ಪ್ಲಕ್ಷದ್ವೀಪ ಎರಡು ಲಕ್ಷಯೋಜನ, ಇತ್ಯಾದಿ. ಈ ಮೇಲೆ ಹೇಳಿರುವ ದ್ವೀಪಗಳ ಈಗಿನ ಸ್ಥಿತಿಯನ್ನು ಹೇಳುವುದು ಬಹಳ ಅಸಾಧ್ಯವಾಗಿದೆ. ಕುಶದ್ವೀಪದ ವಿಷಯದಲ್ಲಿ ಕೆಲವು ಅಂಶಗಳನ್ನು ಸಂಕೇತಮಾತ್ರವಾಗಿ ಹೇಳಬಹುದು; ಆದರೆ ಶಾಕದ್ವೀಪದ ವಿಷಯದಲ್ಲಿ ಗ್ರೀಸ್, ಅರಬ್ ಮತ್ತು ಇರಾನ್ ಲೇಖಕರ ಗ್ರಂಥಗಳ ಸಹಾಯದಿಂದ ಅತ್ಯಂತ ಉಪಾದೇಯವೂ ನಿರ್ಣಾಯಕವೂ ಆದ ಸಾಮಗ್ರಿ ದೊರೆಯುತ್ತದೆ.

ಕುಶದ್ವೀಪ : ಕುಶ ಎಂಬ ಹೆಸರಿನ ದೇಶ ಹಾಗೂ ಅಲ್ಲಿನ ನಿವಾಸಿಗಳಾದ ಕುಶೀಯ ಜನರ ಉಲ್ಲೇಖವು ಅನೇಕ ಫಾರಸೀ ಶಿಲಾ ಶಾಸನಗಳಲ್ಲಿ ದೊರಯುತ್ತದೆ. ಉದಾಹರಣೆಗೆ ಡೇರಿಯಸ್ (ಕ್ರಿ. ಪೂ. ೫೨೨-೪೮೬) ನ ಹಮ್‌ದಾನ್ ಲೇಖನದಲ್ಲಿ ಅವನ ರಾಜ್ಯದ ಎಲ್ಲೆಗಳನ್ನು ಈ ರೀತಿಯಲ್ಲಿ ಹೇಳಲಾಗಿದೆ : ಸೋಗ್ದಿಯಾನಾ (ಸಿರ್‌ದರಿಯಾ ಮತ್ತು ಆಮೂದರಿಯಾ ನದಿಗಳ ಮಧ್ಯದ ಬುಖಾರ ಪ್ರಾಂತ) ದಿಂದ ಆ ಕಡೆ ದಂಡೆಯಲ್ಲಿರುವ ಶಕರ ದೇಶದಿಂದ-ಅಲ್ಲಿಂದ ಹಿಡಿದು, ಕುಶದತನಕ-ಸಿಂಧೂ (ಸಿಂಧು ಪ್ರದೇಶ—ಭಾರತ ವರ್ಷದ ಸಿಂಧೂನದಿಯು ಹರಿಯುವ ಪ್ರದೇಶ) ನದಿಯಿಂದ ಹಿಡಿದು ಸ್ಪರ್ದಾತನಕ (ಏಷ್ಯಾಮೈನರ್‌ನಲ್ಲಿರುವ ಸಾರ್‌ಡಿಸ್ ಪ್ರದೇಶ) ಇರುವ ಈ ಪ್ರದೇಶ ಅವನ ರಾಜ್ಯದ ಎಲ್ಲೆಕಟ್ಟು. ಇಲ್ಲಿ ಕುಶದೇಶದ ಹೆಸರನ್ನು

ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಕುಶದೇಶ ಇರುವುದಾದರೂ ಎಲ್ಲಿ ? ಕೆಲವು ವಿದ್ವಾಂಸರು ಇಥಿಯೋಪಿಯಾದೊಂದಿಗೆ ಇದನ್ನು ಗಂಟುಹಾಕುತ್ತಾರೆ; ಮತ್ತೆ ಕೆಲವರು ಈಜಿಪ್ಟಿನ ಮಧ್ಯಭಾಗದಲ್ಲಿದೆ ಎಂದು ಹೇಳುತ್ತಾರೆ. ಪರ್ಶಿಯಾದ ಪ್ರಾಚೀನ ಸಾಮ್ರಾಟರ ರಾಜ್ಯಗಳ ಪ್ರಾಂತ್ಯಗಳ ಗಣನೆಯಲ್ಲಿ ಕುಶ ಹಾಗೂ ಮುದ್ರಾಯ (ಈಜಿಪ್ಟ್ ಅಥವಾ ಮಿಸ್ರದೇಶ) ಈ ಎರಡೂ ಪ್ರಾಂತಗಳನ್ನು ಬೇರೆ ಬೇರೆ ಎಂದು ಪರಿಗಣಿಸಿದ್ದಾರೆ. ಆದುದರಿಂದ ಕುಶಪ್ರದೇಶವನ್ನು ಈಜಿಪ್ಟಿನಿಂದ ಹೊರಗಡೆ ಆಫ್ರಿಕಾದ ಪೂರ್ವೋತ್ತರಭಾಗದಲ್ಲೆಲ್ಲೋ ಇತ್ತು ಎಂದು ಭಾವಿಸುವುದು ಉಚಿತವೆಂದು ಕಾಣುತ್ತದೆ. ಈ ಕುಶದೇಶವೇ ಪುರಾಣಗಳಲ್ಲಿ ಹೇಳಿರುವ ಕುಶದ್ವೀಪವಾಗಿರಬಹುದು.

ಶಕದ್ವೀಪ ಅಥವಾ ಶಾಕದ್ವೀಪ :

ಶಕದ್ವೀಪ ಸಂಬಂಧವಾದ ಪೌರಾಣಿಕ ಸಾಮಗ್ರಿ ಅತ್ಯಂತ ಮಹತ್ವಪೂರ್ಣವಾದುದು ಹಾಗೂ ಭೌಗೋಳಿಕ ತಥ್ಯಾಂಶಗಳಿಂದ ಕೂಡಿದುದೂ ಆಗಿದೆ. ಇದರಲ್ಲಿ ಪುರಾಣದಲ್ಲಿ ಹೇಳಿರುವಂತೆ ಏಳು ಪರ್ವತಗಳು ಮತ್ತು ಏಳು ನದಿಗಳು ಇವೆ. ಮತ್ಸ್ಯ ಪುರಾಣವು (ಅ.೧೨೧) ಇವಕ್ಕೆ ಎರಡೆರಡು ಹೆಸರುಗಳನ್ನು ಹೇಳಿದೆ. ಈ ದ್ವಿವಿಧ ರೀತಿಯ ಹೆಸರಿನ ರಹಸ್ಯವೇನೆಂದರೆ ಒಂದು ಹೆಸರು ಭಾರತೀಯ ಪುರಾಣಗಳಲ್ಲಿರುವುದು, ಮತ್ತೊಂದು ವಿದೇಶೀಯ (ಅಂದರೆ ಶಕೀಯ=ಶಕ ಜಾತಿಯ ಜನರಿಂದ ಕೊಡಲ್ಪಟ್ಟುದು)ವಾದುದು. ಪುರಾಣಗಳಲ್ಲಿ ಈ ದ್ವೀಪದ ವಿಷಯದಲ್ಲಿ ಕೊಟ್ಟಿರುವ ವಿವರವಾದ ವರ್ಣನೆಗಳ ಆಧಾರಗಳಿಂದ ಈ ದ್ವೀಪವನ್ನು ಅತ್ಯಂತ ಪ್ರಾಮಾಣಿಕವಾಗಿ ಗುರುತಿಸಬಹುದು.

ಶಕದ್ವೀಪದಲ್ಲಿ ಏಳು ಪರ್ವತಗಳು, ಏಳು ವರ್ಷ(ದೇಶ)ಗಳು ಮತ್ತು ಏಳು ನದಿಗಳ ಉಲ್ಲೇಖ ಸಿಗುತ್ತದೆ(ಮತ್ಸ್ಯ-೬.೧೨೧). (೧) ಮೇರು ಪರ್ವತ(ಇನ್ನೊಂದು ಹೆಸರು ಉದಯ ಪರ್ವತ),(೨)ಜಲಧಾರ ಪರ್ವತ (ಚಂದ್ರ ಪರ್ವತ, ವಿಷ್ಣುಪುರಾಣದಲ್ಲಿ ಜಲಧಾರ], (೩) ದುರ್ಗಶೈಲ (ನಾರದ ಪರ್ವತ), (೪) ಶ್ಯಾಮ ಪರ್ವತ (ದುಂದುಭಿ), (೫) ಅಸ್ತಗಿರಿ (ಸೋಮಕ), (೬) ಆಂಬಿಕೇಯ (ಸುಮನಸ್), (೭) ವಿಭ್ರಾಜ (ಕೇಶವ). ವಿಷ್ಣು ಪುರಾಣದಲ್ಲಿ ಇವುಗಳಲ್ಲಿಯೇ ಯಾವುದೋ ಎರಡು ಪರ್ವತಗಳಿಗೆ ರೈವತಕ ಹಾಗೂ ಕೇಶರಿ ಹೆಸರನ್ನು ಕೊಟ್ಟಿದೆ.

ಶಕದ್ವೀಪದ ಏಳು ವರ್ಷಗಳ ಹೆಸರು : (೧) ಉದಯವರ್ಷ (ಉದಯ ಪರ್ವತದ ಪ್ರದೇಶ) (೨) ಸುಕುಮಾರ ವರ್ಷ (ಶೈಶಿರ ; ಜಲಧಾರ ಪರ್ವತ ಪ್ರದೇಶ). (೩)ಕೌಮಾರ(ಸುಖೋದಯ; ನಾರದ ಪರ್ವತ ಪ್ರದೇಶ,) (೪) ಮಣಿಚಕ (ಆನಂದಕ; ಶ್ಯಾಮಪರ್ವತ ಪ್ರದೇಶ) (೫) ಕುಸುಮೋತ್ಕರ (ಅಸಿತ; ಸೋಮಕ ಪರ್ವತ ಪ್ರದೇಶ), (೬) ಮೈನಾಕ (ಕ್ಷೇಮಕ ; ಆಂಬೀಕೆಯ ಪರ್ವತ ಪ್ರದೇಶ), (೭) ವಿಭ್ರಾಜ (ಧ್ರುವ;ವಿಭ್ರಾಜ ಪರ್ವತ ಪ್ರದೇಶ).

ಶಕದ್ವೀಪದ ಏಳು ನದಿಗಳು: (೧) ಸುಕುಮಾರಿ (ಮುನಿತಪ್ತ) (೨) ಕುಮಾರಿ (ತಪಃಸಿದ್ಧ), (೩) ನಂದಾ (ಪಾವನಿ). (೪) ಶಿವಿಕಾ (ದ್ವಿವಿಧಾ), (೫) ಇಕ್ಷು (ಕುಹೂ), (೬) ವೇಣುಕ (ಅಮೃತ) (೭) ಸುಕೃತ (ಗಭಸ್ತಿ).

ಶಕದ್ವೀಪದ ಈ ಭೂಗೋಳ 'ಹೆರೊಡೋಟಸ್' ಎಂಬ ಗ್ರೀಕ್ ಲೇಖಕನು ವರ್ಣಿಸಿರುವ ಶಕರ ನಿವಾಸಸ್ಥಾನವನ್ನು ಸಂಪೂರ್ಣವಾಗಿ ಹೋಲುತ್ತದೆ ನಂದ ಲಾಲ್ ಡೇ ತನ್ನ ಪುಸ್ತಕದಲ್ಲಿ ಪೌರಾಣಿಕವಾದ ಅನೇಕ ಹೆಸರುಗಳನ್ನು ಗ್ರೀಕ್ ಹೆಸರು ಗಳೊಂದಿಗೆ ಈ ರೀತಿ ಗುರುತಿಸಿದ್ದಾನೆ:

ಶಕದ್ವೀಪ (ಸಂಸ್ಕೃತ)—ಸೀದಿಯ (ಗ್ರೀಕ್); ಕುಮುದು (ಸಂ)-ಕೌಮೇದೇಇ (ಗ್ರೀ); ಸುಕುಮಾರ (ಸಂ)-ಕೋಮಾರೋಇ (ಗ್ರೀ) ; ಜಲಧಾರ (ಸಂ)– ಸಲ್‌ತೆರೋಇ (ಗ್ರೀ) ; ಇಕ್ಷು (ಸಂ)– ಆಕ್‌ಸಸ್‌ನದಿ (ಗ್ರೀ) ಶಾಮಗಿರಿ (ಸಂ)– ಮುಸ್ತಾಮೂಗ (ಅಂದರೆ ಕರಿಯ ಪರ್ವತ, ಅವೆಸ್ತ್ರದಲ್ಲಿ ನಿರ್ದಿಷ್ಟವಾಗಿ ಹೇಳಿರುವ ಶ್ಯಾಮಕ ಗಿರಿಯಿಂದ ಭಿನ್ನವಲ್ಲ (ಗ್ರೀ) ; ಸೀತಾ (ಸಂ)-ಸಿರ್‌ದರಿಯಾ (ಗ್ರೀ) ; ಮೂಗ (ಸಂ)– ಮರ್‌ಗಿ ಆನ (ಈಗಿನ 'ಮರ್ವ್') ; ಮಶ್ಕ (ಸಂ)- ವಸ್ಸಗೇತಾಇ (ಗ್ರೀ).

ಶಕದ್ವೀಪದ ಜಾತಿಗಳು:

ಶಕದ್ವೀಪದಲ್ಲಿ ನಾಲ್ಕು ಜಾತಿಗಳು ವಾಸಿಸುತ್ತಿದ್ದವು ಮತ್ತು ಇವು ಭಾರತದ ಚತುರ್ವರ್ಣಗಳ ಪ್ರತಿನಿಧಿಗಳಾಗಿದ್ದವು ಎಂದು ಭವಿಷ್ಯೋತ್ತರ ಪುರಾಣದಲ್ಲಿ ಹೇಳಿದೆ :

ತತ್ರ ಪುಣ್ಯಾ ಜನಪದಾಶ್ಚತುರ್ವರ್ಣಸಮನ್ವಿತಾಃ
ಮಗಾಶ್ಚ ಮಗಗಾಶ್ಚೈವ ಗಾನಗಾ ಮಂದಗಸ್ತಥಾ ॥
ಮಗಾಃ ಬ್ರಾಹ್ಮಣ ಭೂಯಿಷ್ಟಾ ಮಗಗಾಃ ಕ್ಷತ್ರಿಯಾಃ ಸ್ಮೃತಾಃ ।
ವೈಶ್ಯಾಸ್ತು ಗಾನಗಾ ಜ್ಞೇಯಾಃ ಶೂದ್ರಾಸ್ತೇಷಾಂ ತು ಮಂದಗಾಃ ॥

—ಭವಿಷ್ಯ ೧–೧೩೯

ಭವಿಷ್ಯ ಪುರಾಣದ ಮಾತುಗಳ ಆಧಾರದ ಮೇಲೆ ಶಕ ದ್ವೀಪದ ಜಾತಿಗಳು ಈ ನಾಲ್ಕು ವರ್ಣಗಳಲ್ಲಿ ವಿಭಕ್ತವಾಗಿವೆ. ಮಗ ಬ್ರಾಹ್ಮಣ ವರ್ಣದವರು, ಮಗಗರು ರಾಜನ್ಯ ಕ್ಷತ್ರಿಯರು, ಗಾನಗರು ವೈಶರು ಹಾಗೂ ಮಂದಗರು ಶೂದ್ರರು. ಮಹಾ ಭಾರತದಲ್ಲಿ ಜನರ ಹೆಸರಿನಲ್ಲಿ ಸ್ವಲ್ಪ ಭಿನ್ನತೆಯೇ ಕಂಡುಬರುತ್ತದೆ :

ತತ್ರ ಪುಣ್ಯಾ ಜನಪದಶ್ಚತ್ವಾರೋ ಲೋಕ ಸಂಮಿತಾಃ ।
ಮಗಾಶ್ಚ ಮಶಕಾಶ್ಚೈವ ಮಾನಸಾ ಮಂದಗಾಸ್ತಥಾ ॥

—ಮಹಾಭಾರತ ೬.೧೨.೩೩

ಮಹಾ ಭಾರತದಲ್ಲಿ ಹೇಳಿರುವ ಈ ಹೆಸರುಗಳಲ್ಲಿ ಆದಿ ಮತ್ತು ಅಂತ್ಯನಾಮಗಳು ಮತ್ಸ್ಯ ಪುರಾಣದಲ್ಲಿ ಹೇಳಿರುವಂತೆಯೇ ಇವೆ. ಕೇವಲ ಮಧ್ಯದ ಎರಡು ಹೆಸರು ಗಳಲ್ಲಿ ಮಾತ್ರ ಭಿನ್ನತೆಯಿದೆ. 'ಮಗಗಾ' ಸ್ಥಾನದಲ್ಲಿ 'ಮಶಕಾ' ಪಾಠ ಸಿಗುತ್ತದೆ. ಮತ್ತು 'ಗಾನಗಾ' ಸ್ಥಾನದಲ್ಲಿ 'ಮಾನಸಾ' ಪಾಠವಿದೆ. ಈ ನಾಲ್ಕು ಹೆಸರುಗಳ ಭಿನ್ನ

ಪಾಠಗಳನ್ನು ಮಹಾಭಾರತದ ಪೂನಾ ಸಂಸ್ಕರಣದಲ್ಲಿ ಕೊಟ್ಟಿದೆ. (ಕ್ರಿಟಿಕಲ್ ಎಡಿಷನ್-ಭಾಗ ೭, ಪುಟ ೬೦). ಈ ನಾಲ್ಕು ಜಾತಿಗಳನ್ನೂ ಶಕ ದ್ವೀಪದ ನಾಲ್ಕು ವಿಭಿನ್ನ ಜಾತಿಗಳೊಂದಿಗೆ ಬಹಳ ಸುಲಭವಾಗಿ ಹೋಲಿಸಬಹುದು. 'ಶಕ' ಶಬ್ದ ಅನೇಕ ಜಾತಿಗಳನ್ನೊಳಗೊಂಡ ಒಂದು ಸಾಮುದಾಯಿಕ ಜಾತಿಯ ಹೆಸರಾಗಿತ್ತು. ಕ್ರಿಸ್ತಶಕದ ಆದಿಯಲ್ಲಿ ಭಾರತದಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿದ ಕುಶಾನರು ಕೂಡ ಮೂಲತಃ ಈ ಜಾತಿಗೆ ಸಂಬಂಧಿಸಿದ್ದರು. ಶಕರು ತಮ್ಮ ಜೀವಿತದ ಆರಂಭದಲ್ಲಿ ಅಲೆಮಾರಿಗಳಾಗಿದ್ದು ಒಂದೇ ಸ್ಥಳದಲ್ಲಿ ಸ್ಥಿರವಾಗಿ ನಿಲ್ಲದೆ ಫಲವತ್ತಾದ ಭೂಮಿಯನ್ನು ಹುಡುಕಿಕೊಂಡು ಅಲೆದಾಡುತ್ತಿದ್ದರು. ಒಂದು ಕಾಲಕ್ಕೆ ಮಧ್ಯ ಏಷ್ಯಾದಲ್ಲಿಯೂ ಇದ್ದ ಈ ಜನ ಅಲ್ಲಿಂದ ಹೊರಟು ಇರಾನಿನ (ಪರ್ಶಿಯ) ಬಳಿಯಿರುವ ಕ್ಯಾಸ್ಪಿಯನ್ (ಕಾಶ್ಯಪೀಯ) ಸಮುದ್ರದ ತೀರದಲ್ಲಿರುವ ಭೂಭಾಗದಲ್ಲಿ ಇರತೊಡಗಿದ್ದರು. ಒಂದು ಕಾಲಕ್ಕೆ ಯೂರೇಶಿಯಾ ದ್ವೀಪದಲ್ಲಿ ದುನಾಈ (ಡ್ಯಾನ್ಯೂಬ್) ನದಿಯಿಂದ ಹಿಡಿದು ತ್ಯಾನ್ ಶಾನ್-ಅಲ್ತಾಈ (ಪರ್ವತಶ್ರೇಣಿ) ತನಕ ಹಬ್ಬಿದ್ದ ಶಕ ಜಾತಿಯ ಭೂಮಿಯೇ ಭಾರತೀಯ ಪರಿಭಾಷೆಯಲ್ಲಿ 'ಶಕದ್ವೀಪ'. ಹಳೆ ಇರಾನಿ ಶಬ್ದದ ಪ್ರಕಾರ ಇದನ್ನು 'ಶಕಾನ್‌ಬೇಇಜಾ' (ಶಕಾನಾಂ ಬೀಜಃ ?) ಅಥವಾ ಪೂರ್ವಭಾಷೆಗನುಸಾರವಾಗಿ ಶಕಸ್ತಾನವೆಂದೂ ಕರೆಯಬಹುದು; ಆದರೆ ಕ್ರಿ. ಪೂ. ೭ನೇ ಶ.ದಲ್ಲಿ ಶಕರು ಅಲ್ಲಿ ನೆಲಸಿದ ಕಾರಣ ಇರಾನಿನ ಪೂರ್ವಭಾಗವನ್ನು ಶಕಸ್ತಾನ ಅಥವಾ ಸೀಸ್ತಾನ ಎಂದು ಕರೆಯಲಾಯಿತು. ಆದ್ದರಿಂದ ಕಾಶ್ಯಪ ಸಮುದ್ರದ ತೀರ ಪ್ರದೇಶವನ್ನು ಆದಿ-ಶಕಸ್ತಾನ ಎಂದು ಕರೆಯಬೇಕು. ಪುರಾಣಗಳಲ್ಲಿ ಹೇಳಿರುವ ಶಕ (ಅಥವಾ ಶಾಕ ?) ದ್ವೀಪ ಈ ಭೂಭಾಗವೇ ಆಗಿದೆ. ಇದನ್ನೇ ಮುಂದೆ ಸಪ್ರಮಾಣಿಕವಾಗಿ ಸಿದ್ಧಾಂತ ಮಾಡಲಾಗಿದೆ.

(ಅ) ಶಕದ್ವೀಪದ ಮೊದಲ ಜಾತಿ ಪುರಾಣದಲ್ಲಿ ಹೇಳಿರುವಂತೆ ಮಗ (ಅಥವಾ ಮಕ). ಇದರ ಎರಡು ಪಾಠಾಂತರಗಳೂ ದೊರೆಯುತ್ತವೆ-ಸಗ ಮತ್ತು ಮದ ಎಂಬ ಶಬ್ದಗಳು. 'ಸಗ' ಶಬ್ದವು 'ಶಕ' ಶಬ್ದದ ಪ್ರಾಕೃತ ರೂಪಾಂತರ ಹಾಗೂ ಮದ 'ಮಾದ' ಶಬ್ದದ ರೂಪಾಂತರವೇ ಹೊರತು ಬೇರೆಯಲ್ಲ. ಮಾದ ಒಂದು ಇರಾನಿನ ಜಾತಿಯಾಗಿತ್ತು. ಅಸ್ಸೀರಿಯನ್ನರ (ಅಸುರಿಯಾ) ಕ್ರಿ. ಪೂ. ಒಂಬತ್ತನೆಯ ಶತಮಾನದ ಅಭಿಲೇಖಗಳಲ್ಲಿ ಇದರ ಉಲ್ಲೇಖವಿದೆ. ಇರಾನಿನ ಋತ್ವಿಜ ಅಥವಾ ಪುರೋಹಿತ ಶಬ್ದದ ಇರಾನೀ ಸಂಜ್ಞೆಯೇ ಮಗುಸ್, ಮತ್ತು ಈ ಶಬ್ದದ ಸಂಸ್ಕೃತರೂಪವೇ 'ಮಗ' ಶಬ್ದ. ಪುರಾಣಗಳಲ್ಲಿ 'ಮಗ' ಶಬ್ದದ ವ್ಯುತ್ಪತ್ತಿಯನ್ನು ಈ ರೀತಿ ಕೊಡಲಾಗಿದೆ—ಮಂ ಮಕರಂ= ಸೂರ್ಯ, ಗಚ್ಛತೀತಿ ಮಗಃ ಅಂದರೆ ಸೂರ್ಯೋಪಾಸಕ ಎಂದು. ಅವೆಸ್ತಾದಲ್ಲಿ 'ಮಗುಸ್' ಶಬ್ದದ ಪ್ರಯೋಗವನ್ನು ಬಹುವಾಗಿ ಹೇಳಿಲ್ಲ. ಇದರ ಸ್ಥಾನದಲ್ಲಿ ಅಥ್ರುವನ್, ಏಥ್ರುಗ ಅಥವಾ ಏಥ್ರುಪತಿ ಶಬ್ದದ ಬಹುಳವಾದ

ಪ್ರಯೋಗವು ಇದರ ಋತ್ವಿಜ ಅರ್ಥದ ಅಭಿವ್ಯಂಜನೆಯನ್ನು ಮಾಡುತ್ತದೆ. ಯಜ್ಞಗಳಲ್ಲಿ ಇವುಗಳ ಈ ಕಾರ್ಯ ಅತ್ಯಂತ ಮಹತ್ವದ್ದಾಗಿತ್ತು ಮತ್ತು ಇದಲ್ಲದೆ ಅವು ಅರ್ಥ ಹಾಗೂ ನ್ಯಾಯದ ಆಡಳಿತದಲ್ಲಿ ಅಧಿಕಾರಿಯ ರೂಪದಲ್ಲೂ ಕಂಡುಬರುತ್ತವೆ. ಇದೇ ಇರಾನೀ 'ಮಗುಸ್' ಶಬ್ದವನ್ನು ಗ್ರೀಕರಲ್ಲಿ 'ಮಗಿ' ಅಥವಾ 'ಮಾಗಿ' ಅಥವಾ 'ಮೇಗಾಸ್' ರೂಪದಲ್ಲಿ ಗ್ರಹಿಸಿದ್ದಾರೆ. ಬೈಬಲ್‌ನಲ್ಲಿಯೂ ಕೂಡ ಇದರ ಪ್ರಯೋಗವನ್ನು 'ಪೂರ್ವದ ವಿದ್ವಜ್ಜನ' ಎಂಬರ್ಥದಲ್ಲಿ ಮಾಡಲಾಗಿದೆ. ಈ ಜನರು ಕ್ರೈಸ್ತನು ಹುಟ್ಟಿದ ಮೇಲೆ ಮಹತ್ತರವಾದ ಭವಿಷ್ಯವಾಣಿಯನ್ನು ಮಾಡುವುದಕ್ಕಾಗಿ ಅವನ ತಂದೆಯ ಬಳಿಗೆ ಹೋಗಿದ್ದರು. ಆದ್ದರಿಂದ ಫಲತಃ 'ಮಹಾಃ ಬ್ರಾಹ್ಮಣಭೂಯಿಷ್ಠಾಃ' ಎಂಬ ವಾಕ್ಯ ಮಗ ಜನರ ಸ್ವರೂಪದ ಯಥಾರ್ಥ ಪ್ರಸಾಪಕ ವಾಕ್ಯವಾಗಿದೆ.

ಈ ಮಗ ಜನರೇ ಭಾರತ ವರ್ಷದಲ್ಲಿ ಸಹ ಕುಶಾನ ರಾಜರ ಸಂಸರ್ಗಕ್ಕೆ ಬಂದಿರಬೇಕು ಎಂದು ಭಾವಿಸುವುದು ಐತಿಹಾಸಿಕ ದೃಷ್ಟಿಯಿಂದ ಸುಸಂಗತವೆಂದು ಕಾಣುತ್ತದೆ. ಗರುಡಪುರಾಣಕ್ಕನುಸಾರವಾಗಿ ಭಾರತವರ್ಷಕ್ಕೆ ಇವರನ್ನು ಕರೆತಂದ ಶ್ರೇಯಸ್ಸು ಶ್ರೀಕೃಷ್ಣನ ಮಗನಾದ ಸಾಂಬನಿಗೆ ಸಲ್ಲುತ್ತದೆ. ಇವನು ತನ್ನ ಕುಷ್ಠರೋಗ ನಿವಾರಣೆಗಾಗಿ ಚಂದ್ರಭಾಗಾನದಿ (ಚೀನಾಬ್)ಯ ದಡದಲ್ಲಿ ಸೂರ್ಯ ಮಂದಿರವನ್ನು ಕಟ್ಟಿಸಿದ; ಆದರೆ ಭಾರತದಲ್ಲಿ ಅದಕ್ಕೆ ಯೋಗ್ಯನಾದ ಪೂಜಾರಿಯು ಸಿಗದಿರಲು ಬ್ರಾಹ್ಮಣರನ್ನು ಗರುಡನ ಮೂಲಕ ಶಕದ್ವೀಪದಿಂದ ಕರೆಸಿ ಅಲ್ಲಿ ನೆಲಸುವಂತೆ ಮಾಡಿದ. ಆಗಿನಿಂದ ಭಾರತದಲ್ಲಿ ಸೂರ್ಯನ ತಾಂತ್ರಿಕ ಪೂಜೆಯ ಅವತಾರವಾಯಿತು.

(ಆ) ಗೋಗ್ ಹಾಗೂ ಮಗೋಗ್ ಎಂಬ ಉಗ್ರ ಆಕ್ರಮಣಕಾರೀ ಪ್ರವೃತ್ತಿಯುಳ್ಳ ಶಕ ಜಾತಿಗಳು ಇದ್ದವು. ಇವರ ಆಕ್ರಮಣಗಳಿಂದ ಇಡೀ ಇರಾನಿನ ಭೂಭಾಗದ ಜನ ಈ ಜಾತಿಗಳ ಹೆಸರನ್ನು ಕೇಳಿದರೆ ಸಾಕು, ಗಡ ಗಡನೆ ನಡುಗುತಿದ್ದರು. ಈ ಜಾತಿಯವರು ಅತ್ಯಂತ ಕ್ರೂರಿಗಳೂ ಅತ್ಯಾಚಾರಿಗಳೂ ಹಿಂಸಾತ್ಮಕ ಪ್ರವೃತ್ತಿಯವರೂ ಆಗಿದ್ದರು. ಯಹೂದಿಗಳ ಹಳೆಯ ಒಡಂಬಡಿಕೆ(old Testament)ಯಲ್ಲಿ ಇದೇ ಹೆಸರುಗಳಿಂದ ಈ ಜಾತಿಗಳ ಉಲ್ಲೇಖ ಕಂಡು ಬರುತ್ತದೆ; ಕುರಾನಿನಲ್ಲಿಯೂ ಇದೇ ಶಬ್ದಗಳು ಸ್ವಲ್ಪ ವಿಕೃತಗೊಂಡು ಯಾಜುಜ್ ಹಾಗೂ ಮಾಜುಜ್ ರೂಪದಲ್ಲಿ ಉಲ್ಲೇಖಗೊಂಡಿರುವುದು ಕಂಡುಬರುತ್ತದೆ. ಗೋಗ್ ಮತ್ತು ಮಗೋಗ್ ಯಹೂದಿ ಭಾಷೆಯ ಶಬ್ದಗಳು. ಇವುಗಳ ಅರ್ಥ 'ಹೊರಗಿನ ಬರ್ಬರ ಜಾತಿಗಳು' ಎಂದು ಆ ಭಾಷೆಯಲ್ಲಿ ಆಗುತ್ತದೆ. ಈ ಶಬ್ದಗಳೊಂದಿಗೆ ಪುರಾಣಗಳಲ್ಲಿ ಉಲ್ಲೇಖಗೊಂಡಿರುವ 'ಗಾನಗ, ಅಥವಾ 'ಗನಕ' ಮತ್ತು 'ಮಗಗ' ಶಬ್ದಗಳನ್ನು ಹೋಲಿಸಿದರೆ ಅದರಲ್ಲಿ ಅನೌಚಿತ್ಯವೇನೂ ಕಂಡುಬರುವುದಿಲ್ಲ. ಈ ಕ್ರೂರಿಗಳೂ, ಯುದ್ಧಪ್ರಿಯರೂ, ಅಲೆಮಾರಿಗಳೂ ಆದ ಈ ಜಾತಿಗಳನ್ನು ಶಕದ್ವೀಪದ ಕ್ಷತ್ರಿಯರು ಹಾಗೂ ವೈಶ್ಯರು ಎಂದು ಹೇಳುವುದು ಸರ್ವಥಾ ಯೋಗ್ಯವೆನಿಸುವುದು, ಪುರಾಣಗಳಲ್ಲಿ ನಿರ್ದಿಷ್ಟವಾಗಿ ಹೇಳಿರುವ 'ಮಂದಗ' ಜಾತಿಯು 'ಮಾದ' ಹೆಸರಿನಿಂದ

ಪ್ರಸಿದ್ಧವಾಗಿರುವ ಇರಾನ್ ಜಾತಿಯು ಭಾರತೀಯ ಪ್ರತಿನಿಧಿಯೂಗಿದೆ. ಇವರನ್ನು ಇರಾನಿನಿಂದ ದೂರ ಪ್ರಾಚ್ಯದಿಂದ ಬಂದ ಜನಾಂಗವೆಂದು ಹೇಳುತ್ತಾರೆ. ಈ 'ಮಾದ' ಜನರು ಐರೋಪ್ಯ ಇತಿಹಾಸದಲ್ಲಿ 'ಮಿಡೀಸ್' ಹೆಸರಿನಲ್ಲಿ ತಮ್ಮ ಆಕ್ರಮಣಕಾರೀ ಪ್ರವೃತ್ತಿಗಳಿಂದ ಪ್ರಸಿದ್ಧರಾಗಿದ್ದಾರೆ. ಹೆರೊಡೋಟಸ್ ಎಂಬ ಗ್ರೀಕ್ ಇತಿಹಾಸ ಕಾರನೂ ಕೂಡ ಶಕರಲ್ಲಿ ನಾಲ್ಕು ಜಾತಿಗಳಿವೆಯೆಂದು ಹೇಳಿದ್ದಾನೆ. ಹಿಂದೆ ಹೇಳಿರುವ ಭಾರತೀಯರೊಂದಿಗೆ ಇವರ ಹೋಲಿಕೆ ಇದೆ.

(ಇ) ಕ್ಯಾಸ್ಪಿಯನ್ ಸಮುದ್ರದ ವಿಷಯದಲ್ಲಿ ಹೆಚ್ಚಿನ ಪರಿಚಯ ಅಗತ್ಯ ವಾಗಿದೆ. ಇದು ಇಂದು ಪ್ರಪಂಚದಲ್ಲೆಲ್ಲ ಅತ್ಯಂತ ವಿಸ್ತಾರವಾದ ದೊಡ್ಡ ಅಂತ ರಾಷ್ಟ್ರೀಯ ಸಮುದ್ರವಾಗಿದೆ. ಇದರ ಕ್ಷೇತ್ರಫಲ ೧,೬೯,೦೦೦ ಚದರ ಮೈಲಿಗಳು. ಯಾವುದೋ ಒಂದು ಪ್ರಾಚೀನ ಯುಗದಲ್ಲಿ ಇದು ತನಗೆ ಪಶ್ಚಿಮದಲ್ಲಿರುವ ಕಪ್ಪು (ಕೃಷ್ಣ)ಸಮುದ್ರದಿಂದ ಹಿಡಿದು ಸೈಬೀರಿಯಾದ ಉತ್ತರ ಭಾಗದಲ್ಲಿ ಹಬ್ಬಿರುವ ಆರ್ಕಟಿಕ್ ಸಮುದ್ರದ ತನಕ ಹಬ್ಬಿತ್ತು. ಅತ್ಯಂತ ವಿಸ್ತೃತವಾದ ಕ್ಷೇತ್ರಫಲವನ್ನುಳ್ಳ ಉನ್ಮುಕ್ತ ವಾದ ಈ ಮಹಾಸಾಗರವು ಉತ್ತರದಲ್ಲಿ ಹರಡಿರುವ ಸೈಬೀರಿಯಾದಾ ಹುಲ್ಲುಗಾವಲಿನ (ಇಂಗ್ಲಿಷಿನಲ್ಲಿ ಇದನ್ನು ಸ್ಟೆಪ್ಪೀಸ್ ಎಂದು ಕರೆಯುತ್ತಾರೆ) ಪ್ರದೇಶದ ಮೂಲಕ ಹರಿಯು ತ್ತಿತ್ತು. ಆ ಯುಗದಲ್ಲಿ ಇದು ನಿಜಕ್ಕೂ ಒಂದು ಮಹಾಸಾಗರವಾಗಿತ್ತು. ಮಹಾನ್ ಹಿಮಯುಗದಲ್ಲಿ ಇದರ ಕ್ಷೇತ್ರಫಲ ಕಡಿಮೆಯಾಗುತ್ತಿದ್ದುದರಿಂದ ಕಪ್ಪು ಸಮುದ್ರ (ಕೃಷ್ಣಸಾಗರ) (ಪಶ್ಚಿಮದಲ್ಲಿ) ಹಾಗೂ ಅರಾಲ್ ಸಾಗರ (ಪೂರ್ವದಲ್ಲಿ) ದೊಂದಿಗಿದ್ದ ಇದರ ಭೌಗೋಳಿಕ ಸಂಬಂಧ ಕಡಿದುಹೋಯಿತು. ಇದು ಅತ್ಯಂತ ವಿಶಾಲವಾದ ಮಹಾಸಾಗರವಾದುದರಿಂದ ಇದು ಯೂರೇಶಿಯನ್ ಭೂಮಧ್ಯಸಾಗರ (Eurasian meditaranean) ಎಂಬ ಹೆಸರಿನಿಂದ ಪ್ರಖ್ಯಾತವಾಗಿತ್ತು. ಅಂದಮೇಲೆ ಇಂಥ ವಿಶಾಲವಾದ ಸಮುದ್ರವು ಶಕ (ಸ್ಥಾನ) ಪ್ರದೇಶವನ್ನು ಉತ್ತರ ಮತ್ತು ಪಶ್ಚಿಮದ ಕಡೆ ಯಿಂದ ಸುತ್ತಿಕೊಂಡಿತ್ತು ಎಂದರೆ ಅದರಲ್ಲಿ ಆಶ್ಚರ್ಯವೇನು? ಇಂದು ಇದರ ನೀರು ಉಪ್ಪೇ ಆಗಿದೆ; ಆದರೆ ಇದರ ನೀರು ಸಿಹಿಯಾಗಿತ್ತು. ಈ ವಿಶಾಲ ಮಹಾಸಾಗರ ದಿಂದ ಬೇರೆಯಾಗಿರುವ ಬಾಲಕಶ್ ಇಡೀ ವಿಶ್ವದಲ್ಲೇ ಅತ್ಯಂತ ದೊಡ್ಡದಾದ ಸಿಹಿ ನೀರಿನ ಸರೋವರವೆಂದು ಪ್ರಸಿದ್ಧವಾಗಿರುವುದೇ ಇದಕ್ಕೆ ಸಾಕ್ಷಿ. ಒಂದು ಕಾಲಕ್ಕೆ ಈ ಎರಡು ಜಲಾಶಯಗಳೂ ಒಂದರೊಡನೊಂದು ಮಿಳಿತವಾಗಿದ್ದುವು. ಅಲ್ಲದೆ ಬಾಲಕಶ್ ಸರೋವರದ ಇಂದಿನ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹಿಂದಿನ ಆ ಯುಗದಲ್ಲಿ ಕ್ಯಾಸ್ಪಿಯನ್ ಸಮುದ್ರವು ತನ್ನ ಸಿಹಿನೀರಿಗೆ ಪ್ರಖ್ಯಾತವಾಗಿತ್ತು ಎಂದು ಊಹಿಸ ಬಹುದು. ಆದುದರಿಂದ ಇರಾನಿನವರು ಇದನ್ನು ಶಿರವಾನ್ ಎಂದು ಕರೆಯುತಿದ್ದರು. ಪುರಾಣಗಳಲ್ಲಿ ವರ್ಣಿತವಾಗಿರುವ 'ಕ್ಷೀರಸಾಗರ' ದೊಂದಿಗೆ ಅದೇನೂ ಖಂಡಿತವಾಗಿಯೂ ಅನುಚಿತ ಅಥವಾ ಅಪ್ರಮಾಣಿಕವಾಗಲಾರದು.

ಪುರಾಣಗಳಲ್ಲಿ ಶಕದ್ವೀಪವು ಕ್ಷೀರಸಾಗರದಿಂದ ಆವೃತ್ತವಾಗಿದೆಯೆಂದು ಹೇಳಲಾಗಿದೆ. ಸಾಧಾರಣ ಜನ ಕ್ಷೀರಸಾಗರ ಎಂಬ ಹೆಸರಿನಿಂದ ಪ್ರೇರಿತರಾಗಿ ಈ ಹೆಸರಿನ ಸಾಗರ ಭೂಖಂಡದಲ್ಲಿ ಇರಲು ಸಾಧ್ಯವಿಲ್ಲ, ಕೇವಲ ಕಾಲ್ಪನಿಕ ಪ್ರಪಂಚದಲ್ಲಿ ಮಾತ್ರ ಇರಲು ಸಾಧ್ಯ ಎಂದು ಭಾವಿಸುತ್ತಾರೆ; ಆದರೆ ವಾಸ್ತವಿಕ ಅಂಶವೇನೆಂದರೆ ಇದು ಕಾಲ್ಪನಿಕವಲ್ಲ, ವಾಸ್ತವಿಕ ಜಗತ್ತಿನಲ್ಲಿಯೇ ಇರುವ ಸಮುದ್ರ. 'ಮಾರ್ಕೋಪೋಲೋ' ಎಂಬ ಸುಪ್ರಸಿದ್ಧ ಯಾತ್ರಿಕನು ತನ್ನ ಯಾತ್ರಾವಿವರಣೆ (ಪ್ರವಾಸ ಕಥನದಲ್ಲಿ) ಯಲ್ಲಿ ಚರ್ಚಿಸಿರುವ 'ಶೀರವಾನ್' ಸಮುದ್ರವು ಕ್ಯಾಸ್ಪಿಯನ್ ಸಮುದ್ರದಿಂದ ಬೇರೆಯಲ್ಲ ಎಂದು ಭಾವಿಸಲಾಗಿದೆ. ಈ ಶೀರವಾನ್ ಸಾಗರವು ಕ್ಷೀರ ಸಾಗರದ ಪ್ರತಿನಿಧಿಯಾಗಿದೆ. ಪಾರ್ಸಿ ಭಾಷೆಯ 'ಶೀರ್' ಶಬ್ದ ಸಂಸ್ಕೃತದ 'ಕ್ಷೀರ' ಶಬ್ದವೇ ಆಗಿದೆ. ಈ ಪ್ರದೇಶದಲ್ಲಿ ಕ್ಷೀರ ನದಿಯ ಕಲ್ಪನೆ ಇಂದಿಗೂ ಪ್ರಚಲಿತವಾಗಿದೆ. 'ಶೀರೀ' ಎಂಬ ಹೆಸರಿನ ಒಂದು ನದಿಯೂ ಇರಾನಿನಲ್ಲಿದೆ ಹಾಗೂ ಈ ಭೂ ಪ್ರದೇಶದಲ್ಲಿ ಹರಿಯುವ ರಷ್ಯಾದೇಶದ 'ಮೋಲೋಕನ್ಯಾ' ಎಂಬ ನದಿಯು ಈ ಕ್ಷೀರ ನದಿಯ ಪ್ರತಿನಿಧಿಯೇ ಆಗಿದೆ. ರಷ್ಯಾದ 'ಮೋ-ಲೋ-ಕೋ' ಶಬ್ದದಿಂದ ಈ ನದಿಯ ಹೆಸರು ಬಂದಿದೆ. ಇದರ ಅರ್ಥ "ಹಾಲು" ಎಂದು. ಈ ಶಬ್ದವು ಶಬ್ದಸಾಮ್ಯದ ದೃಷ್ಟಿಯಿಂದ ಇಂಗ್ಲಿಷಿನ 'ಮಿಲ್ಕ್' ಶಬ್ದವನ್ನು ಹೋಲುತ್ತದೆ. ಪುರಾಣಗಳಲ್ಲಿ ಉಲ್ಲೇಖಗೊಂಡಿರುವ ಶಕದ್ವೀಪದ ನದಿಗಳ ನಾಮ ಸಾಮ್ಯವನ್ನು ಶಕಸ್ಥಾನದ ನದಿಗಳೊಂದಿಗೆ ಹೋಲಿಸಿ ಕಾಣಬಹುದು. ಇರಾನಿನ ಪೂರ್ವ ಪ್ರಾಂತದ ಸಾಯಿಸ್ತಾನ್ (ಅಥವಾ ಶಕಸ್ತಾನ್) ಎಂಬ ಹೆಸರು ಈ ಶಕರ ನಿವಾಸಸ್ಥಾನವಾದುದರಿಂದ ಬಂದುದು ಎಂದು ಭಾವಿಸಲಾಗಿದೆ. ಕ್ರಿ.ಪೂ. ಒಂದು-ಎರಡನೆಯ ಶತಮಾನದಲ್ಲಿ, ಇವರ ಈ ದೊರೆತಿರುವ ಉಲ್ಲೇಖಗಳಿಗೆ ಮೊದಲೇ ಶಕರು ಮಧ್ಯ ಏಷ್ಯಾದ 'ಯೂಚಿ' ಜನಗಳ ದಮನದಿಂದ ಈ ಪ್ರಾಂತದಲ್ಲಿ ಬಂದು ನೆಲಸಿದರು ಎಂದು ಚರಿತ್ರಕಾರರು ಅಭಿಪ್ರಾಯ ಪಡುತ್ತಾರೆ. ಆಫ್‌ಘಾನಿಸ್ತಾನದ ಕಬೀಲಿಗಳ ಭಾಷೆಯ ಮೇಲೆ ಈ ಶಕರ ಪ್ರಭಾವವುಂಟಾಗಿದೆಯೆಂದು ಭಾಷಾ ವಿಜ್ಞಾನಿಗಳು ಈಗ ಅಭಿಪ್ರಾಯ ಪಡತೊಡಗಿದ್ದಾರೆ. ಪಶ್ತೋ ಭಾಷೆಯಲ್ಲಿ 'ದ' ಕಾರದ ಸ್ಥಾನದಲ್ಲಿ 'ಲ' ಕಾರವುಂಟಾಗಿರುವ ಈ ಪರಿವರ್ತನೆಯೂ ಶಕ ಭಾಷೆಯ ಪ್ರಭಾವವೆಂದೇ ಭಾವಿಸುತ್ತಾರೆ. ಪಾರ್ಸಿ -ಪಿದರ್ = ಪಶ್ತೋ-ಪಿಲರ್ (ತಂದೆ), ಪಾರ್ಸಿ ದುಖ್‌ತರ್ (ದುಹಿತರ್, ಪುತ್ರೀ) = ಪಶ್ತೋ-ಲುರ್. ಈ 'ಲ' ಕಾರ ಪ್ರವೃತ್ತಿಯು ಶಕ ಭಾಷೆಯ ವೈಶಿಷ್ಟ್ಯವೆಂದು ಭಾವಿಸಲಾಗಿದೆ.

(ಈ) ಶಕರು ಪ್ರಧಾನವಾಗಿ ಸೂರ್ಯೋಪಾಸಕರಾಗಿದ್ದರು. ಅದನ್ನು ಅವರು 'ಸ್ವಲಿಯು' ಎಂದು ಕರೆಯುತ್ತಿದ್ದರು. ಈ 'ಸ್ವಲಿಯು' ಶಬ್ದದ, ಶಕರಿಗೆ ಅತ್ಯಂತ ಪ್ರಿಯವಾದ 'ಲ' ಕಾರವನ್ನು ತೆಗೆದು ಹಾಕಿದಾಗ ಅಲ್ಲಿ 'ರ' ಇದ್ದು 'ಸೂರ್ಯ' ಶಬ್ದ ಸ್ಪಷ್ಟವಾಗಿ ಕಂಡು ಬರುತ್ತದೆ. ಸೂರ್ಯನೇ ಶಕರ ಪರಮ ಪೂಜ್ಯ ದೇವತೆಯಾಗಿದ್ದ

VIJAYA EVENING COLLEGE LIBRARY
BANGALORE-4 3/6/

ಎಂಬುದು ಗ್ರೀಕ್ ಗ್ರಂಥಗಳಲ್ಲಿ ಮಾತ್ರವಲ್ಲ ಪುರಾಣಗಳಲ್ಲಿಯೂ ಉಲ್ಲಿಖಿತವಾಗಿರುವುದು ಕಂಡು ಬರುತ್ತದೆ. ವಿಷ್ಣು ಪುರಾಣದ ಈ ಕೆಳಗಿನ ಶ್ಲೋಕವನ್ನು ನೋಡಬಹುದು :

ಶಾಕದ್ವೀಪೇ ತು ತೈರ್ವಿಷ್ಣುಃ ಸೂರ್ಯರೂಪಧರೋ ಮುನೇ
ಯಥೋಕ್ತೈರಿಜ್ಯತೆ ಸಮ್ಯಕ್ ಕರ್ಮಭಿರ್ನಿಯತಾತ್ಮಭಿಃ ||

—ವಿಷ್ಣು ೨-೪-೭೦

ಶಕದ್ವೀಪದಿಂದ ಭಾರತಕ್ಕೆ ಸೂರ್ಯೋಪಾಸಕ ಬ್ರಾಹ್ಮಣರ ಆಗಮನ (ಗರುಡ ಪುರಾಣ), ಭಾರತದಲ್ಲಿ ಶಕರಲ್ಲಿದ್ದಂಥ ಬಳ್ಳಿಗಳಿಂದ ಕೂಡಿದ ಸೂರ್ಯ ಪ್ರತಿಮೆಗಳ ವ್ಯಾಪಕವಾದ ಪ್ರಸಾರ, ಹಾಗೂ ಕ್ರೈಸ್ತಧರ್ಮವನ್ನು ಅವಲಂಬಿಸುವುದಕ್ಕೆ ಮೊದಲು ರಷ್ಯನರು ಸೂರ್ಯನಲ್ಲಿಟ್ಟಿದ್ದ ಏಕಾಂತ ಭಕ್ತಿ ಇವುಗಳೆಲ್ಲ ಶಕರ ಪೂಜ್ಯ ದೇವತೆ ಸೂರ್ಯನೇ ಆಗಿದ್ದ ಎಂಬುದಕ್ಕೆ ಸಾಕ್ಷಿಗಳಾಗಿವೆ. ಈ ಸ್ವಲಿಯು ದೇವತೆ ದಿವೂ (ದ್ಯೌಃ) ತಂದೆ ಮತ್ತು ಅಪಿಯಾ ತಾಯಿಯ (ದ್ಯಾವಾ ಪೃಥಿವಿ ಪುತ್ರನಾಗಿದ್ದ.

ಪುರಾಣಗಳು ಶಕದ್ವೀಪದ ಜಾತಿಗಳು, ನದಿಗಳು, ಮತ್ತು ಪರ್ವತಗಳ ವಿಷಯದಲ್ಲಿ ಸುರಕ್ಷಿತವಾಗಿ ಉಳಿಸಿಕೊಂಡು ಬಂದಿರುವ ಯಥಾರ್ಥ ಭೌಗೋಳಿಕ ವಿವರಣೆಗಳನ್ನು ನೋಡಿದಾಗ ಪುರಾಣಗಳಲ್ಲಿ ಹೇಳಿರುವ ಭುವನ ವಿನ್ಯಾಸದ ವಿಷಯಗಳಲ್ಲಿ ಸಂಪೂರ್ಣವಾದ ವಿಶ್ವಾಸ ಮೂಡುತ್ತದೆ. ಪೌರಾಣಿಕ ಭೂಗೋಳದ ಕೇವಲ ಮೂರು ದ್ವೀಪಗಳ-ಜಂಬೂದ್ವೀಪ, ಕುಶದ್ವೀಪ ಹಾಗೂ ಶಾಕದ್ವೀಪ–ವಿಷಯದಲ್ಲಿ ಮಾತ್ರ ಪೂರ್ಣ ಪರಿಚಯ ಸದ್ಯಕ್ಕೆ ಪ್ರಾಪ್ತವಾಗಿದೆ. ಇದರ ಆಧಾರದ ಮೇಲೆ ಪುರಾಣಗಳಲ್ಲಿ ಹೇಳಿರುವ ಉಳಿದ ದ್ವೀಪಗಳೂ ಕೂಡ ಕೇವಲ ಕಾಲ್ಪನಿಕಗಳಾಗದೆ ಭೌಗೋಳಿಕ ಸತ್ಯವೆಂದು ನಂಬಬಹುದೆಂದು ತೋರುತ್ತದೆ. ಈ ವಿಷಯದಲ್ಲಿ ಇನ್ನೂ ಆಳವಾದ ಸಂಶೋಧನೆಯು ಅಗತ್ಯವಿದೆ.

ಜಂಬೂದ್ವೀಪದ ನವವರ್ಷ (ದೇಶ)ಗಳು :

ಜಂಬೂದ್ವೀಪ ಆದಿಕಾಲದಲ್ಲಿ ಭಾರತವರ್ಷವನ್ನು ಸೂಚಿಸುವ ದೇಶವೇ ಆಗಿತ್ತು; ಆದರೆ ಶಕರು ಹಾಗೂ ಕುಶಾನರು ಬಂದಮೇಲೆ ಭಾರತೀಯರ ಭೌಗೋಳಿಕದೃಷ್ಟಿ ವಿಶೇಷವಾಗಿ ಅರಳಿತು. ಅಲ್ಲಿನ ತನಕ ಅನೇಕ ಅಜ್ಞಾತ ದೇಶಗಳೂ ಭಾರತೀಯರ ಜ್ಞಾನದ ಪರಿಧಿಯಲ್ಲಿ ಅಡಗಿದ್ದವು. ಇಂಥ ಕಾಲದಲ್ಲಿ ಜಂಬೂದ್ವೀಪದ ಒಂಬತ್ತು ದೇಶಗಳ ಕಲ್ಪನೆ ನಮ್ಮ ಪುರಾಣಕಾರರಲ್ಲಿ ಮೂಡಿ ಅದರಲ್ಲಿ ಈ ಹೊಸದಾದ ಭೌಗೋಳಿಕ ಸೂಚನೆಗಳನ್ನು ಒಂದುಗೂಡಿಸಿ ಸುವ್ಯವಸ್ಥೆಯನ್ನು ಮಾಡಿದರು. ಈ ಒಂಬತ್ತು ದೇಶಗಳ ರೇಖಾ ಚಿತ್ರವನ್ನು ಕೆಳಗೆ ಕೊಟ್ಟಿದೆ :

ಉತ್ತರ ಕುರು (ಶೃಂಗಿ ಪರ್ವತ)

|

ಹಿರಣ್ಮಯ (ಶ್ವೇತ ಪರ್ವತ)

ರಮ್ಯಕ (ನೀಲ ಪರ್ವತ)

ಕೇತುಮಾಲ — ಸುಮೇರು ಇಳಾವೃತ್ತವರ್ಷ — ಮೇಡ್ರಾಶ್ವ ವರ್ಷ

ಹರಿ ವರ್ಷ (ನಿಷಧ ವರ್ಷ ಪರ್ವತ)

ಕಿಂಪುರುಷ ವರ್ಷ (ಹೇಮಕೂಟ)

ಭಾರತ ವರ್ಷ (ಹಿಮಾಲಯ)

ಈ ಒಂಬತ್ತು ದೇಶ (ವರ್ಷ)ಗಳ ವ್ಯಾಪ್ತಿಯಲ್ಲಿ ಭಾರತವರ್ಷದ ಹೊರ ದೇಶಗಳ ಸಮಾವೇಶವನ್ನೂ ಈಗ ಭಾರತದ ವಿಸ್ತೃತವಾದ ಎಲ್ಲೆಕಟ್ಟಿನಲ್ಲಿ ಮಾಡಲಾಯಿತು. ಈ ಒಂಬತ್ತು ದೇಶಗಳನ್ನು ನಿಸ್ಸಂದಿಗ್ಧವಾಗಿ ಗುರುತಿಸಲು ಸಾಧ್ಯವಾಗಿಲ್ಲ. ಉತ್ತರ ಕುರುವು ತೋಲೊಮಿಯ 'ಓತ್ತೋರೋಕೊರಾಇ' ದೇಶವಾಗಿದೆ. ಇದು ಬಹುಶಃ ಜೈನಾ–ತುರ್ಕಿಸ್ತಾನದ ತಾರಿಮ ಘಟ್ಟಗಳ ದ್ಯೋತಕವಾಗಿರಬೇಕು. ಹರಿವರ್ಷವು ಪ್ರಾಯಃ ಕುದುರೆಗಳಿಗೆ ಸದಾ ಪ್ರಸಿದ್ಧವಾಗಿರುವ ಸುಗ್ದ (ಅಥವಾ ಬೋಖಾರ ಪ್ರಾಂತ) ದೇಶ. ಇಳಾವೃತ್ತ ವರ್ಷವು ಬಹುಶಃ ಸೈಬೀರಿಯಾದ ಪರ್ವತದಿಂದ ಹೊರಟು ಬಾಲಕಶ್ ಜಲಾಶಯದಲ್ಲಿ ಬೀಳುವ 'ಇಲಿ' ನದಿಯ ಘಟ್ಟ. ಭದ್ರಾಶ್ವವು ಪ್ರಾಯಃ ಜೈನಾದ ಸೂಚಕವಾಗಿದೆ. ಚೀನೀಯರ ಧರ್ಮಚಿಹ್ನೆ ಬಿಳಿಯ ಡ್ರೇಗನ್. ಇಂಗ್ಲಿಷ್ ಶಬ್ದವಾದ 'ಡ್ರೇಗನ್' ಶಬ್ದದ ಅರ್ಥ ತನ್ನ ಬಾಯಿಂದ ಜ್ವಾಲೆಯನ್ನು ಉಗುಳುವ ಮೊಸಳೆ ಅಥವಾ ಸರ್ಪ ಎಂದು. ಇದನ್ನು ಕೆಲವು ವೇಳೆ ಕುದುರೆಯ ಮುಖವುಳ್ಳದ್ದು ಎಂದೂ ಹೇಳುತ್ತಾರೆ. ಆದ್ದರಿಂದ ಕಲ್ಯಾಣಕಾರಕವಾದ ಕುದುರೆಗಳ ದೇಶ–ಭದ್ರಾಶ್ವ–ದೊಂದಿಗೆ ಜೈನಾ ದೇಶವನ್ನು ಸುಲಭವಾಗಿ ಹೋಲಿಸಬಹುದು.

ಕೇತುಮಾಲವನ್ನು ಆ ಮೂಲಕ ಹರಿಯುವ ಚಕ್ಷು ಅಥವಾ ವಕ್ಷು ನದಿಯೊಂದಿಗೆ ಹೋಲಿಸಬಹುದು. ಇಂದು ಅರಾಲ್ ಸಾಗರವು ಸೇರುವ ಭಾಗವೇ ಚಕ್ಷು ಅಥವಾ ವಕ್ಷು=ಆಕ್ಸಸ್=ಅಮೂದರಿಯಾ (ನದಿ) ಪ್ರದೇಶ. ಈ ಭೂಭಾಗವನ್ನೇ ಕೇತುಮಾಲ ಪ್ರದೇಶ ಎಂದು ಕರೆಯುತ್ತಿದ್ದರು. ಹಿಮಾಲಯದ ಸೂಚಕವಾಗಿರುವ ಕಿನ್ನರರ ದೇಶವೇ ಕಿಂಪುರಷ ವರ್ಷ. ವಜ್ರ, ವೈಡೂರ್ಯ ಹಾಗೂ ಅಮೂಲ್ಯವಾದ ಲೋಹಗಳ ಗಣಿಗಳಿಗೆ ಪ್ರಖ್ಯಾತವಾಗಿರುವ ಏಷ್ಯಾದ 'ಬದಕ್‌ಶಾ' ಪ್ರದೇಶದ ದ್ಯೋತಕವಾಗಿರುವ ಪ್ರದೇಶವೇ ಹಿರಣ್ಮಯ ವರ್ಷ. ಇದೇ ರೀತಿ ದೂರ

ಪ್ರಾಚ್ಯದ ರವಿ ಅಥವಾ ರವ್ನಿ ದ್ವೀಪಗಳ ಸೂಚಕ ಪ್ರದೇಶವೇ ರಮ್ಯಕ ವರ್ಷ ಇರ ಬೇಕು. ಇದರ ತಾತ್ಪರ್ಯವೇನೆಂದರೆ, ಈ ಸಮಸ್ತ ನವವರ್ಷಗಳ ಕಲ್ಪನೆಯು ಕೇವಲ ಏಷ್ಯಾದ ವಿಶಾಲವಾದ ಪ್ರದೇಶವನ್ನು ಮಾತ್ರ ತನ್ನಲ್ಲಿ ಅಡಕಮಾಡಿಕೊಂಡಿಲ್ಲ, ದೂರ ಪ್ರಾಚ್ಯ ಪ್ರದೇಶಗಳೊಂದಿಗೂ ಸಂಬಂಧವನ್ನಿಟ್ಟುಕೊಂಡಿದೆ. ಈ ದೇಶಗಳ ಭೌಗೋಳಿಕ ವಿವರಣೆಯನ್ನು ಪಡೆಯಬೇಕಾದರೆ ಇನ್ನೂ ಹೆಚ್ಚಿನ ಆಳವಾದ ಸಂಶೋಧನೆಯನ್ನು ನಡೆಸಬೇಕಾಗಿದೆ.

ಏಷ್ಯಾದ ನದಿಗಳು :

ಚತುರ್ದ್ವೀಪೀ ವಸುಮತಿಯ ಕಲ್ಪನೆಯಲ್ಲಿ ಗಂಗಾನದಿಯ ನಾಲ್ಕು ದಿಕ್ಕುಗಳಲ್ಲಿ ಹರಿಯುವ ನಾಲ್ಕು ಧಾರೆಗಳ ಉಲ್ಲೇಖ ಅತ್ಯಂತ ಮಹತ್ವಪೂರ್ಣವಾದುದು. ಮೊದ ಲನೆಯದು ಭದ್ರಾಶ್ವದ ಮುಖಾಂತರ ಹರಿದು ಸಮುದ್ರದಲ್ಲಿ ಬೀಳುವ 'ಸೀತಾ' ನದಿ; ಎರಡನೆಯದು, ದಕ್ಷಿಣದಲ್ಲಿ ಭಾರತ ವರ್ಷದಲ್ಲಿ ಹರಿದು ದಕ್ಷಿಣ ಸಮುದ್ರದಲ್ಲಿ ಸೇರುವ 'ಅಲಕನಂದಾ' ; ಮೂರನೆಯದು, ಪಶ್ಚಿಮದಲ್ಲಿ ಕೇತುಮಾಲದ ಮೂಲಕ ಹರಿದು ಪಶ್ಚಿಮ ಸಮುದ್ರದಲ್ಲಿ ಬೀಳುವ 'ಚಕ್ಷು' (ಅಥವಾ ಸ್ವರಕ್ಷು) ; ಮತ್ತು ನಾಲ್ಕನೆಯದು ಉತ್ತರ ಕುರುವಿನ ಮೂಲಕ ಹರಿದು ಉತ್ತರ ಸಮುದ್ರವನ್ನು ಸೇರುವ 'ಭದ್ರಾ'ನದಿ. ಇವುಗಳಲ್ಲಿ ಎರಡು ನದಿಗಳನ್ನಂತೂ ನಿಸ್ಸಂದಿಗ್ಧವಾಗಿ ನಾವು ಗುರುತಿಸಬಹುದು. ನಮ್ಮ ಗಂಗಾನದಿಯ ಮೂಲಭೂತವಾದ ನದಿಯೇ ಅಲಕನಂದಾ. ಚಕ್ಷು, ಸ್ವರಕ್ಷು ಅಥವಾ ವಕ್ಷು ಎಂದು ನಾನಾ ಹೆಸರುಗಳಿಂದ ಕರೆಯುತ್ತಿರುವ ನದಿಯನ್ನೇ ಗ್ರೀಕರು ಆಕ್ಸಸ್ ಎಂದು ಕರೆಯುತ್ತಿದ್ದರು; ಇದನ್ನು ಇಂದು ಆಮೂದರಿಯಾ (ನದಿ) ಎಂದು ಕರೆಯು ತ್ತಾರೆ ಮತ್ತು ಇದು ಪಾಮಿರ್ ಪರ್ವತ ಪ್ರದೇಶದಿಂದ ಹೊರಟು ಅರಾಲ್ ಸಾಗರದಲ್ಲಿ ಬೀಳುತ್ತದೆ. ಸೀತಾ ಮತ್ತು ಭದ್ರಾ ನದಿಗಳನ್ನು ಇನ್ನೂ ನಿಶ್ಚಿತವಾಗಿ ಗುರುತಿಸ ಲಾಗಿಲ್ಲ.

ಮತ್ಸ್ಯಪುರಾಣ (ಅ. ೧೨೧-೪೨) ಹಾಗೂ ವಾಯು ಪುರಾಣದಲ್ಲಿ (೪೭; ೩೭-೫೧ ಶ್ಲೋ) ಕೊಟ್ಟಿರುವ ಗಂಗೆಯ ಸಪ್ತಧಾರೆ (ಏಳುನದಿಗಳ)ಯ ಕಲ್ಪನೆಯು ಭಾರತೀ ಯರ ಭೌಗೋಳಿಕ ಜ್ಞಾನದ ವಿಸ್ತಾರವನ್ನು ಸೂಚಿಸುತ್ತದೆ. ಏಷ್ಯಾದ ವಿಭಿನ್ನ ದೇಶ ಗಳಿಂದ ಭಾರತೀಯರ ಆಗಮನ ಪ್ರಾರಂಭವಾದಂತೆ ಅವರಲ್ಲಿ ಆಯಾ ಪ್ರದೇಶಗಳ ಪರಿಚಯ ಹೆಚ್ಚತೊಡಗಿತು ಮತ್ತು ಈ ನವೀನ ಭೌಗೋಳಿಕ ಜಾಗೃತಿಯ ಕಾಲದಲ್ಲಿ ನಿಬದ್ಧವಾಗಿದ್ದ ಪುರಾಣಗಳ ರೂಪರೇಖೆಯು ಈ ಹೊಸ ಪರಿಚಯದಿಂದ ಪರಿಪೂರ್ಣ ವಾಗಿದ್ದವು. ಏಷ್ಯಾದ ಈ ಏಳು ನದಿಗಳು ಗಾತ್ರ ಹಾಗೂ ವಿಸ್ತಾರದಲ್ಲಿ ಮಾತ್ರ ದೊಡ್ಡವಾಗಿರಲ್ಲಿಲ್ಲ, ಚರಿತ್ರೆ ಮತ್ತು ವ್ಯಾಪಾರದ ದೃಷ್ಟಿಯಿಂದಲೂ ಅವು ಅತ್ಯಂತ ಮಹತ್ವ ಪೂರ್ಣವಾದ ನದಿಗಳಾಗಿದ್ದವು. ಈ ಏಳು ನದಿಗಳನ್ನೂ ಗಂಗೆಯ ಏಳು ನದಿಗಳೆಂದು ಕರೆದಿರುವುದು ಗಂಗಾ ನದಿಯ ವಿಷಯದಲ್ಲಿ ಪೂಜ್ಯ ಬುದ್ಧಿಯ ಭಾರತೀಯರು ಇಟ್ಟಿದ್ದ

ಧಾರ್ಮಿಕ ಶ್ರದ್ಧೆಯ ಸಂಕೇತವಷ್ಟೆ. ಈ ಏಳು ನದಿಗಳಲ್ಲಿ ಮೂರು ಪಶ್ಚಿಮ ಸಮುದ್ರ ದಲ್ಲೂ, ಮೂರು ನದಿಗಳು ಪೂರ್ವ ಸಮುದ್ರದಲ್ಲೂ, ಇವೆರಡರ ಮಧ್ಯದಲ್ಲಿ ಹರಿಯುವ ನದಿಯು ದಕ್ಷಿಣ ಸಮುದ್ರದಲ್ಲೂ ಬೀಳುತ್ತವೆ. ಈ ನದಿಗಳ ವರ್ಣನೆಯಲ್ಲಿ ವಾಯು ಪುರಾಣದ ವರ್ಣನೆಯು ಸಟೀಕೆ ಹಾಗೂ ಯಥಾರ್ಥದಿಂದ ಕೂಡಿದೆ. ಮತ್ಸ್ಯಪುರಾಣದ ವರ್ಣನೆಯು ಅಶುದ್ಧ ಪಾಠಗಳಿಂದಾಗಿ ವಿಕೃತವಾಗಿದೆ. ಇವುಗಳಲ್ಲಿ ಸೀತಾ, ಚಕ್ಷು ಹಾಗೂ ಸಿಂಧೂ ನದಿಗಳು ಪಶ್ಚಿಮ ಸಮುದ್ರದಲ್ಲಿ ಬೀಳುತ್ತವೆ. ಚಕ್ಷು ನದಿಯು ಆಕ್ಸಸ್ ನದಿಯ ನಾಮಾಂತರ; ಸೀತಾನದಿಯು, ಪೂರ್ವ ಭಾಗದಲ್ಲಿ ಭದ್ರಾಶ್ವ ವರ್ಷದ ಮುಖಾಂತರ ಹರಿದು ಹೋಗುವ ಇದೇ ಹೆಸರಿನಿಂದ ಪ್ರಸಿದ್ಧವಾಗಿರುವ ಸೀತಾ ನದಿ ಯಿಂದ ಸಂಪೂರ್ಣ ಭಿನ್ನವಾದುದು. ವಾಯುಪುರಾಣದ ಪ್ರಕಾರ ಸೀತಾನದಿಯು ಸಿಂಧೂ ಮರುಭೂಮಿಯನ್ನು ದಾಟಿಕೊಂಡು ಮ್ಲೇಚ್ಛ ದೇಶ—ಚೀನ, ಬರ್ಬರ, ಪವನ, ರೂಷಾಣ—ಮುಂತಾದುವುಗಳ ಮೂಲಕ ಹರಿದು ಪಶ್ಚಿಮ ಸಮುದ್ರದಲ್ಲಿ ಬೀಳುತ್ತದೆ. ಮ್ಲೇಚ್ಛ ಜಾತಿಗಳು ಏಷ್ಯಾದ ಪಶ್ಚಿಮ ಭಾಗದಲ್ಲಿ ಆಫ್‌ಘಾನೀಸ್ತಾನಕ್ಕೆ ಉತ್ತರದಲ್ಲಿ ವಾಸಿಸುತ್ತಿದ್ದವು. ರೂಷಾಣ ಜಾತಿ ಯಾವುದು ? ಇದು ರೂಸೀ (ರಷ್ಯನರ) ಯರ ಸಂಸ್ಕೃತದ ಹೆಸರಂತೂ ಅಲ್ಲವೇ ? 'ಸೀತಾ' ನದಿಯನ್ನು ಸಿರ್‌ದರಿಯಾ ನದಿ ಯೊಂದಿಗೆ ಹೋಲಿಸಬಹುದು; ವಿಶಾಲವಾಗಿದ್ದ 'ಚಕ್ಷು'ನದಿಯು ಚೀನ ಮರು (ಚೀನೀ ತುರ್ಕಿಸ್ತಾನಿ) ಭೂಮಿ, ಶೂಲಿಕ್ (ಶೂಲೆ ಅಥವಾ ಕಾಶ್‌ಗರ್) ತುಷಾರಬರ್ಬರ ಹಾಗೂ ಪಾರದ ಮತ್ತು ಶಕ ಜಾತಿಗಳ ಪ್ರದೇಶಗಳ ಮೂಲಕ ಹರಿಯುತ್ತಿತ್ತು. ಉತ್ತರಾಪಥದ ಮುಖ್ಯವಾದ ನಾಲ್ಕು ರಸ್ತೆಗಳು (ಹೆದ್ದಾರಿಗಳು) ಈ ಪ್ರಾಂತದಲ್ಲಿಯೇ ಬಂದು ಸೇರುತ್ತಿದ್ದವು. 'ಸಿಂಧು'ವಂತೂ ಪಂಜಾಬಿನ ಮೂಲಕ ಹರಿಯುತ್ತಿರುವ ನಮ್ಮ ಸಿಂಧೂ ನದಿಯೇ. ಹ್ರಾದಿನಿ ನದಿಯು ಪೂರ್ವ ಏಷ್ಯಾದ ಯಾವುದೋ ಒಂದು ನದಿಯಿರಬೇಕು, ಆದರೆ ಅದರ ಪತ್ತೆ ಇನ್ನೂ ಆಗಿಲ್ಲ. 'ನಳಿನೀ'ನದಿಯು ಬಹುಶಃ ಇಂದ್ರ ದ್ವೀಪದ ಹತ್ತಿರ ಸಮುದ್ರಕ್ಕೆ ಬೀಳುವ ಬರ್ಮಾದ ಇರಾವತೀ ನದಿಯೇ ಇರಬೇಕು. 'ಪಾವನೀ' ನದಿಯು ಬಹುಶ: ಸಿರಿಯಾದ ದಕ್ಷಿಣದಲ್ಲಿ ಹರಿಯುವ ಮೇಕಾಂಕ (ತಾಯಿಗಂಗಾ) ನದಿಯೇ ಇರಬೇಕು. 'ಗಂಗಾ' ನದಿಯಂತೂ ನಮಗೆ ಚಿರಪರಿಚಿತವಾಗಿರುವ ಭಾಗೀರಥಿಯೇ. ಇವೇ ಸಭ್ಯತೆ, ಸಂಸ್ಕೃತಿಯನ್ನು ವಿಸ್ತಾರ ಗೊಳಿಸುವ ಏಷ್ಯಾದ ಸಪ್ತ ನದಿಗಳು,

ಭಾರತ ವರ್ಷ :— ನಮ್ಮ ಇಂದಿನ ಭಾರತಕ್ಕೆ ಈ ಹೆಸರು ಬರುವುದಕ್ಕೆ ಮೊದಲು ಇದಕ್ಕೆ 'ಅಜನಾಭ' (ಭಾಗವತ ೫-೭-೩) ಹಾಗೂ ಹೈಮವತ ವರ್ಷ (ವಾಯು ೩೫-೫೨) ಎಂಬ ಹೆಸರು ಪ್ರಸಿದ್ಧವಾಗಿತ್ತು. ಈ ವರ್ಷ (ದೇಶ)ದ ಗಡಿ ಯನ್ನು ನಿರ್ಮಿಸಿರುವುದರಲ್ಲಿ ಹಿಮವತ್‌ಗಿರಿಯು (ಹಿಮಾಲಯ ಅಥವಾ ಹಿಮಾಚಲ) ಪ್ರಧಾನವಾಗಿ ಕಾರಣವಾಗಿರುವುದರಿಂದ ಇದಕ್ಕೆ 'ಹೈಮವತ ವರ್ಷ' ಎಂದು ಹೆಸರು

ಬಂದಿತು. ಇದು ಈ ದೇಶದ (ವರ್ಷ) ಪರ್ವತವಾಗಿದೆ. ಉತ್ತರದಲ್ಲಿ ಹಿಮವತ್‌ಪರ್ವತದಿಂದ ಸುತ್ತುವರಿಯಲ್ಪಟ್ಟಿರುವುದರಿಂದ ಇದಕ್ಕೆ ಈ ಹೆಸರು ಬಂದಿತು. 'ಅಜನಾಭ'ದ ಹೆಸರಿನ ವಿಷಯ ಅತ್ಯಂತ ಗಂಭೀರವೂ ಆಂತರಂಗಿಕವೂ ಆಗಿದೆ. 'ಅಜನಾಭ' ಶಬ್ದದ ವ್ಯುತ್ಪನ್ನಾರ್ಥ–ಅಜ (ಅಜನ್ಮಾ ವಿಷ್ಣು ಭಗವಂತ)ನ ನಾಭಿ-ಕಮಲದ ಮೇಲಿರುವ ದೇಶ ಎಂದು. ಈ ಶಬ್ದದ ಸ್ವಾರಸ್ಯವೇನೆಂದರೆ ಬ್ರಹ್ಮನು ವಿಷ್ಣು ಭಗವಂತನ ನಾಭಿಕಮಲದಲ್ಲಿ ವಾಸಿಸುತ್ತ ಸೃಷ್ಟಿಸಿದ ಪ್ರಥಮ ಲೋಕವೇ 'ಅಜನಾಭ ವರ್ಷ ಅಂದರೆ ಆದಿಸೃಷ್ಟಿಯು ಈ 'ಅಜನಾಭವರ್ಷ'ದಲ್ಲಿಯೇ ಆಯಿತು ಎಂಬುದನ್ನು ಈ ಶಬ್ದ ಸೂಚಿಸುತ್ತದೆ. ಮಾನವ ಸೃಷ್ಟಿಯ ಸ್ಥಾನವೂ ಈ ದೇಶವೇ. ಮನುಷ್ಯರು ಪ್ರಪ್ರಥಮವಾಗಿ ಇಲ್ಲಿಯೇ ಹುಟ್ಟಿ ಅನಂತರ ಇಲ್ಲಿಂದಲೇ ಬೇರೆ ಬೇರೆ ದೇಶಗಳಲ್ಲಿ ಹೋಗಿ ತಮ್ಮ ಸಂಸ್ಕೃತಿಯನ್ನು ಪ್ರಸಾರ ಮಾಡಿದರು ಎಂದು ಅರ್ಥವಾಗುತ್ತದೆ.

'ಭಾರತ ಹೆಸರಿನ ನಿರುಕ್ತಿ :

ಈ ದೇಶಕ್ಕೆ ಭಾರತವರ್ಷ ಎಂಬ ಹೆಸರು ಏತಕ್ಕೆ ಬಂತು ? ಈ ವಿಷಯದಲ್ಲಿ ಪುರಾಣಗಳ ಹೇಳಿಕೆಯಲ್ಲಿ ಒಮ್ಮತವಿರುವಂತೆ ಕಾಣಬರುವುದಿಲ್ಲ. ಮತ್ಸ್ಯ ಪುರಾಣದಲ್ಲಿ ಮಾತ್ರ ಇದರ ಉತ್ಪತ್ತಿಯ ವಿಷಯದಲ್ಲಿ ಒಂದು ಹೊಸ ವಿಷಯವನ್ನು ಹೇಳಿದೆ. 'ಭರತ'ನಿಂದಲೇ 'ಭಾರತ'ವಾಯಿತು, ಆದರೆ ಈ ಭರತ ಯಾರು ? ಮತ್ಸ್ಯಪುರಾಣದಲ್ಲಿ ಮನುಷ್ಯರ ಆದಿಜನಕನಾದ ಮನುವೇ ಪ್ರಜೆಗಳ ಭರಣ ಮತ್ತು ರಕ್ಷಣಾ ಕರ್ತನಾದುದರಿಂದ 'ಭರತ'ಎಂದು ಹೇಳಿದೆ :

ಭರಣಾತ್ ಪ್ರಜಾನಾಚ್ಚೈವ ಮನುರ್ಭರತ ಉಚ್ಯತೆ
ನಿರುಕ್ತವಚನಶ್ಚೈವ ವರ್ಷಂ ತದ್ ಭಾರತಂ ಸ್ಮೃತಮ್ ॥

—ಮತ್ಸ್ಯ.೧೧೪; ೫–೬

ಬಹುಶಃ ಈ ಪ್ರಾಚೀನವಾದ ವ್ಯುತ್ಪತ್ತಿಯ ಮೇಲೆ ಯಾವುದೋ ಆನಂತರದ ಯುಗದ ಹೊಸ ನಿರುಕ್ತಿ ಅಥವಾ ವ್ಯುತ್ಪತ್ತಿಯನ್ನು ಹೇರಿರುವಂತೆ ಕಾಣುತ್ತದೆ. ಪ್ರಾಚೀನ ವ್ಯುತ್ಪತ್ತಿಗನುಸಾರವಾಗಿ ಸ್ವಾಯಂಭುವ ಮನುವಿನ ಮಗ ಪ್ರಿಯವ್ರತ, ಈತನ ಮಗ ನಾಭಿ. ನಾಭಿಯ ಪುತ್ರ ಋಷಭ ; ಋಷಭನ ನೂರೊಂದು ಜನ ಪುತ್ರರಲ್ಲಿ ಜ್ಯೇಷ್ಠ ಪುತ್ರನಾದ 'ಭರತ'ನಿಗೆ ತಂದೆಯಿಂದ ಪರಂಪರಾನುಗತವಾಗಿ ರಾಜ್ಯ ಸಿಂಹಾಸನ ಪ್ರಾಪ್ತವಾಯಿತು. ಈ ಭರತ ರಾಜನ ಹೆಸರಿನ ಮೇಲೆ 'ಅಜನಾಭ'ವೆನಿಸಿದ ಈ ಪ್ರದೇಶಕ್ಕೆ 'ಭಾರತ ವರ್ಷ' ಎಂಬ ಹೆಸರು ಪ್ರಾಪ್ತವಾಯಿತು. ಅಂದಿನಿಂದ ಇದಕ್ಕೆ ಭಾರತವರ್ಷ ಅಥವಾ ಭಾರತದೇಶ ಎಂಬ ಹೆಸರು ಬಂದಿತು. ದುಷ್ಯಂತನ ಪುತ್ರ ಭರತನಿಂದ ನಮ್ಮ ದೇಶಕ್ಕೆ 'ಭಾರತ ಎಂಬ ಹೆಸರು ಬಂದಿತೆಂಬುದು ಪರಂಪರೆಯ ವಿರೋಧಿಗಳ ಅಭಿಪ್ರಾಯವಾದುದರಿಂದ ಅದು ಅಪ್ರಮಾಣಿಕವಾದ ಅಭಿಪ್ರಾಯ.

ಭಾರತವರ್ಷದ ಭೂಗೋಳವನ್ನು ಪುರಾಣಗಳಲ್ಲಿ ಎರಡು ರೀತಿಯಲ್ಲಿ ಅಭಿವ್ಯಕ್ತಗೊಳಿಸಲಾಗಿದೆ. (೧) ಕಾರ್ಮುಕ ಸಂಸ್ಥಾನ ಮತ್ತು (೨) ಕೂರ್ಮ ಸಂಸ್ಥಾನ. ಕಾರ್ಮುಕ ಸಂಸ್ಥಾನ ಎಂದರೆ—ಸಮಗ್ರ ಭಾರತವರ್ಷದ ಭೂಖಂಡವು ಕಾರ್ಮುಕ ಎಂದರೆ ಬಿಲ್ಲಿನ ಆಕಾರದಲ್ಲಿದ್ದು ಅದರ ಪ್ರತ್ಯಂಚ ಅಥವಾ ಹಗ್ಗವೆನಿಸಿದ ಹಿಮಾಚಲವು ಉತ್ತರದಲ್ಲಿದೆ ಮತ್ತು ಅದರ ಎಳೆಯಲ್ಪಟ್ಟ ದಂಡವು ದಕ್ಷಿಣದ ಕಡೆಗೆ ಹರಡಿದೆ ಎಂಬ ಕಲ್ಪನೆ ಇದರಲ್ಲಿ ಅಡಗಿದೆ. ಸಾಮಾನ್ಯವಾಗಿ ಕಾರ್ಮುಕ ಸಂಸ್ಥಾನದ ನಿರ್ದೇಶನವನ್ನು ಪುರಾಣಗಳಲ್ಲಿ ಯತ್ರ-ತತ್ರ ಮಾಡಲಾಗಿದೆ :

ದಕ್ಷಿಣಾಪರತೋ ಹ್ಯಸ್ಯ ಪೂರ್ವೇಣ ಚ ಮಹೋದಧಿಃ |
ಹಿಮವಾನುತ್ತರೇಣಾಸ್ಯ ಕಾರ್ಮುಕಸ್ಯ ಯಥಾ ಗುಣಾಃ ||

—ಮಾರ್ಕಂಡೇಯ ೫೭-೬೦

ಮಾರ್ಕಂಡೇಯ ಪುರಾಣದ ೫೭ನೆಯ ಅಧ್ಯಾಯದಲ್ಲಿ ಈ ಸಂಸ್ಥಾನವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಭಾರತವರ್ಷದಲ್ಲಿರುವ ಏಳು ಕುಲಪರ್ವತಗಳು, ನದಿಗಳು ಮತ್ತು ಜನಪದಗಳ ಒಂದು ವಿಸ್ತೃತವಾದ ಪಟ್ಟಿಯನ್ನೇ ಕೊಡಲಾಗಿದೆ. ಕೂರ್ಮ, ಬ್ರಹ್ಮಾಂಡ, ಮತ್ಸ್ಯ, ವಾಯು, ವಾಮನ ಹಾಗೂ ಶ್ರೀಮದ್ಭಾಗವತ ಮುಂತಾದ ಪುರಾಣಗಳಲ್ಲಿ ಹೇಳಿರುವ ಪೌರಾಣಿಕ ಭುವನಕೋಶಗಳ ಪ್ರಾಚೀನ ಭೂಗೋಳ ಇದೇ ಆಗಿತ್ತು. ಮಾರ್ಕಂಡೇಯ ಪುರಾಣದಲ್ಲಿ ಬಂದಿರುವ ಈ ವರ್ಣನೆ ಅನೇಕ ದೃಷ್ಟಿಗಳಿಂದ ಮಹತ್ವಪೂರ್ಣವಾಗಿದೆ. ಇಲ್ಲಿ ಏಳು ಕುಲಪರ್ವತಗಳು ಮತ್ತು ಅದರಿಂದ ಹುಟ್ಟಿ ಹರಿಯುವ ನದಿಗಳ ಸಂಬಂಧವಾದ ವರ್ಣನೆ ಅತ್ಯಂತ ಸುಂದರವಾಗಿ ಬಂದಿದೆ. ಇಷ್ಟೇ ಅಲ್ಲದೆ ಈ ದೇಶದ ವಿಭಿನ್ನ ಭಾಗಗಳ ಜನಪದಗಳು ಮತ್ತು ಅಲ್ಲಿ ವಾಸಿಸುವ ಜಾತಿಗಳ ವಿಸ್ತೃತವಾದ ವರ್ಣನೆ ಇದೆ. ಭಾರತ ವರ್ಷವನ್ನು ಏಳು ಭಾಗಗಳಾಗಿ ವಿಂಗಡಿಸಿ ಜನಪದಗಳ ಹೆಸರುಗಳನ್ನು ಕೊಟ್ಟಿದೆ. ಅವುಗಳ ಹೆಸರು ಈ ರೀತಿ ಇದೆ:—(೧) ಮಧ್ಯದೇಶ್ಯ, (೨) ಉದೀಚ್ಯ, (೩) ಪ್ರಾಚ್ಯ, (೪) ದಕ್ಷಿಣಾಪಥ, (೫) ಅಪರಾಂತ (೬) ವಿಂಧ್ಯಪೃಷ್ಠ, ಹಾಗೂ (೭) ಪರ್ವತಾಶ್ರಯಿ.

ಕೂರ್ಮ ಸಂಸ್ಥಾನ :—

ಕಚ್ಛಪ ಭಾರತವರ್ಷದ ಆರಾಧ್ಯದೇವತೆ. ಬಹುಶಃ ಈ ಭಾವನೆಯನ್ನೇ ಆಧಾರವಾಗಿಟ್ಟುಕೊಂಡು ಭಾರತವನ್ನು ಕಚ್ಛಪಾಕೃತಿಯಾದ ದೇಶವೆಂದು ಗ್ರಹಿಸಿ, ಕಚ್ಛಪ (ಆಮೆ)ದ ವಿಭಿನ್ನ ಅಂಗಾಂಗಗಳ ಸಾದೃಶ್ಯದಮೇಲೆ ಭಾರತವರ್ಷವನ್ನು ಒಂಬತ್ತು ಭಾಗಗಳಲ್ಲಿ ವಿಂಗಡಿಸಿರುವಂತೆ ಕಾಣುತ್ತದೆ. ಈ ಭಾಗಗಳು :—(೧) ಮಧ್ಯಭಾಗ, (೨) ಮುಖ, (೩) ಪೂರ್ವ-ದಕ್ಷಿಣದ ಪಾದ, (೪) ದಕ್ಷಿಣ ಕುಕ್ಷಿ, (೫) ಪಶ್ಚಿಮ-ದಕ್ಷಿಣ ಪಾದ, (೬) ಪುಚ್ಛ ಅಥವಾ ಪೃಷ್ಠಭಾಗ, (೭) ಪಶ್ಚಿಮೋತ್ತರ ಪಾದ, (೮) ಉತ್ತರ ಕುಕ್ಷಿ, (೯) ಪೂರ್ವೋತ್ತರ ಪಾದ. ಈ ರೀತಿ ಒಂದೇ ಪುರಾಣದಲ್ಲಿ-

ಮಾರ್ಕಂಡೇಯ-ಎರಡೂ ಸಂಸ್ಥಾನಗಳ ವಿವರಣೆ ದೊರೆಯುತ್ತದೆ. ಭಾರತೀಯ ಜನ ಪದಗಳ ಈ ಹೊಸ ಪಟ್ಟಿಯನ್ನು ಪ್ರಾಚೀನ ಪಟ್ಟಿಯೊಂದಿಗೆ ಹೊಲಿಸಿ ನೋಡಿದಾಗ ಅನೇಕ ಚಾರಿತ್ರಿಕವಾದ ಹೆಸರುಗಳುಚರಿತ್ರೆಯ ಬದಲಾದ ಪರಿಸ್ಥಿತಿಯಲ್ಲಿ ಪ್ರಪ್ರಥಮ ವಾಗಿ ಕುಶಾನರು ಮತ್ತು ಗುಪ್ತರ ಕಾಲದಲ್ಲಿ ಕಂಡುಬರುತ್ತವೆ. ಚರಿತ್ರಕಾರರು ಕೂಡ ಈ ಅಭಿಪ್ರಾಯವನ್ನೇ ತಳೆದಿದ್ದಾರೆ.

ಭಾರತ-ಕರ್ಮಭೂಮಿ :

ಪುರಾಣಗಳು ಭಾರತವರ್ಷದ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿವೆ. ಆಧುನಿಕ ಅಭಿಪ್ರಾಯಗಳನ್ನು ಮಾತ್ರ ಅಪ್ಪಿಕೊಂಡಿರುವ ಕೆಲವರು ಭಾರತವರ್ಷದ ಪ್ರಾಚೀನ ಸಾಹಿತ್ಯದಲ್ಲಿ ದೇಶ ಪ್ರೇಮದ ಅಭಾವವಿದೆ ಎಂಬ ಆರೋಪವನ್ನು ಹೊರಿಸುತ್ತಿದ್ದಾರೆ. ಆದರೆ ಆಗಿನ ಕಾಲದ 'ಭಾರತ-ಪ್ರಶಸ್ತಿ'ಯನ್ನು ಕೊಂಚ ಪರಿಶೀಲನೆ ಮಾಡಿದರೆ ಅರಿವಾದೀತು ಭಾರತದ ಮಹಿಮೆ ಎಂಥದು ಎಂಬುದು. ಭಾರತದ ಸುವರ್ಣಯುಗವೆನಿಸಿದ ಗುಪ್ತರಕಾಲದಲ್ಲಿ ನಾವು ಈ ಪ್ರಶಸ್ತಿಯನ್ನು ಕಾಣಬಹುದು. ಆ ಕಾಲಕ್ಕೆ ಭಾರತವರ್ಷ ಆಧಿಭೌತಿಕ, ಭೌತಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜನೈತಿಕ ಕ್ಷೇತ್ರದಲ್ಲಿ ಅತ್ಯಂತ ಉನ್ನತ ಸ್ಥಿತಿಯನ್ನು ಮುಟ್ಟಿ ಇಡೀ ವಿಶ್ವದಲ್ಲೇ ಅನನ್ಯ ರಾಷ್ಟ್ರವೆನಿಸಿತ್ತು. ಅದೇ ಕಾಲಕ್ಕೆ ಈ ದೇಶದ ಅದಮ್ಯ ಸಾಹಸಿಗಳಾದ ನಾವಿಕರು ದುರ್ಗಮವಾದ ಉತ್ತಾಲತರಂಗಗಳಿಂದ ಕೂಡಿದ ಮಹಾ ಸಾಗರಗಳನ್ನು ದಾಟಿ ಪೂರ್ವದ್ವೀಪ ಸಮೂಹಗಳಾದ ಜಾವಾ, ಸುಮಾತ್ರಾ, ಬೊರ್ನಿಯೋ, ಫಿಲಿಫೈನ್ಸ್ ಮುಂತಾದ ದ್ವೀಪಗಳಲ್ಲಿ ತಮ್ಮ ಸಂಸ್ಕೃತಿಯ ಪತಾಕೆಯನ್ನು ಹಾರಾಡಿಸಿ ಆ ದ್ವೀಪಗಳನ್ನು ತಮ್ಮ ಉಪನಿವೇಶಗಳನ್ನಾಗಿ ಮಾಡಿಕೊಂಡಿದ್ದರು. ಆ ಕಾಲಕ್ಕೆ ಭಾರತೀಯರಲ್ಲಿ ಒಂದು ಅದಮ್ಯ ಉತ್ಸಾಹವಿತ್ತು, ಅನ್ಯ ದೇಶಗಳಲ್ಲಿ ತಮ್ಮ ಸಂಸ್ಕೃತಿಯನ್ನು ಹರಡಬೇಕೆಂಬ ಅಶ್ರಾಂತವಾದ ಅಭೀಪ್ಸೆ ತುಂಬಿ ತುಳುಕುತ್ತಿತ್ತು. ಆಗಲೇ ಭಾರತೀಯರು ತಮ್ಮಲ್ಲಿಯೇ ಸುಪ್ತವಾಗಿದ್ದ ಸ್ವಜ್ಯೋತಿಃ ಪುಂಜವನ್ನು ಕಂಡುಕೊಂಡರು ಹಾಗೂ ಅದರ ಕಾಂತಿಯನ್ನೇ ವಿಶ್ವದ ಮುಂದೆ ಬೆಳಗಿದರು. ಇಂಥ ಪ್ರಶಸ್ತಿಯ ಅನೇಕ ಆಧಾರ ಸೂತ್ರಗಳು ಇವೆ :

(೧) ಭಾರತದಂಥ ದೇಶ ಪೃಥ್ವಿಯಲ್ಲಿಯೇ ಆಗ್ಗೆ ಇರಲಿಲ್ಲ. ಇಡೀ ಭೂಮಂಡಲದಲ್ಲೇ ಈ ದೇಶ ಅನುಪಮವಾಗಿತ್ತು, ಅದ್ವಿತೀಯವಾಗಿತ್ತು.

(೨) ಭಾರತವು ಸ್ವರ್ಗಕ್ಕಿಂತಲೂ ಸುಂದರವಾಗಿತ್ತು ; ಆದ್ದರಿಂದಲೇ ಸ್ವರ್ಗವಾಸಿಗಳಾದ ದೇವತೆಗಳು ಭಾರತದಲ್ಲಿ ಮನುಷ್ಯ ರೂಪದಲ್ಲಿ ಜನ್ಮ ತಳೆಯುವುದು ಶ್ರೇಯಸ್ಕರವೆಂದು ಭಾವಿಸಿದ್ದರು.

(೩) ಮಾನವ ಜೀವನದ ಎಲ್ಲ ಮಂಗಳ ಹಾಗೂ ಕಲ್ಯಾಣದಲ್ಲೂ ಭಾರತ ಸಮಾವೇಶವಾಗಿದೆ.

(೪) ಭಾರತ ಕರ್ಮಭೂಮಿ-ಅನ್ಯದೇಶಗಳು ಭೋಗ ಭೂಮಿಗಳು. ಭಾರತದಲ್ಲಿ ಸಿದ್ಧಿಗಳು ಕರ್ಮ (ಕಾಯಕ) ಕ್ಕೆ ಅಧೀನವಾಗಿ ಫಲಗಳನ್ನು ನೀಡುತ್ತವೆ.

ಭಾರತವರ್ಷದ ಮನುಷ್ಯರು ದೇವತೆಗಳಿಗಿಂತ ಉತ್ತಮರು, ಅವರ ಭವಿಷ್ಯ ಅವರ ಕೈಯಲ್ಲಿಯೇ ಇದೆ. ಕರ್ಮ (ಕಾಯಕ) ದ ಸಂಪಾದನೆಯನ್ನು ಊಟಮಾಡುವ ಭಾರತದ ಮನುಷ್ಯ ಭೋಗ ಭೂಮಿಯಾದ ಸ್ವರ್ಗದಲ್ಲಿ ತಮ್ಮ ಕರ್ಮಫಲವನ್ನು ಭೋಗಿಸುವುದರಲ್ಲಿ ಆಸಕ್ತರಾಗಿರುವ ದೇವತೆಗಳಿಗಿಂತ ಎಷ್ಟೋಪಾಲು ಉತ್ತಮ ಎಂಬ ಮಾನವನ ಶ್ರೇಷ್ಠತೆಯನ್ನು ಎತ್ತಿಹಿಡಿದಿರುವ ಪುರಾಣಗಳ ಈ ಉಕ್ತಿ ಮಾನವ ಜನಾಂಗಕ್ಕೇ ಕೊಟ್ಟಿರುವ ಒಂದು ಮಹತ್ವಪೂರ್ಣವಾದ ಕೊಡುಗೆ ಎಂದು ತಿಳಿಯಬೇಕು.

ಭಾರತ ವರ್ಷದ ಒಂಬತ್ತು ಖಂಡಗಳ ವಿಭಜನೆ :

ಭಾರತ ವರ್ಷವನ್ನು ಒಂಬತ್ತು ಖಂಡಗಳಾಗಿ ವಿಭಜಿಸಿರುವುದು ಪುರಾಣಗಳಲ್ಲಿ ಕಂಡು ಬರುತ್ತದೆ. ಅವುಗಳ ಹೆಸರು : (೧) ಇಂದ್ರದ್ವೀಪ, (೨) ಕಸೇರು, (೩) ತಾಮ್ರಪರ್ಣ, (೪) ಗಭಸ್ತಿಮಾನ್, (೫) ನಾಗದ್ವೀಪ, (೬) ಸೌಮ್ಯ, (೭) ಗಂಧರ್ವ (೮) ವಾರುಣ ಮತ್ತು (೯) ಭಾರತ :

ಭಾರತಸ್ಯ ಚ ವರ್ಷಸ್ಯ ನವ ಭೇದಾನ್ ನಿಬೋಧತ |
ಇಂದ್ರದ್ವೀಪಃ ಕಸೇರುಶ್ಚ ತಾಮ್ರಪರ್ಣೋ ಗಭಸ್ತಿಮಾನ್ |
ನಾಗದ್ವೀಪಸ್ತಥಾ ಸೌಮ್ಯೋ ಗಂಧರ್ವಸ್ತ್ವಥ ವಾರುಣಃ
ಅಯಂ ತು ನವಮಸ್ತೇಷಾಂ ದ್ವೀಪಃ ಸಾಗರ ಸಂವೃತಃ ||

(—ಮತ್ಸ್ಯ ೧೧೪, ೭-೮)

ಭಾರತದಲ್ಲಿಯೇ ಎಲ್ಲಿಯೋ ಒಂದು ಭಾಗದಲ್ಲಿ ಕುಳಿತುಕೊಂಡು ಕವಿಯು ಇದನ್ನು ಬರೆಯುತ್ತಿರುವುದರಿಂದ ಬಹುಶಃ ಒಂಬತ್ತನೆಯದರ ಹೆಸರನ್ನು ಸೂಚಿಸಿಲ್ಲ. ರಾಜಶೇಖರನು ತನ್ನ ಕಾವ್ಯಮೀಮಾಂಸೆಯಲ್ಲಿ ಇದನ್ನು ಕುಮಾರೀದ್ವೀಪ (ಕುಮಾರೀ ದ್ವೀಪಶ್ಚಾಯಂ ನವಮಃ) ಎಂದು ಹೇಳಿದ್ದಾನೆ. ವಾಮನ ಪುರಾಣದಲ್ಲಿಯೂ ಕೂಡ ಒಂಬತ್ತನೆಯದರ ಹೆಸರನ್ನು ಹೇಳಲಾಗಿದೆ :

ಅಯಂ ತು ನವಮಸ್ತೇಷಾಂ ದ್ವೀಪಃ ಸಾಗರಸಂವೃತಃ |
ಕುಮಾರಾಖ್ಯಯಃ ಪರಿಖ್ಯಾತೋ ದ್ವೀಪೋಽಯಂ ದಕ್ಷಿಣೋತ್ತರಃ ||

(—ವಾಮನ ೧೩/೧೧)

ಅಂದರೆ ಇದರ ಪ್ರಕಾರ ಈ ಪ್ರದೇಶವು ಕುಮಾರಿ (ಕನ್ಯಾಕುಮಾರೀ) ಯಿಂದ ಆರಂಭವಾಗಿ ಗಂಗಾನದಿಯವರೆಗೂ ಹಬ್ಬಿದ್ದುದರಿಂದ, ದಕ್ಷಿಣದಿಂದ ಉತ್ತರದವರೆಗೂ ಹಬ್ಬಿದ ಈ ದೇಶದ ದಕ್ಷಿಣ ಬಿಂದುವು ಕುಮಾರಿ (ಅಥವಾ ಕನ್ಯಾಕುಮಾರೀ) ಆದುದರಿಂದ ಈ ಭಾರತವೇ 'ಕನ್ಯಾಕುಮಾರೀ ದ್ವೀಪ' ಎಂದು ಪ್ರಖ್ಯಾತವಾಯಿತು.

ಗುಪ್ತರ ಕಾಲದಲ್ಲುಂಟಾದ ಭಾರತೀಯ ಸಾಂಸ್ಕೃತಿಕ ವಿಸ್ತಾರವೇ ಭಾರತ

ವರ್ಷವನ್ನು ಒಂಬತ್ತು ಖಂಡಗಳಲ್ಲಿ ವಿಭಾಗಿಸಲು ಕಾರಣವಾಯಿತು. ಈ ಯುಗದಲ್ಲಿಯೇ ಭಾರತೀಯ ಸಂಸ್ಕೃತಿ, ಭಾಷೆ, ಸಾಹಿತ್ಯ, ಧರ್ಮ ಹಾಗೂ ದರ್ಶನಗಳು ಪೂರ್ವ ದ್ವೀಪಕುಂಜಗಳಲ್ಲಿ ಆಶ್ಚರ್ಯಜನಕ ರೀತಿಯಲ್ಲಿ ಹರಡಿದ್ದವು ಆ ಕಾಲಕ್ಕೆ ಈ ಎಲ್ಲ ದ್ವೀಪಸಮೂಹಗಳೂ ಭಾರತದಲ್ಲಿ ಸಮಾವೇಶಗೊಂಡ ಇಂದಿನ ಬೃಹತ್ತರಭಾರತ (Greater India) ಭಾರತವರ್ಷವೆಂದು ಪರಿಗಣಿತವಾದಾಗ ಮುಖ್ಯ ಭಾರತಕ್ಕೆ ಯಾವುದೋ ಒಂದು ಹೊಸ ಹೆಸರಿನ್ನಿತ್ತರು, ಆ ಹೆಸರೇ-ಕುಮಾರೀ ದ್ವೀಪ. ಈ ಹೊಸ ಹೆಸರಿಗೆ ಅಂದಿನ ಜನಸಾಮಾನ್ಯವೂ ತನ್ನ ಒಪ್ಪಿಗೆಯನ್ನಿತ್ತಿತು.

ಭಾರತ ವರ್ಷದ ಸಮುದ್ರಾಂಕಿತವಾದ ಎಂಟು ವಿಭಾಗಗಳ ವರ್ತಮಾನ ಸ್ಥಿತಿಯ ಸಂಕೇತ ನಮಗೆ ದೊರೆಯುತ್ತದೆ. ಇವು ಭಾರತದಿಂದ ಪೂರ್ವದ ಕಡೆಗೆ ಹರಡಿರುವ ದ್ವೀಪಸಮೂಹಗಳ ಅಂಗಗಳೇ ಆಗಿವೆ. ಇವುಗಳನ್ನು ಕಾಳಿದಾಸನ ಕಾಲದಲ್ಲಿ 'ದ್ವೀಪಾಂತರ'ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಅವುಗಳ ವಿವರಣೆ :

(೧) ಇಂದ್ರ ದ್ವೀಪ = ಇಂದ್ರದ್ಯುಮ್ನ. ಅಂಡಮಾನ್ ದ್ವೀಪ.
(೨) ನಾಗದ್ವೀಪ = ನಾಗವರಂ=ನಕ್ಕವರಂ (ಚೋಳರ ಶಿಲಾಶಾಸನ)= ನಿಕೋಬಾರ್ ದ್ವೀಪ
(೩) ತಾಮ್ರಪರ್ಣಿ = ಸಿಂಘಲ, ಲಂಕೆ.
(೪) ವಾರುಣ ದ್ವೀಪ = ಬೋರ್ನಿಯೋ ದ್ವೀಪ.
(೫) ಕಸೇರುಮಾನ್ = ಮಲಯ ದ್ವೀಪ.
(೬)ಗಭಸ್ತಿಮಾನ್ = ?, (೭) ಸೌಮ್ಯ = ?
(೮) ಗಂಧರ್ವ ದ್ವೀಪ = ?

ಸಾಮಾನ್ಯವಾಗಿ ಎಲ್ಲ ಪುರಾಣಗಳಲ್ಲಿಯೂ ಈ ವಿಷಯವಾಗಿ ಹೇಳಿರುವ ಅಂಶಗಳು ಹೆಚ್ಚು-ಕಡಿಮೆ ಒಂದೇ ರೀತಿಯಾಗಿವೆ. ಕುಮಾರೀದ್ವೀಪ ವಿಭಿನ್ನ ದಿಕ್ಕುಗಳಲ್ಲಿರುವ ಜನರು–ಜಾತಿಗಳ ವಿಷಯದಲ್ಲಿ ಹೇಳಿರುವ ವಿಷಯಗಳು ಕಡಿಮೆ ಮಹತ್ವದವುಗಳೇನೂ ಅಲ್ಲ. ಕುಮಾರೀದ್ವೀಪದ ಪೂರ್ವೋತ್ತರ ಗಡಿಯಲ್ಲಿ ಕಿರಾತರು ಹಾಗೂ ಪಶ್ಚಿಮೋತ್ತರದ ಗಡಿಯಲ್ಲಿ ಯವನರು ಅಥವಾ ಮುಸಲ್ಮಾನರು ವಾಸಿಸುತ್ತಿದ್ದರೆಂದು ಮತ್ಸ್ಯ ಹಾಗೂ ಮಾರ್ಕಂಡೇಯ ಪುರಾಣಗಳಲ್ಲಿ ಹೇಳಿದೆ. ಯವನರ ಈ ಉಲ್ಲೇಖ ಚಾರಿತ್ರಿಕ ದೃಷ್ಟಿಯಿಂದ ಮಹತ್ವಪೂರ್ಣವಾದುದು. ಇದು ಬಹುಶ: ಕ್ರಿ. ಪೂ. ನಾಲ್ಕನೆಯ ಶತಮಾನದಲ್ಲಿ ಮೂಲತ: ಬ್ಯಾಕ್ಟ್ರಿಯಾದಲ್ಲಿ ನೆಲೆಸಿದ್ದ ಯೂನಾನಿ ಅಥವಾ ಮುಸಲ್ಮಾನರ ಸ್ಪಷ್ಟ ನಿರ್ದೇಶನವಲ್ಲದೆ ಬೇರೆಯಲ್ಲ. ಇವರು ಹಿಂದಿನ ಶತಮಾನಗಳಲ್ಲಿ ಗಾಂಧಾರ ಹಾಗೂ ಕಾಬೂಲಿನ ಘಾಟಿಯಲ್ಲಿ ಬಂದು ನೆಲೆಸಿದ್ದರು. ವಾಮನ ಪುರಾಣದ ವಿವರಣೆಯಲ್ಲಿ ಎರಡು ಹೆಸರುಗಳು ಸಮಾವಿಷ್ಟವಾಗಿವೆ—ದಕ್ಷಿಣದಲ್ಲಿ ಆಂಧ್ರ ಹಾಗೂ ಉತ್ತರದಲ್ಲಿ

ತುರುಷ್ಕ. ಇದು ಆಂಧ್ರ-ಶಾತವಾಹನರ ಸಾಮ್ರಾಜ್ಯ ದಕ್ಷಿಣದಲ್ಲಿ, ಪೂರ್ವಸಮುದ್ರದಿಂದ ಹಿಡಿದು ಪಶ್ಚಿಮಸಮುದ್ರದವರೆಗೆ ಹರಡಿದ್ದ ಹಾಗೂ ಉತ್ತರದಲ್ಲಿ, ತುರುಷ್ಕರು ಅಥವಾ ತುಷಾರದೇಶೀಯ ಶಕ (ಕುಶಾಣ ಇತ್ಯಾದಿ) ರು ಪೇಶಾವರ್‌ನಲ್ಲಿ ರಾಜ್ಯಭಾರ ಮಾಡುತ್ತಿದ್ದ ಕಾಲದಲ್ಲಿ ಅಂದರೆ ಕ್ರಿಸ್ತಶಕದ ಮೊದಲ ಅಥವಾ ಎರಡನೆಯ ಶ. ದಲ್ಲಿ ಉಂಟಾದ ಚಾರಿತ್ರಿಕ ಪರಿಸ್ಥಿತಿಯ ಪರಿವರ್ತನೆಯ ಸಂಕೇತವಾಗಿದೆ.

ಕುಲ ಪರ್ವತ : ಪೌರಾಣಿಕ ಭೂಗೋಳದಲ್ಲಿ ಎರಡು ವಿಧವಾದ ಪರ್ವತಗಳಿವೆ —ವರ್ಷಪರ್ವತ ಹಾಗೂ ಕುಲಪರ್ವತ. ವರ್ಷಪರ್ವತಗಳು ಆಯಾಯಾ ವರ್ಷ ಅಥವಾ ದೇಶಗಳ ಗಡಿಪರ್ವತಗಳಾಗಿವೆ. ಇವು ಒಂದು ದೇಶವನ್ನು ಮತ್ತೊಂದು ದೇಶದಿಂದ ಬೇರ್ಪಡಿಸುತ್ತವೆ. ಕುಲ ಪರ್ವತಗಳು ಒಂದು ದೇಶದ ಒಳ ಭಾಗದಲ್ಲಿದ್ದು ಆದೇಶದ ಪ್ರಾಂತಗಳ ಗಡಿಗಳನ್ನು ನಿರ್ಮಿಸುತ್ತವೆ. ಇವು ಒಂದು ಪ್ರಾಂತವನ್ನು ಮತ್ತೊಂದು ಪ್ರಾಂತದಿಂದ ಬೇರ್ಪಡಿಸುತ್ತವೆ. ಕುಲಪರ್ವತಗಳ ಸಂಖ್ಯೆ ಏಳು ಎಂದು ಹೇಳುತ್ತಾರೆ. ಅವು : (೧)ಮಹೇಂದ್ರ, (೨) ಮಲಯ, (೩) ಸಹ್ಯ, (೪)ಶುಕ್ತಿಮಾನ್, (೫) ಋಕ್ಷ, (೬) ವಿಂಧ್ಯ, (೭) ಪಾರಿಯಾತ್ರ. ಇವುಗಳ ಸಂಕ್ಷಿಪ್ತ ಪರಿಚಯ ಈರೀತಿ ಇದೆ:

(೧) ಮಹೇಂದ್ರ ಪರ್ವತ : ಕಳಿಂಗದಿಂದ ಪ್ರಾರಂಭವಾಗುವ ಪೂರ್ವಘಟ್ಟಗಳ ಪರ್ವತಮಾಲೆಯೇ ಮಹೇಂದ್ರ ಪರ್ವತ. ಪರಶುರಾಮನು ಈ ಪರ್ವತದ ಮೇಲೆಯೇ ತಪಸ್ಸು ಮಾಡಿದನೆಂದು ಹೇಳುತ್ತಾರೆ. ಇಂದಿಗೂ ಕೂಡ ಗಂಜಾಮಿನ ಬಳಿ ಇದನ್ನು ಮಹೇಂದ್ರಮಲ್ಲೈ ಎಂದು ಕರೆಯುತ್ತಾರೆ.

೨. **ಮಲಯ ಪರ್ವತ** :—ಪೂರ್ವಘಟ್ಟ ಹಾಗೂ ಪಶ್ಚಿಮ ಘಟ್ಟಗಳ ಬೆಟ್ಟಗಳು ಪರಸ್ಪರ ಸೇರಿಕೊಂಡು ಒಂದು ವಂಕಿಮ ರೇಖೆಯ ಆಕಾರವನ್ನು ಪಡೆಯುವ ದಕ್ಷಿಣ ಭಾರತದ ನೀಲಗಿರಿಯೇ ಮಲಯ ಪರ್ವತ. ಈ ಪರ್ವತದಲ್ಲಿ ಶ್ರೀಗಂಧದ ಮರಗಳು ಅಧಿಕ ಸಂಖ್ಯೆಯಲ್ಲಿ ಬೆಳೆಯುವುದರಿಂದ ಶ್ರೀಗಂಧದ 'ಮಲಯಜ' ಪರ್ವತವೆಂದು ಪ್ರಸಿದ್ಧವಾಗಿದೆ.

೩. **ಸಹ್ಯ ಅಥವಾ ಸಹ್ಯಾದ್ರಿ** :—ಉತ್ತರದಿಂದ ದಕ್ಷಿಣದವರೆಗೂ ಹಬ್ಬಿರುವ ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿಯೇ ಸಹ್ಯಾದ್ರಿ. ಇಂದಿಗೂ ಮಹಾರಾಷ್ಟ್ರ ಹಾಗೂ ಕೊಂಕಣದಲ್ಲಿ ಇದನ್ನು ಈ ಹೆಸರಿನಿಂದಲೇ ಕರೆಯುತ್ತಾರೆ.

೪. **ಶುಕ್ತಿಮಾನ್ ಪರ್ವತ** :—ಇದರ ವರ್ತಮಾನ ಸ್ಥಿತಿಯನ್ನು ಊಹಿಸಬಹುದು. ಸಹ್ಯಾದ್ರಿ ಪರ್ವತದ ಉತ್ತರದ ತುದಿಯಿಂದ ಸ್ವಲ್ಪ ಮೊದಲೇ ಪೂರ್ವದ ಕಡೆಗೆ ಹಬ್ಬಿರುವ ಅದರ ಭುಜಗಳನ್ನೇ ಈ ಹೆಸರಿನಿಂದ ಕರೆದಿರುವಂತೆ ಕಾಣುತ್ತದೆ. ಇದರಲ್ಲಿ ಖಾನ್ ದೇಶದ ಬೆಟ್ಟಗಳು, ಅಜಂತಾ ಹಾಗೂ ಗೋಲ್ಕೊಂಡದ ಬೆಟ್ಟಗಳೂ ಸೇರಿಕೊಂಡಿವೆ.

೫. **ಋಕ್ಷ ಪರ್ವತ** :––ಸಾತ್ಪುರ ಬೆಟ್ಟಗಳಿಂದ ಪ್ರಾರಂಭವಾಗುವ ಪರ್ವತ ಶೃಂಖಲೆಯೇ ಇದರ ಆಧುನಿಕ ಪ್ರತಿನಿಧಿ. ತಪತಿ ಹಾಗೂ ವೇಣಗಂಗೆ ಈ ಊಹೆಯನ್ನು ಪುಷ್ಟೀಕರಿಸುತ್ತವೆ. ಒರಿಸ್ಸಾದ ಬ್ರಾಹ್ಮಣಿ ಮತ್ತು ವೈತರಣೀ ನದಿಗಳ ಉದ್ಗಮ ಸ್ಥಾನವೂ ಇಲ್ಲೇ ಆಗಿತ್ತು. ಈ ಪರ್ವತವು ಛೋಟಾ ನಾಗಪುರದ ಪರ್ವತಗಳ ತನಕ ಹಬ್ಬಿದೆ.

(೬) **ವಿಂಧ್ಯ ಪರ್ವತ** : ಇಂದತು ಸುಪ್ರಸಿದ್ಧವಾದ ವಿಂಧ್ಯಪರ್ವತವೇ. ಇದರಲ್ಲಿ ಶೋಣ (ಸೋನನದಿ), ನರ್ಮದಾ, ಮಹಾನದಿ, ತಮಸಾ (ಮಧ್ಯ ಭಾರತದ ಥೇಮ್ಸ್ ನದಿ), ಹಾಗೂ ದಶಾರ್ಣ (ಇಂದಿನ ಧಸಾನ್) ನದಿಗಳು ಹುಟ್ಟಿ ಬೇರೆ ಬೇರೆ ಸಮುದ್ರಗಳಿಗೆ ಹರಿದು ಹೋಗಿ ಬೀಳುತ್ತವೆ.

(೭) **ಪಾರಿಯಾತ್ರ ಪರ್ವತ** : ಅರಾವಳೀ ಪರ್ವತಗಳು. ಇದರಲ್ಲಿ ಹುಟ್ಟುವ ನದಿಗಳಿಂದ ಇದರ ಗುರುತು ಸಿಗುತ್ತದೆ. ಇದರಲ್ಲಿ ಹುಟ್ಟುವ ಪರ್ಣಾಸ್(ಬನಾಸ್ ನದಿ,) ಚರ್ಮಣ್ವತೀ (ಚಂಬಲ್, ಮಹೀ), ಪಾರ್ವತಿ, ವೇತ್ರವತಿ (ವೇತವಾ- ಮುಂತಾದ ಮುಖ್ಯ ನದಿಗಳು ಇದರ ಹಿಂದಿನ ಗುರುತನ್ನು ದೃಢಪಡಿಸುತ್ತವೆ. ಇಷ್ಟೇ ಅಲ್ಲದೆ ಪುರಾಣಗಳಲ್ಲಿ ಮಲಯ, ದರ್ದುರ, ರೈವತ, ಅರ್ಬುದ, ಗೋಮಂತ ಮುಂತಾದ ಇನ್ನೂ ಅನೇಕ ಪರ್ವತಗಳ ಹೆಸರುಗಳನ್ನು ಹೇಳಿವೆ.

ಪುರಾಣ ದೃಷ್ಟಿಯಲ್ಲಿ ಬ್ರಹ್ಮಾಂಡ :

ಪುರಾಣದ ಪ್ರಕಾರ ಬ್ರಹ್ಮಾಂಡದಲ್ಲಿ ಭೂತತ್ವದಿಂದ ಸೃಷ್ಟಿಯಾದ ಹದಿನಾಲ್ಕು ಭುವನಗಳಿವೆ. ಪೃಥ್ವಿಯನ್ನೇ ಪ್ರಧಾನವಾಗಿಟ್ಟುಕೊಂಡು ಇದರ ಮೇಲೆ ಆರು ಲೋಕಗಳೂ ಹಾಗೂ ಇದರ ಕೆಳಗೆ ಏಳು ಲೋಕಗಳೂ ಇವೆ. ಕೆಳಗಿರುವುದರಿಂದ ಇವುಗಳನ್ನು 'ಪಾತಾಳ' ಲೋಕಗಳೆಂದು ಸಾಮಾನ್ಯವಾಗಿ ಕರೆಯುತ್ತಾರೆ. ಆ ಹದಿನಾಲ್ಕು ಲೋಕಗಳು ಈ ರೀತಿ ಇವೆ:

ಊರ್ಧ್ವಲೋಕ :	ಸತ್ಯಲೋಕ–	ಬ್ರಾಹ್ಮಸ್ವರ್ಗ ; ಅಕೃತಕತ್ರೈಲೋಕ್ಯ	ದಿವ್ಯಸ್ವರ್ಗ ಕೃತಕಾಕೃತಕ
	ತಪೋಲೋಕ–		
	ಜನ ಲೋಕ–		
	ಮಹರ್ಲೋಕ–	ಪ್ರಾಜಾಪತ್ಯಸ್ವರ್ಗ	
	ಸ್ವರ್‌ಲೋಕ–	ಮಹೇಂದ್ರ ಸ್ವರ್ಗ	ಕೃತಕ ತ್ರೈಲೋಕ್ಯ
	ಭುವರ್ಲೋಕ–	ಭೌಮಸ್ವರ್ಗ	
ಮಧ್ಯಲೋಕ :	ಭೂಲೋಕ–		

ಅಧೋಲೋಕ :	ಅತಳ-	
	ವಿತಳ-	
	ಸುತಳ-	
	ತಳಾತಳ-	
	ರಸಾತಳ-	ಬಿಲ ಸ್ವರ್ಗ
	ಮಹಾತಳ	
	ಪಾತಾಳ-	

ಪಾತಾಳ ಲೋಕದ ವಿಷಯದಲ್ಲಿ ಪುರಾಣಗಳು ನೀಡುವ ವಿವರಣೆ ಸಾಮಾನ್ಯ ನಂಬಿಕೆಗಳಿಗಿಂತ ತೀರಭಿನ್ನವಾಗಿದೆ. ಪಾತಾಳಲೋಕವು ಸಂಪೂರ್ಣವಾಗಿ ಕತ್ತಲೆಯಿಂದ ಮುಚ್ಚಿಹೋಗಿ ಕಷ್ಟಕರವಾಗಿದ್ದು ಪ್ರಾಣಿವಾಸಕ್ಕೆ ಸುತರಾಂ ಅಯೋಗ್ಯವಾಗಿದೆ ಎಂಬುದು ಸಾಮಾನ್ಯ ಜನತೆಯ ನಂಬಿಕೆ ; ಆದರೆ ಪುರಾಣಗಳ ವಿವರಣೆ ಇದಕ್ಕೆ ತೀರ ವಿರುದ್ಧವಾಗಿದೆ. ವಿಷ್ಣುಪುರಾಣವು (೨/೫೧೫-೧೩) ಮಹರ್ಷಿ ನಾರದನ ಅನುಭೂತಿಯನ್ನು ಉಲ್ಲೇಖಿಸುತ್ತ ಪಾತಾಳದ ವಿಷಯದಲ್ಲಿ ಈ ರೀತಿ ಹೇಳುತ್ತದೆ : ಪಾತಾಳವು ಸ್ವರ್ಗಕ್ಕಿಂತ ಸುಂದರವಾಗಿದೆ. (ಸ್ವರ್ಲೋಕಾದಪಿ ರಮ್ಯಾಣಿ ಪಾತಾಲಾನೀತಿ ನಾರದಃ). ಸೂರ್ಯ-ಚಂದ್ರರು ಸದಾ ಕಾಲವೂ ಅಲ್ಲಿ ಇರುವುದರಿಂದ ಅದು ಯಾವಾಗಲೂ ಪ್ರಕಾಶಮಯವಾಗಿಯೂ ಕಾಂತಿಯುಕ್ತವಾಗಿಯೂ ಇರುತ್ತದೆ-ಆದರೆ ಒಂದು ವೈಶಿಷ್ಟ್ಯದಿಂದ ಕೂಡಿರುತ್ತದೆ. ಹಗಲಿನಲ್ಲಿ ಸೂರ್ಯನ ಕಿರಣಗಳು ಕೇವಲ ಬೆಳಕನ್ನು ಮಾತ್ರ ಉಂಟುಮಾಡುತ್ತವೆ, ಬಿಸಿಲನ್ನು ಉಂಟುಮಾಡುವುದಿಲ್ಲ ; ರಾತ್ರಿಯಲ್ಲಿ ಚಂದ್ರನಿಂದ ಕೇವಲ ಬೆಳುದಿಂಗಳು ಹಬ್ಬುವುದೇ ಹೊರತು ಚಂದ್ರನ ಕಿರಣಗಳಿಂದ ಶೀತವುಂಟಾಗುವುದಿಲ್ಲ. ಅಲ್ಲಿನ ನಿವಾಸಿಗಳಾದ ದೈತ್ಯ, ದಾನವ ಹಾಗೂ ನಾಗಲೋಕದವರು ಸ್ವಚ್ಛ ಆಭರಣಗಳು ಸುಗಂಧಮಯ ಅನುಲೇಪನ ಹಾಗೂ ವೇಣು-ವೀಣೆ ಇತ್ಯಾದಿ ಸ್ವರಯಂತ್ರಗಳು ಹಾಗೂ ಉದಾರ ಜನಗಳ ಮೂಲಕ ಭೋಗ್ಯ ಪದಾರ್ಥಗಳ ಸೇವನೆ ಮಾಡುತ್ತಾರೆ. ಭೋಗವಿಲಾಸದ ಸಮಸ್ತ ಸಾಮಗ್ರಿಗಳಿಂದ ಸಂಪನ್ನವಾಗಿರುವ ಪಾತಾಳಲೋಕದ ನಿವಾಸ ಮನುಷ್ಯರಿಗೂ ಸ್ಪೃಹಣೀಯವೇ ಹೊರತು ತಿರಸ್ಕರಣೀಯವಲ್ಲ. ಇಲ್ಲಿ ವಿಷ್ಣುವಿನ ತಾಮಸ ಶರೀರವೆನಿಸಿದ ಶೇಷ ಅಥವಾ ಅನಂತ ವಾಸಿಸುತ್ತದೆ. ಇದು ಇಲ್ಲಿ ತನ್ನ ಹೆಡೆಗಳ ಸಹಸ್ರ ಮಣಿಗಳಿಂದ ಸಮಸ್ತ ದಿಕ್ಕುಗಳನ್ನೂ ಬೆಳಗುತ್ತ ಪ್ರಪಂಚದ ಕಲ್ಯಾಣಕ್ಕಾಗಿ ಅಸುರರನ್ನು ವೀರ್ಯಹೀನರನ್ನಾಗಿ ಮಾಡುತ್ತಿರುತ್ತದೆ. ಏಳು ಪಾತಾಳಲೋಕಗಳಲ್ಲಿ ಪ್ರತಿಯೊಂದೂ ಲೋಕದ ಬೇರೆ ಬೇರೆಯಾದ ವಿಸ್ತೃತ ವರ್ಣನೆಯನ್ನು ಮಾಡುವುದರಿಂದ ವಿಷ್ಣು ಪುರಾಣಕ್ಕಿಂತ

ಭಾಗವತದಲ್ಲಿರುವ ವರ್ಣನೆ ವಿಶಿಷ್ಟತರವಾಗಿದೆ. ಅನುಭವ ಸತ್ಯದ ಸ್ಪಷ್ಟತೆಯಷ್ಟು ಸ್ಫುಟವಾಗಿ ಇದರ ವರ್ಣನೆ ಸಾಂಗೋಪಾಂಗವಾಗಿ ಬಂದಿದೆ. ಇದನ್ನು ಭೂಖಂಡದ ಯಾವುದಾದರೂ ಭಾಗದೊಂದಿಗೆ ಹೋಲಿಸಬಹುದೇ ?

ಬಹುಶಃ ಇಂದು ಉತ್ತರ, ಮಧ್ಯ ಹಾಗೂ ದಕ್ಷಿಣ ಅಮೇರಿಕಾ ಎಂದು ಕರೆಯುತ್ತಿರುವ ಪಶ್ಚಿಮ ಗೋಳಾರ್ಧದೊಂದಿಗೆ ಪುರಾಣದಲ್ಲಿ ವರ್ಣಿಸಿರುವ ಈ ಭೂಭಾಗವನ್ನು ಹೋಲಿಸಬಹುದೆಂದು ಕಾಣುತ್ತದೆ. ಶ್ರೀಮದ್ಭಾಗವತವು 'ಅತಳ" ಎಂಬ ಹೆಸರಿನ ಪಾತಾಳಲೋಕದಲ್ಲಿ 'ಮಯ" ಎಂಬ ಹೆಸರಿನ ಅಸುರನ ವಿಷಯವನ್ನು ಉಲ್ಲೇಖಿಸಿದೆ. ಈ ಪ್ರಮಾಣಭೂತವಾದ ಅಂಶ ಅತ್ಯಂತ ಸಾರವತ್ತಾಗಿದೆ. ಮಧ್ಯ ಅಮೆರಿಕದ ಪ್ರಮುಖ ಪ್ರದೇಶವಾದ ಮೆಕ್ಸಿಕೋದ ಪ್ರಾಚೀನ ಸಂಸ್ಕೃತಿಯು "ಮಯಸಂಸ್ಕೃತಿ" ಎಂಬ ಹೆಸರಿನಿಂದ ವಿಖ್ಯಾತವಾಗಿದೆ ಮತ್ತು ಇಂದಿಗೂ ಕೂಡ ಅಲ್ಲಿನ ನಿವಾಸಿಗಳು ಆ ಪ್ರಾಚೀನ ಸಂಸ್ಕೃತಿಯ ಉಪಾಸಕರಾಗಿದ್ದಾರೆ. ಮಯನು ದೊಡ್ಡ ದೊಡ್ಡ ಅದ್ಭುತವಾದ ಅರಮನೆಗಳ ನಿರ್ಮಾತೃವೂ ಅಸುರರ ಎಂಜಿನಿಯರೂ ಆಗಿದ್ದ. ಮೆಕ್ಸಿಕೋ ಹಾಗೂ ಪೆರು ಮುಂತಾದ ದೇಶಗಳ ಸಮೃದ್ಧವಾದ ಶಿಲ್ಪಕಲೆಯ ಜೀವಂತ ಪ್ರಾಸಾದಗಳನ್ನು ನೋಡಿ, ಆ ಪ್ರಾಚೀನ ಕಾಲದ ವಿಶದವಾದ ಕಲಾಕೃತಿಗಳ ವಿಸ್ಮಯಕಾರವಾದ ಸಮೃದ್ಧಿ ಹಾಗೂ ಸಂಪನ್ನತೆಯನ್ನು ಕಂಡು ಆಧುನಿಕ ಶಿಲ್ಪ ಕಲಾಪ್ರಾಚಾರ್ಯರೂ ಕೂಡ ಮೂಗಿನ ಮೇಲೆ ಬೆರಳಿಡಬೇಕಾಗುತ್ತದೆ. ಮಯನು ಅಸುರರ ಮಾಯೆಗೂ ಪ್ರಸಿದ್ಧನಾಗಿದ್ದ – ಅಂತೆಯೇ ಈ ಸ್ಥಳಗಳಲ್ಲಿ ಇಂದಿಗೂ ಪ್ರಾಚೀನ ಕಾಲದ ಗುಪ್ತ ಪ್ರಾಸಾದಗಳಲ್ಲಿ ಅಸಂಖ್ಯ ಧನರಾರಾಶಿಯನ್ನು ಅಭಿಮಂತ್ರಿಸಿ ಇಡಲಾಗಿದೆ. ಮೆಕ್ಸಿಕೋದ ಜನರ ಆಚಾರ–ವಿಚಾರ, ನಡೆ–ನುಡಿ, ಕಾರ ಅರೆಯುವ ವಿಧಾನ, ಭೋಜನದ ವಿಧಿ, ದಾಲ್–ಭಾಜಿಗಳ ಜೊತೆಯಲ್ಲಿ ಚಪ್ಪಾತಿಯನ್ನು ತಿನ್ನುವುದು ಹೀಗೆ ಎಲ್ಲ ವ್ಯವಹಾರವೂ ಇಂದಿಗೂ ಭಾರತೀಯವಾಗಿದೆ. ಆದುದರಿಂದ ಸಮಗ್ರ ಅಮೇರಿಕವನ್ನು ಪಾತಾಳಲೋಕದೊಂದಿಗೆ ಹೋಲಿಸುವುದು, ಸರ್ವಥಾ ಸತ್ಯ ಪ್ರಾಮಾಣಿಕ ಹಾಗೂ ವೈಜ್ಞಾನಿಕವಾಗಿದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ವಿಷಯವೆಂದರೆ ಅಲ್ಲಿನ ವಾಯುಗುಣ. ಅಮೆರಿಕದ ಈ ಭಾಗದಲ್ಲಿ ಸಮಶೀತೋಷ್ಣದಿಂದ ಕೂಡಿದ ವಾಯುಗುಣವಿದೆ ಹೆಚ್ಚಿನ ಬಿಸಿಯೂ ಇಲ್ಲ, ಹೆಚ್ಚಿನ ಶೀತವೂ ಇಲ್ಲ. ಪುರಾಣಗಳಲ್ಲಿ ವರ್ಣಿತವಾಗಿರುವಂತೆ ಅಲ್ಲಿನ ಸೂರ್ಯ–ಚಂದ್ರರ ಪರಿಮಿತ ವ್ಯವಹಾರವನ್ನು ಸೂಚಿಸುತ್ತದೆ. ಸೆಕೆ ಕಡಿಮೆಯಾಗುವುದು ಮತ್ತು ಶೀತದ ಪರಿಮಿತ ರೂಪ ಇವೆರಡೂ ಸ್ಪಷ್ಟವಾಗಿ ಪುರಾಣ–ನಿರ್ದಿಷ್ಟವಾದ ವೈಶಿಷ್ಟ್ಯದ ಸಂಕೇತಗಳಾಗಿವೆ. ಪುರಾಣದ ಪ್ರಕಾರ ಪಾತಾಳಲೋಕ ಭಾರತೀಯರಿಗೆ ಅಗಮ್ಯ ಹಾಗೂ ಅವ್ಯವಹಾರ್ಯವಾಗಿರಲಿಲ್ಲ ಮಾತ್ರವಲ್ಲ ಆ ಲೋಕದೊಂದಿಗೆ ನಮ್ಮ ವ್ಯವಹಾರ ಅವಿಚ್ಛಿನ್ನವಾಗಿ ನಡೆಯುತ್ತಿತ್ತು—

ಸಪ್ತೈವಮೇತೇ ಕಥಿತಾ ವ್ಯವಹಾರ್ಯಾ ರಸಾತಲಾಃ ।
ದೇವಾಸುರ ಮಹಾನಾಗರಾಕ್ಷಸಾಧ್ಯುಷಿತಾಃ ಸದಾ ॥

—ವಾಯು ೫. ಅ. ೫೪ ಶ್ಲೋ

ಸಿದ್ಧಾಂತವೇನೆಂದರೆ ಪಾತಾಳದ ಪೌರಾಣಿಕ ವರ್ಣನೆ ಕಲ್ಪನಾ ಪ್ರಸೂತವಲ್ಲ, ಅನುಭವಾಶ್ರಿತವಾದುದು. ಇವು ಅಂದರೆ ಈ ಪಾತಾಳಲೋಕಗಳು ವಾಸ್ತವಿಕ ಭೂಭಾಗದ ಭೌಗೋಳಿಕ ಘಟಕಗಳಾಗಿವೆ. ಇಲ್ಲಿ ಆರ್ಯರ ಆವಾಗಮನವಾಗುತ್ತಿತ್ತು. ಯಾವುದೋ ಒಂದು ಕಾಲಕ್ಕೆ ಸೈಬೀರಿಯಾದ ಪೂರ್ವ ಪ್ರದೇಶ ಉತ್ತರ ಅಮೆರಿಕದ ಅಲಾಸ್ಕ ಎಂಬ ಹೆಸರಿನ ಉತ್ತರ ಪ್ರದೇಶದೊಡನೆ ಮಿಳಿತವಾಗಿತ್ತು ಎಂಬ ವಿಷಯ ಭೂಗೋಳದ ವಿದ್ಯಾರ್ಥಿಗಳಿಗೆ ಅಜ್ಞಾತವೇನೂ ಅಲ್ಲ. ಆದ್ದರಿಂದ ಪಾತಾಳ ಲೋಕಗಳಿಗೆ ಹೋಗುವ ಮಾರ್ಗಗಳಲ್ಲಿ ಈ ಕಡೆಯಿಂದ ಇದೊಂದು ಸ್ಥಲಮಾರ್ಗವೂ ಆಗಿತ್ತೆಂದು ಹೇಳಿದರೆ ನಮ್ಮ ಊಹೆಗೆ ವಿರುದ್ಧವೇನೂ ಆಗಲಾರದು.

ಮಯನು ಅಸುರರ ವಿಶಾಲ ಪ್ರಾಸಾದಗಳ ನಿರ್ಮಾತೃವೆಂದು ಭಾರತ ವರ್ಷದಲ್ಲೆಲ್ಲ ಪ್ರಸಿದ್ಧನಾಗಿದ್ದಾನೆ. ಯುಧಿಷ್ಠಿರನ ರಾಜಪ್ರಾಸಾದವನ್ನು ನಿರ್ಮಿಸಿದ್ದವನೂ ಮಯನೇ. ಈ ಅರಮನೆಯ ನೆಲಗಟ್ಟನ್ನು ನೋಡಿದಾಗ ಇದು ನೆಲವೋ ಜಲವೋ ಎಂಬ ಭ್ರಾಂತಿಯುಂಟಾಗುತ್ತಿತ್ತು. ಮೆಕ್ಸಿಕೋದಲ್ಲಿರುವ ಮಯ ಜನಾಂಗದ ಅರಮನೆಗಳೂ ಈ ಮಾದರಿಯಲ್ಲಿಯೇ ಇವೆ. ಮಯ ಜನಾಂಗದ ಶಿಲ್ಪಕಲೆಯ ಪರಿಚಯ ಮಾಡಿಕೊಡುವ ಈ ವಿಷಯದಲ್ಲಿನ ವಿಶೇಷಜ್ಞರ[1] ಸಮ್ಮತಿಯನ್ನು ಇಲ್ಲಿ ಕೊಡಲಾಗಿದೆ. ಭಾರತದ ಮಯ ಅಸುರರ ನಿರ್ಮಾಣ ಕಾರ್ಯವು ಕೇವಲ ಪುರಾಣಗಳಲ್ಲಿ ಮಾತ್ರ ವರ್ಣ್ಯ ವಿಷಯವಾಗಿದೆ; ಆದರೆ ಮೆಕ್ಸಿಕೋ ದೇಶದ ಮಯ ಜನಾಂಗದ ನಿರ್ಮಾಣ ಕಾರ್ಯ ಇಂದಿಗೂ ಪ್ರಚಲಿತವಿದೆ ಮತ್ತು ಇವರು ತಮ್ಮ ಈ ಅನುಪಮ ಕಲೆಯಿಂದ ಇಂದಿನ ವೈಜ್ಞಾನಿಕ ಯುಗದ ಇಂಜಿನಿಯರ್‌ಗಳನ್ನೂ ಚಕಿತಗೊಳಿಸುತ್ತಿದ್ದಾರೆ.

---

1. When one wanders through the great Maya-Cities, one feels Convinced that the maya architects Could not have accomplished such mesterpices as the great-temple of Tokal or the charming temples of Sun, the cross, and the foliated cross at palenque, nor the house of the governer and the nunnery of uxmal, without first having laid out careful ground plans and having drawn up elevations and made sketches for the design. They must have made estimates of the amount of stones with or without design to be ordered from the stone cutters and roughly calculated how many zapote-wood beams would be needed for their door ways.

—Frans Blom. Hindu America-P.212 (ತೃತೀಯ. ಸಂ.)

ಪಾತಾಳಲೋಕದಲ್ಲಿ ದೈತ್ಯ, ದಾನವ ಹಾಗೂ ನಾಗ ಜನರು ವಾಸಿಸುತ್ತಾರೆ. ಎಲ್ಲಕ್ಕಿಂತ ಕೆಳಲೋಕವಾದ 'ಪಾತಾಳ'ದಲ್ಲಿ ನಾಗಲೋಕವಿದೆ. ಅಲ್ಲಿ ಅದರ ಅಧಿಪತಿ ವಾಸುಕಿ, ಧೃತರಾಷ್ಟ್ರ, ಧನಂಜಯ, ಶಂಖಚೂಡ ಮುಂತಾದ ಮಹಾಭೋಗ-ಸಂಪನ್ನರಾದ ನಾಗಲೋಕಾಧಿಪತಿಗಳು ವಾಸಿಸುತ್ತಾರೆ. ಅವುಗಳ ಹೆಡೆಗಳಲ್ಲಿ ಮಿನುಗುತ್ತಿರುವ ಮಣಿಗಳಿಂದ ಆ ಲೋಕದ ಕತ್ತಲೆ ದೂರವಾಗುತ್ತದೆ. ಭಾಗವತದ ಈ ಹೇಳಿಕೆಯ ಸಾಕ್ಷ್ಯದ ಆಧಾರದಿಂದ ಪಾತಾಳ ಲೋಕದಲ್ಲಿ ನಾಗಾಜನರು ವಾಸಿಸುತ್ತಿದ್ದರು ಎಂಬುದು ಸರ್ವಥಾ ಸಮರ್ಥನೀಯವಾದ ಅಂಶ. ಮೆಕ್ಸಿಕೋ ಮತ್ತು ಪೆರು ದೇಶದಲ್ಲಿ ನಾಗಾಜನರು ವಾಸಿಸುತ್ತಿದ್ದರು ಎಂಬುದನ್ನು ಅಲ್ಲಿನ ಚರಿತ್ರೆಯೇ ಸಮರ್ಥಿಸುತ್ತದೆ. ಆ ದೇಶದಲ್ಲಿ ನಾಗಪೂಜೆಯೂ ಪ್ರಚಲಿತವಾಗಿತ್ತು. ಆ ದೇಶದ ನಾಗಾಜನರ ಮೂಲದ ವಿಷಯದಲ್ಲಿ ಒಂದು ಗ್ರಂಥನನ್ನು ಬರೆದ ವೋಟನ್ ಎಂಬ ಆ ದೇಶದ ಪ್ರಥಮ ಚರಿತ್ರಕಾರನು ಆ ಗ್ರಂಥದಲ್ಲಿ ತನ್ನನ್ನು ನಾಗ ವಂಶದವನೆಂದು ಹೇಳಿಕೊಳ್ಳುವುದಲ್ಲದೆ ಅಲ್ಲಿನ ದೇಶವಾಸಿಗಳನ್ನೂ 'ನಾಗ'ರೆಂದು ಕರೆಯುತ್ತಾನೆ. ಆದುದರಿಂದ ಪುರಾಣದ ಪೂರ್ವೋಕ್ತ ವರ್ಣನೆಯು ಮಧ್ಯ ಹಾಗೂ ದಕ್ಷಿಣ ಅಮೆರಿಕದಲ್ಲಿ ಅಕ್ಷರಶಃ ಚರಿತಾರ್ಥವಾಗುತ್ತದೆ. ಇಷ್ಟೇ ಅಲ್ಲ ಮೆಕ್ಸಿಕೋ ದೇಶವನ್ನಾಳಿದ ಕೊನೆಯ ರಾಜ 'ಅಜ್‌ಟೀಕ'ನು ನಾಗ ದೇವತೆಯ ಉಪಾಸಕನಾಗಿದ್ದ. ಬಹುಶಃ ಈ ಶಬ್ದ 'ಆಸ್ತೀಕ' ಶಬ್ದದಿಂದ ಉತ್ಪನ್ನವಾಗಿರಬೇಕು. ಇದು ತನ್ನ ಬುದ್ಧಿ ವೈಭವದಿಂದ ಜನಮೇಜಯನ ನಾಗಯಜ್ಞದಲ್ಲಿ ಸರ್ವಾಹುತಿಗೊಳಗಾಗುತ್ತಿದ್ದ ಸರ್ಪಗಳನ್ನು ರಕ್ಷಿಸಿದ ಋಷಿಯ ಹೆಸರಾಗಿದೆ. ನಾಗೋಪಾಸಕರಾದ 'ಅಜ್‌ಟೀಕ್' ಜಾತಿಯ ನಾಮಕರಣ, ಸರ್ಪಗಳ ಉದ್ಧಾರಕ ಹಾಗೂ ರಕ್ಷಕನಾದ ಆಸ್ತೀಕ ಋಷಿಯ ಹೆಸರಿನ ಆಧಾರದಿಂದಲೇ ಉಂಟಾಗಿದೆ ಎಂದರೆ ಇದು ಖಂಡಿತವಾಗಿಯೂ ಅಸಂಭವವೇನೂ ಆಗಲಾರದು.

ಮೇಕ್ಸಿಕೊ-ಪೆರು ಮುಂತಾದ ಅಮೆರಿಕಾ ದೇಶಗಳ ಧನವೈಭವ, ಚಿನ್ನದಿಂದ ಅದ್ದಿರುವ ಅರಮನೆಗಳು ಹಾಗೂ ರಸ್ತೆಗಳು ಈ ದೇಶಗಳು ಸಂಪೂರ್ಣವಾಗಿ ಸಮೃದ್ಧವಾಗಿದ್ದವು, ಐಶ್ವರ್ಯ-ಸಂಪತ್ತಿನಿಂದ ತುಂಬಿದ್ದವು ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಗಳಾಗಿವೆ. ಈ ಎಲ್ಲ ಪ್ರಮಾಣಗಳನ್ನೂ ಕ್ರೋಢೀಕರಿಸಿ ಅಮೆರಿಕ, ವಿಶೇಷವಾಗಿ ಮಧ್ಯ ಹಾಗೂ ದಕ್ಷಿಣ ಅಮೆರಿಕ ದೇಶಗಳು ಪುರಾಣಗಳಲ್ಲಿ ವರ್ಣಿತವಾದ ಅತುಲವಾದ ಧನ-ಸಂಪತ್ತಿನಿಂದ ಕೂಡಿದ ಪಾತಾಳ ಲೋಕದಿಂದ ಭಿನ್ನವಲ್ಲ ಎಂಬ ನಿಸ್ಸಂದಿಗ್ಧವಾದ ಸಿದ್ಧಾಂತಕ್ಕೆ ಬರಬಹುದು. ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಪರಿಶೀಲನೆಯನ್ನು ಮಾಡಬಹುದು.

ಪುರಾಣ ಸಾಹಿತ್ಯದಲ್ಲಿ ದೊರೆಯುವ ಚತುರ್ದಶ ಭುವನಾತ್ಮಕ ಬ್ರಹ್ಮಾಂಡಗಳ ಸಂಕ್ಷಿಪ್ತ ಪರಿಚಯವನ್ನು ಮೇಲೆ ನೀಡಲಾಗಿದೆ. ಭೂಲೋಕದಿಂದ ಹಿಡಿದು ಸತ್ಯಲೋಕ

ಸಮಗ್ರ ಭೂಲೋಕ ಮತ್ತು ಕೆಳಗಿನ ಏಳು ವಿಧವಾದ ಪಾತಾಳ ಲೋಕಗಳೂ ಇದರಲ್ಲಿ ಸೇರಿಕೊಂಡಿವೆ. ಈ ಬ್ರಹ್ಮಾಂಡವನ್ನು ತಿಳಿದುಕೊಂಡಿರುವ ವ್ಯಕ್ತಿ ಶಾಸ್ತ್ರಗಳಲ್ಲಿ 'ಪುರಾಣವಿದ' ಎಂದು ಪ್ರಸಿದ್ಧನಾಗಿದ್ದಾನೆ. ಆದರೆ ಇದಕ್ಕಿಂತಲೂ ವಿಸ್ತೃತವಾದ ಹಾಗೂ ವಿಶಾಲವಾದ ಬ್ರಹ್ಮಾಂಡಗಳ ಅಸ್ತಿತ್ವವಿದೆ ಎಂದು ಆಗಮಗಳಿಂದ ತಿಳಿದು ಬರುತ್ತದೆ. ಅಂದರೆ ಕೇವಲ ಭೂಮಂಡಲಾಂತರ್ಗತವಾಗಿರುವ ಲೋಕಗಳ ವಿವರಣೆ ಮಾತ್ರ ಪುರಾಣಗಳಲ್ಲಿದ್ದು ಈ ಭೂಲೋಕಗಳ ಸಮಷ್ಟಿಯನ್ನು ಬ್ರಹ್ಮಾಂಡ ಎಂದು ಕರೆದಿದ್ದಾರೆ. ಆದರೆ ತಂತ್ರಗಳ ದೃಷ್ಟಿಯಿಂದ ನೋಡಿದರೆ ಈ ಬ್ರಹ್ಮಾಂಡದಿಂದ ಹೊರಗೆ ಇದಕ್ಕಿಂತಲೂ ವಿಶಾಲವಾದ ಅಂಡಗಳ ಅಸ್ತಿತ್ವವಿದೆ ಎಂಬುದು ಕಂಡುಬರುತ್ತದೆ. ಬ್ರಹ್ಮಾಂಡಗಳ ಸಂಖ್ಯೆ ಅಸಂಖ್ಯವಾಗಿದ್ದರೂ ಈ ಬ್ರಹ್ಮಾಂಡದಿಂದ ಆಚೆಗೆ ಇದಕ್ಕೆ ಭಿನ್ನ ವಾದ 'ಪ್ರಕೃತ್ಯಂಡ' ಎಂಬ ಅಂಡವು ಪ್ರಸಿದ್ಧವಾಗಿದೆ. ಇದು ಜಲ ತತ್ವದಿಂದ ಹಿಡಿದು ಪ್ರಕೃತಿ ತತ್ವದ ತನಕ ಇರುವ ಇಪ್ಪತ್ತಮೂರು ತತ್ವಗಳ ಸಮಷ್ಟಿಯನ್ನೊಳಗೊಂಡು ರೂಪಿತವಾಗಿದೆ. ಇದರ ಸಂಖ್ಯೆಯೂ ಅಸಂಖ್ಯಾತವಾಗಿದೆ. 'ಪ್ರಕೃತ್ಯಂಡದಿಂದಲೂ ಆಚೆಗೆ ಇದರಿಂದ ಭಿನ್ನವಾದ 'ಮಾಯಾಂಡ' ಎಂಬ ಅಂಡವು ಪ್ರಸಿದ್ಧವಾಗಿದೆ. ಪುರುಷ-ನಿಯತಿ-ಕಾಲ-ರಾಗ-ವಿದ್ಯಾ-ಕಲಾ ಹಾಗೂ ಮಾಯಾ ಎಂಬ ಏಳು ತತ್ವಗಳ ಸಮಷ್ಟಿ ಯಿಂದ ಕೂಡಿದ ಅಂಡಕ್ಕೆ ಮಾಯಾಂಡ ಎಂದು ಕರೆಯುತ್ತಾರೆ. ಒಂದೊಂದು ಮಾಯಾಂಡದಲ್ಲಿಯೂಅಸಂಖ್ಯಾತವಾದ ಪ್ರಕೃತ್ಯಂಡಗಳಿವೆ.ಈ ಮಾಯಾಂಡವು ಪುರುಷ ನಿಂದ ಹಿಡಿದು ಪಂಚಕಂಚುಕರ ಕಾರಣರೂಪಿಯಾದ ಮಾಯೆಯಿಂದ ಆಗಿದೆ. ಈ ಮಾಯೆಯಿಂದಾಚೆಗೆ ಜ್ಯೋತಿರ್ಮಯವಾದ ಶುದ್ಧ ಸತ್ವಾತ್ಮಕವಾದ 'ಶಾಕ್ತಾಂಡ'ವೆಂಬ ಅಂಡವು ಪ್ರಸಿದ್ಧವಾಗಿದೆ. ಇದು ವಿದ್ಯಾತತ್ವಗಳ ಸಮಷ್ಟಿಯಿಂದಾಗಿದೆ. ಅಂದರೆ ಈ ಅಂಡದಲ್ಲಿ ಶುದ್ಧವಿದ್ಯೆ, ಈಶ್ವರ ಹಾಗೂ ಸದಾಶಿವ ತತ್ವಗಳು ಇರುತ್ತವೆ. ಈ ಅಂಡಗಳ ಅಧಿಷ್ಠಾತ್ರಿ ಪುರುಷರ ಕಲ್ಪನೆಯೂ ತಂತ್ರಗಳಲ್ಲಿ ಇದೆ. ಬ್ರಹ್ಮಾಂಡ (ಅಥವಾ ಪಾರ್ಥಿ ವಾಂಡ)ದ ಅಧಿಷ್ಠಾತ್ರಿಯು ಬ್ರಹ್ಮ ; ಪ್ರಕೃತ್ಯಂಡದ ಅಧಿಷ್ಠಾತ್ರಿ ವಿಷ್ಣು ; ಮಾಯಾಂ ಡದ ಅಧಿಷ್ಠಾತ್ರಿ ರುದ್ರ. ಇಲ್ಲಿನ ತನಕ ಮಾಯಾರಾಜ್ಯದ ಅಸ್ತಿತ್ವವಿದೆ. ಇಲ್ಲಿಂದಾ ಚೆಗೆ ಶುದ್ಧ ಸತ್ವಾತ್ಮಕ ಸೃಷ್ಟಿಯ ಆರಂಭವಾಗುತ್ತದೆ. ಆದ್ದರಿಂದ ಶಾಕ್ತಾಂಡದ ಅಧಿ ಷ್ಠಾತ್ರಿಗಳು ಈಶ್ವರ ಮತ್ತು ಸದಾಶಿವ. ಈಶ್ವರ ಮತ್ತು ಸದಾಶಿವ ತಿರೋಧಾನ ಮತ್ತು ಅನುಗ್ರಹ ಶಕ್ತಿಯಿಂದ ಸಂಪನ್ನನಾದ ಪರಮೇಶ್ವರನ ಎರಡು ಕಾರ್ಯಾನುರೂಪಿಯಾದ ಆಧಿಕಾರಿಕ ಹೆಸರುಗಳೇ ಆಗಿವೆ. ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಮತ್ತು ಸದಾಶಿವ ಈ ಐದು ಜನ ಪುರುಷರನ್ನು ತಂತ್ರಗಳಲ್ಲಿ ಪಂಚಕಾರಣ ಎಂದು ಕರೆದಿದ್ದಾರೆ. ವಿಶ್ವದ ಎಲ್ಲ ವ್ಯಾಪಾರಗಳಲ್ಲಿಯೂ ತನ್ನ ವಿಶಿಷ್ಟ ಅಧಿಕಾರಕ್ಕನುಸಾರವಾಗಿ ಇವರದೇ ಪ್ರಾಧಾನ್ಯ ವಿರುತ್ತದೆ.

ಈ ರೀತಿ ತಾಂತ್ರಿಕ ಗ್ರಂಥಗಳಲ್ಲಿ ವರ್ಣಿತವಾಗಿರುವ ಅಂಡಗಳ ಜೊತೆಯಲ್ಲಿ ಪೌರಾಣಿಕ ಅಂಡ(ಅಥವ ಬ್ರಹ್ಮಾಂಡ) ಗಳನ್ನು ಹೋಲಿಸಿದಾಗ ಇದು ಅತ್ಯಂತ ಕಡಿಮೆ ಸ್ಥಾನವನ್ನೊಳಗೊಂಡಿರುವಂತೆ ಕಾಣುತ್ತದೆ. ಆದರೂ ಕೂಡ ಇದು ಸ್ವಯಂ ಅನಂತ ವಾಗಿದೆ, ಅಸಂಖ್ಯಾತವಾಗಿದೆ. ತಾಂತ್ರಿಕ ಅಂಡಗಳನ್ನು ದೃಷ್ಟಿಯಲ್ಲಿಟ್ಟುಕೊಂಡಾಗ ಈ ಮಹಾ ಬ್ರಹ್ಮಾಂಡದ ವೈಶಾಲ್ಯ ಹಾಗೂ ಅಸಂಖ್ಯತೆ ಮಾನವ ಬುದ್ಧಿಗೆ ಅಗೋಚರ ವಾದ ವಸ್ತುವೆನಿಸುತ್ತದೆ.

ಮನ್ವಂತರದ ವಿವರಣೆ

ಪುರಾಣಕಾರರ ಪ್ರಕಾರ ಕಾಲದ ಸ್ವರೂಪ. (ಮನುಷ್ಯಮಾನ)

(ಸಿದ್ಧಾಂತ ಶಿರೋಮಣಿಯ ಪ್ರಕಾರ)

18 ನಿಮಿಷ	=	1 ಕಾಷ್ಠ
30 ಕಾಷ್ಠ	=	1 ಕಲೆ
30 ಕಲೆ	=	1 ಘಳಿಗೆ
2 ಘಳಿಗೆ=60 ಕಲೆ	=	1 ಮುಹೂರ್ತ
60 ಘಳಿಗೆ=30 ಮುಹೂರ್ತ	=	1 ಹಗಲು-ರಾತ್ರಿ (ದಿವಸ)
15 ಹಗಲು-ರಾತ್ರಿ	=	1 ಪಕ್ಷ.
2 ಪಕ್ಷ	=	1 ತಿಂಗಳು.
6 ತಿಂಗಳು	=	1 ದಕ್ಷಿಣಾಯನ.
6 ತಿಂಗಳು	=	1 ಉತ್ತರಾಯನ.
2 ಅಯನ	=	1 ವರ್ಷ.
1 ದಕ್ಷಿಣಾಯನ	=	1 ದಿವ್ಯರಾತ್ರಿ
1 ಉತ್ತರಾಯನ	=	1 ದಿವ್ಯಹಗಲು.
30 ವರ್ಷ	=	1 ದಿವ್ಯ ಮಾಸ(ತಿಂಗಳು)
360 ವರ್ಷ	=	1 ದಿವ್ಯ ವರ್ಷ
3030 ವರ್ಷ	=	1 ಸಪ್ತರ್ಷಿ ವರ್ಷ.
9090 ವರ್ಷ	=	1 ಧ್ರುವ ವರ್ಷ.
96000 ವರ್ಷ	=	1 ದಿವ್ಯ ಸಹಸ್ರವರ್ಷ
17,28,000 ವರ್ಷ	=	1 ಸತ್ಯಯುಗ(ಕೃತಯುಗ)
12,96,000 ವರ್ಷ	=	1 ತ್ರೇತಾಯುಗ.
8,64,000 ವರ್ಷ	=	1 ದ್ವಾಪರ ಯುಗ.
4,32,000 ವರ್ಷ	=	1 ಕಲಿಯುಗ.
43,20,000 ವರ್ಷ	=	1 ಚತುರ್ಯುಗ.
30,67,20,000 ವರ್ಷ	=	1 ಮನ್ವಂತರ(=71 ಚತುರ್ಯುಗ)
4,29,40,80,000 ವರ್ಷ	=	14 ಮನ್ವಂತರ.
2,59,20,000 ವರ್ಷ	=	ಮನ್ವಂತರ ಸಂಧ್ಯಾಂಶ
1,97,29,49,064 ವರ್ಷ	=	ಸೃಷ್ಟಿ ಭುಕ್ತಕಾಲ(ಸಂ. 2021 ರ ತನಕ)
4,32,00,00,000 ವರ್ಷ	=	1 ಬಹ್ಮದಿನ ಸಹಸ್ರ ಚತುರ್ಯುಗ.
4,32,00,00,000 ವರ್ಷ	=	1 ಬ್ರಹ್ಮರಾತ್ರಿ.

ಪುರಾಣ ವಿಚಾರ

ಚಂದ್ರಶೇಖರನು ಸಾಂಗಾವಾಗಿಯೆ ಪೇಳ್ದ ಭೋಧೆಯನ್ನು ಅಂಗವಿಸಿಕೊಂಡು ಕಾವ್ಯದಲ್ಲಿ ಹೇಳುವೆನೆಂದು ಹೇಳಿ ಕವಿ ಶಾಂತೇಶನು ಈ ಕಾವ್ಯವನ್ನು ಬರೆಯಲು ತೊಡಗುತ್ತಾನೆ. ತಮ್ಮ ಶಿಷ್ಯರಲ್ಲೊಬ್ಬನಾದ ಚಂದ್ರಶೇಖರನಿಗೆ ತಾವು ಸೃಷ್ಟಿತತ್ವ, ಧರ್ಮಾಧರ್ಮ ವಿಚಾರ, ಭುವನಕೋಶ ಮುಂತಾದ ವಿಷಯಗಳನ್ನು ಕುರಿತು ಆತನ ಕೋರಿಕೆಯಂತೆ ಬೋಧಿಸುತ್ತಾರೆ. ಒಂದಾದ ಮೇಲೊಂದರಂತೆ ಚಂದ್ರಶೇಖರನು ಸಿದ್ಧಲಿಂಗ ಶಿವಯೋಗಿಗಳನ್ನು ಕೇಳಿದಂತೆಯೂ, ಅವನ ಕೋರಿಕೆಯಂತೆ ಆಯಾ ವಿಷಯಗಳನ್ನು ವಿವರಿಸಿದಂತೆಯೂ ಕವಿ ಕಾವ್ಯದಲ್ಲಿ ವರ್ಣಿಸಿದ್ದಾನೆ.

ಕಾವ್ಯದ ಪ್ರಾರಂಭದಲ್ಲಿ ಸಿದ್ಧಲಿಂಗ ಶಿವಯೋಗಿಗಳನ್ನು ಶಿವನೊಂದಿಗೆ ಹೋಲಿಸಿ ಸ್ತೋತ್ರ ಮಾಡಿದ ಮೇಲೆ ತನ್ನ ವಂಶ ವೃತ್ತಾಂತವನ್ನು ಹೇಳಿಕೊಂಡು ಬಸವಣ್ಣ ಮೊದಲಾದ ಶರಣರನ್ನು ನೆನೆದು ಶಿವನಾಸ್ಥಾನಕ್ಕೆ ಬಂದ ನಾರದನ ಮಾತಿನಂತೆ ಶಿವನು ಬಸವಣ್ಣನ ಭಕ್ತಿ, ಚನ್ನಬಸವಣ್ಣನ ಸುಜ್ಞಾನ, ಪ್ರಭುವಿನ ವಿರಕ್ತಿ,ಭೃಂಗೀಶ್ವರನ ಲಿಂಗನಿಷ್ಠೆಗಣನ್ನೊಳಗೊಂಡ ತೋಂಟದ ಚೆನ್ನಿಧಾನಂ ಸಿದ್ಧೇಶ್ವರನೆಂಬ ಹೆಸರನ್ನು ಪಡೆದು ಭೂಲೋಕದಲ್ಲಿ ಜನಿಸುವಂತೆ ಹೇಳಿಕಳುಹಿಸಿದ ವಿಷಯವನ್ನು ಚಿತ್ರಿಸುತ್ತಾನೆ. ಅನಂತರ ಸಮುದ್ರ ಅರಣ್ಯಗಳ ವರ್ಣನೆಯನ್ನು ಮಾಡುತ್ತ ಸಿದ್ಧಲಿಂಗ ಶಿವಯೋಗಿಗಳ ಮೂಲ ಗುರುಪರಂಪರೆಯಬಗ್ಗೆ ಪ್ರಚಲಿತವಿರುವ ವರ್ತಕರ ಕತೆಯನ್ನು ಹೇಳಿ ಹರದನಹಳ್ಳಿಯ ಗೋಸಲ ಚನ್ನಬಸವೇಶ್ವರರ ಕರಕಮಲಸಂಜಾತರು ಸಿದ್ಧಲಿಂಗ ಶಿವಯೋಗಿಗಳು ಎಂಬುದನ್ನು ತಿಳಿಸಿ, ಇವರು ಪುಣ್ಯಕ್ಷೇತ್ರವಾದ ಶಿವಗಂಗೆಯನ್ನು ಸಂದರ್ಶಿಸಿ ನಾಗಿಣೀನದೀ ತೀರಕ್ಕೆ ಬಂದು ಅಲ್ಲಿನ ಹೂದೋಟದಲ್ಲಿ ಶಿವಯೋಗದಲ್ಲಿ ನಿಂತ ಸ್ಥಿತಿಯನ್ನು ವರ್ಣಿಸುತ್ತಾನೆ. ಸಿದ್ಧಲಿಂಗೇಶ್ವರರ ಭಕ್ತಿಯನ್ನು ಮೆಚ್ಚಿದ ಶಿವನು ಅಷ್ಟಸಿದ್ಧಿಗಳನ್ನು ಕಳುಹಿಸುತ್ತಾನೆ. ಆಗ ಶಿವಯೋಗಿಗಳು ಆ ಸಿದ್ಧಿಗಳನ್ನು ನಿವಾರಿಸಿ ಯಮ-ನಿಯಮಾದಿ ಅಷ್ಟಾಂಗ ಯೋಗದ ಹಂಗನ್ನು ಹೊದ್ದದೆ, ಯೋಗಕ್ಕೆ ಬೇಕಾದ ಭೋಜನ ಮುಖ್ಯವನ್ನು ಭಾವಿಸದೆ ರಸಘುಟಿಕೆ ತನುವಂಜನಾದಿ ಸಿದ್ಧಿಗಳನ್ನು ಜರೆದು, ಪರಕಾಯ ಪ್ರವೇಶ ಮುಂತಾದುವನ್ನು ತ್ಯಜಿಸಿ, ದೂರದೃಷ್ಟಿ, ದೂರಶ್ರವಣ ತ್ರಿಕಾಲಜ್ಞಾನಗಳ ಬಲ್ಮೆಯನ್ನು ಪರಿಹರಿಸಿ ಇವುಗಳನ್ನು ಜಾಣ್ಮೆಯಿಂದ ಭೂತಗಳು ಕೂಡ ಅರಿಯುವುದಿಲ್ಲವೇ ? ಕ್ಷೋಣಿಯಲ್ಲಿವು ಯೋಗಿಸಿದ್ಧರ ಅಧ್ವಂಗಳೇ ಹೊರತು ಪ್ರಾಣಲಿಂಗಿಗಳಂಗವಲ್ಲೆಂದು ಜರೆದು ಲಿಂಗದೊಳ್ಮನಮಂ ನಿಲಿಸಿ ಶಿವಯೋಗದಲ್ಲಿ ನಿಂದ ಶಿವಯೋಗಿಗಳು ಮನವನ್ನು ಲಿಂಗದಲ್ಲಿ ನೆಲೆಗೊಳಿಸದೆ ದೇಹಶೋಧನೆ ಮಾಡುವುದರಿಂದೇನು ಪ್ರಯೋಜನ ಎಂದು ಹೇಳುತ್ತಾರೆ.

ಹರನ ಪರಶಕ್ತಿ, ಅದರಿಂದ ಬಿಂದು ಜನಿಸಿತು. ಈ ಬಿಂದುವಿನಿಂದ ಮೂವತ್ತಾರು ತತ್ವಗಳು ಜನಿಸಿದುವು. ಮಹಾಮಾಯೆಗೆ ಮಲನೆಂಬ ಹೆಸರುಂಟು.

ಈ ಮಲತತ್ವವನ್ನು ಪಡೆದ ಶರೀರವನ್ನು ಎಷ್ಟು ಶೋಧಿಸಿದರೆ ತಾನೆ ಅದು ಶುಚಿಯಾಗ ಬಲ್ಲುದೆ ? ಮಾಸಿದ ಬಟ್ಟೆಯನ್ನು ತೊಳೆದರೆ ಬಿಳಿದಪ್ಪುದಲ್ಲದೆ, ಮಲದಲ್ಲಿ ಸವೆದ ಬಟ್ಟೆ ಯನ್ನು ತೊಳೆದರೆ ಬಿಳಿದಪ್ಪುದೆ ! ಕೆಸರಿಲ್ಲಿ ಮುಳುಗಿದವನನ್ನು ತೊಳೆದರೆ ಕೆಸರು ಹೋಗಿ ಮುನ್ನಿನ ಕಾಂತಿ ಬರುವುದು, ಆದರೆ ಮಣ್ಣಿನಿಂದ ಮಾಡಿದ ಮೂರ್ತಿಯನ್ನು ತೊಳೆದರೆ ಕೆಸರು ಬರದಿರುವುದೇ ? ಯೋಗದ ಬಲ್ಮೆಯಿಂದ ಹಸಿವು ತೃಷೆಗಳನ್ನು ನೀಗಿಸಲು ಸಾಧ್ಯವೇ ? ಆದುದರಿಂದ ಲಿಂಗದಲ್ಲಿ ಮನವನ್ನು ನೆಡಬೇಕು ಎಂಬ ಅನುಭವದ ಮಾತುಗ ಳನ್ನಾಡುತ್ತಾರೆ. ಒಂದು ವೇಳೆ ಅದರಿಂದ ಹಸಿವು ತೃಷೆಗಳನ್ನು ಜಯಿಸಿದರೂ ಅದೇನು ದೊಡ್ಡ ಜ್ಞಾನವೆ ? ಪಶು-ಪಕ್ಷಿಗಳಿಗೂ ಅಂಥ ಜ್ಞಾನವಿರುವುದಿಲ್ಲವೇ ! ಕೋಳಿಯನ್ನು ಗೂಡೆಯಲ್ಲಿ ಮುಚ್ಚಿಟ್ಟಿದ್ದರೂ, ಅದು ಕೂಗುವ ಸಮಯ ಬಂದಾಗ ಮರೆಯಲ್ಲಿದ್ದರೂ ಕೂಗುವುದಿಲ್ಲವೇ ! ಎಂದು ಮುಂತಾಗಿ ಅನುಭವೋಕ್ತಿಗಳನ್ನು ಹೇಳಿ ಇಂಥ ಅಷ್ಟತನು ಸಿದ್ಧಿಗಳನ್ನು ಅಲ್ಲಗಳೆದು ಚಂದ್ರಶೇಖರನಿಗೆ ತಾರಕದ ಸ್ಥಿತಿಯನ್ನು ವರ್ಣಿಸುತ್ತಾರೆ. ಮಂತ್ರಯೋಗ, ಲಯಯೋಗ, ರಾಜಯೋಗ, ಶಿವಯೋಗಗಳನ್ನು ಹೇಳಿ ಶಿವಧ್ಯಾನ, ಶಿವಾರ್ಚನೆ, ಶಿವವ್ರತ, ಶಿವಾಚಾರ, ಶಿವಜ್ಞಾನ ಎಂಬ ಶಿವಯೋಗದ ಐದು ವಿಧಗ ಳನ್ನು ತಿಳಿಸಿ, ಇವು ಧರಣಿಯಲ್ಲಿ ಪೂರ್ವಕಕ್ಷೆಗಳಾಗಿ ಶೋಭಿಸುವುವು ಎಂದು ಹೇಳು ತ್ತಾರೆ. ನಾದ, ಸುನಾದ, ಮಹಾಘನನಾದ, ವಿಶೇಷನಾದ, ನಾದಾಂತ್ಯ ಎಂದು ಪಂಚ ನಾದಗಳನ್ನು; ಶಾಂಭವಿ, ಖೇಚರಿ, ಸುಜ್ಞಾನ ಮೌನ, ಮೌನಾಂತ್ಯ ಎಂದು ಪಂಚ ಮುದ್ರೆಗಳನ್ನು; ಜಾಗ್ರ, ಸ್ವಪ್ನ, ಸುಷುಪ್ತಿ, ತುರಿಯ, ತುರೀಯಾತೀತ ಎಂದು ಪಂಚಾವ ಸ್ಥೆಗಳನ್ನು; ತಾರಕ ಬ್ರಹ್ಮವಾದ 'ಓಂ' ಕಾರದ ಮೂಲವನ್ನು ಕುರಿತು ಹೇಳುತ್ತಾರೆ.

ಅನಂತರ ಚಂದ್ರಶೇಖರನು ಕೈಗಳನ್ನು ಮುಗಿದುಕೊಂಡು ಭುವನಕೋಶದ ಸೃಷ್ಟಿ ಯನ್ನು ಕುರಿತು ಹೇಳಿರೆಂದು ಕೇಳಲು ಸಿದ್ಧಲಿಂಗ ಶಿವಯೋಗಿಗಳು ಕಾಮಿಕಾಗಮದಲ್ಲಿ ಶಿವನು ಗಿರಿಜೆಗೆ ಹೇಳಿದಂತೆ ಚಂದ್ರಶೇಖರನಿಗೆ ಹದಿನಾಲ್ಕು ಲೋಕಗಳನ್ನು ಗರ್ಭೀಕರಿಸಿ ಕೊಂಡಿರುವ ಬ್ರಹ್ಮಾಂಡ ಸೃಷ್ಟಿಯನ್ನು ಕುರಿತು ಹೇಳುತ್ತಾರೆ. ನಾದ, ಬಿಂದು, ಅಮೃತ ಕಲೆಗಳಲ್ಲಿ ಚಿಚ್ಛಕ್ತಿ ಶೋಭಿಸಲು ಭಾಳಾಕ್ಷನ ಕರುಣೆಯಿಂದ ಅಮೃತದಿವ್ಯಕಲೆಯಿಂದ ಆದಿಯಲ್ಲಿ ಪ್ರಕೃತಿತತ್ವ ಜನಿಸಿತು. ಅದರಿಂದ ಅಹಂಕೃತಿ ಜನಿಸಿತು. ಅದರಿಂದ ಜಸ, ತಾಮಸಾದಿಗಳು ಜನಿಸಿದವು. ರಜೋಗುಣದಿಂದ ನೀರಜಾಸನ, ಸಾತ್ವಿಕದಿಂದ ಸದಾ ವಿಷ್ಣು, ಭಾಳದಿಂದ ವೈವಸ್ವತಮನು ಮತ್ತು ಮಹಾರುದ್ರರು ಜನಿಸಿದರು. ಶಿವಪದ ಭೃತ್ಯನಾದ ಬ್ರಹ್ಮನಾಜ್ಞೆಯಿಂದ ಶಬ್ದ. ಸ್ಪರ್ಶ, ರೂಪ, ರಸ, ಗಂಧ,·ಆಕಾಶ, ಮಾರುತ, ಶಿಖಿ, ಉದಕ, ಧರೆಗಳುಂಟಾದವು ಎಂದು ಹೇಳಿ ಅವುಗಳ ವಿಸ್ತಾರವನ್ನೂ ಹೇಳುತ್ತಾರೆ. ಹೀಗೆ ವಿಸ್ತಾರವಾಗಿ ಹರಡಿದ ಬ್ರಹ್ಮಾಂಡ ಎಡಡು ಹೋಳಾಗಿ ಅಡಿಲೋಕದಲ್ಲಿ ನಾಗ ಲೋಕಗಳೇಳಾದವು. ಮೇಲಾರು ಲೋಕಗಳಾದವು. ಬ್ರಹ್ಮಾಂಡದಡಿಯ ಮೇಲ ಹೋಡಿನಲ್ಲಿ ಒಂದುಕೋಟಿ ಯೋಜನದಳತೆಯಲ್ಲಿ ಚಿನ್ನದಭೂಮಿ. ಅಲ್ಲಿ ಕಾಲಾಗ್ನಿ

ರುದ್ರನು ಅನೇಕ ಘನಕೋಟಿ ಪ್ರಳಯರವಿಗಳನ್ನು ಕೀಳ್ಪಡಿಪ ಅಂಗಕಾಂತಿಯಿಂದ ಮೆರೆಯುತ್ತಾನೆ. ಅದರ ಮೇಲೆ ನರಕಮಂಡಲ ಈ ನರಕಗಳ ವರ್ಣನೆಯನ್ನು ಮಾಡಿದ ಮೇಲೆ ಇಂಥ ನರಕಕ್ಕೆ [ಕುಂಭಿ, ಜತು, ಸೂಕರ, ಮಹಿಷ, ಕಪಿ, ಕರ್ಕಟ, ವೈತರಣಿ, ತಪ್ತ, ಸೂಚಿಮುಖ, ಶಾರ್ದೂಲ, ವಿಣ್ಮೂತ್ರ ಶಲ್ಯ, ಖುಕ್ಕೋತ್ಕರ, ವೃಕ, ಸಿಂಹಾಸ್ಯ ಸಿಂಹಾಸ್ಯಗಂಡ] ಹೋಗುವವರು ಯಾರು ಎಂದು ಹೇಳುವ ಸಂದರ್ಭದಲ್ಲಿ ಧರ್ಮಾ ಧರ್ಮ ಬೋಧೆಯನ್ನು ಮಾಡುತ್ತಾರೆ. ಆಗ ಪಾತಕರು ಯಾರು ಪುಣ್ಯಜೀವಿಗಳು ಯಾರು ಎಂಬುದನ್ನು ತಿಳಿಸುತ್ತಾರೆ.

ಹದಿನಾಲ್ಕು ಲೋಕಗಳ ವರ್ಣನೆಯನ್ನು ಮುಂದುವರಿಸುತ್ತ ಜಲ, ದುಗ್ಧ, ದಧಿ, ಸರ್ಪಿ, ಮಧು, ಇಕ್ಷು, ಲವಣ ಎಂಬ ಸಪ್ತ ಸಮುದ್ರಗಳು ಮತ್ತು ಕ್ರೌಂಚದ್ವೀಪ, ಕುಶದ್ವೀಪ, ಶಾಕ, ಶಾಲ್ಮಲಿ, ಪ್ಲಕ್ಷ, ಚಿತ್ರ ಜಂಬೂದ್ವೀಪ ಎಂಬ ಸಪ್ತದ್ವೀಪಗಳನ್ನು ವರ್ಣಿಸಿ, ಉತ್ತಾನಪಾದರಾಯನ ಭರತ, ಕಿಂಪುರುಷ, ಹರಿ, ಇಳಾವೃತ್ತ, ರಮ್ಯಕ, ಹಿರಣ್ಮಯ, ಕುರು, ಭದ್ರಾಶ್ವ, ಕೇತುಮಾಲ್ಯ ಎಂಬ ಒಂಬತ್ತು ಜನ ಪುತ್ರರ ಹೆಸರನ್ನು ಹೇಳಿ ಈ ಒಂಬತ್ತು ಜನ ಪುತ್ರರಿಗೂ ಭೂಖಂಡವನ್ನು ಒಂಬತ್ತು ಭಾಗಮಾಡಿ ಕೊಟ್ಟಂತೆಯೂ, ಅವರ ಹೆಸರಿನಿಂದ ಆಯಾ ಭೂ ಭಾಗಕ್ಕೆ ಆಯಾ ಹೆಸರು ಬಂತೆಂದೂ ಇವನ ಪುತ್ರ ಭರತನಿಂದ ನಮ್ಮ ದೇಶಕ್ಕೆ ಭಾರತವರ್ಷ ಎಂಬ ಹೆಸರು ಬಂದಿತೆಂದೂ ಹೇಳುತ್ತಾರೆ. ಅನಂತರ ಹೇಮ, ಶಿಖರಿ, ನೈಷಧ, ನೀಲ, ಶ್ವೇತ, ಶೃಂಗ, ಪ್ರೀತಿ ಗಂಧಮಾದನ ಎಂಬ ಅಷ್ಟಪರ್ವತಗಳನ್ನು ವರ್ಣಿಸುತ್ತಾರೆ. ದಶರುದ್ರರು, ಶತರುದ್ರರು ಗಳನ್ನು ಹೇಳಿ ಕಶ್ಯಪನ ಬೃಹತಿ, ಅದಿತಿ, ನವದಿತಿ, ಕದ್ರು, ವಿನತೆ, ಸುಪ್ರಭಾದೇವಿ, ಕುಮುದಿನಿ, ಸುವರ್ಣೆ, ಕಾಲದಂಡಿ, ಮೇಘದಂಡಿ, ದಾತ್ರಪ್ರಭೆ, ಕುಸುಮವತಿ, ಪಾರ್ವಂದಿ ಎಂಬ ಹದಿಮೂರುಜನ ಹೆಣ್ಣುಮಕ್ಕಳ ಹೆಸರನ್ನು ಹೇಳಿ ಅವರಿಂದ ಜನಿ ಸಿದ ದೇವತೆಗಳು, ರಾಕ್ಷಸರು, ಮಾರುತಗಳು, ಮೇಘಗಳು, ಫಣಿಗಳು, ದಿಗ್ಗಜಗಳು ಮುಂತಾದುವನ್ನು ವರ್ಣಿಸುತ್ತಾರೆ. ಇನ್ನೂ ಮುಂದುವರಿದು ಭಕ್ತ–ಲಿಂಗ–ಜಂಗ ಮದ ಅವಿನಾಭಾವ, ಶರಣನೆಂಟಂಗದ ವಿವರ, ಚಿದಂಬರೋದ್ಧರಣೆ, ಪ್ರಣವ ಸೃಷ್ಟಿ ಕ್ರಮ, ಷಡ್ಬ್ರಹ್ಮದ ಸ್ಥಿತಿ, ಶಕ್ತಿತತ್ವ, ಮೂವತ್ತಾರುತತ್ವ, ನಾದಶಕ್ತಿ, ಪಂಚಸಾದಾಖ್ಯ, ಬಾವನ್ನಕಲೆಗಳು, ಪಂಚವಿಂಶತಿಲೀಲೆಗಳು ಮುಂತಾದುವುಗಳನ್ನು ವಿವರಿಸಿ ಕೊನೆಯಲ್ಲಿ ಷಟ್ಸ್ಥಲ ಸರೂಪವನ್ನು ಶಿಷ್ಯ ಚಂದ್ರಶೇಖರನಿಗೆ ವಿಸ್ತರಿಸಿ ಹೇಳುತ್ತಾರೆ. ಹೀಗೆ ಗುರು ಗಳು ಶಿಷ್ಯನಿಗೆ ಬೋಧಿಸಿದ ರೀತಿಯಲ್ಲಿಯೇ ಚಂದ್ರಶೇಖರನು ಕವಿ ಶಾಂತೇಶನಿಗೆ ಹೇಳಿ ದುದನ್ನು ಬರೆದೆನೆಂದು ಕವಿ ಹೇಳಿಕೊಂಡಿದ್ದಾನೆ.

ಶಾಂತೇಶನು ಸಿದ್ಧಲಿಂಗ ಶಿವಯೋಗಿಗಳು ತಮ್ಮ ಶಿಷ್ಯ ಚಂದ್ರಶೇಖರನಿಗೆ ಬೋ ಧಿಸಿದ ರೀತಿಯಲ್ಲಿ ಪುರಾಣ ವಿಷಯವನ್ನು ವರ್ಣಿಸುತ್ತಿರುವುದರಿಂದ ಸಾರವತ್ತಾದ ಭಾಗಗ ಳನ್ನು ಈ ಪುರಾಣದಲ್ಲಿ ನಿರೀಕ್ಷಿಸುವಂತಿಲ್ಲ. ಶಾಸ್ತ್ರೋಕ್ತವಾಗಿ ಪುರಾಣ ವಿಷಯಗಳನ್ನೇ

ಹೇಳುತ್ತಿದ್ದರೂ ಅಲ್ಲೊಂದು ಇಲ್ಲೊಂದು ಸುಂದರವಾದ ಉಕ್ತಿಗಳನ್ನು ಕಾಣುತ್ತೇವೆ. ಆ ಉಕ್ತಿಗಳು ಮರಳುಕಾಡಿನಲ್ಲಿ ಓಯಸಿಸ್ಸುಗಳಿದ್ದಂತೆ ಕಾಣುತ್ತವೆ. ಉದಾ: ಪರಮನ ಉದರದಲ್ಲಡಗಿರುವ ಬ್ರಹ್ಮಾಂಡವನ್ನು ವರ್ಣಿಸುವಾಗ ಕವಿಕೊಡುವ ಉಪಮಾನ:"…. ಅತ್ತಿಯ ಮರದೊಳುಂ ಪಣ್ಣು || ಪರಿವಿಡಿಯೊಳೆಂತಿರ್ಪವಂತಾ | ಪರಿಯೊಳಬ್ಜಭವಾಂಡ ಮೆಸೆವುವು | ಹರಿಯಜರುವಾ ಪಣ್ಣೊಳೊಪ್ಪುವ ಗುಂಗುರುಗಳಂತೆ ||" ೯ ೨೬ || ಎಷ್ಟು ಸುಂದರವಾಗಿದೆ. ಅಷ್ಟಸಿದ್ಧಿಗಳನ್ನು ತೆಗಳುವ ಸಂದರ್ಭದಲ್ಲಿ ಬಳಸಿರುವ 'ಕಲ್ಲಹಳ್ಳ ದೊಳಾ ನವೀನದ ಚಿಲುಮೆಯುಂಟೇ,' 'ತರಣಿಯಂ ಸಲೆ ಗೂಗೆ ಕಾಣ್ಬುದೆ,' ಧರೆಯ ಸುರನೇಂ ಹೊಲೆಯನಪ್ಪನೆ,' 'ತೊಳೆಯಲಿದ್ದಲು ಸವೆವುದಲ್ಲದೆ ಬಿಳಿದದಪ್ಪುದೆ,' ಇತ್ಯಾದಿ ವಾಕ್ಯಗಳು ಶಾಸ್ತ್ರವರ್ಣನೆಯ ಮಧ್ಯದಲ್ಲಿ ತುಸು ಆನಂದವನ್ನುಂಟುಮಾಡುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಶಾಂತೇಶನ ಭಾಮಿನಿ ಷಟ್ಪದೀ ಪ್ರವಾಹ ಅತ್ಯಂತ ಸುಂದರವಾಗಿ ತಾಳ-ಲಯಬದ್ಧವಾಗಿ, ಓದುವವರಿಗೆ ಕರ್ಣಾನಂದವನ್ನುಂಟುಮಾಡುತ್ತಾ ಹರಿಯುತ್ತದೆ. ಈ ಶೈಲಿ ಈತನಿಗೆ ಸಿದ್ಧಿಸಿದೆ. ಆದುದರಿಂದ ಈತನ ಕಾವ್ಯದಲ್ಲಿ ಕಲ್ಪನಾ ವಿಲಾಸದ ಮೆರುಗಿಗಿಂತ ಶಬ್ದಗಳ ಜೋಡಣೆಗೆ, ಮಾತಿನ ವಿನ್ಯಾಸಕ್ಕೆ ಮಾರು ಹೋಗುತ್ತೇವೆ. ಪಂಡಿತರ ಮಧ್ಯದಲ್ಲಿ ಬೆಳೆದ ಕವಿ ಶಾಂತೇಶನಲ್ಲಿಯೂ ಅಲ್ಲಲ್ಲೆ ಪಾಂಡಿತ್ಯ ಪ್ರದರ್ಶನವನ್ನೂ ಕಾಣುತ್ತೇವೆ. ಅಂತೂ ಕಾವ್ಯಕ್ಕಿಂತ ಶಾಸ್ತ್ರದೃಷ್ಟಿಯಿಂದ ಇದೊಂದು ಉಪಾದೇಯ ಗ್ರಂಥ.

ಬಿ. ನಂ. ಚಂದ್ರಯ್ಯ.

ಅರಿಕೆ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ K.A. 186 ಮತ್ತು 189 ಹಾಗೂ K.B. 99 ನಂಬರಿನ ಶಾಂತೇಶನ ಸಿದ್ಧೇಶ್ವರ ಪುರಾಣದ ಎರಡು ಹಸ್ತ ಪ್ರತಿಗಳಿವೆ. ಆ ಎರಡು ಪ್ರತಿಗಳಲ್ಲಿ ಹೆಚ್ಚು ವ್ಯತ್ಯಾಸ ಕಂಡು ಬರುವುದಿಲ್ಲವಾದುದರಿಂದ, 'ಸ್ವಸ್ತಿ ಶ್ರೀಮತು ರುಧಿರೋದ್ಗಾರಿ ಸಂವತ್ಸರ ಆಶ್ವಯುಜ ಶುದ್ಧ ಪಾಡ್ಯ ಬುಧ ವಾರದಲ್ಲು ಸಿದ್ಧೇಶ್ವರಸ್ವಾಮಿ ಪುರಾಣ ಸಮಾಪ್ತ. ಪರುವತೈಯನ ಕೈಬರಹ' ಎಂದು ಬರೆದಿರುವ ಮೊದಲನೆಯ ಪ್ರತಿಯನ್ನು ಆಧಾರವಾಗಿಟ್ಟುಕೊಂಡು ಈ ಗ್ರಂಥವನ್ನು ಸಂಪಾದಿಸಲಾಗಿದೆ. ಒಂದೇ ಪ್ರತಿ, ಅದರಲ್ಲೂ ಕಾಗದದ ಹಸ್ತ ಪ್ರತಿಯಾದುದರಿಂದ ಈ ಗ್ರಂಥದ ನ್ಯೂನತೆ-ಪರಿಮಿತಿಗಳನ್ನು ಅರಿತುಕೊಂಡಿದ್ದೇನೆ. ಮತ್ತೊಂದು ಉತ್ತಮ ಪ್ರತಿ ದೊರೆತಾಗ ಆ ನ್ಯೂನತೆಗಳನ್ನೂ ಹೋಗಲಾಡಿಸಲು ಪ್ರಯತ್ನಿಸುತ್ತೇನೆ. ಸದ್ಯಕ್ಕೆ ಎಲ್ಲರ ಸಹಕಾರವನ್ನು ಕೋರುತ್ತೇನೆ. ಈ ಗ್ರಂಥದ ಪೀಠಿಕೆಯಲ್ಲಿ ನನ್ನ ಸೌಲಭ್ಯದ ದೃಷ್ಟಿಯಿಂದ ತೋಂಟದಾರ್ಯ ರಗಳೆಯ ಸಾರಾಂಶವನ್ನು ಕೊಟ್ಟು ಶ್ರೀ ಸಿದ್ಧಲಿಂಗ ಶಿವಯೋಗಿಗಳು ಮೆರೆದರೆನ್ನಬಹುದಾದ ಪವಾಡಗಳನ್ನು ಕೊಟ್ಟಿರುವೆನೇ ವಿನಃ ರಗಳೆಯು ಇವರ ಬಗ್ಗೆ ಬರೆದಿರುವ ಕಾವ್ಯ-ಪುರಾಣಗಳಿಗಿಂತ ಪ್ರಾಚೀನವೆಂದು ಭಾವಿಸಬಾರದು. ಶಿವಯೋಗಿಗಳ ಜೀವನ ವಿಚಾರದಲ್ಲಿ ಡಾ|| ಆರ್.ಸಿ. ಹೀರೇಮಠರ ಹಾಗೂ ಪುರಾಣಗಳಲ್ಲಿ ಭುವನ ಕೋಶದ ವಿಚಾರದಲ್ಲಿ ಹಿಂದಿಯಲ್ಲಿರುವ 'ಪುರಾಣ ವಿಮರ್ಶ' ಗ್ರಂಥಗಳ ನೆರವನ್ನು ಸಂಪೂರ್ಣವಾಗಿ ಪಡೆದಿದ್ದೇನೆ.

ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರೂ, ಶ್ರೇಷ್ಠ ವಿದ್ವನ್ಮಣಿಗಳೂ, ದಾಸೋಹ ಮೂರ್ತಿಗಳೂ, ಶಿವಯೋಗಿಗಳೂ ಆದ ಶ್ರೀ||ನಿ||ಪ್ರ||ಸ್ವ||ಶ್ರೀ||ಶ್ರೀ|| ಶಿವಕುಮಾರ ಸ್ವಾಮಿಗಳವರಿಗೆ ಈ ಗ್ರಂಥವನ್ನು ಸಮರ್ಪಿಸಬೇಕೆಂದು ಭಾವಿಸಿ ಅವರ ಸನ್ನಿಧಿಗೆ ಹೋಗಿ ಕೇಳಿಕೊಂಡಾಗ ಅವರು ಸಂತೋಷದಿಂದ ಒಪ್ಪಿಕೊಂಡರು. ಅವರಿಗೆ ನನ್ನ ಭಕ್ತಿ ಪುರಸ್ಸರವಾದ ನಮಸ್ಕಾರಗಳು.

ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ ಪ್ರೊ|| ಸಂ. ಶಿ. ಭೂಸನೂರು ಮಠ ಅವರು ವ್ಯಕ್ತಪಡಿಸಿದ್ದ ಆಸೆಯನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದ ಡಾ|| ಎಚ್. ತಿಪ್ಪೇರುದ್ರಸ್ವಾಮಿಯವರು ಪ್ರಾಸಂಗಿಕವಾಗಿ ಮಾತನಾಡುತ್ತಿರುವಾಗ ಈ ಗ್ರಂಥವನ್ನು ನೀವು ಏಕೆ ಸಂಪಾದಿಸಬಾರದು ? ಅದನ್ನು ನೀವು ಮಾಡಿ ಎಂದು ಹೇಳಿದರು. ಆಗ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಪ್ರೊ|| ದೇ. ಜ. ಗೌ. ಅವರು ಅಲ್ಲಿದ್ದ ಹಸ್ತ ಪ್ರತಿಗಳನ್ನು ಕೊಟ್ಟು ಸಹಕರಿಸಿದರು. ಈ ಗ್ರಂಥದ ಪರಿಷ್ಕರಣ ಕಾರ್ಯದಲ್ಲಿ ಮೈಸೂರು ಪ್ರಾಚ್ಯ ಸಂಶೋಧನಾಲಯದಲ್ಲಿರುವ ವಿದ್ವಾನ್ ಬಸವರಾಜಯ್ಯನವರಂತೂ ಉದ್ದಕ್ಕೂ

ಸಹಕರಿಸಿ ತುಂಬ ಸಹಾಯ ಮಾಡಿದರು. ನನ್ನ ವಿದ್ಯಾ ಗುರುಗಳಾದ ಡಾ|| ಡಿ.ಎಲ್. ಎನ್. ಅವರೂ ಒಮ್ಮೆ ಕಣ್ಣಾಡಿಸಿ ಅದರಲ್ಲಿ ಉಳಿದಿರುವ ಸಂಶಯಗಳಿಗೆ ಇನ್ನೊಂದು ಪ್ರತಿ ಸಿಗುವವರೆಗೂ ಏನೂ ಮಾಡುವಂತಿಲ್ಲ, ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿ ಬಿಡು ಎಂದು ಹೇಳಿ ಆಶೀರ್ವದಿಸಿದರು. ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿರುವ ಡಾ|| ಹಾ. ಮಾ. ನಾಯಕರು, ಕನ್ನಡ ಪ್ರಾಧ್ಯಾಪಕರಾಗಿರುವ ಡಾ|| ಎಲ್. ಬಸವರಾಜು ಅವರು ಸಿದ್ಧಲಿಂಗೇಶ್ವರರ ಬಗ್ಗೆ ಅಲ್ಲಿ ನಡೆದ ಐದನೆಯ ಶತಮಾನೋತ್ಸವ ಸಂದರ್ಭದಲ್ಲಿ ಒಂದು ಪ್ರಬಂಧವನ್ನು ಓದಲು ಅವಕಾಶ ಮಾಡಿಕೊಟ್ಟು ಶಿವಯೋಗಿಗಳ ಬಗ್ಗೆ ಹೆಚ್ಚು ಅಧ್ಯಯನ ಮಾಡಲು ಸಹಾಯ ಮಾಡಿದರು. ಈ ಎಲ್ಲ ಮಹನೀಯರನ್ನೂ ಕೃತಜ್ಞತೆಯಿಂದ ನೆನೆದು ಅವರೆಲ್ಲರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಗ್ರಂಥವನ್ನು ಬಹಳ ಅಲ್ಪ ಕಾಲದಲ್ಲಿ ಇಷ್ಟು ಸುಂದರವಾಗಿ ಮುದ್ರಿಸಿಕೊಟ್ಟ ಮಿತ್ರರಾದ ಶ್ರೀ ಕೆ. ಪಿ. ಪುಟ್ಟಸ್ವಾಮಿಯವರಿಗೆ ನನ್ನ ಕೃತಜ್ಞತೆಗಳು.

—ಬಿ. ನಂ. ಚಂದ್ರಯ್ಯ

ಶಾಂತೇಶನ

ಸಿದ್ಧೇಶ್ವರ ಪುರಾಣ

ಸೂಚನೆ ॥ ಹರುಷದಿಂ ಶಿವನಾಜ್ಞೆಯಂ ತಳೆ
ದುರು ರಜತಗಿರಿಯಿಂದ ಮರ್ತ್ಯಕೆ
ಪರಮ ತೋಂಟದ ಸಿದ್ಧಲಿಂಗಂ ಬಂದನತಿಶಯದಿಂ ॥

ಶ್ರೀ ವಿಮಲ ಕಾತ್ಯಾಯನೀಶ್ವರ
ದೇವಿಯಾನನಪದ್ಮ ಮಧುಕರ
ಪಾವನಾತ್ಮ ಗಿರೀಶ ಶಂಕರ ಕರುಣ ಘನವಾಸ ॥
ದೇವ ದೇವ ನವೀನ ನಿರ್ಮಲ
ಜೀವಿತೇಶ್ವರ ಕೈರವಾರುಣ
ಭೂವಳಯಮಂ ಪಾಲಿಪುದು ಸಿದ್ಧೇಶ ಚಿತ್ಕೋಶ ॥ ೧ ॥

ಕರುಣಿಯೇ ಕಾಮಾರಿಯೇ ಹಿಮ
ಕಿರಣಧರ ಕೀನಾಶನಾಶಾಂ
ಕುರಿತ ಕೂರ್ಪನೆ ಕೃತಕ ಹರನೇ ಕ್ರೂರಘನಕೇಶ ॥
ಸರಸ ಕೈವಲ್ಯಪ್ರದನೆ ಬಂ
ಧುರದ ಕೋಮಲ ಕೌಶಲಾತ್ಮನೆ
ಯುರಗ ಕಂಕಣ ಕಶ್ಯರೀರನೆ ಸಿದ್ಧಲಿಂಗ ಜಯ ॥ ೨ ॥

ಪರಮ ಪಾವನಮೂರ್ತಿ ಗುಹಪಿತ
ನಿರುತ ಪೀಯೂಷಾತ್ಮರೂಪನೆ
ಪುರಮಥನ ಪೂತಾಂಗ ಭಕ್ತೋಪೇತ ಪೈಶೂನ್ಯ ॥
ಹರನೆ ಚಾರುತಪೋಧನರ್ಗಳ
ಪೊರೆವನೇ ಪೌರಾಣ ಸನ್ನುತ
ಗುರುವೆ ತೋಂಟದ ಸಿದ್ಧಲಿಂಗನೆ ಪಂಡಿತನೆ ಪರನೆ ॥ ೩ ॥

ಭವನೆ ಮುಕ್ತನೆ ಮಾರಹರನೇ
ಧವನೆ ಹೇಮಗಿರೀಶ್ವರನೆ ಸು
ಪ್ರವರನೇ ಸಾಧನನೆ ಸುಜನಪ್ರಾಣಗಂಭೀರ ||
ವಿವಿಧ ಲಿಂಗಾಂಗಿಯೆ ಶಮನಹರ
ನವರ ಕರುಣನೆ ಐಲಬಿಲಸಖ
ಸವಿಯ ವಾಕ್ಯದ ಷಟಸ್ಥಲದ ಗುರುಸಿದ್ಧಲಿಂಗ ಜಯ || ೪ ||

ಕಲ್ಪಿಸಿದ ಫಲಗಳನೆ ಕೊಡುವಾ
ಕಲ್ಪವೃಕ್ಷಂ ತೋಂಟದಾರ್ಯನ
ಬಲ್ಪಿನಾ ತ್ಯಾಗಕ್ಕೆ ಲಜ್ಜಿಸಿ ಬಾಗುತಿರಲಾಗಿ ||
ಮೆಲ್ಪಿನಿಂ ಸುರವನಿತೆಯರು ಸಂ
ಕಲ್ಪವಿಲ್ಲದೆ ಕುಸುಮತತಿಯನ
ನಲ್ಪವಾಗಿಯೆ ತಿರಿದರುರೆ ದೊಂಟೆಗಳ ಪಿಡಿಯನೆಯುಂ || ೫ ||

ಆ ಮಹಾಗುರು ಸಿದ್ಧಲಿಂಗನ
ರಾಮಣೀಯಕ ಮಹಿಮೆಯುಂ ಸಲೆ
ಭೂಮಿಯೊಳು ಬಲ್ಲವನದಾವಂ ಪೊಗಳೆ ನಾಲ್ಮೊಗದ ||
ಶ್ರೀಮತಿಗೆ ಪವಣಲ್ಲ ಧರೆಯೊಳ್
ಸ್ವಾಮಿಯಣುಗನ ಷಣ್ಮುಖದ ನುತಿ
ಗೀ ಮಹಿಮನತಿಶಯವೆನಲು ರಾಜಿಸುವನುನ್ನತಿಯಿಂ || ೬ ||

ತೋಂಟದಾರ್ಯನ ವಿತರಣಕ್ಕಂ
ಸಾಟಿಯಿಲ್ಲೆಂದಮರ ಪಶು ಸಲೆ
ಕೋಟಲೆಯೊಳಿರೆ ಶತಪಾಲು ಬಱಿಯಲು ಕರುವಿಗೆಂದು ಶತ ||
ಕೋಟಿಧರ ತೃಣಕವನಿಗಟ್ಟಿ ಲ
ಲಾಟಲೋಚನ ಸಿದ್ಧಿಗಳ್ಕುತೆ
ಪ್ರೋಟಕಾಮನ ಸೇನೆ ಕಚ್ಚಲು ಪಲ್ಲು ತಾನಿಲ್ಲ || ೭ ||

ಶರಣ ವದನಾಂಬುಜದಿವಾಕರ
ಪರಮ ಪಾವನ ಸತ್ಯಪಾಕರ
ಹರಿ ಮುಖಾಂಬುಜ ಚಾರುದಿನಕರ ರಿಪುಭಯಂಕರನೆ ||
ಸುರುಚಿರಾಮಲಮೂರ್ತಿ ಶಂಕರ
ಗುರುಕುಲಾಂಬುಧಿ ಪೂರ್ಣ ಹಿಮಕರ
ಧರೆಯ ಸುಜನರ ಪಾಲಿಪುದು ಸಿದ್ಧೇಶ ಶುಭಕರನೆ || ೮ ||

ಕರುಣನಿಧಿ ಕಮನೀಯ ಮಂಗಳ
ಶರಣರಾನನಪದ್ಮ ಸೂರ್ಯನೆ
ಪರಮ ಪರ ಪರಮೇಶ ಪರತರ ಪಾವನದ ರೂಪ ||
ಸುರುಚಿರಾಮಲಮೂರ್ತಿ ಗುರುವರ
ತರುಣಶಶಿಧರ ಶರ್ವ ಶಂಕರ
ಸ್ಥಿರ ಯಶೋವಿಸ್ತಾರ ತೋಂಟದ ಸಿದ್ಧಲಿಂಗ ಜಯ || ೯ ||

ಧರಣಿಜಲವನಲಂ ಪವನನಂ
ಬರ ನಿಶಾಪತಿ ಸೂರ್ಯನಾತ್ಮಂ
ಪರಮಗಾತ್ರವೆಯಾದ ಶಂಕರನಂಗವೆನಿಸಿರ್ಪ ||
ಶರಣ ತೋಂಟದ ಸಿದ್ಧಲಿಂಗನ
ಚರಣ ವಾರಿಜವೆನ್ನ ಹೃದಯಾಂ
ಬರುಹದೊಳಗಿರೆ ಕಾವ್ಯಮಂ ನಾಂ ಪೇಳ್ವೆ ಮುದದಿಂದ || ೧೦ ||

ಶರಣಸಂಗಂ ಕುಜನಭಂಗಂ
ವರ ಸುಜನ ಮುಖಕಮಲ ಭೃಂಗಂ
ಕರುಣಸಿಂಧು ತರಂಗನುರುತರ ಸತ್ಯಪಾಪಾಂಗಂ ||
ಸುರುಚಿರದ ಪರಮೇಶನಂಗಂ
ಸರಸ ಕೀರ್ತಿವಧು ಭುಜಂಗಂ
ಧರೆಯೊಳಿರ್ಪಂ ಚಾರು ತೋಂಟದ ಸಿದ್ಧಗುರುಲಿಂಗಂ ||೧೧ ||

ಪಂಚಮುಖನಪರಾವತಾರನ
ಸಂಚಿತಾದಿಗಳಿಲ್ಲದೀಶನ
ಕಾಂಚನಾದ್ರಿಯೆ ವಾಸವಾದನ ವಿಮಲ ಶಂಕರನ ||
ಮಿಂಚಿನಂತೆಂದೀಷಣತ್ರಯ
ವಂಚನೆಗಳಂ ಬಿಟ್ಟ ದೇವನ
ನಾಂ ಚದುರಿನಿಂ ನುತಿಪೆ ತೋಂಟದ ಸಿದ್ಧಗುರುವರನ || ೧೨ ||

ಚಾರು ಭಕ್ತಿಯದೊಂದು ಕರುವಂ
ಸಾರ ಮುಕ್ತಿಯ ಮಾರ್ಗದಿರವಂ
ವೀರಶೈವದೊಳಿರ್ಪ ಭಕ್ತರಭಾಗ್ಯ ಸುರತರುವಂ ||
ಪೂರ್ಣ ನಿರ್ಮಲದೊಂದು ಪರವಂ
ವೈರ ಪವನಾಹಾರರುವಂ (?)
ಮಾರಹರನಿವನೆಂದು ಪೊಗಳುವೆ ಸಿದ್ಧ ಸದ್ಗುರುವಂ || ೧೩ ||

ಇಂತಸೆನ ಗುರು ಸಿದ್ಧಲಿಂಗನ
ನಂತ ಮಹಿಮೆಯ ಪೊಗಳೆ ಲೋಕದೊ
ಳಂತನಂತನ ರಸನೆಗರಿದೆನೆ ಶಕ್ಯವೇ ನನಗೆ ॥
ಶಾಂತರೂಪನ ಪಾದಪಂಕಜ
ವಿಂತುವೆನ್ನಯ ಹೃತ್ಕಮಲದೊಳು
ಸಂತಸದೊಳಿರೆ ಕಾವ್ಯಮಂ ಪೇಳುವೆನು ಲಕ್ಷಣದಿಂ ॥ ೧೪ ॥

ಅಮರಗುಂಡದ ಮಲ್ಲಿಕಾರ್ಜುನ
ನಮಲ ಘನ ದಿವ್ಯಾಜ್ಞೆಯಿಂ [ವಿ]
ಕ್ರಮದೆ ಶೂಲವನಡರಿದುರು ಗುರುಭಕ್ತನನ್ವಯದೆ ॥
ಅಮರ್ದು ರಾಜಿಸಿ ಸಕಲ ಶಾಸ್ತ್ರಾ
ಗಮಗಳಂ ನೆರೆತಿಳಿದು ಮತ್ತಂ
ವಿಮಲ ವಾತೂಲಕ್ಕೆ ಟೀಕಂ ಮಾಡಿ ಧರೆಯಲ್ಲಿ ॥ ೧೫ ॥

ಲಾಲಿಸಲ್ಗಣಭಾಷ್ಯರತ್ನ [ಸು]
ಮಾಲೆಯಂ ಮಾಡುತ್ತೆ ಮತ್ತೆ ವಿ
ಶಾಲ ಚರಸೇವೆಯೊಳು ವರ್ತಿಸಿ ಷಟ್ಸ್ಥಲದೊಳಿರ್ಪಾ
ಲೋಲ ಗುಬ್ಬಿಯ ಮಲ್ಲಣಾರ್ಯನ
ಶಾಲಿಪುತ್ರಂ ಶಿವನ ಮಹಿಮೆಯ
ಲೀಲೆಯಂ ಪ್ರಕಟಿಸುವನವನ ವಿಶೇಷವೆಂತೆನಲು ॥ ೧೬ ॥

ಧರಣಿಯೊಳ್ಸಂಸ್ಕೃತ ಮಹಾಬಂ
ಧುರದ ಕರ್ನಾಟಕಂಗಳಾದಿಯ
ಸರಸ ಶಾಸ್ತ್ರಂಗಳು ಮುಖೋದ್ಗತವಾಗಿ ರಾಜಿಸುವ ॥
ವರ ಬಸವ ಪೌರಾಣದತಿಶಯ
ದುರುತರದ ಘನ ಮಲ್ಲಣಾರ್ಯನ
ಪರಮ ಪುತ್ರಂ ಶಾಂತದೇಶಿಕನೊರೆದನೀ ಕೃತಿಯಂ ॥ ೧೭ ॥

ಶರಣಲೋಚನ ಕೈರವಕೆ ಹಿಮ
ಕಿರಣವೆನಿಸುವ ಗುಮ್ಮಳಾಪುರ
ದುರುತರದ ಶಾಂತೇಶನಂಘ್ರಿಯನೆನ್ನ ಮನದಲ್ಲಿ ॥
ಹರುಷದಿಂದಂ ನೆನೆದು ಸಿದ್ಧೇ
ಶ್ವರನ ಕೃತಿಯ ಮಾಳ್ಪೆನೆನ್ನಯ
ಗುರು ಗಣೇಶ್ವರಮೂರ್ತಿಯಂ ಭಾವಿಸುತೆ ರಚಿಸುವೆನು ॥ ೧೮ ॥

ಎಲೆ ಶಿವನೆ ನಿನ್ನೆಡದಕಣ್ಣೇ
ಶಿಲೆಯ ಕರಗಿಸುತಿರ್ಪುದನಿಶಂ
ಬಲದ ನಯನವೆ ಕಲ್ಲೊಳುಷ್ಣವನ್ನೈದಿಸುತ್ತಿರ್ಕುಂ ॥
ಜ್ವಲನೆ ನಯನವೆ ಕಾಮಕಾಲಾ
ದ್ಯಲಘು ಖಳರಂ ದಹಿಪುದೆನುತಂ
ಚಲಿಸದೆಂತಗರಾಜನಿತ್ರನೊ ದೇವಿಯಂ ನಿನಗೆ ॥ ೧೯ ॥

ತರಣಿಯಂಗದ ಕಿರಣದಂದದೆ
ಪರಮನೊಳಗೆರಡಿಲ್ಲದೇಸು
ಸ್ಥಿರದ ಚಿತ್ಪರೆಯಾದಿಯಿಚ್ಛಾಜ್ಞಾನ [ಕ್ರೀ] ಸತಿಯೇ
ಹರುಷದಿಂ ತಾನಾಗಿ ಶಿವನೊಳು
ಬೆರಸಿ ಕುಸುಮದ ಗಂಧದಂತಂ
ಬರದ ವಾಯುವಿನಂತೆ ತೋರುನ ಗೌರಿ ಶರಣಾಗು ॥ ೨೦ ॥

ಬಸವ ಮೊದಲಾದವರ್ಗೆ ನುಡಿಯಿಂ
ಪೆಸೆಯೆ ಬೋಧಿಸಿ ಶೂನ್ಯಪೀಠದೊ
ಳೆಸೆದು ಮಾಯಾದಿಗಳ ಮರ್ದಿಸಿ ನಮಿತರಾದರ್ಗೆ ॥
ರಸೆಯೊಳಗ್ಗದ ಭಕ್ತಿಯಂ [ಸಲೆ]
ಪಸರಿಸಿದ ಪ್ರಭುದೇವರಂಘ್ರಿಯು
ನೊಸೆದು ಭಜಿಸುವೆನೆನ್ನ ಪಾಪಂ ಪರಿವ ತೆರದಿಂದ ॥ ೨೧ ॥

ಧರೆಯ ರಕ್ಷಿಸಲೆಂದು ಮಂಡಗೆ
ಯುರತರದ ಮಾದರಸರಂಗನೆ
ತರುಣಿ ಮಾದಾಂಬೆಯುರ ಗರ್ಭದೊಳೊಗೆದು ಮರ್ತ್ಯದೊಳು ॥
ಅರಸು ಬಿಜ್ಜಳನಂ ನಿವಾರಿಸಿ
ಪರಮ ಷಟ್ಸ್ಥಲಮಾರ್ಗವೇ ಸಂ
ಚರಿಸುವಂದದೆ ಪಸರಿಸಿದ ಬಸವಂಗೆ ಶರಣೆಂಬೆ ॥ ೨೨ ॥

ಅಕ್ಕನಾಗಾಂಬೆಯರ ಪೊಟ್ಟೆಯೊ
ಳಕ್ಕರಿಂ ಕಕ್ಕೈಯ್ಯದೇವನ
ಮಿಕ್ಕ ಸುದ್ದಪ್ರಸಾದವೇ ತಾಂ ತವೆ ಪುದುಂಗೊಂಡು ॥
ಹೊಕ್ಕು ಶಿಶುರೂಪಾಗಿ ಬೆಳೆಯಲು
ಚಕ್ಕನೆ ತಾನೊಗೆದು ಬಸವನ
ತಕ್ಕ ಗುರುವಾಗಲ್ಕೆ ಮೆರೆದಂ ಚನ್ನಬಸವಣ್ಣ ॥ ೨೩ ॥

ಜನಿಸಿದೇಳ್ದಿವಸಕ್ಕೆ ತಾರಕ ದನು
ಜನಂ ಸಂಹರಿಸಿ ಲೋಕಕೆ
ವಿನುತ ಹರುಷವನಿತ್ತು ಶಿವನಿಂ ಸರ್ವಶಾಸ್ತ್ರನನು ||
ಸನಯದಿಂ ಕೇಳುತ್ತೆ ಜಗದೊಳು
ಘನ ಮಹಿಮೆಯಂ ಪ್ರಕಟಿಸಿದ ಷಾ
ಷನದ ಚಾರು ಷಡಾನನನ ಪೊಗುಳುವೆನು ಮುದದಿಂದ || ೨೪ ||

ದುರುಳ ದಕ್ಷನ ಕೊಲುತ [ಲಾ]ತನ
ಶಿರಕೆ ಕುರಿದಲೆಯಿತ್ತು ಜನ್ನದ
ಪರಿಯನೆಲ್ಲವ ಕೆಡಿಸಿ ಮಲೆತರ ಕೊಂದು ಶರಣೆಂದಾ ||
ಸುರರನೆಲ್ಲರ ಸಲಹಿದಗ್ಗದ
ಕರುಣನಿಧಿ ವೀರೇಶ ಪಾಲಿಸು
ವರ ಕೃತಿಗೆ ನಿರ್ವಿಘ್ನತೆಯನತಿ ಪರಮ ಹರುಷದೊಳು || ೨೫ ||

ಮಿಗೆ ಭವಾನಿಯ ಜರಿದು ಮಾಂಸಾ
ದಿಗಳನೆಲ್ಲವ ಬಿದಿರ್ದವಸ್ಥೆಯೊ
ಳಗಜೆಯರಸನ ಲೀಲೆಗಳ ನಟಿಸಲ್ಕೆ ಶಿವನೊಲಿದು ||
ನಗುತ ಮತ್ತೊಂದಂಘ್ರಿಯೀಯಲು
ಸೊಗಸೆ ಮೂರಡಿ ಭೃಂಗಿರಿಟಿಗಂ
ತೊಗುಮಿಗೆ [ಯ ಭಕ್ತಿಯಲಿ ?] ನಮಿಸುವೆ ವೀರಕೈವಂಗೆ || ೨೬ ||

ನಿರುತದಿಂ ಚೌಷಷ್ಟಿ ಶೀಲದೊಳ
ರರೆ ತಾನಾಚರಿಸಿ ಬಸವೇ
ಶ್ವರನ ಸಲೆ ಕೊಂಡಾಡಿ ಶಿವನಂ ಸ್ತುತಿಸಿ ರಾಜಿಸುವ ||
ಪರಮಘನ ಪಾಲ್ಕುರಿಕೆ ಸೋಮೇ
ಶ್ವರನ ಪಾದವ ನೆನೆದು ತೋಂಟದ
ಸರಸ ಸಿದ್ಧೇಶ್ವರನ ಕೃತಿಯಂ ಪೇಳ್ವೆನತಿಶಯದಿಂ || ೨೭ ||

ಇವರು ಮೊದಲಾದಖಿಳ ಶರಣರ
ನವ ಪದಾಂಬುಜವೆನ್ನ ಹೃದಯದೊ
ಳವಿರತಂ ನೆಲೆಗೊಳಲು ತೋಂಟದ ಸಿದ್ಧದೇಶಿಕನ ||
ತವೆ ಕೃತಿಯನೊರೆಯಲ್ಕೆ ಬಾಧೆಯೆ
ವಿವಿಧ ಯುಕ್ತಿಗಳಿಂದ ನೋಳ್ಪಡೆ
ಭುವಿಯೊಳಿದಕೆಣೆಯಿಲ್ಲವೆನಿಪುದು ಕಾವ್ಯವತಿ ಸೇವ್ಯಂ || ೨೮ ||

ಎಂದು ಸನ್ನುತ ಮಲ್ಲಣಾರ್ಯನ
ಕಂದನುನ್ನತ ಶಾಂತನಮಲಾ
ನಂದದಿಂದಂ ತೋಂಟದತಿಶಯ ಸಿದ್ಧದೇಶಿಕನ ||
ಚಂದದಗ್ಗದ ಕೃತಿಯ ಪೇಳ್ವಡೆ
ಮುಂದೆನಗೆ ಸಹಕಾರಿಗಳು ಬೇ
ಕೆಂದೆನುತ್ತಂ ಮತ್ತೆ ಚಿಂತಿಸುವನಿತರೊಳ್ಬಂದಂ || ೨೯ ||

ತೋಂಟದಾರ್ಯನ ಕರುಣದಮಲ ಲ
ಲಾಟಲೋಚನಮೂರ್ತಿ ಷಟ್ಸ್ಥಲ
ದಾಟದೊಳು ವರ್ತಿಸುವ ಸುರತರು ಚಂದ್ರಶೇಖರನು ||
ಕೋಟಲೆಯ ಮಾಣಿಸುತೆ ನುಡಿದಂ
ಸಾಟಿಯಿಲ್ಲೆನಿಸುವೆನು ಕೃತಿಯಂ
ಮಾಟಿನಿಪ್ಪೆಮ್ಮಾಜ್ಞೆಯೊಳು ನೀಂ ಪೇಳ್ವುದೆಂದೆನಲು || ೩೦ ||

ಚಂದ್ರಶೇಖರದೇವರಾಜ್ಞೆಯ
ಸಾಂದ್ರದಿಂ ಮಸ್ತಕದೊಳು ಧರಿಸುತೆ
ರುಂದ್ರವಾಗಿಯೆ ಪೇಳ್ದೆನಲ್ಲದೆಯೆನ್ನ ಮತಿಯಿಂದಾ ||
ತಂದ್ರಿ ರಹಿತನ ತೋಂಟದಾರ್ಯ ಯ
ತೀಂದ್ರನಂ ಬಣ್ಣಿಸುವೊಡಳವೇ
ಯಾಂಧ್ರ ಮೊದಲಾದುರುತರದ ದೇಶದೊಳು ಭಾವಿಸಲು || ೩೧ ||

ಆ ವಿಮಲ [ಗುರು] ಚಂದ್ರಶೇಖರ
ದೇವರತಿಶಯವೆಂತೆನಲು ಸ
ದ್ಭಾವದಿಂ ಕಾಮಾರಿಯರಿಷಡ್ವರ್ಗವಂ ಕೆಡಿಸಿ ||
ಭಾವಜಾಂತಕನಾಗಿ ವರ್ತಿಸಿ
ಭೂವಳಯದೊಳು ಷಟ್ಸ್ಥಲವನೇ
ಯಾವಗಂ ವರ್ತಿಸುವನಲ್ಲದೆ ಬೇರೆ ಮತವಿಲ್ಲ || ೩೨ ||

ಪಂಚಮಂತ್ರವೆ ಗಾತ್ರವಾದನ
ಪಂಚ ತತ್ತ್ವಾದಿಗಳ ಬಲ್ಲನ
ಪಂಚಪಂಚೀಕೃತಿಯನರಿದನ ತನು ವಿಕಾರಗಳ ||
ಮುಂಚೆ ಜರಿದನ ಮಾಯೆಯಂ ಸಲೆ
ವಂಚಿಸಿರ್ದನ ಶರಣ ಸೃಷ್ಟಿಯ
ಸಂಚಿತದೆ ತಿಳಿದವನ ಸನ್ನುತ ಚಂದ್ರಶೇಖರನ || ೩೩ ||

ಆಜ್ಞೆಯಂ ನಾ ತಳೆದು ದಿವ್ಯಾ
ಭಿಜ್ಞತೆಯೊಳಂ ಪೇಳ್ದೆ ತೋಂಟದ
ತಜ್ಞನೆನಿಸುವ ಸಿದ್ಧಲಿಂಗನ ಕೃತಿಯನುನ್ನತಿಯ ||
ಪ್ರಾಜ್ಞರಹುದೆಂಬಂದದಿಂದವೆ
ಯಜ್ಞರರಿಯದೊಡೇನು ಸಕಲ ವಿ
ಧಜ್ಞನೆನಿಸುವ ಚಂದ್ರಶೇಖರಮೂರ್ತಿ ಕಾವ್ಯವನು || ೩೪ ||

ಪೇಳೆನಲು ನಾಂ ರಚಿಸಿದೆಂ ಸಲೆ
ಭಾಳಲೋಚನ ಸಿದ್ಧಲಿಂಗನ
ಮೇಳದಗ್ಗದ ಕಾವ್ಯನುಂ ಶಿವಭಕ್ತರಿದ ನೋಡಿ ||
ಕಾಳುಮತಿಗಳು ಗೆಡೆಯದಂದದೆ
ಮೇಳವಿಸಿ ತಿರ್ದುವುದು ಲಾಲಿಸಿ
ಕೇಳುವುದು ಸಲೆ ತೋಂಟದಾರ್ಯನ ಕೃತಿಯನುನ್ನತಿಯ || ೩೫ ||

ಪಿಂಗಿ ಪಚ್ಚೆಯಕಂತೆಯಾರ್ಯನ
ತುಂಗ ಕರದೊಳ್ಜನಿಸಿ ತೋಂಟದ
ಲಿಂಗನಂಘ್ರಿಯನರ್ಚಿಸುತ್ತಂ ಚಂದ್ರಶೇಖರನು ||
ಸಾಂಗಮಾಗಿಯೆ [ಪೇ]ಳ್ದ ಬೋಧೆಯ
ನಂಗವಿಸಿ ಕಾವ್ಯದೊಳು ಪೇಳ್ವೆ
ಪಿಂಗದಾಲಿಸಿ ಭಕ್ತರಾ ವೃತ್ತಾಂತವೆಂತೆನಲು || ೩೬ ||

ಶೋಣರತ್ನಂ ಮೌಕ್ತಿಕಂ ಸ
ತ್ರಾಣ ಪವಳಂ ಪಚ್ಚೆ ಚಾರು ಧು
ರೀಣ ಪುಷ್ಯ ಸುರಾಗ ವಜ್ರಂ ನೀಲ ವೈಡೂರ್ಯಂ ||
ಮೇಣು ಗೋಮೇಧಿಕವೆಸೆಯೆ ಯ
ಕ್ಷೀಣ ರವಿ ಶಶಿ ಭೂಜ ಬುಧ ಗುರು
ಮಾಣದಾ ಕವಿ ಮಂದತಮ ಶಿಖಿಯಂತೆ ಸುರಶೈಲಂ || ೩೭ ||

ಇಂತೆಸೆವ ಸುರಶೈಲದೊತ್ತಿನೊ
ಳಂತು ವರರಜತಾದ್ರಿಯೊಪ್ಪು[ವು]
ದೆಂತೆನಲ್ಚಿಂತಾಮಣಿಯ ಮೊರಡಿಗಳು ಮರುಜವಣೆ ||
ಕಾಂತಿಯಮೃತದ ತೊರೆಗಳವರಿಂ
ಮುಂತೆ ರಾಜಿಪ ಸುರಕುಜಗಳ
ತ್ಯಂತ ಸುರಭಿಗಳೊಪ್ಪೆ ಭೂನಗಮತಿಶಯದೆ ತೋರ್ಕುಂ || ೩೮ ||

ನೆಟ್ಟನಘಮಂ ಸುಟ್ಟ ಶರಣರ
ಕೊಟ್ಟ ದುರಿತಘರಟ್ಟ ಪುಣ್ಯದ
ದಟ್ಟ ಸುಖಮಂ ಬಿಟ್ಟು ಸುಜನರ್ಗಷ್ಟಕರುವಿಟ್ಟ ||
ದಿಟ್ಟ ಕೀರ್ತಿಯ ಪಟ್ಟ ಪೂಜ್ಯದ
ತಿಟ್ಟ ಬೆಳ್ಪಿನ ಬಟ್ಟ ಮುತ್ತಳ
ವಟ್ಟ ಹರುಷದ ಘಟ್ಟ ಬೆಳ್ಳಿಯ ಬೆಟ್ಟ ರಂಜಿಪುದು ||೩೯||

ಕ್ಷೀರ ಶರಧಿಯ ಚಾರು ಬೆಳಗಂ
ಹೀರದತಿಯವಾದ ಬಿಳಿದಂ
ಭಾರತಿಯ [ವರಶುಭ್ರತೆಯ(?)] ಸುರಗಂಗೆಯುನ್ನತಿಯ ||
ವಾರಿಜಾರಿಯ ಶುಭ್ರಮಂ ನುಂ
ದಾರದಮಲ ಶ್ವೇತಮಂ ಗಂ
ಭೀರದಿಂ ಕೀಳ್ಪಡಿಸಿ ಸಲೆ ರಜತಾದ್ರಿಯೊಪ್ಪುವುದು || ೪೦ ||

ಇಂತೆಸೆವ ರಜತಾದ್ರಿಯೊಳ್ಸಲೆ
ಕಂತುವೈರಿಯ ನಗರಿಯೊಪ್ಪು[ವು]
ದಂತದಕೆ ಸುಧೆ ಪೂರ್ಣವಾಗಿರ್ಪಗಳು ವಸುಮಯದಿಂ
ಮುಂತೆ ರಾಜಿಪ ಕೋಂಟೆ ಮೌಕ್ತಿಕ
ವಾಂತು ರಂಜಿಪ ತೆನೆಗಳಿಂದ
ತ್ಯಂತ ಮರಕತ ವಜ್ರದಿಂ ಶಿವಪುರಿ ವಿರಾಜಿಪುದು || ೪೧ ||

ಆ ಮಹಾರಜತಾದ್ರಿಯೆಡೆಯೊಳು
ಸೋಮಧರನಂತಃಪುರಂ ಮಿಗೆ
ರಾಮಣೀಯಕವಾದುದದರೊಳು ವಿನುತ ಘನದಿವ್ಯ ||
ನಾಮ ಸಿಂಹಾಸನವದರೊಳುಂ
ಪ್ರೇಮದಿಂ ದೇವಿಯರು ಸಹಿತಂ
ಕೋಮಲಾತ್ಮಕ ಮೂರ್ತಿಗೊಂಡಿರೆ ಬಂದರೋಲಗಕೆ || ೪೨ ||

ಎಡಸೊಳಿರ್ದರು ವಿಷ್ಣುಕೋಟಿಗ
ಳೆಡಬಲದೊಳ್ಬ್ರಹ್ಮಕೋಟಿಗ
ಳೆಡೆವಿಡದೆಯೊಪ್ಪಿದರು [ಭರ್ಗ]ನ ಪದದ ಸೇವೆಯಲಿ ||
ತಡೆಯದಸುರರು ಖೇಚರರು ಸಂ
ಗಡಿಸಿ ಸೇವಿಸೆಯಾಗ ಸಲೆ ಮೂ
ರಡಿಯ ಭೃಂಗೀಶ್ವರನ ನೃತ್ಯಂ ಮುಗಿದ ನಂತರದಿಂ || ೪೩ ||

ಪರಿಯೆ ಪೇರೋಲಗನದಾಗಳ್
ಗಿರಿಜೆಯೊಳು ಸರ್ವೇಶ್ವರಂ ತಾ
ನಿರೆ ಮಹಾನಂದೀಶ ವೀರಗಣೇಶ ಭೃಂಗೀಶರ್ ||
ಪರಮನಂಘ್ರಿಯ ಸೇವಿಸುತ್ತಿರೆ
ಯರರೆ ಬಳಿಕೇಕಾಂತದೋಲಗ
ಕುರವಣಿಸಿ ನಡೆತಂದ ನಾರದನೆಂಬ ಮುನಿರಾಯ || ೪೪ ||

ಜಯ ಕೃಪಾಕರ ಜಯ ಸುಧಾಕರ
ಜಯ ಹಿತಾಮಯ ಜಯ ವಿಭಾಮಯ
ಜಯ ನಿರಂಜನ ಜಯ ಸರಂಜನ ಜಯ ನಿರಂತರನೆ ॥
ಜಯ ಶಿವಾಪತಿ ಜಯ ಮಹಾಪತಿ
ಜಯ ಗುಣಾಶ್ರಯ ಜಯ ನಿರಾಶ್ರಯ
ಜಯಯೆನುತ್ತೆರಗಿದನು ಪೂರ್ವಾಮರರನೀಕ್ಷಿಸುತೆ || ೪೫ ||

ಬಂದು ಪರಮೇಶ್ವರನ ಪಾದಕೆ
ವಂದಿಸುತ್ತಂ ಕರಕಮಲಮಂ
ಚಂದದಿಂದಂ ಮುಗಿದು ಬಿನ್ನೈಸಿದನು ಸರ್ವಂಗೆ ||
ಇಂದುಶೇಖರ ಚಿತ್ತವಿಸು ನಲ
ವಿಂದ ಮರ್ತ್ಯವನೋವಿ ರಕ್ಷಿಸ
ಲೆಂದು ಕಳುಪಿದೆ ನಂದಿಕೇಶನ ಬಸವ ನಾಮದಲಿ || ೪೬ ||

ನಿನ್ನನುಜ್ಞೆಯನಾಂತು ಬಸವಂ
ತನ್ನ ಬೆಂಬಲದಮರಗಣ ಸಹಿ
ತಂ ನಲಿದು ಕಲ್ಯಾಣದಲ್ಲಿರ್ದಮಲ ಷಟ್ಸ್ಥಲಮಂ ||
ನನ್ನಿಯಿಂದಂ ಪ್ರಕಟಿಸಿದನದ
ರುನ್ನತಿಯ ಮುನ್ನರಿದು ಬೋಧಿಸ
ಚಿನ್ನಿಧಿಯ ಮರ್ತ್ಯಕ್ಕೆ ಕಳುಪೆನೆ ಶಿವನೊಡಂಬಟ್ಟು || ೪೭ ||

ಬಸವರಾಜನ ಭಕ್ತಿಯಂ ಸಂ
ತಸದೆಯುರುತರ ಚನ್ನಬಸವನೆ
ಮಿಸುಪ ವರಸುಜ್ಞಾನಮಂ ಪ್ರಭುವಿನ ವಿರಕ್ತಿಯನು ||
ಅಸಮ ಭೃಂಗೀಶ್ವರನ ನಿರ್ಮಲ
ವೆಸೆವ ಲಿಂಗ ಸುನಿಷ್ಠೆಯಂ ಭಾ
ವಿಸುತೆಯವನಿಂತೊಂದುಗೂಡುತ್ತಾಗ ಸರ್ವೇಶಂ || ೪೮ ||

ತನ್ನ ಸದ್ಗುಣವಾದಿಯಾದವ
ನುನ್ನತದೆ ಕೂಡುತ್ತ ತೋಂಟದ
ಚಿನ್ನಿಧಾನಂ ವಿಮಲ ಸಿದ್ಧೇಶ್ವರನೆನಿಪ ಪೆಸರಂ ||
ಮನ್ನಿಸುತೆ ಕೊಟ್ಟಾಗ ಗುರುರೂ
ಪಿಂ ನಿಖಿಲಮುಂ ಬೋಧಿಸೆನಲಾ
ಗಂ ನಲಿದು ಮರ್ತ್ಯಕ್ಕೆ ನಡೆತಂದಂ ಶಿವಾಜ್ಞೆಯೊಳು || ೪೯ ||

ಸಕಲ ಮುನಿಗಣವಂದ್ಯಪಾದನೆ
ಅಕುಟಿಲಾತ್ಮನೆ ರಾಮಣೀಯಕ
ನಕಲಂಕನೆ ಪಾವಕನಯನನೆ ಪಾವನಾಂಗನೇ
ಪ್ರಕಟ ಘನಸತ್ಕೀರ್ತಿಯುಳ್ಳನೆ
ಸುಕರ ಚಿತ್ತನೆ ಶುದ್ಧಕಾಯಕನೆ
ಮಕರಕೇತನ ಮದಹರನೆ ಜಯ ಸಿದ್ಧದೇಶಿಕನೆ (?) || ೫೦ ||

ವಾಮದಿಂದಾಯಿತ್ತು ಬಳಿಕಿನ್ನೊಂದವಧರಿಸನು
ಪಮನೆಯಕಲಂಕ ವಿರಹಿತ
ಭೂಮ ಭವದಾಯ ಪ್ರಸಾದೊದ್ದಾಮ ಚಂ
ದ್ರಮನಿಂದೆಯೆನ್ನ ಮನಃ ಕುವಲಯ
ಕಾಮಹರ ಸದ್ಗುರುವೆ ಸಂತತ
ವೀ ಮಹೀಬುಧರರಿಯ ವಿಕಸನೆ (?) || ೫೧ ||

ಇದು ವಿಮಲ ಗುರು ತೋಂಟದಾರ್ಯನ
ಪದಕಮಲಷಟ್ಚರಣನೆನಿಸುವ
ಸದಮಲ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರ |
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣವ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥಮೊಂದುವುದು || ೫೨ ||

ಅಂತು ಸಂಧಿ ೧ ಕ್ಕಂ ಪದನು ೫೨ ಕ್ಕಂ

ಮಂಗಳಂ

ಎರಡನೆಯ ಸಂಧಿ

ಸರಸ ಗೋಸಲ ಚನ್ನಬಸವೇ
ಶ್ವರನ ಹಸ್ತದೊಳುದಿಸಿ ಗಂಗಾ
ಧರನ ಘನ ಶೈಲಕ್ಕೆ ತೋಟದ ಸಿದ್ಧನೈತಂದಂ ||
ಪಾವಕಹರ ನತಪದನೆ ನಿತ್ಯ
ಸ್ತೋಕನೆ ಮುನಿಜನ ವಿನುತ ನೆ
ನಿರ್ವ್ಯಾಕುಲನೆ ಪರಮೇಶ್ವರನೆ ನವಪಾವನದ ರೂಪ ||
ಶ್ಲೋಕನೇ ಸಂತಾಪ ಹರನೆಯು
ನೇಕ ಮುನಿಗಣವಂದ್ಯನೇ ಭೂ
ಲೋಕ ಪಾವನ ಮೂರ್ತಿಯೇ ಜಯ ಸಿದ್ಧದೇಶಿಕನೆ || ೧ ||

ಇತ್ತ ಮೇರುಗೆ ದಕ್ಷಿಣಾಸೆಯೊ
ಳುತ್ತಮದ ಲವಣಾಂಬುಧಿಯು ತಾ
ನುತ್ತರೋತ್ತರವಾಗಿಯೊಪ್ಪು [ವು] ದೆಂತೆನಲ್ಕೇಳು ||
ಮುತ್ತು ಹುಟ್ಟುವ ಕಣಿಜಲಂಗಳ
ಗೊತ್ತು ಪವಳದ ಪಾತಿ ಚಂದ್ರನ
ಹೆತ್ತ ತಂದೆ ಮುಗಿಲ್ಗ ಳರವಟ್ಟಿಸಿ [ತಾ] ಶರಧಿ (?) || ೨ ||

ಧರಿಸಿ ಶಂಖವನಾವೆ ಮೊನ್ಗಳ
ಪರಿಯ ರೂಪುಗಳಾಂತು ಪಾವಿಂ
ಕರಮೆಸೆದು ರಥಪಾದ ವಿನುತ ಸಮಾಶ್ರಯಂ ತಾನು ||
ಭರದೆಯೊಗಿ ಸುಭೂಮಿ ಭೃತ್ಕುಳ
ವರಿ ಭಯದೆ ನತರಾಗೆ ರಕ್ಷಿಸಿ
ಸಿರಿಯ ಪೊತ್ತಚ್ಯುತನ ತೆರದಿಂದೊಪ್ಪಿದುದು ಶರಧಿ || ೩ ||

ಜ್ಞಾನ ಚಂದ್ರನ ತಂದೆ ಸಲೆ ಚಿ
ದ್ಭಾನುಬಾಲಂಗರರೆ ತೊಂಟಲ
ನೂನ ಸನ್ಮೌಕ್ತಿಕ ವಿತಾನಂ ಪುಟ್ಟುತಿರ್ಪ ಕಣೆ ||
ಮೂನಿತದೊಳಾ ಮುಕ್ತಿ ಲಕ್ಷ್ಮಿಗೆ
ತಾನೆಯೊದುದು ತವರುಮನೆ [ಸು]
ಧ್ಯಾನ ನಿಧಿ ಸಿದ್ಧೇಶ್ವರನ ಗಂಭೀರ ವಾರಾಸಿ || ೪ ||

ಘೋರ ಕಾನನದೊಳಗೆ ಪೊಗದ
ಚಾರು ಹೇರಂ ಕೆಡಹಿ ಹರದರು
ಸಾರಿ ಪಚನಂ ಮೊಳ್ಪಡೆಯೊಳೊಲೆಯೊದ ಶಿಲೆಯಲ್ಲಿ ||
ಕ್ಷೀರ ತೆತಿಯೊಗೆದಡಕೆಯಣಿಲೆ [ಯ]
ಚಾರು ಕಾಯಿಗಳಾಗೆ ಕಂಗೆ
ಟ್ಟಾರಯಲ್ಸೆಟ್ಟಿಗಳು ಚಿಂತಿಸಿ ನಿದ್ರೆಗೈವಲ್ಲಿ || ೫ ||

ಅವರ ಕನಸಿನೊಳಭವನೆಂದಂ
ತವೆಯಡಕೆಯುಂ ಮೊಳ್ಪವಣಿಲೆಯ
ನವನಿಯೊಳ್ವಿಕ್ರಯಿಸಿರ್ಪೆಯೆನೆ ಕಣ್ದೆರೆದು ನೋಡಿ ||
ತವಕದಿಂದಂ ಮಾರಿ ಲಾಭದೆ
ಭವನಮುಂ ರಚಿಸುತ್ತೆ ಲಿಂಗಕೆ
ಸವಿನಯದೆಯಣಿಲೇಶನೆಂದಭಿಧಾನಮುಂ ಕೊಟ್ಟು || ೬ ||

ಈ ವಿಮಲ ಲಿಂಗಕ್ಕೆ ಜಂಗಮ
ದೇವರೇ ಸತ್ಪ್ರಾಣವೆನುತಂ
ತಾವು ಸನ್ಮತವಾಗಿ ತಡೆದರು ಗೋಸಲೇಶ್ವರನ ||
ಆ ವಿಶೇಷದ ಲಿಂಗದಗ್ರದೊ
ಳೋವಿ ಸತ್ಯಮನೆಸಗೆ ಲಿಂಗಕೆ
ಭೂವಳಯದೊಳ್ದಿವ್ಯಲಿಂಗವೆನಿಪ್ಪ ಪೆಸರಾಯ್ತು || ೭ ||

ಆ ವಿಶೇಷದ ವಣಿಜರೆಲ್ಲರು
ತಾವು ತನ್ಮಯ ಪೆಸರು ಕೆಡದಂ
ತೋವಿ ಕೊಟ್ಟರುವಾ ಮಹಾಘನ ಲಿಂಗವಂತಿರ್ಪ ||
ಶ್ರೀವಿಮಲ ಸತ್ಪುರಕೆಯದರಿಂ
ಪಾವನದ ಪೆಸರಾಯ್ತು ಮತ್ತಂ
ಭೂವಳಯದೊಳ್ಬಳಿಕ ಹರದನಹಳ್ಳಿಯೆಂದನಿಶಂ || ೮ ||

ಮೆರೆವುದಾ ದಕ್ಷಿಣದ ಶರಧಿಗೆ
ಯರಿವುದೈ ಸಲೆ ಬಡಗಣಾಸೆಯೊ
ಳರಿಕೆಯಿಂದಂ ಬಳಿಕ ಹರದನ ಪುರನದೊಂದಲ್ಲಿ ||
ನೆರೆ ವಿರಾಜಿಪುದದರ ಮಧ್ಯದೊಳ್
ಸ್ಮರನ ಕೊಂದೀಶಪ್ರತಿಮನತಿ
ಕುರಿಹಿನುನ್ನತ ಗೋಸಲೇಶ್ವರನೆಂಬ ಗುರುಮೂರ್ತಿ || ೯ ||

ಇರ್ಪನಾತನ ಕರಸೊಳಗೆ ಸಲೆ
ಕರ್ಪಿನಿಂ ಜನಿಸುತ್ತೆಯುನ್ನತ
ಸರ್ಪ ಕಂಕಣನೆನಿಪ ಗುರುಸಿದ್ಧೇಶ್ವರಂ ಮತ್ತೆ ॥
ತೋರ್ಪ ಕರ್ನಾಟಕದ ಮಧ್ಯಕೆ
ಬರ್ಪ ಕಾಲದೊಳಾಗ ರಾಜಿಪು
ದಾರ್ಪಿನಿಂ ಶಿವಗಂಗೆಯುರುತರ ದೇಶಮೊಪ್ಪುವುದು ॥ ೧೦ ॥

ಮಂಗಳೋದಯವೆತ್ತ ದೇಶವ
ಭಂಗ ದೇಶವನೂನ ದೇಶಂ
ತುಂಗ ದೇಶವದಾರ್ಗೆಯುಂ ಬೇಡಿದುದನೊಲಿದೀವ ॥
ಸಾಂಗ ದೇಶವದಚ್ಚರಿಯೊಳದು
ಪಿಂಗದೊಪ್ಪುವ ದೇಶಮನಿಶಂ
ಸಿಂಗರಕೆ ನೆಲೆಯೆನಿಸಿತಾ ಶಿವಗಂಗೆಯುರು ದೇಶಂ ॥ ೧೧ ॥

ಲಾಳ ಗುರ್ಜರ ಕೇರಳಂ ಪಂ
ಚಾಳ ಕರ್ಪರ ಬರ್ಬರಂ ಮಲೆ
ಯಾಳ ಕುಂತಳ ಪಾಂಡ್ಯ ವಂಗ ಕಳಿಂಗ ಬಂಗಾಳ ॥
ಮಾಳವಂ ಹಮ್ಮಿರ ಕುರು ನೇ
ಪಾಳ ಕೊಂಕಣ ಪಾರಿಯಾತ್ರಂ
ಗೌಳಯಾಂಧ್ರ ತುರುಷ್ಕತತಿ ಮೊದಲಾದ ದೇಶಕ್ಕೆ ॥ ೧೨ ॥

ಮಿಗಿಲೆನಿಪ ಕರ್ನಾಟ ದೇಶಂ
ಸೊಗಸುತಿರ್ಪುದು ಕಟ್ಟಿ ಕಾಲುವೆ
ಯಗಣಿತದ ಕೆರೆ ತೊರೆ ನದೀ ನವವನ ಸಮೂಹಗಳಿಂ ॥
ನಿಗಮ ಪಂಡಿತರಿರ್ಪ ಕೌಸಲ
ನಗರಿಗಳ ನಿಕರಂಗಳಿಂದಂ
ಬಗೆಗೆ ಚೋದ್ಯವೆನಲ್ಕೆ ಮೆರೆದುದು ದೇಶವತಿಶಯದಿಂ ॥ ೧೩ ॥

ಚೂತಕುಜದಿಂದಿರ್ಪ ವನಗಳು
ಜಾತಮಲ್ಲಿಗೆಯಿರ್ಪ ತೋಂಟಗ
ಳೋತು ಹೊಂದಾವರೆಗಳಿರ್ಪ ಕೊಳಂಗಳಂತಲ್ಲಿ
ಪ್ರೀತಿಯಿಂ ಸಮರತಿಯೊಳಿರ್ಪಾ
ಖ್ಯಾತ ಸತಿಪತಿಗಳ ಸಮೂಹಗ
ಳೀ ತೆರ [ದೊಳಿಹ] ದೇಶವಂಗಜಭೂಮಿಪಾಲಕನ ॥ ೧೪ ॥

ಜನನ ಧರೆಯೆನಿಸಿತ್ತು ಮತ್ತಂ (?)
ಕನಲಿ ಬಾಧಿಪ ದೇಶವೆಂಬುದು
ವಿನುತ ನಕ್ತದೊಳಲ್ಲದಾವರ ದೇಶದೊಳಗಿಲ್ಲ ||
ಮುನಿಯೆನಿಪ ನುಡಿ ಯತಿಗಳೊಳಗಂ
ತನುವಿನೊಳು ಮಲವೆಂಬ ವಚನಂ
ವನದೊಳಲ್ಲದೆ ಮಾನವರ ನುಡಿಯಲ್ಲಿಯಿನಿತಿಲ್ಲ || ೧೫ ||

ತರಳವೆಂಬುದು ಹಾರಮಧ್ಯದ
ಸುರುಚಿರದ ರತ್ನದೊಳಗಲ್ಲದೆ
ಯರರೆ ಚಂಚಲರಿಲ್ಲವಾ ದೇಶದೊಳು ನೋಡಲ್ಕೆ ||
ತ್ವರಿತದಿಂದಂ ಮಾಳ್ಪ ವೃಜಿನಗ
ಳಿರದೆನಲ್ಕಾನಿಲ್ಲ ನಾಡೊಳ
ಗುರುತರದ ತಲೆ ನವಿರೊಳಲ್ಲದೆ [ದೇಶದೊಳಗಿಲ್ಲ] [?] || ೧೬ ||

ಈ ಪರಿಯ ಕರ್ನಾಟದೇಶವು
ಭೂ ಪವಿತ್ರವದಾಗ ಬೇಕೆಂ
ದಾ ಪರಮ ಗಂಗಾಧರಂ ನೆಲಸಿದ ಕಕುದ್ಗಿರಿಯ ||
ಸ್ಥೈಪಿನುರು ಸೀಮೆಯೊಳು ಬಳಸಿ ಮ
ಹಾ ಪುರಂಗಳು ರಾಜಿಸಿರ್ಪವು
ಪಾಪದೂರರೆನಿಪ್ಪ ಸಜ್ಜನರಿರ್ಪರಂತಲ್ಲಿ || ೧೭ ||

ಗ್ರಾಮ ನಿಕರಂ ಖೇಟ ವೃಂದಂ
ಪ್ರೇಮದಿಂ ಖರ್ವಡ ಸಮೂಹಂ
ರಾಮಣೀಯಕವಾದ ಪತ್ತನ ಸಂಚಯಂ ಬಳಿಕ
ಕೋಮಲದ ಸನ್ನಗರವೆಸೆಯೆ ಮ
ಹಾ ಮಹಿಮ ಗಂಗಾಧರೇಶನ
ಸೀಮೆಯೊಪ್ಪುವುದೆಲ್ಲಕಂ ತಾನಧಿಕವೆಂಬಂತೆ || ೧೮ ||

ವರನದೀಮಾತೃಕವನಂ ಸಂ
ಸ್ಥಿರದೊಳೊಪ್ಪುವ ದೇವಮಾತೃಕ
ವರರೆಯನಿಶಂ ಮೆರೆಯೆಯವರಿಂ ಬೆಳೆವ ಸಸ್ಯಾಳಿ ||
ಕರಮೆಸೆವುದಾ ಮಾತೃಕೆಗಳಿಂ
ಪರಿಪರಿಯ ವನವಲ್ಲಿ ರಾಜಿಪ
ವರಿದೆನಲು ಬಣ್ಣಿಪರಿಗಚ್ಚರಿಯೆಂಬ ತೆರದಿಂದ || ೧೯ ||

ತೆಂಗು ಮಾದಲ ಖರ್ಜುರಂ ನಾ
ರಂಗ ಕಿತ್ತಿಳೆ ನಿಂಬೆ ಹೇರಿಳೆ
ಕೌಂಗು ಬಾಳೆ ಕಪಿತ್ಥ ಚಂಪಕ ವೀರತರು ಪಲಸು ||
ತುಂಗಪಾಟಲ ರಾಜವೃಕ್ಷಾ
ದ್ಯಂಗಳಾದಿಯ ವಿಟಪಿಯೊಪ್ಪೆ ವು
ನಂಗೊಳಿಪುದಾ ವನವಿತಾನಂ ಜೀವನಂ ಜನಕೆ || ೨೦ ||

ಆಗ ಕೇಗುವ ನವಿಲ್ಗಳು
ಬೇಗದಿಂ ಕೂಡುವ ಕುರಂಗಂ
ರಾಗದಿಂದಂ ಕುಕಿಲ್ವಕೋಗಿಲೆ ಝೇಂಕರಿಪ ತುಂಬಿ
ಮೇಗೆ ಚಪ್ಪರಿಪರೆಗಿಳಿಗಳನು
ವಾಗಿ ಮೂಡಿ ಮುಳುಂಗುತಿರ್ಪವು
ಯೋಗದಿಂದಂ ಜಕ್ಕವಕ್ಕಿಗಳಾ ವನಾಂತರದಿ || ೨೧ ||

ದೇವವಲ್ಲಭವಗ್ನಿಮುಖಿಯಾ
[ತೀವಿ] ತವೆಕಾಲ ಸ್ಕಂಧವಂತುರೆ
ತೀವಿದತಿಶಯ ಪುಣ್ಯಘನ ಸಹಕಾರವುಂ ವರುಣಂ ||
ಪಾವನಶ್ವಶನಂ ಕುಬೇ [ರಕ]
ರಾ ವಿಶೇಷ ಶಿವಾದಿ ವೃಕ್ಷಗ
ಳಾವಗಂ ರಾಜಿಸಲು ವನ ದಿಕ್ಪಾಲರಂತೆಸೆಗುಂ || ೨೨ ||

ಹರುಷದಿಂ ರಾಜಿಸುವ ವನದೊಳ್
ಸರಸಿಯೊಪ್ಪು [ವು] ದೆಂತೆನಲ್ಕಾ
ಶರಧಿಯಂದದಿ ಘನ ಕಲಂಬಂ ಬಳಿಕ ಸಂಗರದ ||
ಧರಣಿಯಂತೆ ಕಬಂಧವೇ ತೋ (?)
ರ್ಕರರೆ ನಾಯಕಿಯರ ವಿಭೇದದೊ
ಳರಿದೆನಿಪ ನುತ ಕರ್ಣಿಕಾ ನಿವಹಂಗಳಂತಲ್ಲಿ || ೨೩ ||

ಕರಿಕರದ ತೆರದಿಂದೆ ತೀರ್ಥೋ
ತ್ಕರದ ತೆರದಿಂ ಪುಷ್ಕರಂ ಬಂ
ಧುರದೆ ರಾತ್ರಿಯ ಘನದ ತೆರದಿಂ ಮತ್ತ ಕರ್ಬುರನ ||
ಸರಸದಿಕ್ಕಿನ ತೆರದಿ ಕುಮುದಂ
ತರುವಿನಂತಾ ಮಹಿಷನಂತಾ
ಪರಿಪರಿಯ ನೀರ್ವೂವಿನುರುದಳಮಿರೆ ಕೊಳಂ ತೋರ್ಕುಂ || ೨೪ ||

ತಿಳಿಗೊಳಂಗಳ ನಡುವೆ ಮೂಡಿದ
ನಳಿನ ಕೈರವಕೆರಗಿ ಝೇಂಕರಿ
ಪಳಿಗಳಿಂದಂ ಜಕ್ಕವಕ್ಕಿಯು ತೆಕ್ಕೆಯಿಂ ಮತ್ತೆ
ಬಳಸಿ ತೋರುವ ಮಾಮರಂಗಳೊ
ಳೆಳಸಿ ಕೂಗುವ ಪಿಕನಿನದದಿಂ
ಗಿಳಿಯ ಸವಿನುಡಿಯಿಂದ ವನವಂತಲ್ಲಿ ರಾಜಿಪುದು || ೩೫ ||

ಸಂಪಗೆಯು ತರುರಾಜಿ ವೃಕ್ಷಂ
ಕಂಪು ರಾಜಿಪ ಪಾಟಲಾಗನು
ವಿಂಪಿನಿಂ ಸೊಂಪೇರಿ ಸೊಗಸುವ ಕರ್ಣಿಕಾರ ಕುಜಂ ||
ತಂಪನೀವತಿ ಕಂಚಿವಾಲಂ
ಪೆಂಪಿನಿಂದಂ ಜಾಲ [ಮರಗಳ]
ಲಂಪಿನಿಂದಲಗೊರ್ಂಬೆ ರಾಜಿಸೆಯಾ ವನಾಂತರದಿಂ || ೩೬ ||

ಕುಲದ ತೆರದಿಂ ಜಾತಿವೃಂದಂ
ಲಲಿತ ವೇಶ್ಯಾವೀಧಿಯಂದದಿ
ಯಲಘು ಗಣಿಕಾ ಸಂಚಯಂ ಬಲುಬಂಟನಂದದೊಳು ||
ಸುಲಭ ಕರವೀರ ಪ್ರಕರವಂ
ತೊಲವಿನಿಂ ನಾಯಕಿಯರಂತುಂ
ಸಲೆ ಕುಮಾರಿ ನಿವಹದಿಂ ಪೂದೋಂಟವೆಸೆದಿರ್ಕುಂ || ೩೭ ||

ಇಂದ್ರವೈರಿಯ ತೆರದಿ ಜಂಭನು
ಪೇಂದ್ರಸುತನೆಂಬೊಲ್ಮದನನಚ
ಲೇಂದ್ರಪುತ್ರಿಯ ಹಾಂಗೆ ಹೈಮವತೀ ಮಹಾಸೋಮ ||
ರುಂದ್ರ ಶಂಭುವಿನಣುಗನಂದದಿ
ಸಾಂದ್ರ ಶಕ್ರಂ ಶಿಶಿರವೆನೆ ನಿ
ಸ್ತಂದ್ರ ತೀರ್ಥಂ ತೋರ್ಪುದಾ ವನದಲ್ಲಿ ಕುಜಪಜ್ಙ್ತಿ || ೩೮ ||

ಇಂತು ತೋರ್ಪವನಂಗ[ಳಿಂದ]
ತ್ಯಂತದಿಂದಂ ಬಳಸಿ ರಾಜಿಸಿ
ಮುಂತೆ ಶಿವಪುರಿಯಾದಿಯಾದ ಮಹಾನಗರ ವಿತತಿ ||
ಅಂತನಂತಂ ಮೆರೆಯೆ ಗಂಗಾ
ಕಾಂತನುನ್ನತದೇಶವನಿಶಂ
2 ಸಂತಸದೊಳೊಪ್ಪುವುದು ತನ್ಮಧ್ಯದೊಳು ಶಿವಗಂಗೆ || ೩೯ ||

ಹೆರುಷದಿಂದಂ ಮೆರೆವುದೆಂತೆನೆ
ಸುರಪುರಾದಿಯ ನಗರತತಿಯಂ
ಭರದಿಯಜನಂತದನೆ ತೂರಲು ಹೊಟ್ಟೆವೆಂಬವೊಲು ||
ಇರದೆ ದಿಕ್ಪಾಲಕರ ಪಟ್ಟಣ
ರಿವೆಸಲ್ತಾನಲ್ಲಿ ನಿಂದವು
ಧರೆಯೊಳುಳಿದುದು ಘಟ್ಟೆಯಾದುದರಿಂದ ಶಿವಗಂಗೆ || ೩೦ ||

ವರ ಭವಿಷ್ಯೋತ್ತರ ಪುರಾಣದೊ
ಳುರು ? [ಶಿವಂ] ಕುಂಭಜ ಮುನೀಶಂ
ಗರರೆ ಪೇಳಿದನಂತುಮಲ್ಲದೆ ನಂದಿಕೇಶ್ವರನು ||
ತರುಣನೆನಿಪ ಸನತ್ಕುಮಾರಂ
ಗಿರದೆ ಪೇಳಿದನಂದು ಮತ್ತಂ
ಕರುಣದಿಂದಂ ಸಂದ ಪೌರಾಣಾರ್ಥದಿಂ ಬಳಿಕ || ೩೧ ||

ನಾರಸಿಂಹ ಪುರಾಣದೊಳಗಂ
ಧಾರುಣೀಪತಿ ರಾಮಭೂಪಂ
ಗಾ ರಸಾಕರಮುನಿ ವಶಿಷ್ಠಂ ಪೇಳಿದಂ ವಿಮಲ
ಚಾರುತರದ ಕಕುದ್ಗಿರಿಯ ವಿ
ಸ್ತಾರನುಂ ಗಂಭೀರನಾಗಿರೆ
ಸೇರುವೆಯೊಳಾಯರ್ಥದಿಂದಂ ನುಡಿವೆನೆಂತೆನಲು || ೩೨ ||

ವರ ಕಕುದ್ಗಿರಿಯಾದಿಯೆಂತೆನೆ
ಧರೆಯ ಕೆಳಯನಂತ ಯೋಜನ
ದುರುತರದ ಪಾತಾಳ ಲೋಕದ ಭೂಮಿಯೊಳು ತೋರ್ಕುಂ ||
ಹರುಷದಿಂದ ಸುವರ್ಣಮೇಖಲೆ
ಯರರೆ ತೋರ್ಪುದು ಮತ್ತೆಯಂತಾ
ಪುರದಿ ನಡುಬೀದಿಯಲಿ ಮೆರೆವುದು ಕೊಳನದೊಂದಲ್ಲಿ || ೩೩ ||

ದೇವಘಾತವೆನಿಪ್ಪ ಸರಸಿಯೊ
ಳಾವಗಂ ಸಲೆ ತೋರುತಿರ್ಪಾ
ತಾವರೆಯ ಕರ್ಣಿಕೆಯ ಮಧ್ಯದೊಳಿರ್ಪುದನವರತಂ ||
ಭಾವಿಸುವೊಡಾ ತಾ ಕಕುದ್ಗಿರಿ
ಭೂವಳಯದೊಳು ಲಿಂಗನಗವೆಂ
ದಾ ವಿನಾಯಕಶೈಲವೆಂದಾ ಸ್ತಂಭಗಿರಿಯೆಂದು || ೩೪ ||

ಉರುತರದ ಜಾಳಾಂದ್ರ ನಗವೆಂ
ದರರೆ ಘನ ವೃಷಭೇಂದ್ರಗಿರಿಯೆಂ
ದಿರದೆಯೇಕಶೃಂಗ ಪರ್ವತವೆಂದು ಬಹುವಿಧದ ||
ಸ್ಥಿರದ ನಾಮಂಗಳೊಳು ವಿರಾಜಿಸ
ಪರಮ ಗಂಗಾಧರನ ಗೋತ್ರದ
ಪರಿಯ ಪೊಗಳುವೊಡುರಗಪತಿಗ[ಮ]ಶಕ್ಯಮೆಂತೆನಲು || ೩೫ ||

ಬಳಿಕ ಸುರಗಿರಿಯಂತೆ ಕೃತಯುಗ
ದೊಳಗೆಯೇಕಸ್ತಂಭ ನಗವೆಂ
ದಿಳೆಯೊಳೆಸೆವುದು ಮತ್ತೆಯಾ ತ್ರೇತಾಯುಗದೊಳಿಂತು ||
ತಿಳಿಯೆ ವೃಷಭೇಂದ್ರಾದ್ರಿ ನಾಮದಿ
ಬೆಳಗುತಿ[ರ್ಪುದು]ರಜತಗಿರಿಯಂ
ತಳಿಕಲೋಚನನಮಲ ಗಂಗಾಧರನ ಘನಶೈಲ || ೩೬ ||

ಸಾಂದ್ರದಿಂ ದ್ವಾಪರದೊಳುಂ ಜಾ
ಳಾಂದ್ರ ಪರ್ವತವೆಂದು ಘನ ಶೈ
ಲೇಂದ್ರ ಕಾಂತಿಯೊಳೊಪ್ಪಗುಂ ತವೆ ನೀಲಗಿರಿಯಂತೆ ||
ರುಂದ್ರ ಕಲಿಯುಗದಲ್ಲಿ ತೋರ್ಕುಂ
ಚಂದ್ರಶೇಖರನಾಜ್ಞೆಯೊಳು ನಿ
ಸ್ತಂದ್ರದಿಂದೆಸೆವುದು ಕಕುದ್ಗಿರಿಯೆಂಬ ಪೆಸರಿಂದ || ೩೭ ||

ಆ ಕಕುದ್ಗಿರಿಯೊಳ್ಕಣಾದಂ
ಶ್ರೀಕರದೊಳತ್ಯಗ್ರ ತಪಮಂ
ಜೋಕೆಯಿಂ ಮಾಡುತ್ತಿರಲ್ಕವನುನ್ನತ ಜ್ವಾಲೆ
ಲೋಕಮಂ ದಹಿಸಲ್ಕೆ ಬಂದು ಪಿ
ನಾಕಿ ತನ್ನ ಜಟಾಮಕುಟದ
ಸ್ತೋಕ ಗಂಗೆಯ ಕಳುಪೆಯಾ ನದಿಯುಷ್ಣಮಂ ಕೆಡಿಸೆ || ೩೮ ||

ಅನಿತರೊಳ್ಕಂಡೆರೆದು ಋಷಿ ಗ
ಮ್ಮನೆ ಶಿವನ [ಶೀರ್ಷದ] ಗಂಗೆಯ
ಸನಯದಿಂ ಕೊಂಡಾಡಿದಂ ಜಯಜಯ ಶಿವಾಗಂಗೆ ||
ಅನುಪಮ ಶಿವಾಗಂಗೆಯೆಂದಾ
ಘನ ಶಿವಾ ಜಯಗಂಗೆಯೆನುತಂ
ವಿನುತಿಸಲ್ಕೈವಗಂಗೆಯೆಂದಾಯಿತ್ತು ಮುನಿಯಿಂದ || ೩೯ ||

ಈ ತೆರದೊಳಾ ಗಂಗೆಯಂ ವಿ
ಖ್ಯಾತದಿಂದ ಕಣಾದ ಮುನಿ
ಪತಿ ಸಾತಿಶಯದಿಂ ನುತಿಸುತಿರೆ ಪರಮೇಶನೈತರಲು ||
ಪ್ರೀತಿಯಿಂದಾ ಮುನಿಭನಂಗತಿ
ಭೀತಿಯಿಂದಂ ವಂದಿಸಲ್ಕತಿ
ಪೂತ ಶಿವನಿಂತೆಂದನಾ ಮುನಿಯೊಡನೆ ವಿನಯದೊಳು || ೪೦

ಎಲೆ ಕಣಾದಮುನೀಶ್ವರಾ ಕೇ
ಳಲಘುಗಂಗೆ ಯುಗತ್ರಯದೊಳಂ
ಸುಲಭದಿಂ ನದಿಯಾಗಿ ಪರಿಯಲಿ ಕಲಿಯೊಳುಂ ಮಕರ ||
ಲಲಿತ ಸಂಕ್ರಾಂತಿಯೊಳು ಕಂಭದೊ
ಳೊಲಿದು ಬಂದುದೆ ಲಗ್ನವಪ್ಪುದು
ಸಲೆ ವಿವಾಹಂ ನಮಗೆ ಮತ್ತಂ ವರುಷ ವರುಷಕ್ಕೆ || ೪೧ ||

ನಿನ್ನ ಪೆಸರ ಕಣಾದತೀರ್ಥದ
ಪನ್ನತಿಯ ಬಲ್ಲವನದಾವಂ
ನನ್ನಿಯಿಸುತೀಶ್ವರನವಂಗಿಷ್ಟಾರ್ಥಮಂ ಕೊಟ್ಟು ||
ಸನ್ನುತದ ಗಂಗಾಧರಾಖ್ಯದೊ
ಳಂ ನಿಖಿಳರಂ ಪೊರೆಯೆ ಗುಹೆಯೊಳ
ಗುನ್ನತದ ಲಿಂಗಾಕೃತಿಯೊಳೊಪ್ಪಿದನಲಾ ಕೂರ್ತು || ೪೨ ||

ಆ ಮಹಾಗಂಗಾಧರೇಶಂ
ಪ್ರೇಮದಿಂ ನೆಲಸಿದ ಕಕುದ್ಗಿರಿ
ಯಾ ಮಹೀಧರದಲ್ಲಿ ಕಪಿಲ ಕಣಾದ ಮೌದ್ಗಲ್ಯ ||
ರೋಮಜಾದಿಗಳಖಿಳ ತೀರ್ಥ
ಸ್ತೋಮ ಗುಪ್ತಬಿಲಂಗಳನಿಶಂ
ರಾಮಣೀಯಕವಾಗಿ ರಂಜಿಪುವತಿ ಮಹಿಮೆಯಿಂದ || ೪೩ ||

ಹರುಷದಿಂದಲ್ಲಿರ್ಪ ಮಹಿಮೆಯ
ನರರಿಗೆ ಕಾಣುತೆ ಸಿದ್ಧಲಿಂಗಂ
ತೆರಳಿ ಪಶ್ಚಿಮಕಾಗಿ ಬಪ್ಪೆಡೆಯಲ್ಲಿ ಮುಂದೊಂದು ||
ಪುರವರಂ ರಾಜಿಪುದು ಶಿವಭ
ಕ್ತರ ಸಮೂಹದೊಳಲ್ಲಿ ತೋರ್ಕುಂ
ಪಿರಿದೆನಿಪ ಘನ ನಾಗಿಣೀನದಿಯದರ ನಿಕಟದೊಳು || ೪೪ ||

ಜಾತಿ ಮಲ್ಲಿಗೆ ಸುರಗಿ ಪಾದರಿ
ಪೂತಚಂಪಕ ಕುಂದ ನವ ಚಂ
ಡಾತಕಾದಿಯ ಕುಸುಮತತಿಗಳ್ತೋರ್ಪ ತೋಂಟದೊಳು ||
ರೀತಿಯಿಂ ಸಿದ್ಧೇಶ್ವರಂ ಸಂ
ಪ್ರೀತಿಯಿಂ ಶಿವಯೋಗದಲ್ಲಿರೆ
ಶೀತಮಂ ಬೀರುತ್ತೆ ಹಿಮಭೂಪಾಲನೈತಂದಂ || ೪೫ ||

ಶರ ನೃಪಾಲನ ತಗುಳಿ ಬಲ್ಲಿದ
ರಿರಲು ಕುಚದುರ್ಗಕ್ಕೆ ಹಾಯ್ಕುತೆ
ಯರುಣನಂ ಕಾಲ್ಗೆಡಿಸಿ ಮುಂಗಡೆಯಲ್ಲಿರಲ್ಕ[ಹ]ರೆ ||
ಭರದೆ ನೆಗಳುತ್ತಿರೆ ಬಡವರುಗ
ಳರರೆ ನಡು ಸುತ್ತಿರ್ಪಗೈಯಿಂ
ತ್ವರಿತದಿಂದೋಲೈಸಿ ಬಂದಂ ಚಾರು ಹಿಮರಾಜಂ || ೪೬ ||

ಈ ತೆರದ ಹಿಮಗಾಲಮಂ ಸಂ
ಪ್ರೀತಿಯಿಂದಾ ಚಾರುಲಿಂಗದೊ
ಳೋತು ಚಿತ್ತಮನಿಂತು ತಾಂ ನೆಲೆಗೊಳಿಸಿ ಸಿದ್ಧೇಶಂ ||
ರೀತಿಯಿಂದಂ ಕಳೆದನತಿಶಯ
ಶೀತ ಸಮಯದ ಬಾಧೆಯಂ ವಿ
ಖ್ಯಾತ ಗುರುಲಿಂಗದೊಳು ಬುದ್ಧಿಯ ನಿಲಿಸಿ ಸಲೆ ಗೆಲ್ದಂ || ೪೭ ||

ಶುಕ ಪಿಕಾಳಿಯರಾವ ಕರ್ಣಕೆ
ಸುಕರದಿಂ ತಂಗಾಳಿಗಾತ್ರಕೆ
ಸಕಲ ಮಂಜುಳವಾಮ್ರಪಲ್ಲವರಾಗ ನೇತ್ರಕ್ಕೆ ||
ಪ್ರಕಟ ಫಲರುಚಿ ಜಿಹ್ವೆಗಂ ನಾ
ಸಿಕಕೆ ಕುಸುಮಾಮೋದವೆಸೆಯ
ಲ್ಮಕರಕೇತನಸಖನೆನಿಪ್ಪ ವಸಂತನೆಯ್ತಂದ || ೪೮ ||

ಆ ಸಮಯದೊಳ್ವಿರಹಿ ಜನರಾ
ಯಾಸದಿಂ ಬಾಯಾರೆ ಮೋಹಿಗ
ಳೋಸರಿಸದಂಗಜನ ಸರಸಕ್ರೀಡೆಯಿಂದೆಸೆಯೆ ||
ಮೋಸವಿಲ್ಲದೆ ರೂಪುಗಳನುರೆ
ಭಾಸುರದೆ ಶಿವಲಿಂಗಕರ್ಪಿಸಿ
ಗೋಸಲೇಶನ ಶಿಷ್ಯ ಮುಕ್ತಾಂಗನೆಯೊಳೊಂದಿರ್ದಂ || ೪೯ ||

ರಸೆಯ ಜೀವರ ತಾಪವಮಂ ಹೆ
ಚ್ಚಿಸುತೆ ಕೆರೆ ತೊರೆ ವಾಪಿ ಕೂಪ
ಪ್ರಸರದುದಕವನಿಂಗಿಸುತ್ತಂ ಖಗ ಮೃಗಾದಿಗಳ ||
ಅಸುಗಳಂ ಬೆಂಕಿಯೊಳು ಕಂದಿಸೆ
ದೆಸೆ ದೆಸೆಗೆ ಬೇಗೆಗಳನಾಗಂ
ಪಸರಿಸುತ್ತಂ ಬಂದುದಾಗಂ ಗ್ರೀಷ್ಮ ಋತುವಿಂತು || ೫೦ ||

ಈ ಪರಿಯ ಬೇಸಗೆಯ ಘನ ಸಂ
ತಾಪವಮಂ ಲೆಕ್ಕಿಸದೆ ವರ ಸ
ಲ್ಲಾಪ ಸಿದ್ಧೇಶ್ವರ ಮಹಾಪ್ರತಾಪದಿಂ ಮನವಮಂ ||
ಸ್ಥಾಪಿಸುತ ಜಂಗಮ ಸುಲಿಂಗದೊ
ಳಾ ಪರಮಗಾತ್ರಕ್ಕೆಯಿಷ್ಟಂ
ಪ್ರಾಪಿಸದ ತೆರದಿಂದೆಯೊಪ್ಪಿದನವನನೇಂ ಪೊಗಳ್ವೆ || ೫೧ ||

ಭಾಪುರೇ ಬೇಸಗೆಯ ಸಲೆ ಸಂ
ತಾಪವಮಂ ತಗ್ಗಿಸುತೆ ಮಿಂಚಿಂ
ದಾ ಪತ್ರಿಯ (?) ಸಿಡಿಲೊಡನೆ ಬಂದಿತ್ತಾಗ ಕಾರ್ಗಾಲಂ ||
ಸ್ತೈಪಿನಿಂ ನವಿಲಾಡೆ ಘನ ಸ
ಲ್ಲಾಪಕಂ ಚಾತಕಿ ನಲಿಯೆ ಅನು
ತಾಪದಿಂದವೆಯಂಚೆವಿಂಡುಗಳೋಡೆ ಭಯದಿಂದ || ೫೨ ||

ಕೂಡೆ ಬಾಲತೃಣಂಗಳಾಗಂ
ಮೂಡೆ ಸರ್ವರು ಸಂತಸದೆ ನಲಿ
ದಾಡೆ ಶೂದ್ರಾದಿಗಳು ಭರದಿಂದಾರುಗಳ ಹೂಡೆ ||
ನಾಡೆಯನಿಲನ ದಿಕ್ಕಿನಿಂದಂ
ತೀಡೆ ಪವನಂ ಬೇಗ ದೆಸೆಗೊ
ಟ್ಟಾಡೆ ಮಳೆ ಭೋರ್ಗರೆದು ಸುರಿದುದು ಜನವು ಕೊಂಡಾಡೆ || ೫೩ ||

ಚಾತಕಂಗಳು ಮೇಘಮಂ ವಿ
ಖ್ಯಾತಿಯಿಂದಂ ಬೇಡೆ ಜೀವ
ವ್ರಾತವೆಲ್ಲಂ ಬದುಕುವಂದದೆ ವರ್ಷಮಂ ಧರೆಗೆ ||
ಪ್ರೀತಿಯಿಂದಂ ಕರೆದುದಂಬರ
ಮಾ ತೆರದೆ ಗುರುಸಿದ್ಧಲಿಂಗನ
ಪೂತಮಾನಸರರಿಯೆ(?)ಸುಧೆಯ ಸುವೃಷ್ಟಿಯಂ ಸುರಿದಂ || ೫೪ ||

ಈ ತೆರದ ಮಳೆಗಾಲನುಂ ಸಂ
ಪ್ರೀತಿಯಿಂದಂ ಕಳೆದು ತೋಂಟದ
ಪೂತ ಸಿದ್ಧೇಶ್ವರ ಮಹಾಶಿವಯೋಗದಲ್ಲಿರಲು ||
ರೀತಿಯಿಂದಂ ಬಂದುದಾಗಂ
ನೀತಿಯಿಂದೆ ಶರತ್ಸಮಯ ವಿ
ಖ್ಯಾತಿಯಿಂ ಚಂದ್ರಂಗೆ ಸಂಪೂರ್ಣ ಕಲೆಗಳನು || ೫೫ ||

ಹರುಷದಿಂ ಹೆಚ್ಚಿಸುತೆ ಕೆಸರಂ
ಭರದೆಯೊಣಗಿಸಿ ವಾಪಿ ಕೆರೆತೊರೆ
ಸರಸಿ ಕೂಪಾದಿಗಳ ನೀರಂ ತೆಗೆಯಿಸುತ್ತಾಗಂ ||
ಸುರ ಸರಣಿಯಂ ನಿರ್ಮಲಮನಂ
ತರರೆಯ್ದಿಸುತಾಗ ಬಂದುದು
ವರ ಶರದೃತು ಮತ್ತೆ ಸಿದ್ಧೇಶ್ವರನ ಮನದಲ್ಲಿ || ೫೬ ||

ವಿನುತ ಪದ್ಮಿನಿ ಚಂದ್ರಿನೀ ಕಾ
ಮಿನಿ ಸುಲಕ್ಷಿಣಿ ಪುಷ್ಪಿಣಿ ಪ್ರಹ
ಸಿನಿಯು ಹರಿಣೀ ಕುಮುದಿನೀಯಭ್ಯಾಸಿನೀ ಸುವ್ಯಾ ||
ಪಿನಿ ಸುವೇದಿನಿ ಮೋಹಿನೀ ಸಲೆ
ಸನಯದಿಂದಂ ಸುಪ್ರಮೋದಿನಿ
ಘನ ವಿಕಾಸಿನಿ ವರ್ಧಿನೀ ತನೆ ಪೂರ್ಣನಿಗಳೆಂಬ || ೫೭ ||

ಸುಲಲಿತದ ಹದಿನಾರು ಘನ ಚಿ
ತ್ಕಲೆಗಳಾಗಂ ತೋಂಟದಾರ್ಯನ
ಸುಲಭ ಸಚ್ಚಂದ್ರನೊಳು ಪೆಚ್ಚಿದವವನ ಸದ್ಭಾವ ||
ದಲಘುತರದ ಶರತ್ಸಮಯದೊ
ಳ್ಫಲವು ಸುಜನರ ಹೃದಯ ಸರಸಿಯ
ಬಲುಜಡಂ ತೆಗೆಯಿತ್ತು ಅಘ ಜಂಬಾಲ ಶೋಷಿಸಿತು || ೫೮ ||

ಈ ತೆರದ ಷಡುಋತುಗಳಂ ನಲಿ
ದೋತು ಘನಶಿವಯೋಗದೊಳ್ಪ್ರ
ಖ್ಯಾತಿಯಿಂದಂ ಕಳೆದು ನಿಷ್ಠೆಯೊಳಿರೆ ಮಹಾದೇವಂ ||
ಪೂತ ಸಿದ್ಧೇಶ್ವರನ ಚಿತ್ತದ
ನೀತಿಯಂ ನೋಡಲ್ಕೆ ಕಳುಪಿದ
ನೀ ತೆರದೆಯಷ್ಟಮಹಾಸಿದ್ಧಿಗಳನೊಲವಿಂದಂ || ೫೯ ||

ಬೌದ್ಧಸಮಯ ವಿರುದ್ಧ ಭಾವ ವಿ
ಶುದ್ಧ ಮಥ ಪರಿಣದ್ಧ ಸದ್ಗುಣ
ಬದ್ಧ ನಿಗಮ ಸಮುದ್ಧರಣ ಸುಮಹದ್ಧಸನ ವದನ ||
ಸಿದ್ಧರಪರಾಬದ್ಧರ ಸ್ಫುರ
ತ್ಸ್ವದ್ಧಿಯನು ವಿಜಯೋದ್ಧದಾಯಕ
ಬೊದ್ಧ ರುದ್ಧ ತೋಂಟದ ಸಿದ್ಧಲಿಂಗ ಸಮೃದ್ಧಿಗಳನೀಯ || ೬೦ ||

ಇದು ವಿಮಲಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರ ||
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣವ
ನೊದವಿ ಕೇಳಿದ ಭಕ್ತಿತತಿಗಿಷ್ಟಾರ್ಥಮೊಂದುವುದು || ೬೧ ||

ಅಂತು ಸಂಧಿ ೨ಕ್ಕಂ ಪದನು ೧೧೩ಕ್ಕಂ

ಮಂಗಳಂ

ಮೂರನೆಯ ಸಂಧಿ

ಚಾರು ಸಿದ್ಧಿಗಳಂ ನಿವಾರಿಸಿ
ತಾರಕದ ನಿಜರೂಪನರುಪಿದ
ನಾರತಂ ಭಕ್ತರ್ಗೆ ತೋಂಟದಸಿದ್ಧದೇಶಿಕನು ||

ಖಂಡ ಶಶಿಧರಮೂರ್ತಿಯೇ ಚಿ
ತ್ಪಿಂಡನೇಯಘತಿಮಿರ ಘನಮಾ
ರ್ತಂಡನೇ ಮಹಿಮಾಸಮುದ್ರನೆ ಶಂಭು [ಶಂಕರನೆ] (?)
ಅಂಡಲೆವ ಮೋಹಾದಿಗಳ ನೆರೆ
ಖಂಡಿಸಿದನೇ ಚಾರುಪೂಜ್ಯನೆ
ದಂಡಧರ ಮೇಘಾನಿಲನೆ ಸಿದ್ಧೇಶ ಹತಪಾಶ || ೧ ||

ತುಂಗಯಮನಿಯಮಾದಿ ಸಲೆಯ
ಷ್ಟಾಂಗಯೋಗದ ಹಂಗ ಹೊದ್ದದೆ
ಪೊಂಗಿಯಾಸನತತಿಯ ಬಾಧೆಯನೊಲ್ಲದತಿಗಳೆದು ||
ಅಂಗದತಿಬಂತ್ರಯಂಗಳ
ಭಂಗಿಸುತ್ತಂ ತೋಂಟದಾರ್ಯಂ
ಲಿಂಗದೊಳ್ಮನಮಂ ನಿಲಿಸಿ ಶಿವಯೋಗದೊಳಗಿರ್ದಂ || ೨ ||

ಸುಸರದಿಂ ಯೋಗಕ್ಕೆ ಸದನವು
ನೆಸೆ[ಪ] ಭೋಜನಮುಖ್ಯಮಂ ಭಾ
ವಿಸದೆ ವಿಮಲ ಜ್ಞಾನದಿಂದಿರುತಿರ್ದ ಸಿದ್ಧೇಶಂ ||
ರಸಘುಟಿಕೆ ತನುವಂಜನಾದಿ ವಿ
ಲಸಿತ ಸಿದ್ಧಿಗಳಂ ಜರೆದು ಸಲೆ
ಮಿಸುಪ ಪರಕಾಯ ಪ್ರವೇಶಂಗಳನೆ ಪರಿಹರಿಸಿ || ೩ ||

ಬಳಿಕ ದೂರದೃಷ್ಟಿಯಂ ತವೆ
ಕಳೆದು ದೂರಶ್ರವಣಮಂ ಭೂ
ವಳಯದೊಳಗಿಲ್ಲೆಂದು ಮತ್ತಂ ಮೂರುಕಾಲವನು ||
ತಿಳಿವ ಬಲ್ಮೆಯನಪಹರಿಸಿ ವೆ
ಗ್ಗಳದೊಳೆಂದಂ ಮುನ್ನ ಘುಟಿಕೆ
ಯೊಳಳಿದ ನಾಗಾರ್ಜುನನದಲ್ಲದೆ ಧರೆಯ ಭೂತಗಳು || ೪ ||

ಕಾಣವೇ ತ್ರೈಕಾಲಮಂ ನೆರೆ
ಜಾಣೆನಿಂದೇನರಿಯವೇ ಕೇಳ
ಕ್ಷೀಣ ಪರಕಾಯ ಪ್ರವೇಶಾದಿಗಳನಾ ಭೂತಂ ||
ಕ್ಷೋಣಿಯಲ್ಲಿವುಸಿದ್ಧರಥ್ವಂ
ಪ್ರಾಣಲಿಂಗಿಗಳಂಗವಲ್ಲಿಂ
ದೂಣೆಯಂಬೊಗದಂತೆ ಮನಮಂ ಲಿಂಗದೊಳ್ನಿಲಿಸಿ || ೫ ||

ಇಂತಿವಾದಿಯ ಸಿದ್ಧಿಗಳನೋ
ರಂತೆ ಬಗೆಯದೆ ತೋಂಟದಾರ್ಯಂ
ಸಂತಸದೊಳಿಂತೆಂದನುನ್ನತ ಚಿತ್ತಮಂ ಬಳಿಕ ||
ಕಂತುಹರನೊಳ್ನೆಲೆಗೊಳಿಸದ
ತ್ಯಂತ ತನುವಂ ದೇಹಶೋಧನೆ
ಯಂತಿವಾದಿಯ ಶುದ್ಧಿಗಳನುರೆ ಮಾಳ್ಪರದರಿಂದ || ೬ ||

ಏನು ಫಲಮುಂಟದರೊಳಂ ಕೇಳ್
ಶ್ವಾನ ಚರ್ಮವನಿರದೆ ಭಾಗಿಸಿ
ನೂನ ರತಿಯ(?)ಮಹಾವಿಮಲ ಜಲದಲ್ಲಿ ತೊಳಯಲ್ಕೆ ||
ತಾನದೇಂ ಶುಚಿಯಪ್ಪುದೆಯನು
ಮಾನವಿಲ್ಲದೆ ಕಲ್ಲಹಳ್ಳದೊ
ಳಾ ನವೀನದ ಚಿಲುಮೆಯುಂಟೇ ಮುಂದೆ ಪೇಳುವೆವು || ೭ ||

ತರಣಿಯಂ ಸಲೆ ಗೂಗೆ ಕಾಣ್ಬುದೆ
ಧರೆಯ ಸುರನೇಂ ಹೊಲೆಯನಪ್ಪನೆ
ಹರನ ಪರಶಕ್ತಿಯೊಳು ಪುಟ್ಟಿದ ಬಿಂದುವಿಂ ಮತ್ತೆ ||
ಇರದೆ ಮುವ್ವತ್ತಾರು ತತ್ವಂ
ತ್ವರಿತದಿಂ ಜನಿಸಿದವು ಮತ್ತಾ
ಉರುತರದ ಮಹಮಾಯೆಗಂ ಮಲವೆಂಬ ಪೆಸರುಂಟು || ೮ ||

ಬಳಿಕವಾ ಮಲತತ್ವನುಯಮಂ
ತಳೆದ ತನುವಂ ತೊಟ್ಟಿರಲ್ಕದು
ತೊಳೆಯೆ ಶುದ್ಧವದಪ್ಪುದೇ ಸಲೆಮಾಸಿದಂಬರಮಂ ||
ತೊಳೆಯೆ ಬಿಳಿದಾಗಿಪ್ಪುದಲ್ಲದೆ
ತೊಳೆಯೆ ಮಲದೊಳ್ಸವೆದ ವಾಸಂ
ಬಿಳಿದಪ್ಪುದೆ ವರಸುಚಿತ್ತದೆ [ಬಳಿಕ] ಕೇಳಿನ್ನು || ೯ ||

ಪಂಕದೊಳ್ಮುಳುಗಿದವನ ತೊಳೆದೊಡೆ
ಭೋಂಕನವನಂಗಂ ಬಳಿಕ ನಿ
ಶ್ಯಂಕೆಯಿಂ ಮೊದಲಂತೆ ಕಾಂತಿಯೊಳಿರ್ಪುದದು ಮತ್ತೆ ||
ಸೋಂಕಿ ನೆರೆ ಮಣ್ಣಿಂದ ಮಾಡಿದ
ಬಿಂಕದುರು ಪುತ್ಥಳಿಯ ಮನದಾ
ತಂಕವಿಲ್ಲದೆ ತೊಳೆದಡೇಳದೆ ಕೆಸರುವದರಲ್ಲಿ || ೧೦ ||

ತೊಳೆಯಲಿದ್ದಲು ಸವೆವುದಲ್ಲದೆ
ಬಿಳಿದದಪ್ಪುದೆಯದು ನಿಮಿತ್ತಂ
ಬಳಿಕ ತನುಶೋಧನಂಗಳಿಂದಂ ಶುದ್ಧವಾಗದದು ||
ತಿಳಿಯೆ ಮಾರುತ ಬಂಧನಂಗಳೊ
ಳಿಳೆಯೊಳಂ ಕಾಲಾಂತರಂ ತವೆ
ಯಳಿವರೆಂದೊಡೆ ಹಸಿವು ತೃಷೆ ಮತ್ತಂತೆಯಾ ಕ್ಷುಧೆಯು || ೧೧ ||

ಪೋಪುದೇ ಕಾಲಾಂತರಂ ನಿಜ
ರೂಪಿನಿಂದುರೆ ನಿತ್ಯವೇ ತನು
ಸ್ಥೈಪಿನಿಂ ಬೀಜಗಳ ಮೂಡೆಯ ಕಟ್ಟೆಯೊಕ್ಕಲಿಗಂ ||
ಆಪ ಮಿಶ್ರದೆ ಕೆಲವು ದಿನಕೆ ಪ
ದೋಪಕಾರದೆ ಬೆಳೆಯವೇಯವು
ತಾಪಸನೆ ಕೇಳ್ಕೃಷ್ಣಬೀಜದ ತೆರದೊಳಿರುತಿಹವೆ || ೧೨ ||

ಹಲವು ಯೋಗದ ಬಲ್ಮೆಯಿಂದಂ
ಗೆಲುವುದರಿದೇ ಹಸಿವು ತೃಷೆಗಳ
ಚಲಿತ ಮನಮಂ ಲಿಂಗದೊಳ್ನೆಲೆಗೊಳಿಸಿ ನಿಷ್ಠೆಯೊಳು ||
ನಲಿವುದದು ತಾಂ ಚೋದ್ಯವಲ್ಲದೆ
ಕೆಲವು ಜೀವಪ್ರಕರವಿರವೇ
ಚಲನೆಯಿಲ್ಲದೆ ಪಲವು ಗುಣದಿಂ ತಾನದೆಂತೆನಲು || ೧೩ ||

ಹಸಿವು ತೃಷೆ ತಾನಿಲ್ಲದಾತಂ
ರಸೆಯೊಳವನೇಂ ಜ್ಞಾನಿಯೇ ರಂ
ಜಿಸುತ ಚಾತಕವಿರದೆ ವರುಷಂ ಕಾರ ಮುಂಬನಿಗೆ ||
ವಸದ ಶಶಿಕಿರಣವನೆ ಕೊಳ್ಳದೆ
ವಸುಧೆಯಲ್ಲಿ ಚಕೋರ ವಿಹಗಂ
ಶ್ವಸನಮಂ ಸೇವಿಸದೆಯುರಗಂ ಬಳಿಕ ಗೋಸುಂಬೆ || ೧೪ ||

ಕಾಣದೇ ಪಾತಾಳವಂ ಪಶು
ಕಾಣದೇ ಶಶಿಕಲೆಯು ಪಾಡ್ಯದಿ
ಕಾಣವೇ ಚಿಕ್ಕಿಗಳು ಹಗಲೊಳ್ಬೆಳಿಕವಾ ಕಾಗೆ ||
ಕಾಣವೇ ಕಣ್ಣೊಂದರಿಂದಂ
ಕಾಣದೇ ಇಕ್ಕೆಲದ ನಾಗಂ
ಕಾಣವೇ ರಾತ್ರಿಯೊಳು ಘೂಕಂ ಮತ್ತೆ ಯಾಯಿರುಹೆ || ೧೫ ||

ಮರದ ಬೇರಂ ಮೂಸಿ ಪಣ್ಣಿ
ರ್ಪಿರವನಱಿಯದೆ ಕಮಠ ಖಗ ಜಲ
ಚರಗಳಾಹಾರಂಗಳಂ ಸಲೆ ಕೊಂಡು ತಮತಮ್ಮ ||
ವರಶಿಶುಗಳಂ ನೆನೆದು ಮತ್ತಂ
ಪರುಸನವನಾಚರಿಸಿಯೀಕ್ಷಿಸಿ
ಹರಷದಿಂ ತೃಪ್ತಿಗಳನೆಯ್ದಿಸವೇಯದಲ್ಲದೆಯಾ || ೧೬ ||

ಮೋಳಿಗೆಯ ಗುಪ್ತದೊಳು ಮತ್ತಂ
ಕೋಳಿಯಂ ಸಲೆ ಮಱಸಿಕೊಂಡಿರೆ
ವೇಳೆಯಂ ತಾನಱಿದು ಕೂಗದೆ ನಾಯಿ ಬೂದಿಯೊಳು ||
ಪಾಳಿಯಿಂ ಕೆಡೆದಿರ್ದರಿಯದೇ
ಏಳು ಜನ್ಮದ ಬಂಧನಂಗಳ
ಬಾಳದೇಯಂಗಾರಖಗ ಕೆಂಡಂಗಳಂ ನುಂಗಿ || ೧೭ ||

ಚಿತ್ತದಗ್ಗದೆ ಮೂಲಿಕೆಯನುಱಿ
ಯತ್ತಮದ ಕಲ್ಪಂಗಳಂ ಸಲಿ
ಸುತ್ತ ದೃಶ್ಯಾಕರಣ ಖೇಚರ ಗಮನ ತನು ಸಿದ್ಧಿ ||
ಮತ್ತಿವಾದಿಯ ಕಾಂತಿಗಳ ತಾ
ವೆತ್ತಲುಱಿ ಸಾಧಿಸಿದೊಡೇಂ ಫಲ
ವಿತ್ತ ಪಣ್ಪುಳು ಮಳಲು ಪೊಳೆದೊಡೆಯಧಿಕವೆ ಜಗಕೆ || ೧೮ ||

ಎಂದಿವಾದಿಯ ಸಿದ್ಧಿಗಳನಾ
ನಂದದಿಂದ ನಿರಾಕರಿಸಿಯೊಲ
ವಿಂದ ತೋಂಟದ ಮೂರ್ತಿ ತನ್ನಂ ನುತಿಸಿ ಬೆಸಗೊಂಬ ||
ಚಂದದಗ್ಗದ ಚಂದ್ರಶೇಖರ
ಗಂದು ಪೇಳಿದನತಿಶಯದಿ ಕೇ
ಳೆಂದು ತಾರಕದಿರವದೆಂತೆನಲಾಗಿ ಲೋಕದೊಳು || ೧೯ ||

ಮಗನೆ ಕೇಳ್ಳೈ ಚಂದ್ರಶೇಖರ
ಸುಗುಣಿಯೇ ಮುನ್ನೊರೆದನಭವಂ
ಸೊಗಸಿನಿಂದಂ ವಾಮದೇವಾಖ್ಯದ ಮುನೀಶಂಗೆ ||
ಮಿಗೆ ಮಹಾತಾರಕದ ರೂಪಂ
ಬಗೆಯೊಳಾಯರ್ಥವನೆ ಪೇಳುವೆ
ವಗಣಿತದೊಳಿಂದೆನುತ ನುಡಿದಂ ಚಾರು ಸಿದ್ಧೇಶಂ || ೨೦ ||

ಕಾವಿಯಂಬರದಿಂ ಜಟಾಳಿಯು
ಭಾವದಿಂ ಮುಂಡತ್ವದಿಂದಂ
ಭಾವಿಸಲ್ದೇಶಾದಿ ಭಾಷಾದ್ಯಖಿಳ ಭೂಷಣದಿಂ ||
ಆ ವಿಶೇಷದ ಶಬ್ದದಿಂದಂ
ತಾವು ಜನರಂ ಮೋಹಿಪರು ಶು
ಭವಾವರಿಪ ತಾರಕವನರಿಯರು ಜಠರ ಪೋಷಕರು || ೨೧ ||

ಮಂತ್ರಲಯ ಹರ ರಾಜ ಶಿವಯೋ
ಗಂ ತ್ರಿಜಗದೊಳ್ಕೇಳು ಮತ್ತಂ
ಮಂತ್ರಯೋಗಂ ನಾಲ್ಕುಬಗೆ ಲಯಯೋಗವೇ ಹಲವು ||
ತಂತ್ರದೊಳು ಹಠಯೋಗವೆಂಟಾ
ಮಂತ್ರ ವಿಗ್ರಹನಪ್ಪನತಿ ಸ್ವಾ
ತಂತ್ರ ಶಿವನಿಂ ರಾಜಯೋಗಂ ಮೂಱು ತೆಱನಾಯ್ತು || ೨೨ ||

ನಿರುತದಿಂ ಶಿವಯೋಗವೈದೆಱವ
ರರೆಯುವರೊಳ್ನಾಲ್ಕುಯೋಗಂ
ಧರಣಿಯೊಳಗಂ ಪೂರ್ವಕಕ್ಷೆಯದಾಗಿಯೊಪ್ಪುವುದು ||
ಹರುಷದಿಂ ಶಿವಯೋಗವೆಂಬುದು
ವರಶಿವಧ್ಯಾನಂ ಶಿವಾರ್ಚನೆ
ಯುರು ಶಿವವ್ರತ ಘನ ಶಿವಾಚಾರಂ ಶಿವಜ್ಞಾನಂ || ೨೩ ||

ಇಂತಿವೇ ಶೈವಂಗಳೈಯೋ
ರಂತೆ ನಾದವೆ ಗುರು ಬಳಿಕ್ಕ
ತ್ಯಂತ ವಿಲಸತ್ಕ್ರಿಯೆಯೆ ವಿಮಲಪ್ರಾಣವೈ ಮತ್ತೆ ||
ಕಾಂತ ನವ ಸಾದಾಖ್ಯವಿವು ನಿ
ಶ್ಚಿಂತನೇ ಪಂಚಕದ ನಾದವ
ನಿಂತು ನಿನಗರಿಪುವೆನು ಲೋಕಹಿತಾರ್ಥದಿಂ ಕೇಳು || ೨೪ ||

ನಾದವೆಂದು ಸುನಾದವೆಂದು ವಿ
ನೋದದಿಂದಂ ತನೆ ಮಹಾಘನ
ನಾದವೆಂದು ವಿಶೇಷನಾದಾಗ್ರಣಿಯದೆಂದಿರದೆ ||
ಮೋದದಿಂ ನಾದಾಂತ್ಯವೆಂದುರೆ
ಮೆನೀದಿಯೊಳೊಪ್ಪುವುವು ಪಂಚಕ
ನಾದವಿವು ಮುದ್ರೆಗಳನೊರೆವೆವನ್ನೆದವೆಂತೆನಲು || ೨೫ ||

ನೂನದಿಂದಂ ಶಾಂಭವೀಯಂ
ಧ್ಯಾನ ಖೇಚರಿಯುರುತರದ ಸು
ಜ್ಞಾನ ಮೌನ ವಿಚಾರ ಘನ ಮೌನಾಂತ್ಯವೆಂದೆಂಬ ||
ಆ ನವೀನದ ಮುದ್ರೆಗಳನಾ
ಸೂನುವೇ ಪೇಳುವೆನೆನುತ್ತಂ
ಮಾನಸಿಧಿ ಸಿದ್ಧೇಶ್ವರಂ ತಾನೊರೆದನನರಿರವಂ || ೨೬ ||

ಅರರೆ ಶಾಂಭವಿಯೆಂಬ ಮುದ್ರೆಯೆ
ಹರುಷದಿಂದಂ ಶಂಭುವಿನ ಸು
ಸ್ಥಿರದ ಘನ ಸಂಬಂಧವಪ್ಪುದು ಖೇಚರೀಮುದ್ರೆ ||
ಪರಿಕಿಸಲ್ಕಾಕಾಶಗುಣಯುತ
ವೆರಡು ಮುದ್ರೆಗಳಾಗ ಕೂಡ
ಲ್ಕಿರದದೇ ಸುಜ್ಞಾನಮುದ್ರೆ ಬಳಿಕ್ಕವಾ ಮೂಱು || ೨೭ ||

ಮುದ್ರೆಗಳು ಕೂಡಿರ್ದಡವೆ ಸಲೆ
ಚಿದ್ರವೂಕರ ಮೌನವೆಂಬಾ
ಮುದ್ರೆಯಕ್ಕುಂ ಜ್ಞಾನ ಘನ ನಿಷ್ಪತ್ತಿಯೆಂದೆಂಬ ||
ಮುದ್ರೆಯೇ ಮೌನಾಂತ್ಯವೆಂಬ ಸು
ಮುದ್ರೆಯಪ್ಪುದು ಹಿಂದೆ ಪೇಳಿದ
ಮುದ್ರೆಗಳು ತಾವಿಪ್ಪವಸ್ಥೆಗಳೈದರೊಳು ಸತತಂ || ೨೮ ||

ಜಾಗ್ರದೊಳು ಶಾಂಭವಿ ವಿರಾಜಿಪು
ದಗ್ರದಾ ಸ್ವಪ್ನದೊಳು ಖೇಚರಿ
ಯುಗ್ರವಿಲ್ಲದೆ ತೋರ್ಪುದರರೆ ಸುಷುಪ್ತಿಯೊಳ್ ಜ್ಞಾನ ||
ವಿಗ್ರಹರ ತೂರ್ಯದೊಳು ಮೌನ ಸ
ಮಗ್ರ ತುರಿಯಾತೀತದಲ್ಲಿ ಪ
ರಿಗ್ರಹಿತ ಮಾಗಿರ್ಪುದನಿಶಂ ನೋಡೆ ಮೌನಾಂತಂ || ೨೯ ||

ವಿಮಲ ಪಂಚಾವಸ್ಥೆಗಳೊಳುರೆ
ಕ್ರಮವಿಡಿದು ಘನ ಪಂಚಮುದ್ರೆಗ
ಳಮರ್ದು ತೋರ್ಪವು ಬಳಿಕ ಪಂಚಾವಸ್ಥೆಯೊಳು ನೂರು ||
ಶಮನದಿಂ ಮೇಲೆಂಟವಸ್ಥೆಗ
ಳನುಲವೆನಿಕುಂ ಜಾಗ್ರಮೊದಲಾ
ದಮಿತ ಪಂಚಾವಸ್ಥೆಗಳು ಸಲೆ ಮುಖ್ಯವಾಗಿರ್ಕುಂ || ೩೦ ||

ಲಲಿತದೂರ್ಧ್ವಾವಸ್ಥೆಯೊಪ್ಪುವು
ದೊಲವಿನಿಂ ರಮಣೀಯವಾಗಿಹು
ದಲಘು ಜಾಗ್ರಮದೇಕವಂತಾ ಸ್ವಪ್ನವೇ ದ್ವಯವು ||
ಸಲೆ ಸುಷುಪ್ತಿತ್ರಯವಲ್ಲೈ ಕೇ
ಳಲಘು ತುರಿಯಂ ನಾಲ್ಕು ಮತ್ತಂ
ಶುಭ ತುರೀಯಾತೀತಮೈದೆಂದರಿ ವಿಶೇಷದೊಳು || ೩೧ ||

ಚಾರುಜಾಗ್ರಂ ಮತ್ತೆಯೂರ್ಧ್ವಾ
ಪಾರವಸ್ಥೆಗಳೆಯ್ದೆ ಸತತಂ
ಆರಯಲು ಬಹಿರಂತರಂಗ ನಿಜಕ್ರಿಯಾ ಪೂಜಾ ||
ಚಾರದೊಳು ಸಂಪನ್ನ ವರಗಂ
ಭೀರ ಘನ ಸದ್ಭಾವಿಯ್ಕೆ ನೆರೆ
ತಾರಕ ಬ್ರಹ್ಮಾಸನಂ ಶಿರವೀ ಮಹಾಶಿಖಿಯೆ || ೩೨ ||

ಆಸನಂ ಸಸಿ ಬಿಳಿದು ಸೌಖ್ಯ ನಿ
ವಾಸತೆಯೆರವಿ ನೀಲವನಲಂ
ಲೇಸೆನಿಪ ಕೃಷ್ಣಂ ಕಣಾ ಮಂಡಲಕವಿದು ಬಳಿಕ ||
ಭಾಸುರದ ವಹ್ನಿಯೆಯಕಾರಂ
ವಾಸರಾಧ್ಯನೆಯಂತುಕಾರಂ
ಮಾ ಸಹೋದರನೇ ಮಕಾರಂ ಮುಂದೆ ಕೇಳಿನ್ನೂ || ೩೩ ||

ಅನಲ ಸತ್ವಂ ರವಿರಜಂ ಸಸಿ
ಘನ ತಮಂ ವಿವರಿಸೆಯಕಾರಂ
ವಿನುತನಾದಮುಕಾರ ಬಿಂದುಮಕಾರಕಲೆ ವಹ್ನಿ ||
ಅನುನಯದೊಳಂ ನಾದವಂತಾ
ದಿನಮಣಿಯೆ ತವೆ ಬಿಂದು ಚಂದ್ರಂ
ಸನಯದೀ ಕಲೆಯೆಂಬುದೇ ಸಲೆ ತಾರಕ ಬ್ರಹ್ಮಂ || ೩೪ ||

ತಾರಕಸ್ಥಾನಂ ವಿಶೇಷದ
ಸಾರ ವಿದ್ಯಾಬ್ರಹ್ಮ ದರುಶನ
ವಾರಯುಲು ಕಾರ್ಮುಗಿಲೊಳೊಪ್ಪುವ ಮಿಂಚಿನಂದದೊಳು ||
ಧಾರುಣಿಯೊಳ್ನೀವಾರ ಶೂಕದ
ಚಾರು ತೆರದಂತಾ ಸುವರ್ಣದ
ಭೂರಿಯೆನಿಪಾ ಛಾಯೆಯಂತೆಸೆವಣು ವಿಚಾರಿಸಲು || ೩೫ ||

ವಿದಿತದಿಂದವೆಯಾತ್ಮನಗ್ರ ಶಿ
ರದೊಳು ಮತ್ತಂ ಪ್ರಣವದಾ ರೂ
ಪುದಿತ ನಾದಂ ಬಿಂದು ದಿವ್ಯಕಲಾತ್ಮಕಂ ಬಳಿಕ ||
ಸದಮಲದ ವಿದ್ಯುನ್ಮಹಾ ಸಂ
ಪದದ ಶಕ್ತಿಯದೂರ್ಧ್ವವೆನಿಪ ನಿ
ಜದ ವಿಮಲ ಕಾಲಾಗ್ನಿಯಾಕಾಶಂ ಮಹಾಲಿಂಗಂ || ೨೬ ||

ಕೋಟಿ ಸೂರ್ಯೇಂದು ಪ್ರಕಾಶ ಕ
ವಾಟ ವಿಕಸನವಲ್ಲವನಿಶಂ
ಮೇಟಿಯೆನಿಸುತ್ತಿರ್ಪ ಸನ್ನುತ ಹವ್ಯವಾಹನೊಳು ||
ನಾಟಿಸಿದ ರವಿಯುದರ ಮಧ್ಯ ಸ
ಘಾಟ ಗತ ಘನ ಚಂದ್ರಮಂ ಸಸಿ
ಜೂಟ ಪದಸೇವಕನೆ ಕೇಳಿದು ತಾರಕ ಬ್ರಹ್ಮಂ || ೩೭ ||

ಹೃದಯಕೋಟರವಿದೆನಿಸಿಪ್ಪುದು
ಸದಮಲದೊಳಂತುನ್ಮನೀಯ್ಯದೆ
ವಿದಿತ ಪರಮಾನಂದ ಕಂದಕವರರೆ ಭಾವಿಸಲು ||
ಒದವಿ ಶಬ್ದೋತ್ಪತ್ತಿ ಕಾರಣ
ವದುವೆ ಪರತತ್ತ್ವಂ ಬಳಿಕ್ಕಂ
ಪದುಳದಿಂ ಭ್ರೂಮಧ್ಯದೊಳಗಿರ್ಪುದುವದೇ ಸ್ವಪ್ನ || ೩೮ ||

ಎಂಬವಸ್ಥೆ ವಿಶೇಷ ಸುಪ್ತಿಯ
ನಿಂಬಿನಿಂ ಪೇಳುವೆನದೇಯಾ
ಡಂಬರದೆ ಸಾಹಸ್ರದಳಯುಕ್ತಂ ಸಹಸ್ರಾರ್ಣಂ ||
ಬೆಂಬಳಿಯೊಳು ಸಮೇತವಾ ಕಾ
ರ್ಯಂ ಬಳಿಕ್ಕಂ ಹಲವು ಚಿತ್ರ
ಕ್ಕಂ ಬಿಡದೆ ತಾನಾಸ್ಪದಂ ಕೇಳ್ಪೆಯ್ಯ ಮುಂದಿನ್ನು || ೩೯ ||

ತರುಣ ತೂರ್ಯಾವಸ್ಥೆಯಂ ಕೇಳ
ರರೆ ಘನತರ ಚಿತ್ಕಲಾರಸ
ಪರಮ ಪದ ಚಿದಖಂಡಮಯ ಚಿದ್ದೀಪಕ ಸ್ಪೃಷ್ಟಂ ||
ವರ ಚಿದದ್ವಯವಿಂತು ಭಾವಿಸೆ
ಯುರು ಚಿದಾನಂದಾಳಿ ಸುಖರೂ
ಪಿರದೆ ಚಿದ್ಘನ ವಿಮಲ ನವ ಚಿತ್ಪ್ರಾಣ ಚಿದ್ವಹ್ನಿ ||೪೦||

ಪೂರ್ಣತೆಯ ಸಂಪೂರ್ಣವೆಂದಾ
ಕರ್ಣಿಸಯ್ಯ ವಿಶೇಷ ಭಾವಾ
ವರ್ಣ ಭಾವಾದ್ವೈತವಿಲ್ಲದಿಹ [ನಿಷ್ಕಲಂ ತಾಂ]
ಪೂರ್ಣ ಖಂಡಾಖಂಡನಾದವ
ರಾರ್ಣವಾನ್ವೃತದವನಿಯಲ್ಲಿ ವಿ
ಕೀರ್ಣ ವಿರಹಿತವಾಗೆಯದು ವಾಙ್ಮನಕಗೋಚರವು || ೪೧ ||

ಜಲಧರಂಗಳು ಪಂಚಕಂಗಳು
ಸಲೆ ಸದಾ ಸುಪ್ರಣನು ಶಕ್ತಿ
ಜ್ವಲಿತವೆಂದೆನಿಪ ಪ್ರಸಾದಾಯಗ್ರಸಾದಾಗ್ರಂ ||
ಬಲು ಮಹಾಲಿಂಗದ ವಿಲಸಿತದ
ಸುಲಲಿತದ ಷಟ್ಪಂಚಕಂಗಳು
ನೆಲೆಗಳಿವು ಮುಂದಿನ್ನು ಷಟ್ಸ್ಥಲದಲ್ಲಿ ಪೇಳುವೆವು || ೪೨ ||

ಕಂಬಲಾಶ್ವತ ಗಾನ ರಸದಿಂ
ರಂಬಿಸಿರ್ದವು ನಿನ್ನ ಕರ್ಣಗ
ಳಂಬುಜಾ[ರಿಯು] ಸುರನದಿಗಳೆಡೆಯಾಯ್ತು ನಿನ್ನ ತಲೆ ||
ಅಂಬಿಕೆಯ ನೆಲೆಯೆಡದ ವೈಯ್ಯದು
ತುಂಬುರಾಜಸುತರ್ಕಳಾವಗಂ
3 ನಂಬಿ ಪಾಡಿದರೇನನೀವೆಯೊ ಶಂಭು ದೇಶಿಕನೆ || ೪೩ ||

ಇದು ವಿಮಲಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿಚಂದ್ರ ||
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣವ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವುದು || ೪೪ ||

ಅಂತು ಸಂಧಿ ೩ಕ್ಕಂ ಪದನು ೧೫೭ಕ್ಕಂ

ಮಂಗಳಂ

ನಾಲ್ಕನೆಯ ಸಂಧಿ

ಭುವನಕೋಶದ ಸೃಷ್ಟಿಯಿಂ ಮಿಗೆ
ಅವನಿಯೊಳ್ಕಾಲಾಗ್ನಿರುದ್ರನ
ಭುವನನುಂ ನಿರಯಂಗಳಂ ಸಂಯಮಿನಿಪತಿ ಶರಪುರಾಂತಕ(?) ||
ಸೋಮ ಶಕಲ ಕಿರೀಟಕಾಮವಿ
ರಾಮ ಸಾಮಪ್ರೇಮ ದೇವಲ
ಲಾಮ ಯಮ[ನೃಪ]ಭೀಮ [ಭಕ್ತಪ್ರೇಮ ಗುಣಧಾಮ]
ಕೋಮಲಾಂಗ ಕುಮಾರಪಿತ ಹಿಮ
ಧಾಮ ವರ ತನುಜಾಮನೋಹರ
[ಸ್ತೋಮ ಭಾಸ್ವನಲಾಕ್ಷ ಶ್ರೀ] ಸಿದ್ಧೇಶನುಸುರಿದನು || || ೧ ||

ಬಾಲಶಶಿಧರ ಕಾಲ ಪುರಹರ
ಕೋಲ ಸಂಹರ ಶೀಲ ಬಂಧುರ
ಪಾಲ ಶಂಕರ ಶೈಲಮಂದಿರಲೋಲ ಮಂದಾರಾ ||
ಸ್ಥೂಲ ಸೌಂದರಶೂಲ ಸತ್ಕರ
ನೈಲಬಿಲಚರ ನೀಲ ಕಂಧರ
ಶಾಲ ಹರಿಹರ ಜಾಲ ಸುಸ್ಥಿರ ಪಾಲಿಸೈಯೆಂದ || ೨ ||

ಭವಹರನೆ ಸಿದ್ಧೇಶ್ವರನೆ ನೀಂ
ಭುವನ ಕೋಶವನೆನಗೆ ಪೇಳೆನೆ
ಸವಿನಯದಿ ವರಚಂದ್ರಶೇಖರಮೂರ್ತಿಗಿಂತೆಂದಂ ||
ವಿವಿಧ ಕಾಮಿಕದೊಳ್ಮೃಗೇಂದ್ರದೋ
ಳವನಿಧರನಾತ್ಮಜೆಗೆ ಶರ್ವಂ
ತವೆಯೊರೆದುದಂ ಸುರಪನುಸುರ್ದಂ ತನ್ನ ಬೆಸಗೊಂಬ || ೩ ||

ಸ್ವಾರ್ಥ ಭಾರದ್ವಾಜಗಂತಾ
ಯರ್ಥಲಿಂಗ ಪುರಾಣದೊಳಗಂ
ಟರ್ಥಿಯಿಂ ಸರ್ವೇಶನಂದು ಮತಂಗ ಮೊದಲಾದ ||
ವ್ಯರ್ಥವಲ್ಲದ ಮುನಿವರರಿಗೆ ಸ
ಮರ್ಥತೆಯೊಳಂ ಪೇಳ್ದನುನ್ನತ
ತೀರ್ಥಮಹಿಮೆಯ ಪೇಳ್ವ ಪರಮೇಶ್ವರ ಸುತಂತ್ರದೊಳು || ೪ ||

ಸಾರದಿಂ ಸ್ವಚ್ಛಂದ ಲಲಿತ ಸು
ಭೈರವಿಯೆನಿಪ್ಪಾಗನಾದಿಯೊ
ಳಾರಯಲ್ಪೇಳುವೆನೆನುತ್ತಂ ತೋಂಟದುರು ಸಿದ್ಧ ||
ಚಾರು ದೇಶಿಕನೊರೆಯತೊಡಗಿದ
ನಾ ರಮಾಕರ ಚಂದ್ರಶೇಖರ
ಧೀರಮೂರ್ತಿ ಕರಂಗಳಂ ಮುಗಿದಾಗ ಕೇಳುತಿರೆ || ೫ ||

ನಿರುತದಿಂ ಹದಿನಾಲ್ಕು ಲೋಕವ
ನಿರದೆ ಗರ್ಭೀಕರಿಸಿಕೊಂಡಿ
ರ್ಪುರುತರ ಬ್ರಹ್ಮಾಂಡದನುಲ ಸೃಷ್ಟಿಯೆಂತೆನಲು ||
ಪರಮುನದ್ವಯನಂತು ಗೋಚರ
ನುರು ಶಿವಂ ಸರ್ವೇಶನಂತಕ
ಹರಣ ಪಾವನಮೂರ್ತಿ ಶಂಕರನಭವನೇವೇಳ್ಪಿಂ || ೬ ||

ನಾದ ಬಿಂದುಗಳಮೃತಕಲೆಯೊ
ಳ್ಮೋದದಿಂ ಚಿಚ್ಛಕ್ತಿಯೆಸೆಯ
ಲ್ಹಾದರಾಮೃತ ದಿವ್ಯಕಲೆಯಿಂದನುಲ ಭಾಳಾಕ್ಷಂ ||
ಭೇದವಿಲ್ಲದೆ ತನ್ನನುಜ್ಞೆಯ
ನಾ ದಯೊತ್ಮಂ ಬೀರೆ ವಿಕಸಿಸಿ
ತಾದಿಯಲ್ಲಿ ಪ್ರಕೃತಿ ತತ್ವಂ ಜನಿಸಿತ್ತೈ ಕೇಳು || ೭ ||

ಮತ್ತೆಯದರಿಂದಂ ಮಹತ್ವಮು
ಮುತ್ತಮದಹಂಕೃತಿಯು ತರುವಾ
ಯತ್ತದೊಳಗಂತೊದಗಿತ್ತೈ ಜಸ ತಾಮಸಾದಿ ಮಹೋ ||
ದಾತ್ತ ವೈಕಾರಿಕದಿ ನುಡಿಸಿದ
ರಿತ್ತ ಕೇಳ್ದೇವತೆಗಳೆಂತೆನೆ
ಯುತ್ತರದ ಘನಭವನವ ತೈಜಸವ ದಕ್ಷಿಣದ || ೮ ||

ಜಾರು ಭುಜದ ರಜೋಗುಣದೊಳಾ
ನೀರಜಾಸನನೊಗೆದನಂಗದ
ಸಾರಧಾಮದೆ ಸಾತ್ವಿಕದಿನಾದಂ ಸದಾವಿಷ್ಣು ||
ಮೂರನ್ಯೆರಿಯ ಭಾಳದಿಂದೆಯ
ನಾರತಂ ಸನ್ನುತ ತಮೋ ಗಂ
ಭೀರ ಸುಸ್ವಾತಂತ್ರ್ಯ ವೈವಸ್ವತನುರು ಮಹಾರುದ್ರಂ || ೯ ||

ಜನನ ವೈಕಾರಿಕದೊಳಾದವು
ಜನನ ಶಬ್ದ ಸ್ಪರ್ಶರೂಪತಿ
ಘನರಸಂ ನೆಱೆಗಂಧವಾ ಕ್ರಮದಿಂದುದಯನವರ ||
ಸನುಮತದೆಯಾಕಾಶ ಮಾರುತ
ವನುವಿನಿಂ ಶಿಖಿಯುದಕ ಧರೆಗಳ
ಜನನ ಶಿವಪದಭೃತ್ಯನಪ್ಪಜನಾಜ್ಞೆಯಿಂ ಗಗನಂ || ೧೦ ||

ಜೋಕೆಯಿಂ ತೆರಪಾಗೆ ಮಧ್ಯದೆ
ಭೂ ಕಬಂಧಾಗ್ನಿಗಳುದಕದ
ಸ್ತೋಕದಿಂದೊಂದಂದವಾಯಿತ್ತದುವೆಯ್ವತ್ತು ||
ಪ್ರಾಕಟದ ಕೋಟಿಯೊಳು ವಿಮಲ
ಶ್ಲೋಕನೇ ತಾನೆಸೆವುದಾಗವ
ನೇಕದಿಂದದು ವೃತ್ತವಾಗಿರ್ಪುದುವದಂ ಬಳಸಿ (?) || ೧೧ ||

ಸದಮಲತ್ವದ ಚಂದ್ರಶೇಖರ
ವಿದಿತದಿಂದಂ ಕೇಳ್ವುದೈ ಸಂ
ಪದದೊಳುರೆಯ್ವತ್ತು ಕೋಟಿಯಜಾಂಡನುಂ ಬಳಸಿ ||
ಉದಕವೈನೂರ್ಕೋಟಿ ಯೋಜನ
ವದನೆ ಬಳಸಿರುತಿರ್ಪುದನಲಂ
ಪದುಳದಿಂದೈದರ್ಬುದದ ಯೋಜನದಳತೆಯಲ್ಲಿ || ೧೨ ||

ಆಯನಲನಂ ಬಳಸಿ ಮಾರುತ
ನೋಯರದೆ ಕೇಳೈದು ನೆರ್ಬುದ
ದಾಯತದ ಗಾವುದದೊಳೊಪ್ಪುವುದಂತದಂ ಬಳಸಿ ||
ದಾಯದಿಂ ಘನವೈದು ಖರ್ವಂ
ನ್ಯಾಯದಿಂ ಯೋಜನದೆ ತೋರ್ಕುಂ
ಧೀಯುತನೆಯಾ ತತ್ವಮಂ ಬಳಸಿಹುದಹಂಕಾರಂ || ೧೩ ||

ವರಮಹಾಕರ್ಬುದಗಳೈದಂ
ತಿರವೆ ಬಳಸಿರ್ಪುದು ಬಳಿಕ್ಕಂ
ತುರು ಮಹತ್ವವೆಯ್ದೈದು ಪದ್ಮಂ ಮತ್ತೆಯೆ ವ್ಯಕ್ತಂ ||
ಹರುಷದಿಂದೈವತ್ತರಿಂ ಮೇ
ಲರರೆಯ್ದೆನಿಸಿರ್ಪವೈ ಬಂ
ಧುರ ಮಹಾಪದ್ಮಪ್ರಮಾಣಿಂ ಚಂದ್ರಶೇಖರನೆ || ೧೪ ||

ಮತ್ತೆಯೈವತ್ತೈದು ಪದ್ಮವೆ
ನುತ್ತಮೈವತ್ತೈದು ಕರ್ಬನು
ದುತ್ತಮನೆಯೈವತ್ತರಿಂ ಮೇಲೈದದರ್ಬುದವು ॥
ಉತ್ತರದೆಯ್ನೂರು ಬಳಿಕ್ಕೈ
ಮತ್ತು ಕೋಟಿಯ ಗಾವುದಂ ಘನ
ಚಿತ್ತಜಾಹಿತ ಚಂದ್ರಶೇಖರ ಕೇಳ್ವುದೈ ಸಪ್ತಾ || ೧೫ ||

ವರಣವೆಲ್ಲಂ ಹತ್ತು ಹತ್ತು
ಸ್ಥಿರದಿ ಮಡಿಯಾಗಿಂತು ತೋರ್ಪವು
ಹರನನುಜ್ಞೆಯೊಳಜನೊಡೆಯ[ಪಿಂಡಾ]ಂಡಕಂ ಮತ್ತೆ ||
ಪರಿಕಿಸಲ್ಬ್ರಹ್ಮಾಂಡವಾದುದು
ಎರಡು ಹೋಳಾದಡಿಯ ಸಲೆ ಕೊ
ಪ್ಪರಿಗೆಯೊಳಗಿರ್ಪವು ಫಣಿಪಲೋಕಂಗಳೇಳಲ್ಲಿ || ೧೬ ||

ಮೇಲು ಮುಚ್ಚಳದೊಳಗೆ ತೋರ್ಪವು
ಲೋಲನೇ ಸ್ವರ್ಗಂಗಳಾರನು
ಕೂಲದಿಂ ಕೆಳಗಿರ್ಪ ಲೋಕಂಗಳನೆ ಕೇಳ್ಪೇಳ್ವೆಂ ||
ಲೀಲೆಯಿಂ ಬ್ರಹ್ಮಾಂಡದಡಿಯಣ
ಮೇಲಣೋಡಿನೊಳೊಂದು ಕೋಟಿ ವಿ
ಶಾಲಯೋಜನದಲ್ಲಿ ಚಿನ್ನದ ಭೂಮಿ ಸಲೆ ತೋರ್ಕುಂ || ೧೭ ||

ಆ ಕನಕಧರೆಯಲ್ಲಿ ತೋರ್ಪಂ
ಶೋಕದಿಂ ಕಾಲಾಗ್ನಿರುದ್ರನ
ನೇಕ ಘನಕೋಟಿ ಪ್ರಳಯ ರವಿಗಳನೆ ಕೀಳ್ಪಡಿಪ ||
ಜೋಕೆಯಂಗದ ಕಾಂತಿಯಿಂದಂ
ಪ್ರಾಕಟದೆ ತನ್ನಂತೆಯಿರ್ಪ
ಸ್ತೋಕಗಣಮೋಲೈಸೆಯೊಪ್ಪುವನವನಿರವ ಕೇಳು || ೧೮ ||

ಆ ರುಚಿರ ಕಾಲಾಗ್ನಿರುದ್ರನ
ಚಾರುಶಿರುದುರಿ ಹತ್ತುಕೋಟಿ ವಿ
ಚಾರಿಸಲ್ಕದರ ಪರಿಯೊ[ಳ್ಪೊಗೆ]ಯೈದು ಕೋಟಿಯುನಂ
ಸೇರಿ ಮುನಿದೀಕ್ಷಿಸಲು ಬೇವುದು
ವಾರಿಜಾಂಡಂ ಇನಿತದಿಲ್ಲದೆ
ಧಾರುಣೀತಳದಲ್ಲಿ ಕೋಪಿಸಿಯಾತನಾರ್ಭಟಿಸಿ || ೧೯ ||

ಬಳಿಯ ತಳಲೋಕಂಗಳೇಳಂ
ಕಳಿದು ಮಸ್ತಕವಾಗಬಂದಿಹ
ದಳವಿಯಂ ಸುರನಗದ ಮಧ್ಯದೊಳಿಂತು ದಾವಾಗ್ನಿ ||
ಬಳಿಕ ಸೂರ್ಯಂ ಸಿಡಿಲು ಮತ್ತಂ
ಪ್ರಳಯ ಪಾವಕ ರುದ್ರನುರುತರ
ದಳಿಕ ಲೋಚನದೀತನಮಲಾಕಾರವಾಯ್ತೆನಲು || ೨೦ ||

ರುದ್ರಗಣತತಿ ತನ್ನ ಸೇವಿಸೆ
ಭದ್ರದಿಂ ಕಾಲಾಗ್ನಿ ಭುವನಂ
ಚಿದ್ರವಾಕರವಾಗಿಯೊಪ್ಪುವುದದರ ಮೇಲೆ ಮಹಾ ||
ರೌದ್ರದಿಂದಂ ನರಕಮಂಡಲ
ವದ್ರಿಜೇಶನ ನಿಯಮದಿಂದೆಯು
ಪದ್ರಮಂ ಕುಜನರಿಗೆ ಮಾಳ್ಪದು ಮುಂದೆ ಕೇಳಿನ್ನು || ೨೧ ||

ಆ ನರಕ ಮಂಡಲ ವಿಶಾಲಂ [ಲಾ]
ನೂನದಿಂ ಮೂವತ್ತುಕೋಟಿಯು
ವಾ ನವೀನದ ಲಕ್ಷವೇ ಮೇಲೆರಡುವದರಲ್ಲಿ ||
ಹಾನಿಯಿಲ್ಲದೆ ರಾಜ ನರಕಂ
[ಪೀನದಿಂ] ರಾಜಾನ ನರಕಂ
ಹೀನದಿಂದಾ ರಾಜರಾಜೇಶ್ವರ ನರಕವೆಂಬಾ || ೨೨ ||

ಆ ವಿಶೇಷದ ನಾಲ್ಕು ನರಕ
ಕ್ಕೋವಿಯೊಂದೊಂದಕ್ಕೆಯುಂಟುರೆ
ಯಾವಗಂ ರಾಜಿಸಲು ಮೂವತ್ತೆರಡು ನರಕವಲ ||
ಭಾವಿಸಲ್ಕವರೊಳಗೆ ತೋರ್ಪವು
ತೀವಿಯಿಪ್ಪತ್ತೆಂಟು ಕೋಟಿಯು
ಭೂವಳಯದೊಳಗಿರ್ಪವಾ ನರಕಂಗಳಂ ಪೇಳೆ || ೨೩ ||

ಘೋರನರಕ ಸುಘೋರ ನರಕ ಸ
ಘೋರ ನರಕ ಮಹಾ ವಿವಿಧ ಘನ
ಘೋರ ನರಕವಘೋರ ನರಕ ತರಳ ಸುತಾರಾಖ್ಯಂ ||
ಚಾರು ತರದ ಭಯಾವಹಂ ಗಂ
ಭೀರಮಪ್ಪಾ ಕಾಳರಾತ್ರಿಯು
ಸಾರದಿಂದ ಭಯೋತ್ಕಟಂ ಚಂಡಂ ಮಹಾ ಚಂಡಂ || ೨೪ ||

ಚಂಡ ಕೋಳಾಹಳ ಮಹಾ ಪಾ್ರ
ಚಂಡ ಕೋಳಾಹಳ ಸುಪದ್ಮಾ
ಖಂಡ ಭೀಮಾವತಿಯು ಭೀಮಾಭೀಮ ಭೀಷಣನು ||
ಚಂಡ ದಿವ್ಯಕರಾಳ ವಿಕರಾ
ಳಂಡಲೆನ ವಜ್ರ ತ್ರಿಕೋಣಾ
ಖಂಡಮಪ್ಪಾ ಪಂಚಕೋಣಂ ದೀರ್ಘಮಭ್ಯುದಯಂ || ೨೫ ||

ಆ ಮಹಾಪರಿವರ್ತುಳಂ ಸಲೆ
ಭೌಮವಪ್ಪ ಸುಭೌಮ ದೀಪ್ತಂ
ಪ್ರೇಮಿಯೇ ಮಾಯಾಖ್ಯವೆಂಬೀಯಷ್ಟವಿಂಶತಿಯು ||
ಭೂಮಿಯೊಳಗಿವು ರಾಜನರಕಂ
ಪ್ರೇಮದಿಂದೊಂದೊಂದಕ್ಕೈದೈ
ದೈ ಮಗನೆ ಇಪ್ಪತ್ತಯೆಂಟಂ ಗುಣಿಸೆಯ್ಯೈದರೊಳು || ೨೬ ||

ಧರೆಯೊಳು ಸಲೆ ನೂರನಾಲ್ವ
ತ್ತಿರದೆ ಕೋಟಿ ನಿರಯ ವಿರಾಜಿಪ
ವರರೆ ಕೇಳಿಂತೊಂದು ಕೋಟಿಯ ಘೋರವೆನಿಸಿರ್ಪಾ ||
ನರಕಕಂ ತವೆ ರೌರವಂ ಭೀ
ಕರ ಮಹಾಘನ ರೌರವತನು
ವಿರಪ ಶೀತೋಷ್ಣಂಗಳೆಂಬಿವುವೈದುವದರಿಂದ || ೨೭ ||

ಸೇರಿ ಕೆಳಗೆರಡಿಂದೆನಿಪ್ಪ ಸು
ಘೋರ ನರಕಕ್ಕೈದು ನರಕಾ
ಗಾರಮುಂಟೇ ತೆರದೊಳಿಪ್ಪತ್ತೆಂಟು ಸಲೆ ಕೋಟಿ ||
ಚಾರು ನರಕಕ್ಕೈದುವೈದು ವಿ
ಚಾರಿಸಲಾವಾವವೆಂದಡೆ
ಧೀರ ಕೇಳೆಂದೆನುತ ತೋಂಟದ ಲಿಂಗನಿಂತೆಂದಂ || ೨೮ ||

ವರಕರಾಳಂ ಕುಂಭಿ ಜತು ಸೂ
ಕರ ಮಹಿಷ ಕಪಿ ಕರ್ಕಟಂ ವೈ
ತರಣಿ ತಪ್ತಂ ಸೂಚಿ ಮುಖ ಶಾರ್ದೂಲ ವಿಣ್ಮೂತ್ರ ||
ಕರಕರಾಳಂ ಶಲ್ಯ ಖುಕ್ಕೋ
ತ್ಕರ ವೃಕಂ ಸಿಂಹಾಸ್ಯಗಂಡಂ
ಸ್ಥಿರದಿ ಮಾಂಸಾದಿಗಳು ಮೊದಲಾದಖಿಳ ನರಕಗಳು || ೨೯ ||

ಇಂತಿವಾದಿಯ ನರಕ ಮಂಡಲ
ವಂತನಂತಂ ತೋರ್ಪವೆಂದೋ
ರಂತೆ ತೋಂಟದ ಸಿದ್ಧದೇಶಿಕನುಸುರುತಿರಲಾಗಿ ||
ಕಂತುಮರ್ದನ ಚಂದ್ರಶೇಖರ
ನಂತು ಕೈಮುಗಿದಾಗ ಸಲೆ ನಿ
ಶ್ಚಿಂತದಿಂ ಬಿನ್ನೈಸಿದಂ ಘನಗುರುವೆ ಚಿತ್ತೈಸು || ೩೦ ||

ಈ ತೆರದ ನರಕಂಗಳೊಳ್ಪ್ರ
ಖ್ಯಾತಿಯಿಂ ಮುಳುಗಿರ್ಪರಾರೆಂ
ಬಾ ತರುಣನೊಡನೆಂದನಂದಾ ಸಿದ್ಧದೇಶಿಕನು ||
ಪೂತ ಧರ್ಮಾಧರ್ಮಮುಂಟತಿ
ನೀತಿಯಿಂ ಧರ್ಮಿಗಳನಂತಕ
ನೋತು ನಾಕಕೆ ಕಳುಪುವಂ ಪಾತಕರ ನೆಱೆನೋಡಿ || ೩೧ ||

ಕಳುಪುವಂ ಕೂಷ್ಮಾಂಡನೆಡೆಗಂ
ಕಳುಪೆಯಾತಂ ಸಲೆ ವಿಚಾರಿಸಿ
ಮುಳುಗಿಸುವನಾ ನರಕಸಾಗರದಲ್ಲಿ ಪಾತಕರಂ ||
ಕಳುಪಿದಾ ನರರಲ್ಲಿ ಧರ್ಮಿಗ
ಳೆಳೆಯನೇಯಿರೆ ಯಮನ ಬಡಿವಂ
ತಿಳಿವುದೀ ಪರಿಯಲ್ಲಿ ಧರ್ಮಾಧರ್ಮಗಳನೆನಲು || ೩೨ ||

ನೆರೆದು ವಿಧಿ ಹರಿ ಕಾಲರುದ್ರನು
ವಿರದೆ ಸೃಷ್ಟಿ ಸ್ಥಿತಿ ಲಯಂಗಳ
ನುರುತರ ಶ್ರದ್ಧಾನುಕೂಲದೆ ಯಾವನಾಜ್ಞೆಯನು ||
ಶಿರದಿ ಪೊತ್ತುಂ ಯೆಸಗುತಿರ್ಪರು
ಗರುವನಾತನು ನೀನೆಯಾಗಿಹ
ಪರಮ ತೋಂಟದ ಲಿಂಗ ಭವಭಂಗ ಪುರವಿಜಯ || ೩೩ ||

ಇದು ವಿಮಲಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರ ॥
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣವ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವುದು ॥ ೩೪ ॥

ಅಂತು ಸಂಧಿ ೪ಕ್ಕಂ ಪದನು ೧೯೧ಕ್ಕಂ

ಮಂಗಳಂ

ಐದನೆಯ ಸಂಧಿ

ಹರುಷದಿಂ ಸಿದ್ಧೇಶ್ವರಂ ಬಂ
ಧುರದೆ ಸರ್ವಜನಂಗಳರಿವಂ
ತಿರದೆ ಧರ್ಮಾಧರ್ಮವಂ ಸಲೆ ತಿಳಿಪಿದಂ ಕೂರ್ತು ॥

ಕರುಣಿಯೇ ಕಾಲಾರಿಯೆ ಶಂ
ಕರನೆ ಶಶಿಧರ ಶೂಲಹಸ್ತನೆ
ಯುರುತರದ ಸತ್ಕಾಯನೇ ಸಕಲಾಧಿನಾಯಕನೆ ॥
ಸರಸ ಚಿತ್ತನೆ ಸುಲಲಿತಾರ್ಯನೆ
ವರದ ಕರನೇ ಚಾರುಶಸ್ತ್ರನೆ
ಧರೆಯ ರಕ್ಷಿಸು ಸಿದ್ಧಲಿಂಗನೆ ಶರಣಜನ ಸಖನೆ ॥ ೧ ॥

ನಿರ್ಮಲದ ಸಿದ್ಧೇಶ ಧರ್ಮಾ
ಧರ್ಮಮಂ ಪೇಳೆಂಬ ಭಕ್ತಿಯ
ವರ್ಮಮಂವುರುಚಂದ್ರಶೇಖರ ದೇವರಿಗೆ ಮುನ್ನ ॥
ಕೂರ್ಮೆಯಿಂ ಕುಂಭಜ ಮುನಿಗೆ ಶಿವ
ಧರ್ಮದುತ್ತರದಲ್ಲಿ ಷಣ್ಮುಖ
ನೊರ್ಮೆಯೊರೆದಂದದೊಳು ಪೇಳ್ದನದೆಂತೆನಲ್ಮುಂದೆ ॥ ೨ ॥

ಸಲೆಯಹಿಂಸಾಽಸ್ತೇಯಖುತಕ್ಷಮೆ
ಯಲಘು ಕರುಣಾ ಶ್ರದ್ಧೆಯಿಂದ್ರಿಯ
ಲಲಿತ ನಿಗ್ರಹ ವಿತರಣಂ ಜಪ ಶಿವನ ನೆನಹೆಂಬ ॥
ಬಲು ವೃಷಂಗಳ್ಪತ್ತು ಬಳಿಕಂ
ನೆಲೆಯವರ ಸಂಬಂಧವಿನ್ನಾ
ಚಲಿತ ಕರ್ಮಂಗಳು ವಿರಾಜಿಪವವನೊರೆವೆನಣುಗ ॥ ೩ ॥

ಸ್ಥೂಲಸೂಕ್ಷ್ಮ ಸುಸೂಕ್ಷ್ಮವೆಂಬ ವಿ
ಶಾಲಪಾತಕಮುಂಟವೆಂತೆನೆ
ಯಾಲಿಸಲ್ಮಾನಸದೊಳಂ ತವೆ ನಾಲ್ಕು ವಾಕ್ಯದೊಳು ॥
ಮೇಲೆ ನಾಲ್ಕತಿಕಾಯಕದೊಳನು
ಕೂಲವಿಲ್ಲದೆ ನಾಲ್ಕುಕರ್ಮಂ
ಬಾಲನೇ ಹನ್ನೆರಡು ತೆರದಿಂದಿರ್ಪುವವು ಮತ್ತೆ ॥ ೪ ॥

ಪರಸತಿಯರಂ ಕೂಡುವೆಂ ನಾಂ
ಪರಧನನುಂ ತೆಗೆದುಕೊಂಬೆಂ
ಪರರ ಕೊಲ್ವೆಂ ಪರರ ಕಾರ್ಯಂಗಳ ಕೆಡಿಪೆನೆಂಬೀ
ಪರಿಯ ನಾಲ್ದೆರದಘಸಮೂಹಂ
ಸ್ಮರಿಸಿದಲ್ಲಿಯೆ ಬರ್ಪವಿವು ಮುಂ
ದೊರೆವವೈ ನುಡಿದಪ್ಪ ದೋಷವವೆಂತೆನಲ್ಕೇಳು ॥ ೫ ॥

ಅಜ್ಞಭಾಷೆಯನನೃತನುಂ ವಂ
ಶಜ್ಞದೊಳಗಪಶಬ್ದಮಂ ದಿ
ವ್ಯಾಜ್ಞೆಯಿಂದಿರ್ಪರಸಿನೊಳ್ಕೊಂಡೆಯಮನುರೆ ನುಡಿವ
ತಜ್ಞನೆ ಈ ನಾಲ್ಕು ದೋಷಂ
ಪ್ರಜ್ಞಹೀನತೆಯಪ್ಪವಾಚಕ
ಸಂಜ್ಞೆಯೈ ಕಾಯಕದೊಳಾದಘ ವೃಂದನುಂ ಕೇಳು ॥ ೬ ॥

ಇಂಬಿನಿಂ ತಿನಬಾರದೊಡವೆಯ
ತಿಂಬುದನ್ಯಾಂಗನೆಯ ನೆರೆವುದು
ನಂಬಿದರ ಕೊಲ್ವುದು ಪರರರ್ಥಗಳನಪಹರಿಸಿ ॥
ಯೆಂಬುದೀ ನಾಲ್ದೆರದ ಕರ್ಮಾ
ಡಂಬರಂ ಕಾಯಕದೊಳಾದವು
ಡಂಬಿನಿಂ ಮಾಡಿದುದು ಪರರಿಂ ಮಾಡಿಸಿದುದೆಣಿಯೈ ॥ ೭ ॥

ಮನ ವಚನ ಕಾಯಕದೊಳಂ ಸಂ
ಜನಿಸಿದವು ಚಿತ್ತದೊಳು ನಾಲ್ಕಘ
ವನನುವಿನಿಂ ವಾಚಕದೆ ಕಲುಷಂ ನಾಲ್ಕು ಕಾಯಕದೆ ॥
ಘನದುರಿತವದು ನಾಲ್ಕಾದಾಯಿ
ತ್ತನಘ ಕೇಳ್ ಹನ್ನೆರಡುತೆರನೆಂ
ದೆನಿಸಿದವು ಪಾಪಂಗಳಿನ್ನವಜುರವದೆಂತೆನಲು ॥ ೮ ॥

ಲೀಲೆಯಿಂದೆ ಸುಸೂಕ್ಷ್ಮ ಸೂಕ್ಷ್ಮಂ
ಸ್ಥೂಲ ಪಾತಕವುಂಟುನದರೊ
ಳ್ಸ್ಥೂಲಪಾತಕದಿರವನೊರೆವೆನದೆಂತೆನಲ್ಕೇಳು ॥
ಶೂಲಿಯಂ ಸುಜ್ಞಾನಬೋಧೆಯ
ನಾಲಿಸಲ್ಬೋಧಿಸಿದ ಗುರುವಂ
ಸ್ಥೂಲ ಶಾಸ್ತ್ರಮನಿರದೆ ಜರೆದರ್ಪರವು ಪಾತಕರು ॥ ೯ ॥

ಮುಂದೆ ಪರಶಿವ ನಿಂದೆ ಸದ್ಗುರು
ನಿಂದೆ ವರಸುಜ್ಞಾನ ಶಾಸ್ತ್ರದ
ನಿಂದೆ ಪರಮಾರಾಧ್ಯರರ್ಥಂ ಪುಸ್ತಕವನಾವಂ ||
ಮುಂದಬುದ್ಧಿಯೊಳಪಹರಿಪ ನಲ
ವಿಂದ ಸುಮಹತ್ಪಾತಕಿಗಳವ
ರೆಂದು ಪೇಳುತ್ತಿರ್ಪರೀ ತೆರದ[ಲ್ಲಿ ಧರ್ಮವಿದರ್] || ೧೦ ||

ಸೇರುವೆಯ ಕರ್ವಿಗಳದಾಱಿನೆ
ಮೂರಹರನುರು ಪೂಜೆಯಂ ಕಂ
ಡಾರಯಲು ಶರಣೆನ್ನದರ್ಚಿಸದಾಗ ಹರುಷಿಸದೆ ||
ಚಾರುಗುಡಿಯೊಳ್ಭೀತಿಯಿಲ್ಲದೆ
ಸೇರಿ ಸತಿಸಂಗಾದಿ ದುರ್ವ್ಯಾ
ಪಾರಮಂ ನಡೆಸುವರು ಶಿವನಿಂದಕರಿಗೆಣೆಯವರು || ೧೧ ||

ಸರ್ವದೊಳ್ಶಿವನರ್ಚನೆಯಸಂ
ದುರ್ವಿ ಮಾಡದೆ ಶಿವನ ಶಾಸ್ತ್ರವ
ನುರ್ವಿಯೊಳ್ಶಿವನೆಂದು ತಿಳಿಯದೆ ಭಕ್ತರಂ ಕಂಡು
ಗರ್ವದಿಂ ನಿಂದಿಸುತೆ ಶಿವನಾ
ಖರ್ವದಾಚಾರಂಗಳಂ ಸಲೆ
ಸರ್ವಥಾ ಬಿಟ್ಟವರು ಶಿವನಿಂದಕರಿಗೆಣೆಯಲ್ತೆ || ೧೨ ||

ಗುರು ನಿರೂಪಂ ನೆಗಳದಾತಂ
ಗುರುಪದಾರ್ಚನೆಯಿಲ್ಲದಾತಂ
ಗುರುವಿನೊಳಗನೃತಂಗಳಂ ನುಡಿದಾತ ರುಜೆಯಾದ ||
ಗುರುವನಂತಾರಯ್ಯದಾತಂ
ಗುರು ತನುಜ ಸತಿ ಬಂಧು ಮೊದಲಾ
ದರನುದಾಸೀನದೊಳೆ ಕಂಡಾತಂ ಗುರುದ್ರೋಹಿ || ೧೩ ||

ಮಿಸುಪ ಶಿವಶಾಸ್ತ್ರಂಗಳಂ ಪೂ
ಜಿಸದೆ ಬರೆದೋದಿದಡೆಯರ್ಥಮ
ನುಸುರಿದೊಡೆ ಸಲೆ ಮಾಱಿಕೊಂಡಡೆಯಲ್ಲಿಯನುಭವವಂ ||
ಹುಸಿದು ಹೇಳಿದೊಡನ್ಯ ಭಾಷೆಯ
ನೆಸಗಿದಡೆ ಬಲ್ಪಿಂದ ನಿಲಿಸಿದ
ರೆಸೆವುದೈಯಾತಂಗೆ ಘನ ಸುಜ್ಞಾನನಿಂದೆ ಸದಾ || ೧೪ ||

ಪರಮ ಪಾತಕವೈದದೆಂತೆನೆ
ಹರುಷದಿಂ ಕೇಳ್ಬ್ರಹ್ಮಹತಿ ಸಲೆ
ಯುರು ಸುರಾಪಾನಂ ಸುವರ್ಣಸ್ತೇಯವಂತಿರದೆ ||
ಗುರುಸತಿಗೆ ಮೋಹಿಪುದುವಿಂತಿವು
ಭರದೊಳಿವರೊಡನಾಡುವವರಂ
ಸರಸದಿಂದಂ ಕೂಡಿಕೊಂಬವರಧಮರೆಂತೆನಲು || ೧೫ ||

ಮುಂತೆ ಕೇಳ್ವೈ ಬ್ರಹ್ಮಹತಿಯಘ
ವೆಂತೆನಲ್ಬಾಯಾರಿ ನೀರಂ
ಸಂತಸದೆ ಕುಡಿಯಲ್ಕೆ ಬರ್ಪಾ ಗೋ ಸಮೂಹಗಳಂ ||
ಚಿಂತಿಸದೆ ತಡೆದವರು ಮತ್ತ
ತ್ಯಂತದಿಂದಂ ಪರರ ಮೇಲೆಯ
ನಂತ ಕೊಂಡೆಯನುಂ ಬಳಿಕ್ಕರಸಿನೊಳಗುಸುರಿದರು || ೧೬ ||

ವಿವರಿಸದೆಯುಬ್ಬೆಗದ ಶುದ್ಧಿಯ
ನವನಿಯೊಳ್ಸಲೆ ಪುಟ್ಟಿಸುವರಿಂ
ತಿವರುಗಳ್ಕೇಳ್ಬ್ರಹ್ಮಹತಿಗೆಣೆಯಪ್ಪ ಪಾತಕರು ||
ಭುವನದೊಳು ಸುಜನರ್ಗೆ ಭಾಧೆಯ
ನವಿರತಂ ಮಾಡುವರು ಮತ್ತಂ
ತವಕದಿಂದಂ ನರಕಕೆಯಿಡುವರಂತುಮಲ್ಲದೆಯುಂ || ೧೭ ||

ಸುರೆಗುಡಿಹಿಗಳ ಪೈಕದಧಮರ
ನೊರೆವೆ ಶಿವಶಾಸ್ತ್ರಂಗಳಂ ಕೇ
ಳ್ದಿರದೆ ನಂಬದಲಭವ ಭಕ್ತರೊಳಪ್ರಿಯಂ ಮಾಳ್ಪ ||
ನರರಭಕ್ಷಣ ಭಕ್ಷಣಂಗಳ
ನರರೆ ಭಕ್ಷಿಸಿದವರು ತಾವಾ
ಚರಿಪ ಶೀಲಾದಿಗಳ ಬಿಟ್ಟರ್ತಂದೆ ತಾಯಿಗಳ || ೧೮ ||

ಹೊರೆಯದಧಮರು ತಪ್ಪಿ ಶಾಸ್ತ್ರಮ
ನೊರೆವವರು ನಂಬಿರ್ದರಂ ಸಂ
ಹರಿಪರಡವಿಯೊಳಿರ್ದ ವಿನುತಂ ನಿರಪರಾಧಮೃಗಂ
ಚರಿಸೆ ಕೊಲ್ವರು ಪಶುಪದಾದಿಗೆ
ಯರರೆ ಮೆದೆಯೂರ್ಗಳಿಗೆ ಕಿಚ್ಚಂ
ತ್ವರಿತದಿಂದಿಕ್ಕುವರು ಸುರೆಗುಡಿಹಿಗಳಿಗೆಣೆಯವರು || ೧೯ ||

ಪರವನಿತೆ ಗಜ ವಾಜಿ ಪಶು ವಸು
ಧರಣಿ ರತ್ನಂ ವಸ್ತ್ರ ಮೌಲ್ಯಂ.
ಪರಿಮಳಾದಿಯ ಸರ್ವವಸ್ತುಗಳಾಗ ಕೈಸೇರೆ ॥
ಭರದೊಳಪಹರಿಪಧನುರುಂ ಮು
ನ್ನರರೆ ರುಕ್ಮಸ್ತೇಯರೆನಿಪ
ರ್ಪಿರಿಯ ಗುರು ತಪ್ಪುಕರ ಪೈಕದ ಪಾತಕರ ಪೇಳ್ವೆಂ ॥ ೨೦ ॥

ವರನ ಸಮಮಂ ನೋಡಿ ಕನ್ನೆಯ
ಕರೆದು ಕೊಡದವನನ್ಯ ಸತಿಯಂ
ನೆರೆದವಂ ಪರಿಪಕ್ವ ಯೌವ್ವನೆಯಲ್ಲದಿರ್ಪವಳಂ
ಕರಸಿ ನೆರೆದವನಂತ್ಯಜಾಂಗನೆ
ಯರನೆರೆದವರ್ ವರ ಸವರ್ಣದ
ತರುಣಿಯರ ನೆರೆದಧಮರೇ ಗುರುತಲ್ಪ ದೋಷಿಗಳು ॥ ೨೧ ॥

ವರ ಮಹಾಪಾತಕರಿವರು ಮುಂ
ದೊರೆವೆವುಪಪಾತಕರ ಬಗೆಯಂ
ಭರದೆ ಬಡವರ ಮನೆಯನರ್ಥವನವರ ದಾಸಿಯರ ॥
ವಿರಸದಿಂ ಧಾನ್ಯಾದಿಗಳನಂ
ತಿರದೆ ಕೊಂಡುರೆ ಬಾಳ್ವರೈ ಮ
ತ್ಸರಗಿಳಿಂದಂ ಸಾಧು ಕನ್ಯಾದೂಷಣಂ ಮಾಡಿ ॥ ೨೨ ॥

ಸುತರು ಮೊದಲಾಗಿರ್ದವರ ಬಿ
ಟ್ಟತಿ ಮಹಾಪಾತಕರು ವಿಪ್ರ
ಪ್ರತತಿ ಸತಿ ವೃಷಲಾದಿಗಳ ತಪ್ಪಿಲ್ಲದೆಯೆ ಮತ್ತೆ ॥
ಹತಿಸಿದಧಮರು ದೇವಭವನದ
ನುತ ವನಾದಿಯ ತರಿದವರು ಶೋ
ಭಿತ ತಟಾಕಾದಿಗಳನೊಡೆದಿರ್ಪರವು ಪಾತಕರು ॥ ೨೩ ॥

ವಸ್ತುಗಳನಣಕಿಸುತೆ ಸಿಕ್ಕಿಸಿ
ದುಸ್ತರದಿ ಬಾಳುವರು ಮತ್ತೆ ಸ
ಮಸ್ತ ಮಂತ್ರೋಚ್ಚಾಟನಂಗಳ ಮಾಡುತಿರ್ಪವರು ॥
ಪುಸ್ತಕದಿ ಶಾಸ್ತ್ರಾದಿಗಳ ನೆರೆ
ವಿಸ್ತರಿಸಿ ಪೇಳುವರು ಕೂಲಿಗೆ
ಶಸ್ತವಿಲ್ಲದೆ ಹಾಂಗೆ ಕೇಳುವರವರು ಪಾತಕರು ॥ ೨೪ ॥

ಶುಷ್ಕ ಘೆನ ತರ್ಕಂಗಳಂ ಮಾ
ಳ್ಪ ಸ್ಖಲಿತಸತ್ಕರ್ಮರುರೆ ಜ್ಯೋ
ತಿಷ್ಕ ಮೊದಲಾದಖಿಳ ಪರಲೋಕಂಗಳಿಲ್ಲೆಂಬ ॥
ಪುಷ್ಕ ಸದೃಶದ ಜೀವರವರುಂ
ತಸ್ಕರರು ಮಲಿನದ ನರರು ಘನ
ಪುಷ್ಕರಾದಿಯ ತೀರ್ಥಕ್ಕೈದಿದ ಫಲಗಳಂ ಜೆಲೆಗೆ ॥ ೨೫ ॥

ಕೊಡುವವರು ದಿನದಲ್ಲಿ ಪರ್ವದೊ
ಳೊಡನೆ ಪಶುಯೊನಿಯೊಳು ಮಲಿನಿಯೊ
ಳೊಡನೆ ಸುರತಂಗೈವರುಂ ಸತಿಸುತರ ಮೋಹಗಳ ॥
ಒಡನೆ ಸಲಿಸದರಪ್ರಿಯಂಗಳಂ
ನುಡಿವವರು ಶಿವಸಮಯದೂರರು
ಮೃಡಗಣೋತ್ಸಾಹಂಗಳಂ ಕೆಡಿಸುವರು ಪಾತಕರು ॥ ೨೬ ॥

ರೌದ್ರರೂಪದ ಪಾತಕದೊಳಂ
ಕ್ಷುದ್ರ ಪಾತಕವಾನವೆಂದೊಡು
ಪದ್ರಮಂ ಪಶು ತಪಸಿ ಮುಂತಾದರ್ಗೆ ನೆವದಿಂದ ॥
ಭದ್ರದಿಂ ಮಾಡುವುದು ಗೋಗೃಹ
ವದ್ರಿಯಾದಿಯ ಧರೆಯೊಳಂ ಕೇಳ್
ಚಿದ್ರಮಣ ಮಲ ಮೂತ್ರಮಂ ಬಿಡುವವರು ಪಾತಕರು ॥ ೨೭ ॥

ಇಟ್ಟಿಗೆಗಳಂ ಕಲ್ಲು ಮುಳ್ಗಳ
ಕಟ್ಟಿಗೆಗಳಂ ಸೀಬುಗಳ ಕಾ
ಲ್ಬಟ್ಟೆಯೊಳ್ಪರಡುವರು ಪಾತಕರಾಗ ವಾವೆಯ (?) ॥
ಕೆಟ್ಟ ಸಾಕ್ಷಿಯ ನುಡಿವವರು ಅಳ
ವಟ್ಟ ವ್ಯವಹಾರಾದಿ [ಯ ತೆಗ]
ಳಿಟ್ಟೆಡೆಯೊಳಂ ಜೂಜು ಮೊದಲಾದೆಡೆಯೊಳಂ ಪಕ್ಷ ॥ ೨೮ ॥

ಪಾತದಿಂ ಹುಸಿವವರು ಸಲೆ[ಯಪ]
ಖ್ಯಾತಿಯಿಂ ಭೃತ್ಯರೊಳು ಕರುಣಂ
ರೀತಿಯಿಲ್ಲದರವರು ಗೋವಂ ಮೇಯಲೀಸದರು ॥
ಪ್ರೀತಿಯಿಂ [ಕೊಂಡೆ]ಯನ ಪೇಳ್ದಡೆ
ನೂತನನ್ಯಾಯದೊಳು ತಿಳಿಯದೆ
ಭೂತಳದೊಳಂ ಬಾಧೆ ಮಾಳ್ಪವರತಿಥಿಯಾಗಿರ್ದು ॥ ೨೯ ॥

ಕನ್ಯೆಯಂ ಬಯಸುವರು ಗೋವುಗ
ಳನ್ನೆಯದಿ ಜೈವುತ್ತ ಬಡಿವರು
ನನ್ನಿಯಿಂ ರವೆಘಳಿಗೆಯುತ್ತೆತ್ತುಗಳ ಬಿಡದರು ||
ಮನ್ನಿಸದೆ ಹಿಡುಕುಗಳ ಬಡಿವರ
ದುನ್ನತದ ಬಂಜೆಯೊಳು ಹೆರುವ
ರಿನ್ನಿವರು ಬೀಳುವರು ನರಕದ ಶರಧಿಯೊಳ್ಸತತಂ || ೩೦ ||

ಬಂಜೆಯಾಕಳೊಳುತ್ತಮರು ಸಲೆ
ಯಂಜದೇ ಹೇರಿದರು ಸತತಂ
ಭುಂಜಿಸುವ ಘನರೋಗ ತೃಷೆಸನ್ಮೋಹವಡಸಲ್ಕೆ ||
ಮಂಜುಲದೆಯಾ ಪಶುಗಳಂ ಸಲೆ
ಬಂಜೆಯುದಕದೊಳಾರಯದೆ ದಯ
ರಂಜಿಸದೆ ಪಾತಕರಿವರು ಕೇಳ್ ಚಂದ್ರಶೇಖರನೆ || ೩೧ ||

ತಾಯಿತಂದೆಗಳತಿಥಿಯಾತ್ಮಜ
ರೊಯ್ಯರದೊಳಾಶ್ರಿತರ ಬಿಟ್ಟ
ನ್ಯಾಯದಿಂದಂ ತಾವೆಯುಂಬನರಂಗಕಲೆ ಕುಂದಿ ||
ದಾಯವಿಲ್ಲದೆ ನರರು ರೋಗದೊ
ಳಾಯತಂ ತಪ್ಪಿದರ ಬಾಲರ
ಧೀಯುತನೆ ಕಂಡನರೊಳಂ ದಯವಿಲ್ಲದಿರ್ಪವರು || ೩೨ ||

ವಿಪ್ರರಾಗಿದ್ದಾಯುಧಗಳಂ
ಕ್ಷಿಪ್ರದಿಂದಂ ಪಿಡಿದು ಬಾಹುಜ
ರ ಪ್ರಕಾರದೆ ನಡೆದು ಮತ್ತಂ ವೈಶ್ಯ ವರ್ತನೆಯಾ ||
ಸುಪ್ರಯತ್ನವ ನುಡಿದು ಶೂದ್ರಾ
ದಿ ಪ್ರಕರದಂತಾಚರಿಪರನ
ರಪ್ರಮಾಣದ ನರಕಿಗಳುವ್ವಾರಾದೊಡಂ ತಮ್ಮ || ೩೩ ||

ವರ್ತನೆಗಳಂ ಬಿಟ್ಟುವನ್ಯರ
ವರ್ತನೆಯೊಳಾಚರಿಪರಂ ಸಲೆ
ಧೂರ್ತಿಕೆಯ ವರ್ತನೆಯೊಳಿಪ್ಪವರುಂ ಸದಾಚಾರ ||
ವರ್ತನೆಯೊಳಂ ಚರಿಸದಂತಪ
ಕೀರ್ತಿಯರು ಪಾದರಿಗರಂ ನೆರೆ
ಕೂರ್ತುವಾಗಿರ್ದರಸು ಕೊಲ್ಲದೊಡನನು ಪಾತಕನು || ೩೪ ||

ನಿಂದೆಯೊದವನಲ್ಲಿ ದಾನವ
ನಂದು ಕೊಂಡವರನ್ಯರೊಡವೆಯು
ನೊಂದಿನಿತುಮಂ ತೆಗೆದುಕೊಂಡವರವರು ಪಾತಕರು ||
ಮುಂದೆ ಬೆಲ್ಲಂ ಕಬ್ಬುವನ್ನಂ
ಛಂದದಿಂ ಪಂಚಾಮೃತ [ಕ್ಕಳು]
ಛಂದದಿಂ ವಸ್ತ್ರಾದಿ ಗಂಧಂ ದ್ರವ್ಯ ಮುಂತಾದ || ೩೫ ||

ಪರರೊಡವೆಯಂ ಮುಟ್ಟದೇಪರಿ
ಹರಿಸಿದವರಿರೆ ಪುಣ್ಯವಂತರು
ಧರೆಯೊಳವರೇ ಪೂಜ್ಯರವರಿಂ ಸಕಲ ಜೀವಿಗಳು ||
ಹರುಷದಿಂದಂ ಬದುಕುವರು ಕೇ
ಳ್ಗರುವನೇಯೆಂದಾಗ ತೋಂಟದ
ಗುರುವೊರೆದನುರು ಚಂದ್ರಶೇಖರಮೂರ್ತಿಗೊಲವಿಂದ || ೩೬ ||

ಗೂಢಚರಣಾಭರಣ ವೃಷಭಾ
ರೂಢ ಮಾಯಾವನಧಿ ಬಾಡಬ
ಗಾಢ ಸಾಹಸ ಬಾಹುಲೇಯ ಗಣೇಶ ವೀರಪಿತ ||
ಪ್ರೌಢ ತುಂಬುರ ನಾರದಾದಿಗ
ಳ್ಗೂಢ ಗಾನರಸಾನುಪಾನಾ
ಲೀಢ ಕರ್ಣಾಸಂಗ ತೋಂಟದಲಿಂಗ ಲಸದಂಗ || ೩೭ ||

ಇದು ವಿಮಲಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲಣಾರ್ಯನ ಕುಲಶರಧಿ ಚಂದ್ರ ||
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣನು
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವುದು || ೩೮ ||

ಅಂತು ಸಂಧಿ ೫ ಕ್ಕಂ ಪದನು ೨೩೦ ಕ್ಕಂ

ಮಂಗಳಂ.

ಆರನೆಯ ಸಂಧಿ

ಇಳೆಯೊಳು ಹದಿನಾಲ್ಕು ಲೋಕಂ
ಗಳ ವಿವರಮಂ ಸಪ್ತ ಶರಧಿಯ
ಬಳಿಕ ಸಪ್ತದ್ವೀಪಮಂ ಸಿದ್ಧೇಶನುಸುರಿದನು ||

ಸಾರ ಸುಜನಾಧಾರ ವರಗಂ
ಭೀರ ಸತ್ಯಾಗಾರ ನಿರ್ಮಲ
ಪೂರ ರಿಪು ಸಂಹಾರ ಮಂಜುಲ ಶೂರ ಸಂಹಾರ ||
ವಾರಿತಾಹಂಕಾರ ಜಿತಮಂ
ದಾರ ಪುಣ್ಯ ಶರೀರ ಸಕಲಾ
ಚಾರ ದುರ್ಜನದೂರ ಪಾಲಿಸು ಸಿದ್ಧನೇ ಧೀರ || ೧ ||

ಪರಮ ನವ ಸಿದ್ಧೇಶ್ವರಾ ಬಂ
ಧುರ ಮಹಾಘನ ಭುವನಕೋಶದೊ
ಳರಿದೆನಿಪ ಕಾಲಾಗ್ನಿ ಭುವನವನದರ ಮೇಲಿರ್ಪ ||
ನರಕ ಲೋಕಮನಲ್ಲಿ ನೋಪತಿ
ದುರುಳಕರ್ಮಿಗಳಿರವನೊರೆದಿರಿ
ಸರಸದಿಂದಿನ್ನುಳಿದ ಭುವನಂಗಳನೆ ಕೃಪೆಯಿಂದ || ೨ ||

ನಿರವಿಪುದು ನೀನೆಂದು ಕೈಮುಗಿ
ದರರೆ ಬಿನ್ನೈಸುತ್ತೆ ಮಿಪ್ಪತಿ
ಯುರುತರದ ಘನ ಚಂದ್ರಶೇಖರ ದೇವರಿಗೆ ಕೂರ್ತು ||
ಹರುಷದಿಂದಂ ನುಡಿಯತೊಡಗಿದ
ನರರೆ ತೋಂಟದ ಸಿದ್ಧಲಿಂಗಂ
ಪರಮ ವಿಮಲಾಮೃತದ ಪಾವನ ಸೋನೆಯೆಂಬಂತೆ || ೩ ||

ಕಾಲವಹ್ನಿಯ ಭುವನವದರಿಂ
ಮೇಲೆ ನರಕದ ಮಂಡಲದ ಸುವಿ
ಶಾಲವೇ ಮೂವತ್ತುಕೋಟಿಯು ಮೇಲೆರಡು ಲಕ್ಷಂ ||
ಆ ಲಲಿತಗಾವುದವದಲ್ಲಿಂ
ಮೇಲೆ ಬಯಲೊಪ್ಪುಪುದು ಮತ್ತಂ
ಲೀಲೆಯಿಂ ಮೂವತ್ತು ಮೂರ್ಸಾಸಿರದ ಯೋಜನದಿಂ || ೪ ||

ಯೋಜಿಸಲು ತೊಂಬತ್ತುಲಕ್ಷದ
ಯೋಜನದ ದಟ್ಟದೊಳು ಧಾರುಣಿ
ನೈಜದಿಂದೆಂಬತ್ತರಿಂ ಮೇಲ್ಪೈದುವರೆ ಲಕ್ಷ॥
ಯೋಜನ [ದಯ ಃ ಕಾಂತವನಿಶಂ
ರಾಜಿಸುತ್ತಲಿ ತಾನೆ ತೋರ್ಕುಂ]
ಯೋಜನಂ ಸಲೆ ನಾಲ್ಕುವರೆ ಲಕ್ಷದೊಳು ವಸುಭೂಮಿ(?) ॥ ೫ ॥

ಆ ಕನಕಧರೆಯಿಂದುಪರಿಯೊಳ
ನೇಕ ಕೂಷ್ಮಾಂಡನ ಮಹಾಘನ
ಲೋಕವೊಪ್ಪುವುದಾ ಗಣೇಶಂಗಂ ಫಲಕ ಚಾಪಂ ॥
ಶೂಲ ಖಡ್ಗಾದಿಗಳು ಮೆರೆಯೆ ವಿ
ವೇಕದಿಂದಂದಂತಕನ ಮೇಲೆ ಪಿ
ನಾಕಿಯನುಮತದಿಂದವಧಿಕಾರದೊಳು ರಾಜಿಸುವಂ ॥ ೬ ॥

ಆ ವಿಶೇಷದ ಭೂಮಿಗುಪರಿಯೊ
ಳೋವಿ ಸಲೆಯೊಂಬತ್ತು ಸಾವಿರ
ಗಾವುದಂ ಬಯಲೊಪ್ಪೆ ಮೇಲೆ ಮಹಾತಳಂ ತೋರ್ಕುಂ ॥
ತೀವಿ ದಶಕೋಟಿಯ ಹರಹಿನಿಂ
ಭಾವಿಸಲ್ಕದರುನ್ನತಂ ತವೆ
ಯಾವಗಂ ರಾಜಿಪುದು ದಶಸಾಹಸ್ರಯೋಜನದಿಂ ॥ ೭ ॥

ಹತ್ತುಕೋಟಿಯ ಹರಹಿನಿಂದಂ
ಹತ್ತು ಸಾವಿರದುದ್ದದಿಂದಂ
ಮತ್ತೆ ವಿಮಲ ರಸಾತಳಂ ಘನತರ ತಳಾತಳವು ॥
ಉತ್ತರದ ಸುತಳಂ ನಿತಳ ಸಂ
ಪತ್ತನುಳ್ಳಧಿತಳವತಳದ
ತ್ಯುತ್ತಮದ ಲೋಕಂಗಳೇಳಾ ಲೆಕ್ಕದಿಂ ತೋರ್ಕುಂ ॥ ೮ ॥

ವರ ಮಹಾತಳಕಂ ಸುವರ್ಣದ
ಧರಣಿಯಲ್ಲಿಗೆ ರತ್ನಹರ್ಮ್ಯಂ
ದೊರೆ ಮಹಾಶೇಷಂ ಬಳಿಕ ಮುಚುಕುಂದ ಬಲಿಮುಖ್ಯ ॥
ಸಿರಿಯ ದಾನವರೆಸೆವರಲ್ಲಿಗೆ
ಹರುಷದಿಂ ಶಿವನಮಲ ದೈವಂ
ಸ್ಥಿರ ರಸಾತಳ ಶುಕ್ಲವರ್ಣಂ ವಾಸುಕಿಯೆಯಧಿಪಂ ॥ ೯ ॥

ಸಲೆ ಸುರ್ಪಣರು ಶಂಭುದೈವಂ
ಬಲು ತಳಾತಳ [ಮ] ಸಿತವರ್ಣಂ
ಕಲಿ ಹಿರಣ್ಯಾಕ್ಷಾದಿ ನರಕಾಸುರರುವಾ ಧರೆಗೆ ||
ಸುಲಭ ಶಂಕರನ ಭವನಲ್ಲಿಗೆ
ಯಲಘು ಸುತಳಂ ಪೀತವರ್ಣಂ
ಲಲಿತ ಪಕ್ಷಿಕ ಕಾಲನೇಮಿಗಳಿರ್ಪರನವರತಂ || ೧೦ ||

ಮೋದದಿಂದಂ ನೀಲಕಂಠಂ
ಸಾದರದೆ ಕೇಳ್ಮಿತಳ ವರ್ಣಂ
ಭೇದಿಸಲ್ಕದು ಸುಪ್ರವಾಳಮುದಲ್ಲಿ ಪ್ರಹ್ಲಾದ ||
ಆದಿ ತಾರಕನಹಿಪನಲ್ಲಿ ವಿ
ನೋದದಿಂದೆಯುಮಾರಮಣನೆಂ
ಬಾ ದಯಾತ್ಮಂ ಪೂಜೆಯಂ ಕೈಕೊಂಬನನವರತಂ || ೧೧ ||

ವಿತಳವರ್ಣಂ ಬಿಳಿದು ಕಂಬ [ಲ]
ಶ್ವತಿಶಯರು ಸರ್ವೇಶನಲ್ಲಿಗೆ
ರತಿಪಜಿತ ಲಾಲಿಪುದುವದರಿಂ ಮೇಲೆ ಮತ್ತೊಂದು
ಕ್ಷಿತಿಯೆಸೆವುದಂತೆರಡುಕೋಟಿಯು
ನುತಿಸೆಯೆಂಬತ್ತೆಂಟು ಲಕ್ಷದೊ
ಳತಳವಿತಳದ ನಡುವೆಯಿಪ್ಪುದು ಒಂದು ನೆಲೆಯುದರ || ೧೨ ||

ತವೆ ಪೆಸರು ಸಲೆ ಹಾಟಕೇಶ್ವರ
ಭುವನವದರೊಳಗೊಂದು ಚಿನ್ನದ
ಗವಿ ವಿರಾಜಿಪುದರರೆಯುದು ಸಾಹಸ್ರ ಯೋಜನದಿಂ ||
ಅವಿರತಂ ತಾನದರೊಳಿಪ್ಪಂ
ವಿವಿಧ ಭೋಗೇಚ್ಛಕರಿಗಾಗಂ
ನವವರಂಗಳ ಕೊಡುತಿರಲ್ಕಾ ಪರಗಣೇಶ್ವರನಂ || ೧೩ ||

ಸುರವನಿತೆಯುರು ಯಕ್ಷಸತಿಯರು
ಸರಸ ಭಗಿನಿಯರಪ್ಸರಾಂಗನೆ
ಯರು ಸದಾ ನಾಗಿಣಿಯುರಾತನನೋಲಯಿಸಿ ಬಂದು ||
ಪರಿಪರಿಯ ಭೋಗೇಷ್ಟನುಂ ಪಡೆ
ವರು ಹರುಷದಿಂ ಹಾಟಕೇಶನ
ಧರಣಿಗುಪರಿಯತಳ ಲೋಕಂ ನೀಲವಾಗಿರ್ಕುಂ || ೧೪ ||

ವರ ಹಯಗ್ರೀವಂ ನಮುಚಿ ಬಂ
ಧುರದೊಳೊಪ್ಪುವ ಶಂಕುಕರ್ಣರು
ಪರಮನಲ್ಲಿಗೆ ನೀಲಕಂಠಂ ಲೋಕವೇಳಕ್ಕೆ ||
ಇರದೆ ವರ್ಣಂ ಫಣಿಯರಂ ಸು
ಸ್ಥಿರದ ಲಿಂಗಂಗಳನೆ ಪೇಳಿದೆ
ವರಿದೆನಲು ಕೇಳೆಂದು ಸಿದ್ಧೇಶ್ವರನುಸುರ್ದನಲ್ಲಿ || ೧೫ ||

ಅತಳದಿಂದಂ ಮೇಲೆ ತೋರ್ಕುಂ ವಿ
ತತ ದಶಸಾಹಸ್ರಯೋಜನ
ದತಿಶಯ ಪ್ರಾಮಾಣದೊಳು ಭೂಲೋಕವಲ್ಲಿರ್ಪ
ಅತಳ ಸಪ್ತ ದ್ವೀಪಮುಂ ಸ
ನ್ನುತ ಶರಧಿಯುಂ ಮೇರು ಮುಖ್ಯ
ಪ್ರತತಿಯುಂ ಪೇಳುವೆವು ಕೇಳ್ಬೆ ಚಂದ್ರಶೇಖರನೆ || ೧೬ ||

ಸುರುಚಿರ ಬ್ರಹ್ಮಾಂಡದಡಿಯ
ಸ್ಥಿರದ ಖರ್ಪರದೋಡಿನುರಗಂ
ಅರರೆ ಕೋಟಿಯಮೇಲೆ ಯಿಪ್ಪತ್ತೇಳು ಲಕ್ಷದೊಳು ||
ನಿರುತದಿಂ ರಾಜಿಪುದುವಂತಾ
ಧರಣಿಯೊಳವಳಯದೊಳು ಸತತಂ
ಪರಮ ಲೋಕಾಲೋಕ ಶೈಲಂ ಬಳಸಿ ತಾನಿರ್ಕುಂ || ೧೭ ||

ಪ್ರಾಕಟಂ ಬ್ರಹ್ಮಾಂಡದೋಡಿನ
ನೇಕ ಲೋಕಾಲೋಕ ಗಿರಿಯ
ಸ್ತೋಕ ಮಧ್ಯದೊಳಂ ತಮಂಥಂ ತೋರ್ಪುದೆಂತೆನಲು ||
ಭೀಕರದೊಳದು ಮೂರು ಕೋಟಿಯ
ಡಾಕು ನಾಲ್ವತ್ತೆಂಟು ಲಕ್ಷದ
ಜೋಕೆ ಯೋಜನದಲ್ಲಿಯಿಪ್ಪಾ ಕತ್ತಲೆಯ ನಡುವೆ || ೧೮ ||

ಒಂದು ಕೋಟಿಯ ಮೇಲೆ ತಾ ಮುದ
ದಿಂದೆಯಿಪ್ಪತ್ತೇಳು ಲಕ್ಷದೊ
ಳೊಂದಿ ಗರ್ಭೋದಕ ಸಮುದ್ರಂ ಮೊರೆವುದದರಲ್ಲಿ ||
ಚಂದದಿಂದಂ ತಿಮಿತಿಮಿಂಗಿಲ
ವಂದದಿಂ ಗಿರಿಯಂತೆ ಕೂರ್ಮಗ
ಳಂದು ರಾಜಿಸೆ ಬಲಮುರಿಯ ಶಂಖಂ ಮಹಾಶುಕ್ತಿ || ೧೯ ||

ತಿಳಿಯೆ ತದ್ಗರ್ಭೋದಕಾಬ್ಧಿಯ
ಒಳವಳಯದೊಳು ಹತ್ತು ಕೋಟಿಯು
ಮಿಳಿತದಿಂ ಪದಿನಾರು ಲಕ್ಷ ವಿಶಾಲಮುಂ ಮತ್ತೆ
ತಳೆದ ಲೋಕಾಲೋಕಾ ಗಿರಿಯು
ಗ್ಗಳದ ತುದಿಯೊಳು ರವಿಪಥದ ವೆ
ಗ್ಗಳದ ಗಾಲಿ ಸುರಾದ್ರಿಯುಪರಿಯೊಳೊಂದು ಘನಶಂಖಂ || ೨೦ ||

ಆ ಸುರಾದ್ರಿಯ ಸುತ್ತುತಿರ್ಪಂ
ವಾಸರಾಧ್ಯಂ ಚಕ್ರವಾಳದ
ಭಾಸುರಾಷ್ಟಾಶೆಯೊಳು ದಿಕ್ಪಾಲಕರ ಪುರಿಯಿರ್ಕುಂ ||
ಲೇಸೆನಿಪ ಲೋಕಾಲೋಕದ ವಿ
ಲಾಸ ಗಿರಿಯೊಳವಳಯದೊಳಗಂ
ವಾಸು ಧಾರುಣಿ ಹತ್ತು ಕೋಟಿಯು ಮೇಲೆ ಹದಿನಾರು || ೨೧ ||

ಲಕ್ಷಯೋಜನದಲ್ಲಿ ನಿರ್ಜರ
ರಕ್ಷಯದ ಸುಖದಿಂದಮಿರ್ಪರು
ವೀಕ್ಷಿಸಲ್ಕದರೊಳವಳಯದೊಳಗಿರ್ಪ ಜಲದುಗ್ಧ ||
ಪಕ್ಷದಿಂ ದಧಿ ಸರ್ಪಿ ಮಧುವಾ
ವಿಕ್ಷು ಲವಣ ಸಮುದ್ರವೇಳು ಪ
ರೀಕ್ಷಿಸಲ್ಕವರವರ ಯೆಡೆ ದಿಟ್ಟುಗಳವೇ ದ್ವೀಪಂ || ೨೨ ||

ಬಳಸಿ ರಾಜಿಪ ಕನಕಧಾರುಣಿ
ಯೊಳವಳಯದೊಳ್ಸ್ವಾದು ಜಲನಿಧಿ
ಯೆಳಸಿ ತೋರ್ಕುಂ ಮತ್ತೆಯಾ ಸಾಗರಕೆ ಪುಷ್ಕರವು ||
ಬಳಿದವೇ ಚೌಷಷ್ಠಿ ಲಕ್ಷದ
ಮಿಳಿತ ಯೋಜನದಿಂದೆ ಮೆರೆಗುಂ
ತಿಳಿವುದಾ ದ್ವೀಪಕ್ಕೆ ಸತತಂ ಸವನನೆಂಬರಸು || ೨೩ ||

ಹರನ ಘನ ಸೋಮೇಶ್ವರನಾ ಪು
ಷ್ಕರದ ಒಳವಳಯದೊಳು ತೋರ್ಕುಂ
ನಿರುತದಿಂ ಕ್ಷೀರಾಬ್ಧಿಯದರೊಳವಳಯದೊಳು ಶಾಕಂ ||
ಹರವರಿಯ ಯೋಜನವೆ ಮೂವ
ತ್ತೆರಡು ಲಕ್ಷಂ ಕೆಂಪು ಭವ್ಯನೆ
ಯರಸು ವಿಶ್ವೇಶ್ವರನದರ ವಳವಳಯದೊಳು ದಧಿಯು || ೨೪ ||

ಶರಧಿಯದರೊಳವಳಯದೊಳು
ಧುರದ ಕ್ರೌಂಚದ್ವೀಪ ಷೋಡಶ
ನಿರುತ ಲಕ್ಷದ ಯೋಜನದಿ ತೋರ್ಕುಂ ಕಪಿಲವರ್ಣಂ ||
ಅರಸನೇ ದ್ಯುತಿಮಂತನಲ್ಲಿಗೆ
ಪುರಜನದ ಪೂಜೆಯನೆ ಕೈಕೊಂ
ಬುರುತರದ ಘನಶಿವನೆಯುನಿಶಂ ಸ್ಥಾಣು ಬಳಿಕಿನ್ನು || ೨೫ ||

ಅದರ ಒಳವಳಯದೊಳು [ಘನ]ತು
ಪ್ಪದ ಸಮುದ್ರಂ ದ್ವೀಪವೇ ಕುಶ
ವದು ವಿರಾಜಿಪುದೆಂಟು ಲಕ್ಷದ ಯೋಜನದ ಹರಹಿಂ ||
ಅದರ ವರ್ಣಂ ನೀಲಮಧಿಪತಿ
ಯದಕೆ ಕೇಳ್ಜ್ಯೋತಿಷ್ಕನೆನಿಪಂ
ಮದನಹರ ಪೂಜೆಯನೆ ಕೊಂಬಂ ರುದ್ರನಾಮದೊಳು || ೨೬ ||

ಅದರ ಒಳವಳಯದೊಳು ಮೇದಕ
ದುದಧಿ ಶಾಲ್ಮಲಿ ನಾಲ್ಕುನೆರೆ ಲ
ಕ್ಷದ ಮಹಾಯೋಜನದಿ ಮೆರೆಗುಂ ವರ್ಣವೇ ಶ್ವೇತಂ ||
ಮುದದೊಳಾ ದ್ವೀಪಕ್ಕೆ ದೈವಂ
ಸದಮಲದ ಭೀಮೇಶನರಸಂ
ಪದುಳದಿಂದವೆಯಗ್ನಿ ಬಾಹುವೆನಿಪ್ಪನನವರತಂ || ೨೭ ||

ಅದರ ಒಳವಳಯದೊಳಗಿರ್ಕುಂ
ಪದುಳದಿಂದವೆಯಿಕ್ಷು ಜಲನಿಧಿ
ಯದಕೆ ಪ್ಲಕ್ಷದ್ವೀಪವದರ ವಿಶಾಲವಂತೆರಡು ||
ವಿದಿತ ಲಕ್ಷದ ಯೋಜನಂ ರ
ಕ್ತದೊಲು ತೋರ್ಪಂ ರಾಜನಲ್ಲಿಗೆ
ಸದಮಲದ ಮೇದಾತಿ(?) ಹರನೇ ಪೂಜೆಯಂಕೊಂಬಂ || ೨೮ ||

ಅದರ ಒಳವಳಯದೊಳು ತೋರ್ಕುಂ
ಪದುಳದಿಂ ಲವಣಾಂಬುನಿಧಿ ಲ
ಕ್ಷದ ಮಹಾಯೋಜನದಿ ಜಂಬೂದ್ವೀಪವಂತದರ ||
ವಿದಿತವರ್ಣಂ ಚಿತ್ರನಧಿಪಂ
ಚದುರನೇಯಗ್ನೀಂದ್ರನಲ್ಲಿಗೆ
ಮದನಹರನೇ ಪಲವು ನಾಮದಿ ಪೂಜೆಯಂ ಕೊಂಬಂ || ೨೯ ||

ಶರಧಿಯೊಳೀ ಪರಿಯೊಳಂ ಬಂ
ಧುರದೆ ರಾಜಿಸೆ ಸುಪ್ರಿಯವ್ರತ
ನರರೆ ಕೊಟ್ಟಂ ತನ್ನ ಸುತರೇಳಕ್ಕೆ ಕೇಳೇಳು ||
ಸ್ಥಿರದ ಜಲಧಿಗಳಂ ಕಡೆಯ ಭಾ
ಸುರದ ಲವಣ ಸಮುದ್ರದಧಿಪತಿ
ಯರಿದೆನಿಪ್ಪಗ್ನೀಂದ್ರಗೊಗೆದಂ ವೃಷಭನೆಂಬಾತಂ || ೩೦ ||

ವರ ವೃಷಭಗಂ ಪುಟ್ಟಿದಂ ಬಂ
ಧುರದೊಳಂದೌತ್ತಾನಪಾದಂ
ಹರುಷದಿಂ ಜನಿಸಿದನವಂಗಂ ಮಕ್ಕಳೊಂಬತ್ತು ||
ಧರೆಯೊಳುದಿಸಿದರವರ ನಾಮಂ
ಭರತ ಕಿಂಪುರುಷಂ ಬಳಿಕ್ಕಂ
ಹರಿ ಯಿಳಾವೃತ ರಮ್ಯಕಂ ಮತ್ತಂ ಹಿರಣ್ಮಯನು || ೩೧ ||

ಕುರು ಬಳಿಕ ಭದ್ರಾಶ್ವಕೇತು
ಸ್ಥಿರದ ಮಾಲ್ಯಾದಿಗಳು ಸಲೆ ಬಂ
ಧುರದೊಳಿಂತೊಂಬತ್ತು ಮಕ್ಕಳು ಪುಟ್ಟಲಂತವರ್ಗೆ ||
ಪರಮಋಷಿಯೌತ್ತಾನಪಾದಂ
ಹರುಷದಿಂದಂ ಒಂದು ಲಕ್ಷದ
ಸರಸಿ ಜಂಬೂದ್ವೀಪಮಂ ನವ ಭಾಗೆಯಂ ಮಾಡಿ || ೩೨ ||

ಹೇಮದ ಶಿಲೋಚ್ಚಯಮುಮ್ ಭರತನ
ಕ್ಷಮೆಗೆ ನೆಟ್ಟಂ ಹೇಮಶಿಖರಿಯ
ಸಮಮು ಕಿಂಪುರುಷನ ಧರೆಗೆ ಕುರುಪಾಗಿ ನಿಲಿಸಿದನು ||
ಕ್ರಮದೆ ನೈಷಧಮಂ ಹರಿಯ ರಸೆ
ಗಮಿತನಾಗಿ ಸ್ಥಾಪಿಸಿದನಂ
ತಮಲನೀಲಾದ್ರಿಯನಿಳಾವೃತನವನಿಗಂ ನೆಟ್ಟಂ || ೩೩ ||

ಶ್ವೇತ ನಗಮಂ ರಮ್ಯಕನ ಧರೆ
ಗಾಂತು ನಿಲಿಸಿದನದುವೆ ಶೃಂಗ
ಖ್ಯಾತ ಗಿರಿಯಂ ವರಹಿರಣ್ಮಯನವನಿಗಿರಿಸಿದನು ||
ರೀತಿಯಿಂದಂ ಮಾಲ್ಯನವನಿಗೆ
ಪ್ರೀತಿ ನಗಮಂ ಕುರುರಸೆಗೆ ಸಲೆ
ಸಾತಿಶಯದಿಂ ನಟ್ಟನಂದೌತ್ತಾನಪಾದ ಋಷಿ || ೩೪ ||

ಗಂಧಮಾಧನವೆಂಬ ನಗಮಂ
ಬಂಧುರದೆ ಭದ್ರಾಶ್ವನವನಿಗೆ
ಬಂಧಿಸಿದವಷ್ಟಾದ್ರಿಯಾದವು ಲಕ್ಷಯೋಜನದ ||
ಸಿಂಧುವಂ ತನುಜರಿಗೆ ಹಂಚಿದ
ನಂಧಕಾರಿಯ ದಯದೆ ಮಕ್ಕಳ
ಬಂಧುತನ ಕೆಡದಂತೆ ಮೇರೆಯ ಖಂಡಗಳನೊರೆವಂ || ೨೫ ||

ಬಳಸಿದ ಬ್ರಹ್ಮಾಂಡದೊಡಿನ
ಒಳವಳಯದೊಳು ವೃತ್ತವಾಗಿಯೆ
ಬಳಿಕ ಗರ್ಭೋದಕ ಸಮುದ್ರಂ ಬಟ್ಟಿತಾಗಿರ್ಕುಂ ||
ಬಳಿಕಲಂತದರೊಳವಳಯದೊಳು
ಬಳಿಕ ಲೋಕಾಲೋಕಶೈಲಂ
ಬಳಸಿ ರಾಜಿಸುತಿರ್ಪುದದರೊಳವಳಯದೊಳು ಬಳಸಿ || ೨೬ ||

ಕನಕಭೂಮಿ ಸ್ವಾದುಹಯದಧಿ
ವಿನುತ ಸರ್ಪಿ ಸುರೇಕ್ಷು ಲವಣದ
ವನಧಿಗಳು ವೃತ್ತಂಗಳಾಗಿರ್ಪವು ನಡುವೆ ತೋರ್ಪ ||
ಘನಸಮುದ್ರದ ನಡುವೆ ರಂಜಿಸಿ
ಮಿನುಪ ಮೇರುವೆ ಮೇಟಿಯಂಬಂ
ತನಘಮೊಪ್ಪುವುದಾ ಸುರಾದ್ರಿಗೆ ದಕ್ಷಿಣಾಸೆಯೊಳು || ೨೭ ||

ಹರುಷದಿಂ ಲವಣಾಂಬುನಿಧಿ ಬಂ
ಧುರದೆ ತೋರ್ಕುಂ ಮತ್ತೆಯಂತಾ
ಶರಧಿಯಿಂದಂದುತ್ತರಾಶೆಯೊಳಂ ನವಸಹಸ್ರ ||
ಸ್ಥಿರದ ಯೋಜನದಲ್ಲಿ ಹಿಮಗಿರಿ
ಯರರೆಯಂತಾ ಶೈಲ ಪೂರ್ವಾ
ಪರ ಸಮುದ್ರಂಗಳನೆ ಮುಟ್ಟೆಹುದದು ಭರತಖಂಡಂ || ೨೮ ||

ಏರಿಸಿದ ಘನ ಚಾಪದಂದದೆ
ತೋರುತಿರ್ಪುದು ಭರತ ಖಂಡದೊ
ಳಾಱುದರ್ಶನವಕಟವನ್ಯಾಯಂ ಪಲವು ದೈವಂ ||
ಮೀರಿದನೃತಾದ್ಯಖಿಳ ದೋಷಂ
ಗಾರುಬುದ್ಧಿಯ ಮಾನವರೊಳಿರೆ
ನೂರುವರುಷಾಯುಷ್ಯವಾಯಿತ್ತಲ್ಪದಿಂದವರ್ಗೆ || ೨೯ ||

ಅದು ನಿಮಿತ್ತಂ ಕಲಿಯ ಬಲಮುಂ
ಪುದಿಯದೇ ಧರ್ಮಂಗಳಂ ಸಲೆ
ಸದಮಲದೆ ಮಾಡುವುದು ಬುದ್ಧಿಯನುಳ್ಳ ಮಾನವರು ||
ವಿದಿತದಿಂ ಭಾರತನ ಧರೆಯೊಳ್
ಪದುಳದಿಂ ಮಾಡಿದ ಫಲಂಗಳ
ನೊದವಿಗಿಂದಿಳಿದವನಿಯೊಳು ಭೋಗಿಪರು ನರರುಗಳು || ೪೦ ||

ಮತ್ತೆ ಹಿಮಗಿರಿಯಗಲ ಸಾಸಿರ
[ದು]ತ್ತಮನೆ ಯಿಂಮಡಿಯದುದ್ದಂ
ಸುತ್ತಲುಂ ನೋಡಲ್ಕೆ ಯೋಜನವದರ ತುದಿಯಲ್ಲಿ ||
ಚಿತ್ತಜಾರಿಯೆ ಪಾರ್ವತೀಶನೆ
ನುತ್ತ ಯಜಿಪರು ಸುರರುವಾ ನಗ
ದತ್ತಣದಿಂದಂ ಪುಟ್ಟೆ ಭಾಗೀರಥಿಯೆನಿಪ ಗಂಗೆ || ೪೧ ||

ಯಮುನ ದೆಸೆಯಿಂ ಪರಿದು ಜಲಧಿಯ
ನಮಿತದಿಂ ಕೂಡಿತ್ತು ಮತ್ತಾ
ಕ್ರಮದೊಳಾ ನದಿ ಲೋಕಪಾವನೆಯಾಗಿ ಗೌತಮಿಯು ||
ವಿಮಲದಿಂದೊಗೆಯಿತ್ತು ತ್ರ್ಯಂಬಕ
ದಮಲಗಿರಿಯೊಳ್ಕೃಷ್ಣವೇಣಿಯು
ಸುಮನದಿಂ ಪುಟ್ಟಿತ್ತು ಬಳಿಕಂ ಸೌಮ್ಯಗಿರಿಯಲ್ಲಿ || ೪೨ ||

ವೇದಪರ್ವತದಿಂದೆಯೊಗೆದವು
ಸಾದರದೊಳಂ ತುಂಗಭದ್ರೆಗಳಾ
ದುದಾ ನೀಲಾದ್ರಿಯಿಂದಂ ವಿಮಲ ಕಾವೇರಿ ||
ಆದಿ ನದಿ ನದ ನಗದ ನಿವಹಂ
ಭೇದಿಸಲ್ಬಲ್ಲಾತನಾವಂ ಮೋ
ದದಿಂ ಶಿವಗಂಗೆಯಾದಿ ಕ್ಷೇತ್ರಮುಂಟಲ್ಲಿ || ೪೩ ||

ಆ ಹಿಮಾದ್ರಿಗೆಯುತ್ತರಾಶೆಯೊ
ಳಾಹ ಕಿಂಪುರುಷನ ವರುಷ ಸ
ನ್ಮೋಹದಿಂದಂ ಪಟ್ಟೆಯಂತೆರಡುದಧಿಯಂ ಕೂಡಿ ||
ಸ್ನೇಹದಿಂದೊಂಬತ್ತು ಸಾವಿರ
ಬೇಹ ಗಾವುದವಾಗಿ ತೋರ್ಕುಂ
ಸಾಹಸದಿಯಾ ನೆಲದ ವರ್ಣಂ ಪೀತವಲ್ಲಿರ್ದ || ೪೪ ||

ನರರು ಹೇಮಾಂಗಿಗಳು ದಶಶತ
ವರುಷದಾಯುವನುಳ್ಳವರು ಬಂ
ಧುರದೊಳತ್ತಿಯ ಹಣ್ಣಿಯಶನಮದಾಗಿ ಯಿರ್ಪವರು ||
ಇರುತಿರಲ್ಕಾ ಭೂಮಿಗಂ ಸು
ಸ್ಥಿರದಿ ನಿಲಿಸಿದ ಹೇಮಶಿಖರಿಯು
ಹರಹೆಯ್ಸೆ ನೂರ್ಗಾವುದಂತದರುದ್ದವೆರಡು ಮಡಿ || ೪೫ ||

ಆ ಗಿರಿಯ ತುದಿಯಲ್ಲಿ ಸುರರನು
ವಾಗಿ ಯೀಶನ ಭಜಿಸುತಿರ್ಪರು
ರಾಗದಿಂದವರುತ್ತರಾಸೆಯೊಳೆಸೆವ ಹರಿಧರೆಯಾ ||
ಭಾಗೆ ನವಸಾಹಸ್ರಯೋಜನ
ವಾಗಿ ತೋರ್ಕುಂ ರಜತವರ್ಣದೆ
ಬೇಗದಿಂ ರಂಜಿಪರುವಲ್ಲಿಯ ನರರು ಸಂತಸದಿ || ೪೬ ||

ಇಕ್ಷುರಸದುರುಪಾನ ವರ್ಗಂ
ತಕ್ಷಯದ ನಿಜದಾಯುವನಿಶಂ
ತ್ರ್ಯಕ್ಷನಿಂ ಸಾಹಸ್ರ ವರುಷವದಾಗೆ ಭಜಿಸುವರು ||
ಅಕ್ಷಯದೊಳೀಶಾನನಂ ಶಿವ
ಪಕ್ಷನೇಯುತ್ತರಕೆ ನಿಷಧವ
ದೀಕ್ಷಿಸಲ್ಖಾಂಡಂಗಳೆರಡಾದವು ನಗಂ ಮೂರು || ೪೭ ||

ಆ ಮಹಾನಿಷಧಕ್ಕೆ ಬಡಗ
ಲ್ರ್ಪೇಮದಿಂದೆಯಿಳಾವೃತನ ವರ
ಭೂಮಿಯೊಪ್ಪುವುದಲ್ಲಿ ರಾಜಿಪ ವಿಟಪಿ ಮೊದಲಾದ ||
ರಾಮಣೀಯಕದಿಂದವೆಲ್ಲಂ
ಹೇಮವರ್ಣದಿ ತೋರ್ಕುಮನಿಶಂ
ಕೋಮಲದ ಸುರಶೈಲದವನಿಯ ಬಣ್ಣಿಸುವನಾವಂ || ೪೮ ||

ಬಳಿಕ ಕೇಳ್ವದಿನಾರು ಸಾವಿರ
ವಿಳೆಯೊಳಾಗಂ ನದಿಗೆ ಮೇರುಗೆ
[ಬಳಿಕಲಾ]ಯೊಂಬತ್ತು ಸಾವಿರ ಗಾವುದಂ ಮತ್ತೆ ||
ತಿಳಿಯೆ ಮೂಡಲ್ಮಾಲ್ಯವಾನ್ನಗ
ವೆಳಸಿ ತೋರ್ಪುದು ತೆಂಕಣಾಸೆಯೊ
ಳಳಿಕ ಲೋಚನನಾಜ್ಞೆಯಿಂದಂ ನಿಷಧಗಿರಿ ಮೆರೆಗುಂ || ೪೯ ||

ವರುಣನೊಳು ಸಲೆ ಗಂಧಮಾಧನ
ವರರೆ ಬಡಗಲು ನೀಲ ಶೈಲಂ
ಭರದೆ ಜಾಗಂ ತಪ್ಪದಂದದೆ ನಾಲ್ಕುಗಿರಿಯಲ್ಲಿ ||
ಇರದಿಳಾವೃತನವನಿಯೊಳು ಬಂ
ಧುರದೆ ರಾಜಿಸೆ ಕನಕ ಗೋತ್ರದ
ನರರು ಹೇಮಾಂಗಿಗಳು ಜಂಬೂನವ ಫಲಾಶನದಿಂ || ೫೦ ||

ಹರುಷದಿಂ ಹದಿಮೂರು ಸಾವಿರ
ದುರು ವರುಷದಾಯುಷ್ಯದಿಂದಂ
ನರರು ಜೀವಿಪರಂದಿಳಾವೃತದವನಿಗುತ್ತರದಾ ||
ಹರಿದಿನೊಳು ನೀಲಾದ್ರಿಯಗಲಂ
ಪರಿಕಿಸಲ್ಕದು ಹತ್ತು ಸಾವಿರ
ವರರೆಯಾ ಗಿರಿಯುದ್ದ ಸಾವಿರ ಗಾವುದಂ ಬಳಿಕ || ೫೧ ||

ಮೂಡ ಪಡುವಣ ಶರಧಿಯವಧಿಗ
ಳಾಡಲೇಂ ರಮ್ಯಕನ ಖಂಡವ
ಕೂಡಿ ನವಸಾಹಸ್ರ ಯೋಜನವಾ ಧರಣಿ ನೀಲಂ ||
ರೂಢಿಸಿದ ವಟಫಲದಶನದಿಂ
ನಾಡೆ ದಶ ಸಾಹಸ್ರ ವರುಷದ
ಗಾಡಿಯಾಯುವಿನಿಂದೆ ಭಜಿಪರು ಕಾಲಮರ್ದನನಾ || ೫೨ ||

ಬಡಗಲಾ ಶ್ವೇತಾದ್ರಿಯಾ ಗಿರಿ
ಯೊಡನೆ ಸಾವಿರದುದ್ದವಗಲಂ
ಬಿಡದೆ ಸುರರರ್ಚಿಪರು ಮಾಹೇಶ್ವರನ ಪದಯುಗಮಂ ||
ಸಡಗರದೆಯದರುತ್ತರಾಸೆಯೊ
ಳುಡುಗದಿಂತು ಹಿರಣ್ಮಯಾಖ್ಯನ
ಪೊಡವಿ ನವ ಸಾಹಸ್ರಯೋಜನ ಕಿತ್ತಳೆಯ ಹಣ್ಣಂ || ೫೩ ||

ಮೆಲಿದವರ್ಶ್ವೇತಾಂಗರಾಗಿಯೆ
ನಲಿದು ದಶಸಾಹಸ್ರ ವರುಷದ
ಸುಲಭದಾಯುಗಳಿಂದಮಿರ್ಪರುವದಕೆ ಬಡಗಲೊಳು ||
ಸುಲಲಿತದ ಶೃಂಗಾದ್ರಿಯುಪರಗ
ಲಲಘುನೀಳಂ ಸಾವಿರಂ ಮಂ
ಜುಲದಿ ರುದ್ರುನನಮರರರ್ಚಿಪರಲ್ಲಿಯನವರತಂ || ೫೪ ||

ಪರಿಕಿಸಲ್ಕದರುತ್ತರದೊಳಂ ಕುರು
ಧರಣಿಯೊಂಬತ್ತು ಸಾವಿರ
ತರದ ಯೋಜನದಿ[ಂದ] ಮೆರೆಗುಂ ಬಳಿಕ ಕದ್ವಾಳ ॥
ವರ ಕುಸುಮದಂತದರ ವರ್ಣಂ
ಭರತ ಖಂಡದ ತೆರದಿ ಬಿಲ್ಲಂ
ತರರೆ ಲವಣ ಸಮುದ್ರವೇಯದಕಾಗಿಯಾಗಿರ್ಕುಂ ॥ ೫೫ ॥

ಆಯತದೆ ಹದಿಮೂರು ಸಾವಿರ
ದಾಯುವಲ್ಲಿಯ ತರುಗಳಿಂದಂ
ಧೀಯುತನೆ ಕಾಮಿತ ಫಲಂಗಳ ಪಡೆವರನವರತಂ ॥
ನ್ಯಾಯದಿಂ ರುದ್ರನನೆ ಪೂಜಿಪ
ರೋಯರದೆ ಯಾಲವಣ ಶರಧಿಯ
ದಾಯದುತ್ತರ ಭೂಮಿಯೆಡೆಯೊಳ್ದ್ವೀಪವೆರಡುಂಟು ॥ ೫೬ ॥

ಅರರೆ ಚಂದ್ರದ್ವೀಪ ಭದ್ರಾ
ಕರವೆನಿಪ್ಪಾ ದ್ವೀಪವೆರಡವ
ರಿರವದೆಂತೆನೆ ಕೇಳು ಮೊದಲ ದ್ವೀಪವೇ ಚಂದ್ರ ॥
ಸರಸದಾಕಾರದೊಳು ತೋರ್ಕುಂ
ಪಿರಿಯ ಕನ್ನೆಯ್ದಿಲ ಕುಸುಮದಂ
ತುರುತರದ ಭದ್ರಾಕರ ದ್ವೀಪಂ ಮೆರೆವುದಲ್ಲಿ ॥ ೫೭ ॥

ಆ ಮಹಾದ್ವೀಪದ ನರರು ಸು
ಪ್ರೇಮದಿಂದಂದಿಕ್ಷು ಪಾನದೆ
ರಾಮಣೀಯಕವಾಗಿ ಹದಿಮೂಱ್ಸಾವಿರಂ ವರುಷ ॥
ಭೂಮಿಯೊಳು ರಮಿಸುತ್ತೆ ರುದ್ರ
ಸ್ವಾಮಿಯಂ ಪೂಜಿಪರು ತನುವುಂ
ಸೋಮನಂಗದ ಕಾಂತಿಯಂತೆ ವಿರಾಜಿಸಲು ಬಳಿಕ ॥ ೫೮ ॥

ಭರತದಿಂ ಕುರುವರುಷ ಪರಿಯಂ
ತರದೊಳಂ ಪೇಳಿದೆವಿಳಾವೃತ
ನುರು ಧರೆಯೊಳಿರ್ಪಮರನಗದಭಿವರ್ಣನೆಯನುಸುರ್ವೆಂ ॥
ತ್ವರಿತದಿಂದಾ ರಸೆಗೆ ಮೂಡಲೊ
ಳರರೆ ಘನತರ ಮಾಲ್ಯವಾನ್ನಗ
ವಿರದೆ ದಶಸಾಹಸ್ರಯೋಜನದುದ್ದದಿಂ ಬಳಿಕ ॥ ೫೯ ॥

ಎರಡು ಸಾವಿರದಟ್ಟದಿಂದೀ
ಪರಿಯ ತೆಂಕಣ ದೆಸೆಯೊಳೊಪ್ಪುವ
ಪರಮನಿಷಧಾದ್ರಿಯನೆ ಮುಟ್ಟೆ ಬಳಿಕ್ಕ ಬಡಗಲೊಳು ||
ಇರುತಮಿರ್ಪಾ ನೀಲಗಿರಿಯಂ
ತ್ವರಿತದಿಂದಂ ಸೋಂಕಿ ತೋರ್ಪುದು
ನಿರುತದಿಂದೊಪ್ಪುವುದು ಸಲೆ ಮೂವತ್ತುನಾಲ್ಕು ತವೆ || ೬೦ ||

ಸಾವಿರದ ಯೋಜನದೊಳಿರ್ಪುದು
ಭಾವಿಸಲ್ಕದರಗ್ರದಲ್ಲಿಯೆ
ದೇವದೇವನ ಭಜಿಪರಾ ತವೆ ಮೂಡಲಳವಟ್ಟಾ ||
ತೀವಿ ಸಲೆ ಮೂವತ್ತ ಮೂರ್ಶರ್ೋ
ಭಾವಹದ ಸಾಹಸ್ರದುರುಧರೆ
ಜೀವನಿಧಿಯವನಿಯೊಳು ತೋರ್ಪುದು ಬಳಿಕ ಭದ್ರಾಶ್ವಂ || ೬೧ ||

ಅರಸು ಚಂದ್ರಾತಪದ ಕಾಂತಿಯ
ನರರು ಸೋಮಾತಪವನೇಳಿಪ
ರರರೆ ಶಿವನಂ ವರ ಮಹಾಘನದೇವನೆಂದಲ್ಲೀ ||
ನಿರುತದಿಂದಂ ಹತ್ತು ಸಾವಿರ
ವರುಷದಾಯುಷ್ಯದೊಳು ಮತ್ತಂ
ಚರಿಪರಾ ಕನ್ನೈದಿಲಶನದಿ ಬಳಿಕ ಸುರಗಿರಿಗೆ || ೬೨ ||

ವರುಣನೊಳಗಂ ಗಂಧಮಾದನ
ಗಿರಿ ಕುಬೇರಗೆ ದಕ್ಷಿಣಕೆ ಬಂ
ಧುರದೆ ನೀಲನಗಾವಧಿಯು ನಿಷಧಾದ್ರಿಯವು ನೋಡೆ ||
ಪರಿಕಿಸಲ್ಮೂವತ್ತು ನಾಲ್ಕುಂ
ಸ್ಥಿರದ ಸಾವಿರದಿಂದೆ ರಾಜಿಪು
ದರರೆಯಾ ತುದಿಯಲ್ಲಿಯುಗ್ರನನಂತು ಭಜಿಸುವರು || ೬೩ ||

ಬಳಿಕಲಾ ಪಶ್ಚಿಮದ ದಿಕ್ಕಿನ
ವಿಳಸಿತದ ಘನ ಕೇತುಮಾಲ್ಯನ
ಇಳೆಯ ಪಡುವಣ ಶರಧಿಗಡಿ ಮೂವತ್ತೆಮೂರು ನಿಜ ||
ದಳೆದ ಸಾವಿರಗಾವುದಂ ಸಲೆ
ತಿಳಿಯಲಲ್ಲಿಯೆ ಕುಮುದದಂದದೆ
ಬೆಳಗನುಳ್ಳವರೂಟವೇ ಹಲಸಿನ ಫಲಂ ಮತ್ತೆ || ೬೪ ||

ಹರುಷದಿಂ ಪರಮಾಯು ಸಾವಿರ
ವರುಷವೈ ನಾಂ ಪೇಳ್ವೆ ಮುಂದಿ
ನ್ನುರುತರದ ಕುಲಪರ್ವತಂಗಳ ವೃಂದಮಂ ಕೇಳು ||
ನಿರುತದಿಂ ಭದ್ರಾಶ್ವದೊಳು ಬಂ
ಧುರದೆ ತೋರ್ಪವು ದೇವಕೂಟಂ
ಪರಿಕಿಸಲ್ಜಠರಾದ್ರಿಯಿಪ್ಪತ್ತೈದು ಸಾವಿರದ || ೬೫ ||

ಅಗಲನಂತದರುದ್ದ ಸಾವಿರ
ವಗಣಿತದ ಸೂರ್ಯ ಪ್ರಕಾಶದ
ಸುಗುಣಿಗಳು ಪೂಜಿಪರುಮಲ್ಲಿ ತ್ರಿಣಯನಂ ಬಳಿಕ ||
ಮಿಗಿಲೆನಿಪ್ಪೈದೈದು ಸಾವಿರ
ದೊಗುಮಿಗೆಯ ಹರಿವರುಷದೊಳು ಸಿತ
ನಗ ವಿರಾಜಿಪುದದರ ವಿಶಾಲವೆಂತೆನಲೂ (?) || ೬೬ ||

ಅರು ಸಾವಿರದುದ್ದದಿಂದಂ
ಮೂರು ಸಾವಿರದಗಲದಿಂ ಹದಿ
ನಾರು ಸಾವಿರ ಹೆರಹಿನಿಂ ರಜತಾದ್ರಿಯೊಪ್ಪುವುದು ||
ತೋರುತಿರ್ಪಾ ಗಿರಿಯೊಳಂ ಸಲೆ
ಮೂರು ನಯನದ ಶರ್ವನಂ ನಲ
ವೇರಿ ಸುರರರ್ಚಿಪರು ಮುದದಿಂದೀಶ್ವರನ ಮತ್ತಂ || ೬೭ ||

ಕೇತುಮಾಲ್ಯದ ಪಂಚವಿಂಶತಿ
ಸಾತಿಶಯ ಸಾಹಸ್ರ ಘನ ವಿ
ಖ್ಯಾತ ಯೋಜನದಲ್ಲಿ ತೋರ್ಕುಂ ಪಾರಿಯಾತ್ರನಗಂ ||
ಪೂತುರೇಯದರಗಲವನಿಶಂ
ಪ್ರೀತಿಯಿಂದಂ ಮೂರು ಸಾವಿರ
ವೀ ತೆರದೊಳದರುದ್ದವಿಮ್ಮಡಿ ಪಚ್ಚೆಯಂತಿರ್ಕುಂ || ೬೮ ||

ಆ ತುದಿಯೊಳೀಶ್ವರನ ಭಜಿಪರು
ಪೂತ ನಿರ್ಜರರಲ್ಲಿ ಮತ್ತಂ
ಪ್ರೀತಿಯಿಂ ರಮ್ಯಕದೊಳಿಪ್ಪತ್ತೈದು ಸಾಹಸ್ರ ||
ಸಾತಿಶಯ ಯೋಜನದೊಳು ಸುವಿ
ಖ್ಯಾತವೆನಿಪಾ ಶೃಂಗವರುಣವು
ರೀತಿಯಿಂ ಮೂರ್ಸಾಸಿರಗಲನದಿಮ್ಮಡಿಯ ಉದ್ದಂ || ೬೯ ||

ಆ ಗಿರಿಯೊಳಂ ಕುಂಕುಮದ ಘನ
ರಾಗದ ವರಭವನನೆ ತಾವನು
ವಾಗಿ ಭಜಿಪರಿಳಾವೃತನ [ನಗ] ಮೂಡಣ[ದ] ದೆಸೆಯ ॥
ಭಾಗೆಯೊಳು ವಸು ಮಂದರಾದ್ರಿ ಸು
ರಾಗದಿಂದಂ ತೋರುತಿರ್ಪುದು
ಬೇಗದಿಂದಂ ನಾಲ್ಕುವರೆ ಸಾವಿರದ ಸೀಮೆಯಲಿ ॥ ೭೦ ॥

ಮೂಱು ಸಾವಿರದಗಲದಿಂದೀ
ರಾಱು ಸಾವಿರದುದ್ದದಿಂದಂ
ತೋಱು ತಿರ್ಪಾ ಗಿರಿಯ ತುದಿಯೊಳಗಿರದೆ ಸಲೆ ಬೇರು ॥
ಪೂಱು ಬೆಳೆದುದು ಕಡವನೆಂಬತಿ
ನೀಱ್ಮರನೆಯಂಕಿತದ ವೃಕ್ಷಂ
ಮಿಾಱದಿರ್ಪುದು ಸಾವಿರದ ಯೋಜನದ ಹರಹಿಂದಂ ॥ ೭೧ ॥

ಚೈತ್ರರಥವನದೊಂದು ದಶಶತ
ಚಿತ್ರಯೋಜನದಿಂದೆ ತೋರ್ಕುಂ
ಪುತ್ರನೇಯದರೊತ್ತಿನೊಳು ವರುಣೋದಕದ ಸರಸಿ ॥
ಧಾತ್ರಿಯೊಳಗೈನೂರು ಗಾವುದ
ವಾ ತ್ರಿದಶರಲ್ಲಿರ್ದು ಭಜಿಪರು
ಗೋತ್ರಜೆಯೊಳಂ ಕ್ರೀಡಿಸುವ ತತ್ಪುರುಷ ಮೂರ್ತಿಯನು ॥ ೭೨ ॥

ಸುರ ನಗಕೆ ದಕ್ಷಿಣದ ಭಾಗದ
ಧರೆಯೊಳುಂ ನಿಷ್ಕಂಭ ಗಿರಿ ಬಂ
ಧುರದೆ ಮೆರೆವುದು ನಾಲ್ಕುವರೆ ಸಾವಿರದ ಯೋಜನದಿಂ ॥
ಗಿರಿಯ ಹರಹೇ ಮೂರು ಸಾ
ವಿರವಿರದೆ ನಾಲ್ಕಡಿಯುದ್ದವಾ ಸು
ಸ್ಥಿರದ ಶೈಲದ ತುದಿಯೊಳಿಪ್ಪುದು ನೇರಿಲೊಂದಲ್ಲಿ ॥ ೭೩ ॥

ಒಂದು ಸಾವಿರ ಯೋಜನದ ಪವ
ಣಿಂದೆಯುದ್ದಂ ಹರಹು ತೋರ್ಕುಂ
ಮುಂದೆ ಮದಗಜದಂತೆ ನೇರಿಲ ಹಣ್ಣುಗಳು ಬಿದ್ದು ॥
ಚಂದದಿಂದೊಡೆಯಲ್ಕೆ ರಸ ಪರಿ
ತಂದು ಪಡುವಣ ದಿಕ್ಕನೈದ
5 ಲ್ಕಂದದಿಲ್ಲದೆ ಚಾರು ಜಂಬೂವರನದಾಹ್ವಯದೆ ॥ ೭೪ ॥

ಎಸೆದುದದರಿಂ ಬಾಲಕನೆ ಸಂ
ತಸದೆ ಜಂಬೂದ್ವೀಪವಾಯಿ
ತ್ತೊಸಗೆಯಿಂದಂ ಭದ್ರೆಯೆನಿಸುವ ನದಿಯೊಳರ್ಚಿಪರು ||
ಒಸೆದಘೋರೇಶ್ವರನ ಮೂರ್ತಿಯು
ಸೆಸಿನೆ ನಿರ್ಜರರಲ್ಲಿ ತೋರ್ಪುದು
ಮಿಸುಪ ಸನ್ನುತ ಗಂಧಮಾದನವೆಂಬ ವನವನಿಶಂ || ೭೫ ||

ನಿರುತದಿಂ ಸಾಹಸ್ರಯೋಜನ
ದುರು ಹರಹಿನಿಂದಿರ್ಪುದದರೊಳು
ಸರಸಿಯೈನೂರ್ಗಾವುದಂ ಬಳಿಕಿಂತುವದರೊಳಗೆ ||
ಹರುಷದಿಂದಂ ಬಿಳಿಯ ತಾ
ಪರೆಯಿರೆಯಘೋರೇಶ್ವರನ ಪೂಜಿ
ಪರರಿದೆನಲು ಘನ ವೀರಭದ್ರಾದಿಗಳು ಸಂತಸದೆ || ೭೬ ||

ಮೇರುವಿನ ಪಶ್ಚಿಮದ ದಿಕ್ಕಿನ
ಧಾರುಣಿಯೊಳಂ ನಾಲ್ಕುವರೆ ಗಂ
ಭೀರ ಸಾವಿರಯೋಜನದೆ ನಿಷ್ಕಂಭಗಿರಿ ತೋರ್ಕುಂ ||
ಸೇರಿದಗಲಂ ಮೂರು ಸಾವಿರ
ವಾರಯಲ್ಕದರುದ್ದ ನಾಲ್ಕಡಿ
ಯಾ ರಮಾಕರ ಮಾಗಿಯರ್ಧಂ ಪಿಂಗಳದೊಳಿರ್ಕುಂ || ೭೭ ||

ಸೋಮನಂಗದ ಕಾಂತಿಯಂದದೆ
ರಾಮಣೀಯಕವಾದುದರ್ಧಂ
ಪ್ರೇಮದಿಂದದರಗ್ರದೊಳು ಸಲೆಯುರುಳಿಯೊಂದಿರ್ಕುಂ ||
ಕೋಮಲದೆ ಸಾಹಸ್ರಯೋಜನ
ವಾ ಮಹಿಯೊಳಂ ಸರಸಿ ರಂಜಿಪು
ದೈ ಮುಗನೆಯ್ಯೆನೂರು (?) ಗಾವುದವಾಗಿಯಂತಲ್ಲಿ || ೭೮ ||

ಚಾರು ಸದ್ಯೋಜಾತ ಮೂರ್ತಿಯು
ನಾರಯಲು ವೈಭ್ರಾಜವನದೊಳು
ಹಾರಿ ಸುರರರ್ಚಿಪರು ಮೇರುಗೆ ಬಡಗಣಾಸೆಯೊಳು ||
ಸೇರಿದಾ ಧರೆಯಲ್ಲಿ ತೋರ್ಕುಂ
ಸಾರದಿಂ ವಿಷ್ಕಂಭಶೈಲವ
ನಾರತಂ ಸಲೆ ನಾಲ್ಕುವರೆ ಸಾವಿರದ ಯೋಜನದಿಂ || ೭೯ ||

ಮೂರು ಸಾವಿರದಗಲದಿಂದೀ
ರಾರು ಸಾವಿರದಗಲದಿಂದಂ
ತೋರುವಾ ಗಿರಿಯಲ್ಲಿಯಾಲಂ ಸಾವಿರದ ಹರಹಿಂ ||
ಜಾರದಿರ್ಪದರಲ್ಲಿ ತೋರ್ಕುಂ
ನಿರನೆಸುಮನೆಯುಂ? ಬಳಿಕ ನಲ
ವೇರಿ ನಂದನ ಘನವನಂ ಸಾಹಸ್ರ ಯೋಜನದಿಂ || ೮೦ ||

ಕುಂಕುಮದ ವರ್ಣದೊಳು ಸಲೆ ನಿ
ಶ್ಶಂಕೆಯಿಂದೈನೂರು ಯೋಜನ
ದಂಕಿತದ ಕೊಳದಲ್ಲಿ ಸದ್ಗುರು ವಾಮದೇವನನು ||
ಭೋಂಕನರ್ಚಿಪರಮರರಾಗಂ
ಕಂಕಣಂಗಳು ಸಹಿತ ಸುರಗಿರಿ
ಬಿಂಕದಿಂದೊಪ್ಪುವುದು ನಿಷ್ಕುಂಭಾದ್ರಿಗಳ ನಡುವೆ || ೮೧ ||

ನೇಸರಿನ ಕದಿರಂಗಳಚ್ಚಿಗೆ
ಪೂಶರನ ಬೇಯಿಸಿದ ಮರವೆಯ
ಮೋಸಕೊಳಗಾಗದ ಜನನ ದರ್ಪವನು ಮುರಿದಂಗೆ ||
ಗಾಸೆಯಿಂ ಮರೆಹೊಕ್ಕರನು ಬಿಡ
ದಾ ಸವತಿಯರನೊಂದುಗೂಡುತೆ
ಮೀಸಲಳಿಯದರಾಳೆಸೆವ ಸಿದ್ಧೇಶಗೆರಗುವೆನು || ೮೨ ||

ಇದು ವಿಮಲ ಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರ ||
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣಮ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥಮೊಂದುವುದು || ೮೩ ||

ಅಂತು ಸಂಧಿ ೬ ಕ್ಕಂ ಪದನು ೩೧೩ ಕ್ಕಂ
ಮಂಗಳಂ.

ಏಳನೆಯ ಸಂಧಿ

ಧಾರುಣಿಯ ಮಧ್ಯದಲಿ ತೋರ್ಪತಿ
ಮೇರುವಿನ ವಿಸ್ತಾರಮಂ ಗಂ
ಭೀರ ವಚನದೊಳುಸುರಿದಂ ಸಿದ್ಧೇಶ್ವರಂ ಬಳಿಕಾ॥

ಸಕಲಜನ ನತ ಚರಣನೀರಜ
ಸುಕರ ಶರಣಾನನ ದಿನೇಶನೆ
ಯಕುಟಿಲಾಂಗನೆಯನಘನೇ ಯತಿರಾಜನೇ ಯಶನೆ ॥
ಅಕಲನೇಯತ್ಯಂತ ಸುಗುಣದ
ನಿಕರನೇ ನೀನೆನ್ನ ರಕ್ಷಿಸು
ಚಕಿತನಯನೆಯರಿಷ್ಟದಾತನೆ ಸಿದ್ಧ ದೇಶಿಕನೆ ॥ ೧ ॥

ಜಾಣೆ ನಿಂದೊಪ್ಪುವುದದೆಂತೆನೆ
ರೇಣುವೆಂಟಂ ಕೂಡೆ ರೋಮಂ
ಮಾಣದಾ ನವಿರೆಂಟು ಜವೆಯವು ಬಳಿಕವೆಂಟಾಗೆ ॥
ಕ್ಷೋಣಿಯೊಳು ಬೆರಲಪ್ಪುದಂತಾ
ಕ್ಷೀಣವಿಲ್ಲದೆಯಂಗುಲಂಗಳು
ಗೇಣದಕ್ಕುಂ ದ್ವಾದಶಂಗಳದಾಗೆ ಕೇಳ್ಕುಂದೆ ॥ ೨ ॥

ಎರಡು ಗೇಣುಗಳೊಂದು ಮೊಳನಂ
ತರರೆಯವು ಎರಡಾಗೆ ದಂಡಾ
ಭರದೆಯವು ಎರಡಾಗೆ ಮೂರಪ್ಪುದು ಬಳಿಕ್ಕೆರಡೆ ॥
ಎರಡು ಸಾವಿರವಾಗೆ ಕ್ರೋಶಂ
ನಿರುತದಿಂ ಹರಿಹಾದಿಯಕ್ಕುಂ
ತ್ವರಿತದಿಂದವು ನಾಲ್ಕು ಸಾವಿರವಾಗಲದು ನಲ್ವಂ ॥ ೩ ॥

ಅದರ ಪೆಸರರೆಗಾವುದಂ ಕೇ
ಳ್ಮುದದೊಳಂತವೆ ಯೆಂಟು ಸಾವಿರ
ವಿದಿತ ಮಾರುಗಳೆಂಬವೇ ಯೋಜನವನೀ ತೆರದಿಂ ॥
ಸದಮಲದ ಸುರನಗದ ನಡುವೆಯೆ
ಪದುಳದಿಂ ಹದಿನಾರು ಸಾವಿರ
ವದರ ಘನ ಮೇಲುದ್ದವೆಂತೆನೆ ಕೇಳು ಮುಂದಿನ್ನೂ ॥ ೪ ॥

ಮತ್ತೆ ಕೇಳೆಂಬತ್ತು ನಾಲ್ಕೆನಿ
ಸುತ್ತಮದ ಯೋಜನದಿ ತೋರ್ಕುಂ
ಚಿತ್ರಜಾರಿಯ ನೇಮದಿಂದಂ ನದಿಗೆ ಸಮ ಮೇರು ||
ಉತ್ತರದೊಳೊಂದೊಂದು ಲಕ್ಷವೆ
ನುತ್ತ ಪೇಳ್ವುದು ಕೇಳೆನುತ್ತಂ
ಸತ್ತು ಚಿತ್ತಾನಂದದುರು ಸಿದ್ಧೇಶನುಸುರಿದನು || ೫ ||

ಸುರಪಶಿಖಿಯಮನಿ ರುತಿ ಶರಧೀ
ಶ್ವರ ಮರುತ ಧನದೇಶದೊಳ್ ಬಂ
ಧುರದ ವರ್ಣಂ ಪದ್ಮರಾಗವರುಣ ಮಹಾನೀಲಂ
ಕರಿದು ಕರ್ಬುರ ಪುಷ್ಯರಾಗಂ
ಮರಕತಂ ಪ್ರವಾಳ ಶುಭ್ರಂ
ಪಿರಿದದಾಗಿಯೆ ತೋರಿ ಸುರನಗವಿಂತು ರಾಜಿಪುದು || ೬ ||

ಕನಕ ಪುಷ್ಪದ ತೆರದಿ ರಾಜಿಪು
ದನುನಯದೆ ನೆಗಪಿರ್ದ ಕಹಳೆಯ
ವಿನುತ ಪರಿಯಿಂದಿರ್ಪುದದು ನವರತ್ನಮಯವಾಗಿ ||
ತನಯ ಭೂಮಿಗೆ ಪಂಚವಿಂಶತಿ
ಘನ ಸಹಸ್ರದ ನೆಲೆಯೊಳಿರ್ಪುದು
ಮಿನುಪ ಕಂಕಣವೊಂದುವಾ ಸುರಶೈಲಮಂಬಳಸಿ || ೭ ||

ಒಂದು ಸಾವಿರ ಯೋಜನದ ಹೆರ
ಹಿಂದೆ ಮೂರ್ಮಡಿ ದಟ್ಟದಿಂ ನಲ
ವಿಂದೆ ರಾಜಿಪುದಲ್ಲಿ ಕಂಕಣವದರ ಮಧ್ಯದೊಳು ||
ಚಂದದಿಂ ಸುರದನುಜರಿರ್ಪ
ರ್ಮುಂದೆಯದರಿಂ ಪಂಚವಿಂಶತಿ
ಯೊಂದಿದಾ ಸಾಹಸ್ರಯೋಜನದ ಪ್ರಮಾಣದೊಳು || ೮ ||

ಒಂದು ಕಂಕಣ ಮುಟ್ಟುವದರೊಳು
ಚಂದದಿಂ ನವನಾಥ ಸಿದ್ಧರು
ಮುಂದೆ ಗರುಡರು ಖೇಚರರು ಶಿವನಂ ಭಜಿಪರನಿಶಂ ||
ಅಂದದಿಂದದರಗ್ರದೊಳು ಮುದ
ದಿಂದೆಯಿಪ್ಪತ್ತೈದು ಸಾವಿರ
ವೊಂದಿದಾ ಯೋಜನವೊಳಿರ್ಪುದು ಚಕ್ರವಾಳಾಖ್ಯಂ || ೯ ||

ಅದರ ದಟ್ಟಂ ಮೂರುಸಾವಿರ
ವಿದಿತ ಯೋಜನದಿಂದೆ ತೋರ್ಕುಂ
ಪದುಳದಿಂದದರಗಲವೇ ಪದಿನೆಂಟು ಸಾವಿರವು ||
ಅದರ ಮೇಲೊಂಬತ್ತು ಸಾವಿರ
ವೊದವಿದುದ್ದಂ ಕೂಡಿಸುವ ಗಿರಿ
ಸದನುಲನೆ ಯಂತೊಂದು ಲಕ್ಷಂ ಯೋಜನಂ ನಿರುತಂ || ೧೦ ||

ಆ ಸುರಾದ್ರಿಯ ತುದಿಯು ಹರಹೇ
ಭಾಸುರದೆ ಮೂವತ್ತೆರಡು ಸಲೆ
ಸಾಸಿರದ ಗಾವುದವದರ ಮೇಲಷ್ಟದಿಕ್ಕಿನೊಳು ||
ಲೇಸಿನಿಂ ಶೃಂಗಾದ್ರಿಯೆಂಟು ವಿ
ಲಾಸದಿಂದೊಂದೊಂದರಗಲಂ
ಸಾಸಿಗನೆ ಕೇಳ್ನವ ಸಹಸ್ರದ ಯೋಜನದ ಹರಹಿಂ || ೧೧ ||

ಆ ಗಿರಿಯ ಮೂಡಣ ದೆಸೆಯ ಭೂ
ಭಾಗದೊಳು ಶೃಂಗಾದ್ರಿಯದರೊ
ಳ್ಬೋಗಕಾಸ್ಪದವಾದ ದೇವೇಂದ್ರಂಗೆ ಸುರಧೇನು ||
ರಾಗದಿಂ ಸುರರತ್ನ ಸುರಕುಜ
ವಾಗ ಸುರವನಿತೆಯರು ಪಾಂಡುರ
ನಾಗವನಿಶಂ ತನಗೆ ರಾಜಿಸಿಯಮೃತವೇ ಮನೆಯಾ || ೧೨ ||

ಬೀಯ್ಯವಾಗಿರೆಯುಶನಿ ತನ್ನಯ
ಕೈಯ್ಯ ಕೈದುವದಾಗೆ ಪಳುಕಿಂ
ರಯ್ಯವಾಗಿಯೆ ಸವೆದ ಕೋಂಟೆ ಬಳಿಕ್ಕ ತಾನೆರಡು ||
ವೈಯ್ಯೊಳಂ ಸಸಿ ಸೂರ್ಯ ವೀಥಿಗ
ಳೆಯ್ಯೆಸೊಗಸಂ ಮತ್ತೆ ನಿರ್ಜರ
ರಯ್ಯನಮರಾವತಿ ವಿಭವದಿಂ ಮೂಡಲೊಳು ತೋರ್ಕುಂ || ೧೩ ||

ತುಂಗಶಕ್ತಿಯನಾಂತು ವರ್ಣದ
ಲಿಂಗವಂ ಪೂಜಿಸುತ್ತ ತಗರೇ
ಸಾಂಗವಾಹನವಾದ ವಹ್ನಿಯ ನಿಗನುಕಳವಟ್ಟು ||
ಮಂಗಲದ ಕರ್ಬೊನ್ನ ಕೋಂಟೆ ಸು
ರಂಗ ಸಲೆ ತೇಜೋವತಿಯುು ಸಲೆ
ಕಂಗೆ ಮಂಜುಲವಾಯಿತಗ್ನಿಯ ದಿಕ್ಕಿನೊಳು ಸತತಂ || ೧೪ ||

ದಂಡನುಂ ಕರದಲ್ಲಿ ಪಿಡಿದು
ದ್ದಂಡ ಮಹಿಷನನೇರಿ ರೋಗದ
ತಂಡವೋಲ್ಸೈಸಲ್ಕೆಯೊಪ್ಪುವ ಯಮುನಸಂಯಮನಾ ||
ಚಂಡ ಮರಕತಶಾಲದಿಂದೆಯು
ಖಂಡಿತಂ ತಾನಾಗಿ ತೋರ್ಪುದು
ಖಂಡ ಶಶಿಶೇಖರನೆ ತೆಂಕಣದೆಸೆಯೊಳನವರತಂ || ೧೫ ||

ಕುಂತಮುಂ ಸಲೆ ತನ್ನ ಕರದೊಳ
ಗಾಂತು ನರವಾಹನದೊಳೊಪ್ಪುತೆ
ಮುಂತೆ ಕೇಳ್ವೈ ಮರದ ಲಿಂಗದ ಭಜನೆಯೊಳಗಿರ್ಪಾ ||
ನಂತ ನಿರುತಿಯ ಕೃಷ್ಣವತಿಯ
ತ್ಯಂತ ನೀಲದ ಕೋಂಟೆಯಿಂದಂ
ಮುಂತೆ ಕರ್ಬುರನಾಸೆಯಲ್ಲಿ ವಿರಾಜಿಷುತ್ತಿರ್ಕುಂ || ೧೬ ||

ನೆಗಳನೇರಿ ಗುಣಂದಳೆದು ನಂ
ಬುಗೆಯೊಳಂ ಜಲದೇವತೆಗಳೊಗು
ಮಿಗೆಯೊಳೋಲೈಸಲ್ಕೆ ರತ್ನದ ಲಿಂಗಮುಂ ಭಜಿಪ ||
ಸುಗುಣ ವರುಣನ ಶುದ್ಧವತಿ [ತಾ]
ನಗಣಿತದ ಘನರೌಪ್ಯ ಸಾಲದೆ
ಸೊಗಸುತಿರ್ಪುದು ಪಶ್ಚಿಮದ ದೆಸೆಯಲ್ಲಿಯನವರತಂ || ೧೭ ||

ಹರಿಣನಂ ಬಿಗಿದೇರಿ ಧ್ವಜಮುಂ
ಧರಿಸಿ ರೀತಿಯ ಲಿಂಗಮುಂ ಬಂ
ಧುರದೊಳರ್ಚಿಸಿ ವಾರನಾರಿಯರುಗಳು ಸೇವಿಸಲು ||
ಹರುಷದಿಂದಂ ಮೆರೆವ ಮರುತನ
ಪುರವರಂ ವಸುಶಾಲದಿಂದಂ
ಸ್ಥಿರದೊಳೆಸೆದುದು ಗಂಧವತಿ ಮಾರುತನ ದೆಸೆಯಲ್ಲಿ || ೧೮ ||

ತುರಗಮುಂ ನಲಿದೇರಿ ಖಡ್ಗವ
ನಿರದೆ ಕರದೊಳ್ತಳೆದು ಚಿನ್ನದ
ಪರಮ ಲಿಂಗಮನರ್ಚಿಸುತ್ತಿರೆ ಸುರರು ಸೇವಿಸಲು ||
ಹರುಷದಿಂ ರಾಜಿಸುವ ಧನದನ
ಪುರಿಗೆ ಪವಳದ ಕೋಂಟೆ ಮೆರೆಯ
ಲ್ತುರಿತದಿಂದಳಕಾನಗರ ಮೆಸೆಯಿತ್ತು ಬಡಗಲೊಳು || ೧೯ ||

ನಂದಿಯಂ ನಲಿದೇರಿ ಕರದೊಳ
ಗಂದದಿಂ ತ್ರೈಶೂಲಮೆಸೆಯು
ಲ್ಚಂದದಿಂದಂ ಭೂತಿಯುರುತರ ಲಿಂಗಮಂ ಭಜಿಸಿ ||
ಮುಂದೆ ತೋರ್ಪೀಶನ ಪುರಕೆ ಪಳು
ಕಿಂದ ರಾಜಿಪ ಕೋಂಟೆಯೊಪ್ಪೆ ಮು
ದಂದಳೆದು ತೋರಿತು ಯಶೋವತಿ ಹರನ ದಿಕ್ಕಿನೊಳು || ೨೦ ||

ಹರುಷದಿಂ ದಿಕ್ಪಾಲಕರುಗಳ
ಪುರಿಗಳೆಂಟುರೆ ಮೇರುವಂ ಬಳ
ಸಿರೆ ಸುರಪನಮರಾವತಿಗೆ ಸಲ್ವುದು ಸುತಾವತಿಯು
ಸುರ ನಗಕೆ ತವೆ ದಕ್ಷಿಣಾಸೆಯೊ
ಳರರೆ ತೋರ್ಪುದು ಕಾಮುಪತಿಯೊ
ಳ್ಸುರರು ಕೇಳಪ್ಸರರು ರಾಜಿಸರಾ ದೆಸೆಯೊಳಿನ್ನು || ೨೧ ||

ನಿರುತದಿಂ ಸಾವರ್ಣಿ ಸಿದ್ಧರಿ
ಗಿರದೆಯುಂ ಸುಮವತಿ ವಿರಾಜಿಪು
ದರರೆಯಾದಿತ್ಯರಿಗೆ ಕುಸುಮಾವತಿಯು ವಾಮಪುರಂ ||
ಎರಡು ಪುರಿಗಳು ಸಾಧ್ಯರಿಗೆ ಬಂ
ಧುರದೊಳೀ ನಾಲ್ಕೂರು ಸಲ್ವವು
ಸುರಪನಮರಾವತಿಗೆ ಪೇಳುವೆನು || ೨೨ ||

ಪಾವಕನ ಪಶ್ಚಿಮದ ದೆಸೆಯಿಂ
ರೈವತೀಪುರವೆಸೆವುದಿಲ್ಲಿಹ
ರಾವಗಂ ಘನ ವಿಶ್ವಕರ್ಮಾದಿಗಳು ನವ ದಿವ್ಯ ||
ದೇವ ನಗರಗಳೆರಡು ಸಲ್ವವು
ಭಾವಿಸಲ್ತೇಜೋವತಿಗೆ ಮಿಗೆ
ಜೀವಿತೇಶನ ಪಡುವಣಾಸೆಯೊಳಿರ್ಪ ಘನವಾತ್ರ || ೨೩ ||

ದೇವತೆಯರಿಗೆ ಮಾತೃ ನಂದೆಯು
ದಾವಗಂ ರುದ್ರರಿಗೆ ರೋಹಿತೆ
ಈವಿದೇಕಾದಶ ಮಹಾರುದ್ರರಿಗೆ ಗುಣವತಿಯು ||
ಭಾವಿಸಲ್ನಾಲ್ಕೂರು ಕಾಲನ
ಜೀವವೆನಿಸುವ ಸಂಯಮನಿಗೆ ಶು
ಭಾವಹದೊಳಂ ಸಲ್ವವಿನ್ನುಳಿದವನೆ ಪೇಳುವೆನು || ೨೪ ||

ನಿರುತಿಗಂ ಪೂರ್ವದೊಳು ಪಿಂಗಳೆ
ಯುರು ಪಿಶಾಚರ್ಗಾಶ್ರಯವದು
ತ್ತುರದ ಕೃಷ್ಣಾವತಿ ಶುಭಾವತಿ ಬಳಿಕ ಗಾಂಧಾರಿ ||
ಪರಿಕಿಸಲ್ಕೀ ನಾಲ್ಕು ಪುರಿಗಳು
ವರುಣನತಿ ಶುದ್ಧಾವತಿಗೆ ಬಂ
ಧುರದೆ ದಕ್ಷಿಣದಲ್ಲಿ ಮೆರೆವುದು ಸಿದ್ಧಸೇನೆ ಸದಾ || ೨೫ ||

ಧರೆಯ ಭೂತಂಗಳ್ಗೆ ಸದನಂ
ತ್ವರಿತದಿಂದಂ ಹೇಮ ಸಂಜ್ಞಾ
ಪುರವೆ ವಸುಗಳ್ಗಾಶ್ರಯಂ ಬಡಗಣ ದೆಸೆಯೊಳಿರ್ಕುಂ ||
ಪರಮ ವಿದ್ಯಾಧರರಿಗಂ ಮಂ
ದಿರವೆನಿಪ್ಪುದು ಸಿದ್ಧವತಿ ಸು
ಸ್ಥಿರದೊಳೀ ಮೂರೂರುಪಾಶಿಗೆ ಮಾರುತನ ಗಂಧಾ || ೨೬ ||

ವತಿಗೆ ದಕ್ಷಿಣದಲ್ಲಿಯೊಂದೇ
ನುತಿಸೆ ಸಿದ್ಧಿಯು ಕಿನ್ನರರ್ಗು
ನ್ನತಿಯ ಧನದನ ನಗರಿಯಳಕಾಪುರಕೆ ಮೂಡಲೊಳು ||
ಸತತ ಚಿತ್ರರಂಥಂಗೆ ತೋರ್ಪುದು
ವಿತತ ಘನ ಗಂಧರ್ವನಗರಂ
ಮತಿಯೊಳದರೊಳ್ಪಾಡುತಿರ್ಪಳು ಶಾರದಾದೇವೀ || ೨೭ ||

ಕೂಡೆ ತುಂಬರ ನಾರದರ್ಕ
ಳ್ಪಾಡುತಿರ್ಪರ್ಚಿತ್ರಪುರಿಯೋ
ಬೀಡಾದಾಗಲ್ಲುಮಗೆ ಧನದನ ಪಶ್ಚಿಮದ ದೆಸೆಯಿಂ ||
ನಾಡೆ ಪ್ರಮುದೆಯು ಚಿತ್ರಮತಿಗ
ಳ್ನೋಡೆ ಗುಹ್ಯಕತತಿಗೆಯಾಗಿರೆ
ಮೂಡಲೊಳಗೆ ಸುಕರ್ಮದೇವತೆಗಳಿಗೆ ಶುಭೆಯ್ಯೆಯ್ದು || ೨೮ ||

ವರ ಕುಬೇರಂಗಾಗೆಯಿಾಶನ
ಪುರ ಯಶೋವತಿಗಲ್ಲಿ ಪಶ್ಚಿಮ
ದುರುತರಾಸೆಯೊಳುದಿಸಿ ಕುಸುಮಾಕಾರನಾ ಶಂಖಂ ||
ಕರದೆ ಚಕ್ರಂ ಗದೆಯು ಬಿಲ್ಲಂ
ತಿರದೆ ಪಿಂತಾಂಬರವೆಸೆಯೆ ಬಂ
ಧುರ ಹೃಷೀಕೇಶನ ನಗರಿ ರಾಜಿಪುದು ದಿವ್ಯಾ || ೨೯ ||

ಆ ವಿಮಲದೀಶಾನ್ಯ ದಿಕ್ಕಿನೊ
ಳೋವಿ ಕಮಲಜನಿರ್ಪ ಘನಪ
ದ್ಮಾವತೀ ಪುರವದರ ತೆಂಕಣ ಕಾಮಶುಭೆಯಲ್ಲಿ ||
ತೀವಿ ಧನ್ವಂತ್ರಿಗಳುವಶ್ವಿನಿ
ದೇವ ವಿತತಿಗಳೆಸೆಯಲಾ ಸ
ದ್ಭಾವಿಯೊಶಾನ್ಯಂಗೆ [ಪುರ]ಮೂರಿಂತು ರಾಜಿಪವು || ೩೦ ||

ಕ್ರಮದೊಳಿಂದ್ರಂಗುತ್ತರದೊಳಂ
ತಮರ್ದು ತೋರ್ಪುದು ವರಮಹಾಘ
ಯಮಿತದಿಂದಾ ಪುರದೊಳಿರ್ಪರು ಚಾರು ಶತಕೋಟಿ ||
ವಿಮಲ ವಿಘ್ನೇಶ್ವರರು ಮತ್ತಂ
ಸುಮನದೀಶಾಂಗುಷ್ಠಜಾಸುರ
ಶಮಣ ರಿಪುಗಳ್ತೋರ್ಪರೈ ಸಲೆ ಮುಂದೆ ಕೇಳಿನ್ನು || ೩೧ ||

ಹರುಷದಿಂದಂ ಚಾರುದಿಕ್ಪಾ
ಲರ ಮಹಾವರ ಪುರಿಗಳಿಂಟ
ಕ್ಕರರೆ ಯಿಪ್ಪತ್ತಾರು ಪುರವಿಂದ್ರಂಗೆ ಪುರಿಯೈದು ||
ಎರಡು ಪುರಿಗಳು ವಹ್ನಿಗಂ
ಮೂರಿರದೆ ಯಮುನಿಗೆ ನಾಲ್ಕು
ಪುರಗಳು ನಿರುತಿಗಂ ತವೆ ಮೂರು ಪಾಸಿಗೆಯೊಂದು ಮರುತಂಗೆ ||೩೨||

ವರ ಕುಬೇರಂಗೈದುವೀಶಂ
ಗಿರದೆ ಮೂರ್ಸಹಿತೆಲ್ಲಮುಂ ಬಂ
ಧುರದೆ ಕೂಡಲ್ಕಾಗಿಯಿಪ್ಪತ್ತಾರು ಪುರವಿನ್ನು ||
ಸುರಗಿರಿಯ ಮೇಲೀಶ್ವರನ ಘನ
ಪುರವೆಸೆವುದನವರತವತಿಶಯ
ತರಣಿ ಸಸಿಕೋಟಿ ಪ್ರಕಾಶದೊಳೆಂತುಮಲ್ಲದೆಯು || ೩೩ ||

ಪರಮ ಸುಧೆ ತುಂಬಿರ್ದಗಳು ಬಂ
ಧುರದ ರತ್ನದ ಕೋಂಟೆ ಮೌಕ್ತಿಕ
ವಿರದೆ ಕೆತ್ತಿಸಿ ರಂಜಿಸುವ ತೆನೆ ಪರಿಸದಿಂ ಸವೆದಾ ||
ಪುರದ ಹೆಬ್ಬಾಗಿಲು ವಿರಾಜಿಸೆ
ಯರರೆ ಕಾಯ್ವಾವರರ ತತಿಯಿಂ
ಕರವೆಸೆವುದಾ ನಗರಿ ತವೆ ಸಾಮಾದಿ ವೇದಕ್ಕೆ || ೩೪ ||

ತುತಿಸೆ ತಾನೆಯಶಕ್ಯವೆನಿಸು
ತ್ತತಿಶಯದೆ ಬೆಳಗಿಂದ ಮೆರೆವುದು
ಸತತ ಸುರಗಿರಿಯಗ್ರದೊಳ್ಜ್ಯೋತಿಷ್ಮವೆಂದೆಂಬ ॥
ಕ್ಷಿತಿಧರಂ ತಾನದಕೆಯಿಾಶ
ಪ್ರತಿಮ ದಿಕ್ಕಿನೊಳಭವನರಮನೆ
ಸುತನೆ ಥಳಥಳಿಸುತ್ತೆ ರಾಜಿಪುದರರೆ ಮಧ್ಯದೊಳು ॥ ೩೫ ॥

ನನ್ನಿಯಿಂ ಪೀಠದೊಳು ತೋರುವ
ಚೆನ್ನಿಧಾನವನೋಲವಿಪ ಸಂ
ಪನ್ನ ಗಣತತಿಯೊಪ್ಪಿದರು ಮುದದಿಂದ ಜ್ಯೋತಿಷ್ಮ ॥
ದುನ್ನತದ ವಾಸದೊಳು ಶಿವನಿರೆ
ಮುನ್ನ ಗೌರೀದೇವಿ ಸರ್ವನ
ಚೆನ್ನಲೋಚನತತಿಗಳಂ ಕರದಿಂದ ಮುಚ್ಚಲ್ಕೆ ॥ ೩೬ ॥

ಭವನ ಘನ ನಯನಾಶ್ರುಕಣತತಿ
ಶಿವೆಯ ಕರದ ದಶಾಂಗುಲಿಗಳಿಂ
ಭುವಿಗೆ ಬೀಳಲು ಮೂರು ಗಂಗೆಯನಜ ಹರೀಂದ್ರರಿಗೆ ॥
ತವಕದಿಂದಿತ್ತೇಳು ಗಂಗೆಗ
ಳವನಿಯಂ ಮುಳುಗಿಸದ ತೆರದಿಂ
ದವೆ ಶಿರದೊಳಂ ತಳೆದನಭವಂ ತ್ರಿಜಗಹಿತವಾಗಿ ॥ ೩೭ ॥

ಧರೆಯ ಜನರ ಹಿತಾರ್ಥವಾಗಿಂ
ತಿರದೆ ಘನ ರೋಮಾಗ್ರದಿಂದಂ
ಹರನದಂ ಸಲೆ ತೆಗೆದು ಬಿಡೆ ಸುರಗಿರಿಯ ತುದಿಯಿಂದ ॥
ಭರದೆ ಬಂದಾ ಗಂಗೆ ಮೂಡಣ
ಸರಸ ದೆಸೆಯೊಳು ಚಾರು[ಸೀ]ತಾ
ವರ ನದೀ ಪೆಸರಿಂದ ಪರಿದುದು ಲೋಕಹಿತವಾಗಿ ॥ ೩೮ ॥

ಸುರನಗದ ತುದಿಯಿಂದ ದಕ್ಷಿಣ
ಕರರೆ ಬಳಿಕ ಸುಪಕ್ಷೆ ಪರಿದುದು
ಭರದೊಳಾ ಗಿರಿಯಗ್ರದಿಂದಂ ನಂದೆ ಪಶ್ಚಿಮದ ॥
ಸರಸ ದೆಸೆಯಿಂದಿಳಿದುದಾ ಭೂ
ಧರದ ಮೇಲಿನ್ನುತ್ತರಾಸೆಗೆ
ನಿರುತದಿಂದಂ ಬಂದುದಾಗಂ ಸೋಮೆಯೆಂಬ ನದಿ ॥ ೩೯ ॥

ಪೂರ್ವ ಪಶ್ಚಿಮ ದಕ್ಷಿಣೋತ್ತರ
ದುರ್ವಿನುರು ದಿಕ್ಕಿನೊಳು ಪರಿದಾ
ಖರ್ವಸಿತೆ ಸುಪಕ್ಷ್ನೆ ನಂದೆಯು ಸೋಮೆಯೆಂದೆಂಬ ||
ಸರ್ವ ನದಿಗಳು ಪರಿದು ಶರಧಿಯ
ಗುರ್ವಿನಿಂ ಬೆರಸಿದವಿವಿಲ್ಲಿಗೆ
ಯೂರ್ವಿಯೊಳಗರ್ಥಾಂಡವಾಯಿತು ಚಂದ್ರಶೇಖರನೆ || ೪೦ ||

ಕನಕನಗಕೋದಂಡ ಮನಸಿಜ
ಜನಕಲೋಚನಚರಣ ಸರಸಿಜ
ಸನಕ ಮುಖ್ಯಪ್ರಣುತ ಶಿಖಿಗಮನ ಗಜವದನ ಪಿತ ||
ವನಜ ತನಯ ವರ ಪ್ರದಾಯಕ
ಧನಪಸಖ ಸುರನಿಮ್ನಗಾಧರ
ಘನ ದಯಾರಸವನಧಿ ಜಯ ಧವಳಾಂಗ ದೇಶಿಕನೆ || ೪೧ ||

ಇದು ವಿಮಲ ಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರ ||
ಪದುಳದಿಂ ಶಾಂತೇಶನೊರದೀ
ವಿದಿತ ಸಿದ್ಧೇಶನ ಪುರಾಣಮ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವುದು || ೪೨ ||

ಅಂತು ಸಂಧಿ ೭ಕ್ಕಂ ಪದನು ೩೫೫ಕ್ಕಂ
ಮಂಗಳಂ

ಎಂಟನೆಯ ಸಂಧಿ

ಮೇಲೆ ತೋರುವಜಾಂಡ ಭುವನದ
ಜಾಲಮಂ ಕಾಯ್ದಿರ್ಪ ರುದ್ರರ
ಲೀಲೆಗಳ ಸಿದ್ಧೇಶನೊರೆದಂ ಭಕ್ತತತಿ ಮೆಚ್ಚೆ ॥

ಸರ್ವ ಭುವನಾಧಾರನೇ ನಿ
ಗರ್ವಿಯೇಯಘನಾಶನೇಯರಿ
ಪರ್ವತಾಶನಿಯೇ ಮಹಾಭಕ್ತೇಷ್ಟದಾಯಕನೆ ॥
ನಿರ್ವಿಕಾರನೆ ನಿರುಪಮನೆ ಗಂ
ಧರ್ವವಂದಿತಪಾದನೇ ನೀ
ನುರ್ವಿಯಂ ಮುದದಿಂದ ರಕ್ಷಿಸು ಸಿದ್ಧ ದೇಶಿಕನೆ ॥ ೧ ॥

ಧರಣಿಯಿಂ ಮೇಲೊಂದು ಲಕ್ಷದ
ಸರಸ ಯೋಜನದಲ್ಲಿ ಸತತಂ
ತರಣಿಯೊಪ್ಪುವ ತವೆ ಭುವರ್ಲೋಕಂ ವಿರಾಜಿಪುದು ॥
ಹರುಷದಿಂದಂ ಹತ್ತು ಸಾವಿರ
ನಿರುತದಿಂದಂ ಹತ್ತು ಸಾವಿರ
ದುರುತರದ ಗಾವುದಕೆಯೊಂದೊಂದನಿಲಗಳು ತೋರ್ಕುಂ ॥ ೨ ॥

ಮುಂದೆ ಕೇಳ್ವೈ ಚಂದ್ರಶೇಖರ
ಚಂದದಿಂದಾ ವಾಯುಗಳು ಮಾ
ಳ್ಪಂದಮಂ ಸಲೆ ಮೊದಲ ವಾಯುವಿನಲ್ಲಿ ರಂಜಿಸುವಾ ॥
ಕುಂದದಂತರ್ಭಾವ ಮೇಘಗ
ಳಂದಮಂ ನಾ ಪೇಳ್ವೆನೆನುತೊಲ
ವಿಂದ ತೋಂಟದ ಸಿದ್ಧಲಿಂಗ ಚಿದಂಗನಿಂತೆಂದ ॥ ೩ ॥

ನಲಿದು ರಸೆಗೈವತ್ತು ಗಾವುದ
ನೆಲೆಯೊಳೊಪ್ಪುವ ತನ್ನ ಮಾರುತ
ನೊಲವಿನಿಂ ವಿವಿಧೌಷಧಗಳಂ ಚಿತ್ರವೆಯ್ದಿಪುದು ॥
ಹಲವದಂದದ ಜೀವ ಜಾಲಕೆ
ಸುಲಭವಾಪ್ಯಾಯನವನೆಯ್ದಿಪು
ದಲಘು ತೆರದಿಂದಂ ದಿವಾ ಹಂಸಾನಿಲಂ ಮತ್ತೆ ॥ ೪ ॥

ಸರ್ವರಿಗೆ ಸುಖವೀವುದದರಿಂ
ಸರ್ವ ದನುಜರಿಗಂಡಜಂಗಳಿ
ಗುರ್ವಿಯೊಳ್ಸಲೆ ಶೀಘ್ರ ಗಮನವನಾಗಿಪುದರಿಂದ ॥
ನಿರ್ವಿಕಾರದೆಯಾಯಿತಾಗಂ
ಸರ್ವರರಿವಂದದೊಳದಕೆ ನೆರೆ
ನಿರ್ವಿಕಾರ ಗೃಧ್ರಹರನೆಂದೊಂದು ಘನನಾಮಂ ॥ ೫ ॥

ಸುಪ್ರಚೇತಸನೆಂಬ ವಾತದೊ
ಳಪ್ರತರ್ಕ್ಯದೆ ಜನಿಸಿದವಲನಿ
ಜ ಪ್ರಚೇತನನೆಂಬ ಮರುತಂ ಬೀಸುತಿರಲಾಗಿ ॥
ಭೂ ಪ್ರದೇಶದೊಳುಳ್ಳ ತರಗ
ಳ್ಕ್ಷಿಪ್ರದಿಂದಂ ಮುರಿದು ಬೀಳುವ
ವೀಪ್ರಕಾರದೆಯಾ ಪ್ರಚೇತಸವನಲನಂ ಕೂಡಿ ॥ ೬ ॥

ಬೀಸೆ ಮನೆಗಳ್ಬೀವುತಿರ್ಪವು
ಮೋಸವಿಲ್ಲದೆ ಬಾಡಬಾಗ್ನಿಯ
ನಾಸರದೆ ಸಾಗರದ ಮಧ್ಯದೊಳಾರದೀಸದದಂ ॥
ಬೇಸರದೆ ನೀರ್ಗಿಚ್ಚುವಮಂ ಕೆಡ
ಲೀಸದೊಪ್ಪುತ್ತಿಪ್ಪುದನಿಶಂ
ಸಾಸಿಗನೆ ಕೇಳ್ಬಳಿಕ ಘನಶತಯೋಜನಾಂತದೊಳು ॥ ೭ ॥

ನಿರುತ ಸೇಚನಿಯೆಂಬ ನಿರ್ಮಲ
ಮರುತನುರು ಸಂಬಂಧದಿಂದ
ಲ್ಲಿರುತ ಮಿಂಚಿನ ಮಾಳ್ಕೆಯಿಂದಂ ಮೂಕಮೇಘಾಖ್ಯಂ ॥
ಹರುಷದಿಂದೊಪ್ಪುದಿಳಿದಾ
ತ್ವರಿತದಿಂದಂ ಕ್ರೋಶದಸಿತ
ಕ್ಕಿರದೆ ಬಂದಾಗುದಕವಮಂ ಮಳೆಯೆನಿಸಿ ಬಿಡುತಿಹುದು ॥ ೮ ॥

ಅಲ್ಲಿಗಂ ನೆರೆ ನೂರುಯೋಜನ
ದಲ್ಲಿ ಸತ್ವವಹಾಭ್ರವಿರುತಿ
ರ್ದಲ್ಲಿ ಸಲೆಯೆಸಗುವುವು ದುರ್ದಿನವಂ ಬಳಿಕ್ಕಲವು ॥
ನಿಲ್ಲದೇ ಮಿಾನಾವೆ ಕಪ್ಪೆಗ
ಳೆಲ್ಲೆಡೆಯೊಳಂ ಕರೆಯುತಿರ್ಪವ
ವಲ್ಲಿಗಂ ಶತಯೋಜನಾರ್ಧದೊಳಿರ್ಪುದನವರತಂ ॥ ೯ ॥

ನ್ಯಾಯದಿಂ ಮೋಘಾಖ್ಯವೆಂಬ ಸು
ವಾಯು ರಾಜಿಪುದದರ ಮೇಲೆಯ
ಜೀಯ ರೋಗದವೆಂಬ ಮೇಘಾಳಿಗಳು ಚರಿಸುತ್ತೆ ॥
ಈಯವನಿಗಂಗದ ಜಲಂಗಳ
ನಾಯದಿಂ ಕರೆವುತ್ತಮಿರ್ಪವು
ದಾಯದಿಂದದರಗ್ರದೊಳಗೈವತ್ತು ಯೋಜನದ ॥ ೧೦ ॥

ಹವಣಿನಲ್ಲಿಹ ಮೇಘವೆನಿಸುವ
ಪವನನಲ್ಲಿಂ ಮೇಲೆ ಮತ್ತಂ
ಪ್ರವರಮಾಕರವೆಂಬ ಮೇಘಗಳಿರ್ದ ಧಾರುಣಿಯ ॥
ವಿವಿಧ ಜೀವಕುಲಕ್ಕೆ ಮರಣವ
ನವಿರತಂ ತಾನೆಯ್ದಿಸುವವತಿ
ಯವರ ಮೇಲೈವತ್ತು ಯೋಜನದ ಪ್ರಮಾಣದೊಳು ॥ ೧೧ ॥

ನೆಲಸಿದುದು ವಜ್ರಾಂಗವೆನಿಸುವ
ಬಲು ಮರುತವದರಗ್ರದೊಳ್ಕೀ
ಳ್ಪಲಕವೆಂಬಭಿಧಾನದಭ್ರವವಿರ್ದು ಧಾರುಣಿಯ ॥
ಫಲದ ವೃದ್ಧಿಗೆ ಕರೆವುದುದಕವ
ನೊಲವಿನಿಂದಂ ಮೇಲೆಯೈವ
ತ್ತಲಘು ಯೋಜನದಲ್ಲಿಯ ದ್ಯುತಿಮಂತನೆಂಬನಿಲಂ ॥ ೧೨ ॥

ಆ ಮರುತನಿಂ ಮೇಲೆ ವೈದ್ಯುತ
ನಾಮದಭ್ರನಿಕಾಯವಿರುತಿ
ರ್ದಾ ಮಹಾನಿಲನೊಡನೆ ಕೂಡಿ [ರುತಿ] ಹುದು ಘನ ಧ್ವನಿಯಿಂ ॥
ಪ್ರೇಮದಿಂದೈವತ್ತುಯೋಜನ
ದಾ ಮಹಾಭ್ರದ ಮೇಲೆ ರೈವತ
ದಾ ಮಹಾಮಾರುತನೊಳಿಪ್ಪುದು ಪುಟ್ಟವಹ ವಾಯು ॥ ೧೩ ॥

ಧಾರುಣಿಯೊಳಖಿಳರ್ಗೆ ಪುಟ್ಟಯ
ನಾರತಂ ಮಾಡುವುದುವದರಿಂ
ದಾರಯಲು ಮೇಲಾಶನರ್ಧದ ಯೋಜನದಿ ತೋರ್ಕುಂ ॥
ಚಾರು ಸಂವರ್ತಾನಿಲಂ ಬಳಿ
ಕಾರಯಲ್ಕದರೊಳಗೆ ರೋಗದ
ವಾರಿಧಳವಿರ್ದಾಮಯದ ಜಲವಂ ಕರೆವುದದರ ॥ ೧೪ ॥

ಮೇಲೆಯಂತೈವತ್ತೆ ನಿಪ ಸುವಿ
ಶಾಲ ಯೋಜನದಲ್ಲಿಯಿರ್ಪುದು
ಶಾಲಿವಿಂ ಸಂವರ್ತಿ ಮಾರುತನದರೊಳಗೆಯಿದರ್ುಃ ॥
ಲೀಲೆಯಿಂ ಕ್ರೋಧೋದಕಾಭ್ರಮ
ದಾಲಿಸಲ್ಕಸುರರಿಗೆ ಗದಮಂ
ಮೂಲ ರೋಗಮನಿಂತು ಪುಟ್ಟಿಸಿ ಮರಣವೆಯ್ದಿಪುದು ॥ ೧೫ ॥

ತುಂಗ ಮೋಘಾಮೋಘನುತ ವ
ಜ್ರಾಂಗ ವೈದ್ಯುತ ರೈವತಂ ಮಿಗೆ
ಕಂಗೊಳಿಪ ಸಂವರ್ತ ವಿಸಂವರ್ತನೆಂಬೇಳು ॥
ಮಂಗಲದ ಮರುತಂಗಳವರೊ
ಳ್ಪೊಂಗಿಮಿರ್ಪರ್ ವಸ್ತುಗಳನೇ
ಸಾಂಗವಾಗಲ್ಪೇಳುವೆವು ಕೇಳ್ ಚಂದ್ರಶೇಖರನೆ ॥ ೧೬ ॥

ವರ ಪಿಶಾಚರು ಬಾಹುಲೇಯನ
ಚರಣಮಂ ಭಜಿಸುತ್ತೆ ಮೂವ
ತ್ತರರೆ ಸಾವಿರಕೋಟಿಗಳು ಮೆಘಾನಿಲನೊಳಿಹರು ॥
ಹರನೊಳುದಿಸಿದ ವಿಘ್ನ ರಾಜರು
ಧರೆಯ ದುರ್ಮಾನಿಗಳ ಪುಣ್ಯದ
ಸರಸ ಸತ್ಫಲಗಳನೆಯುಪಹರಿಸುತ್ತ ಮೂವತ್ತು ॥ ೧೭ ॥

ಕೊಟಿ ಸಾವಿರಮಿರ್ಪ ರಾಗ ಸ
ಘಾಟದಿಂದೆಯಮೋಘ ಮರುತನೊ
ಳಾಟವಿಕತನವಲ್ಲ ಭಿನ್ನಾಂಜನ ಮಹಾಕಾಯ ॥
ದಾಟದಿಂ ಸತ್ಕ್ರೂರತೆಯ ಸಲೆ
ಕೂಟದಕೋಟಾನುಬಂಧುರ
ಕೋಟಿಗಳ್ಸಾಸಿರರೆನಿಪ್ಪ ಸುವೀರರುಗಳೊಡನೆ ॥ ೧೮ ॥

ನಲವಿನಿಂ ಕೇಳೈ ಸ್ಮಶಾನ
ಸ್ಥಲದ ಘನವೇತಾಳ ಸಾಧನ
ರೊಲವಿನಿಂ ಬಲವಂತಮಪ್ಪರು ರಾಗ ವಜ್ರಾಂಗಂ ॥
ಅಲಘು ವಾಯುವಿನಲ್ಲಿ ಮತ್ತಂ
ಗೆಲವಿನಿಂದಿಂದ್ರಾಗ್ನಿಯಿಂದಂ
ಚಲಿಸದಪ್ಸರರಿರ್ದುಃ ಕಮ್ಮರಿಯಲ್ಲಿ ಶಿಖಿಯಲ್ಲಿ ॥ ೧೯ ॥

ವಾರಿಯಲ್ಲಿ ರಣಂಗಳಲ್ಲಿ ವಿ
ಚಾರಿಸಲ್ಕೊಗ್ರಹಣದಲ್ಲಿಂ
ತಾರಯಲು ಧೀರತ್ವದಿಂದಂ ಮಡಿದ ಮಾನವರ ॥
ಸೇರಿ ಸುರನಾರಿಯರ ರಮಿಸುವ
ರಾ ರಮಾಕರ ವೈದ್ಯುತಾಹ್ವಯ
ಮಾರುತನೊಳಂ ಮತ್ತೆ ರೈವತನೆಂಬ ಮೇಘದೊಳು ॥ ೨೦ ॥

ಹರುಷದಿಂದಂ ಸಿದ್ಧರಿರ್ದಾ
ಧರಣಿಯೊಳ್ಸ್ಫಟಿಕಂಜನಾದಿಯ
ನಿರುತ ಸಿದ್ಧಿಯ ಪಡೆದರಂ ಸೇವಿಸುವರನವರತಂ ॥
ಕರಮೆಸೆವ ಸಂವರ್ತವೆಂಬಾ
ಸ್ಥಿರದ ವಾಯುವಿನಲ್ಲಿ ವಿದ್ಯಾ
ಧರರು ಮುನ್ನೊರ್ಕೋಟಿಗಳು ವೈಭವದಿ ರಾಜಿಪರು ॥ ೨೧ ॥

ಚಾರು ವಿಂಸಂವರ್ತವೆಂಬುರು
ಮಾರುತನೊಳಂ ಧೂಮಶಿಖಿ ಸಂ
ಚಾರ ಪೃಷದಶ್ವಂಗಳೊಂದಿದ ಭಾಸುರರ್ಗಳ ॥
ಸಾರಸಾಪಾಜ್ಞೇಯವೆಂಬ ಗ
ಭೀರ ಜೀಮೂತಂಗಳಿಹವ
ಲ್ಲಾರಯಲು ವಿದ್ಯಾಧರರು ವೀಣಾದಿ ವಾದನದ ॥ ೨೨ ॥

ಪಕ್ಷಿ ಸಂಕುಳ ಕಾಮರೂಪಿಗ
ಳೀಕ್ಷಿಸಲ್ಲಲೆ ರಂಜಿಪರು ಮೇ
ಲಕ್ಷಯದೆ ಸಲೆ ಮೂರು ಯೋಜನದ ಪ್ರಮಾಣದೊಳು ॥
ದಕ್ಷದಿಂ ದುರ್ಜಯನೊಳಂ ತಾ
ವಾಕ್ಷಣಂ ಬ್ರಹ್ಮಜೆಗಳಿಂ ವಿ
ದ್ಯಾಕ್ಷ ಕಾದಂಬಿನಿಗಳಿರ್ಪವು ಬಳಿಕ ಕೇಳಲ್ಲಿ ॥ ೨೩ ॥

ಸುರಪನಗ್ಗದ ಧೂರ್ಜಟಿಯಾಖ್ಯ (?)
ಸ್ಥಿರದ ನಾಮಾದಿಗಳನುಳ್ಳರು
ತರದ ಧಾರಾಧರಗಳಿರ್ಪವಲ್ಲಿ ಶತಕೋಟಿ ॥
ಹರುಷದಿಂದಂ ಪುಷ್ಕಲಾ ಬಂ
ಧುರದ ವರ್ತಕವೆಂಬ ಮೇಘಗ
6 ಳರಿದೆನಲ್ಕಾವಿರ್ಪವಲ್ಲಿಂ ಮೇಲವೆಂತೆನಲು ॥ ೨೪ ॥

ಬಳಿಕ ಕೇಳಂತಾಪಗಾಹ್ವಯ
ದೊಳಗೆಯೊಪ್ಪುವ ವಾಯುಕ್ರಮದಿಂ
ದಿಳೆಯನೇ ಘನ ಸುರಪ ಖಂಡಿತ ಗೋತ್ರಹತ ಪಕ್ಷ॥
ಜ್ವಳಿತ ತತಿಯಿಂ ತಾಳ್ದು ವರ್ತಿಪು
ದೆಳಸಿ ಗಗನಕ್ರೀಡರೆನಿಪ
ಗ್ಗಳದ ನವಶತಕೋಟಿ ಗಾಂಧರ್ವರುಗಳಿಹರಲ್ಲೀ ॥ ೨೫ ॥

ವರ ಮಹಾನೀಲನೊಳಗೆ ಕೇಳ್ವೈ
ಸುರರಸುವಿನೊಳ್ಪುಟ್ಟಿ ರಾಜಿಪ
ಸುರುಚಿರದ ಜೀಮೂತವೆಂಬಭ್ರಂಗಳುಂಟಲ್ಲೀ
ಪರಮ ವಿದ್ಯಾಧರರು ಹತ್ತಿರೆ
ಯರಿರೆಯಿರ್ಪರುವಾ ಹಯವೆನಿ
ಪ್ಪುರುತರಾನಿಲನಲ್ಲಿಯೇ ದ್ರೋಣಾಖ್ಯವೆನಿಸಿರ್ಪಾ ॥ ೨೬ ॥

ವಾರಿದಂಗಳು ಮುನ್ನ ಜನಿಸಿದ
ಚಾರು ದ್ರೋಣಾಖ್ಯರುಗಳೊಪ್ಪುವ
ಚಾರು ಚಿರಪರಮಾನಂದದಿಂದಂ ಮೇಲೆ ಪರಿವಾಹ॥
ಮಾರುತನೊಳಿರ್ಪವು ಬಳಿಕ ಗಂ
ಭೀರ ಘನ ಸಂವರ್ತವಾರಿಯು
ಸಾರ ಪಾವನ ಮಾರ್ಗದಲ್ಲಿಹವೆಂತೆನಲ್ಕಲವಿಂ ॥ ೨೭ ॥

ಶುದ್ಧಮೇಘಂ ಮೇಘಚಾರಿ ಸು
ಸಿದ್ಧರಿರ್ಪರೆ ಮೇಲೆ ಮತ್ತೆ ವಿ
ರುದ್ಧವಿಲ್ಲದೆಯದ್ವಿತೀಯಾನಿಲನ ಮಾರ್ಗದೊಳು ॥
ಸಿದ್ಧದಿಂದಲ್ಲಿರ್ಪರಾಗ ವಿ
ರುದ್ಧವಿಲ್ಲದೆಯಗ್ನಿವನಿತೆಯ
ರುದ್ಧತಂಗಳುಮಿಲ್ಲದೇ ಶಿಖಿ ಮಾತೃಕೆಯರನಿಶಂ ॥ ೨೮ ॥

ಸರಸದಿಂದನಿಲತ್ರಿತಯ ಬಂ
ಧುರದ ಪದದೊಳ್ಸಿದ್ಧಚಾರಣ
ರಿರುತವಿರ್ಪರ್ಮತ್ತೆ ನಾಲ್ಕನೆಯನಿಲ ಮಾರ್ಗದೊಳು ॥
ಸುರರುವಿರ್ಪರ್ಕೇಳುವೈದನೆ
ಯುರುತರದ ಪಥದಲ್ಲಿಯಿರ್ಪವು
ಹರುಷದಿಂದೈರಾವತಾದಿಯ ದಿಗ್ಗನೇಕಪವು ॥ ೨೯ ॥

ಚಾರುತರದಾರನೆಯ ಸನ್ನುತ
ಮಾರುತಾಧ್ವದೊಳಂ ವಿರಾಜಿಪು
ದಾರಯಲು ಸಲೆ ಪಕ್ಷಿರಾಜನೆನಿಪ್ಪ ವಿಷ್ಣುರಥಂ ||
ಸಾರದಿಂದೇಳನೆಯನಿಲ ಗಂ
ಭೀರ ಪಥದೊಳ್ದೇವಗಂಗೆಯ
ನಾರತಂ ರಂಜಿಪುದು ಸರ್ವರು ಪಾಪಮಂ ಕೆಡಿಸೀ || ೩೦ ||

ಆ ರಮಾಕರ ಗಂಗೆ ವೃತ್ತಾ
ಕಾರದಿಂದಂ ತೋರ್ಪುದೆಂತೆನೆ
ಚಾರುತರದಾಕಾಶರೆಂಬ ಸುಲಿಂಗದುರು ಶಿರಮಂ ||
ಸೇರಿ ಬಳಸಿದ ಪುಷ್ಪಸರವೆಂ
ತಾ ರುಚಿರ [ಶ್ರೀ] ಸಿದ್ಧ ತಾಪಸ
ರೋರಣದೆಯೋಲೈಸಲೊಪ್ಪಿದಳಮರಧುನಿ ಸತತಂ || ೩೧ ||

ಆ ವಿಯದ್ಗಂಗೆಯೊಳು ಜನಿಸಿದ
ತಾವರೆಯ ಪುಷ್ಪಂಗಳಿಗೆ ಶೋ
ಭಾವಹದೆ ವೈಡೂರ್ಯನಾಳಂ ಸ್ವರ್ಣಮಯ ಪತ್ರಂ ||
ತೀವಿದುರುತರ ಪದ್ಮರಾಗದೆ
ಪಾವನದ ನವಕೇಸರಂಗಳು
ತೀವಿಯಿಂ ರಾಜಿಸೆ ಸುಗಂಧದ ಚಿತ್ರದಂತೆಸೆವ || ೩೨ ||

ಕಮಲತತಿಯಿಂ ಕಣ್ಗೆ ರಾಜಿಪ
ಕುಮುದ ಸಂಚಯದಿಂದೆ ಮತ್ತಂ
ವಿಮಲ ವೇಲಾವನದ ಪುಷ್ಪ ಫಲಾಳಿಯಿಂ ರತ್ನ ||
ದಮಲ ವೈಮಾನಿಕರು ಬಂದಾ
ಕ್ರಮದಿಯೋಲೈಸಲ್ವಿಭವದಿಂ
ದಮಮ ಮೆರೆದಳ್ಗಂಗೆ ತುಂಗೆ ಸದಂಗೆ ಸುರಗಂಗೆ || ೩೩ ||

ಚಾರುತರ ಶತಕೋಟಿ ಘನ ವಿ
ಸ್ತಾರದಿಂ ಬಳಸಿರ್ಪುದೆಂತೆನೆ
ಸಾರಿ ತನ್ನಂ ನುತಿಪ ಜನರಘಮಸ್ತಕವನರಿವ ||
ಕ್ರೂರ ಚಕ್ರದ ತೆರದಿಯೊಪ್ಪಿ
ತ್ತಾ ರಮಾಕರ ದೇವವಾಹಿನಿ
ಧಾರುಣೀವಳಯಮೊಳು ಪೊಗಳ್ವರಿಗರಿದೆನಲ್ಮತ್ತೆ || ೩೪ ||

ನೂನ ಶಿವಯೋಗಿಗಳ ಘನ ಸು
ಜ್ಞಾನ ಚಂದ್ರನ ಬಳಸಿಕೊಂಡಿ
ರ್ಪ್ಪ ನವೀನದ ಪರಿಧಿಯಂತಾಕಾಶವೆಂದೆಂಬ ||
ಪೀನ ಪರಶಕ್ತಿಯ ನೊಸಲ ಸು
ಸ್ಥಾನದೊಳು ರಾಜಿಸುವ ಮುತ್ತಿನ
ಹೀನವಿಲ್ಲದ ಬೊಟ್ಟಿನಂತಾ ಗಂಗೆಯೊಪ್ಪಿದಳು || ೩೫ ||

ಅಷ್ಟವಸೂರುತನಧ್ವದೊಳ್ಸಲೆ
ಶಿಷ್ಟ ನಂದೀಶ್ವರ ಸಪತ್ನಿಕ
ತುಷ್ಟನಾಗಿ ಗಣಂಗಳೋಲೈಸಲ್ಕೆಯೊಪ್ಪುವನು ||
ಶ್ರೇಷ್ಠದಿಂ ನವವಾಯುವಿನೊಳಂ
ಕಷ್ಟವಿಲ್ಲದೆಯೊಪ್ಪುವರು ತವೆ
ಪ್ರಸ್ಟರೊಬಂತ್ರದರ ಮೇಲೆ ದಶಾನಿಲನ ಪದದೆ || ೩೬ ||

ತರುಣಿಗಳು ಪನ್ನೆರಡು ಪನ್ನೊಂ
ದುರುತರದ ಘನರುದ್ರರೆಂಟು
ಸ್ಥಿರದ ವಸುಗಳಿರ್ಪರಾ ತಾಣದೊಳು ರಂಜಿಸುವ ||
ಅರುಣರಾಗದ ರದನವೇ ಪರಿ
ಕರವದೆಂತೆನೆ ಸರ್ವಸುರಮುಯೆ
ಯರಿದೆಸಿಪ ತಚ್ಚಕ್ರವೇ ವಿವರಿಸಲು ಸಲೆಯಜ್ಞ || ೩೭ ||

ಸ್ವರಗಳೇಳುಂ ಹೊಂಕರಿಪ ಘನ
ತುರಗ ಸಂತತಿಯವಕೆ ಹಗ್ಗಗ
ಳುರಗಗಳ್ಸಾರಥಿಯೆಯರುಣಂ ಸತ್ಯವೇ ಹಂಚಂ ||
ಹರುಷದಿಂ ತಾನಾಗಿಯಾ ಬಂ
ಧುರದಿ ಸನ್ನುತ ಕಾಲ ಚಕ್ರದ
ವರ ರಥವನಡರುತ್ತೆ ಚರಿಸುವ ಸೂರ್ಯನನವರತಂ || ೩೮ ||

ಆ ರವಿಯ ತನು ನವಸಹಸ್ರದ
ಚಾರು ಯೋಜನವದರ ಬಿಂಬವೆ
ಯಾರಯಲ್ಕಂತದಕೆ ಮೂರ್ಮಡಿಯಪ್ಪುದದು ಮತ್ತೆ ||
ಸೇರಿ ಮೂವತ್ತಾರು ಸಾವಿರ
[ಚಾರು] ಯೋಜನದಿಂದ [ಲಿ] ರುತಾ
ಸೂರ್ಯನರ್ಚಿಪನಲ್ಲಿ ತಾಮ್ರದ ಲಿಂಗನುಂ ಸತತಂ (?) || ೩೯ ||

ತರಣಿಯಿಾ ವಿಧದಿಂದ ತೋರುವ
ವರ ಭುವರ್ಲೋಕಂ ಧ್ವಾತಳ
ಕಿರದೆ ಕೇಳ್ಮತ್ತೊಂದು ಲಕ್ಷಂ ಚಂದ್ರ ಮೌಕ್ತಿಕದ ॥
ಪರಮ ಲಿಂಗಮನರ್ಚಿಸುತ್ತಾ
ಗೆರಡು ಲಕ್ಷದ ಯೋಜನದಿ ಬಂ
ಧುರದೆ ತೋರ್ಕುಂ ಮೂರುಲಕ್ಷದ ಯೋಜನದೊಳಿರ್ದು ॥ ೪೦ ॥

ಚಾರುನಕ್ಷತ್ರಂಗಳತ್ಯಾ
ಚಾರದಿಂದಂ ಹಲವು ವರ್ಣದ
ಸಾರ ಲಿಂಗಂಗಳನೆ ಭಜಿಸುವಂತಿರ್ಪವಂತಲ್ಲಿ ॥
ಧಾರಿಣಿಗೆ ಕೇಳೈದು ಲಕ್ಷದ
ಭೂರಿಯೋಜನದಲ್ಲಿ ಸೌಮ್ಯಂ
ಪೂರಭಕ್ತಿಯೊಳರ್ಚಿಪಂ ಮೌಕ್ತಿಕದ ಲಿಂಗವನು ॥ ೪೧ ॥

ಮುಂತೆ ಧಾರಣಿಗೇಳು ಲಕ್ಷದೊ
ಳಂತು ಶಕ್ರಂ ಪೂಜಿಪನಯಃ
ಕಾಂತ ಲಿಂಗಮನಿರದೆ ಮಹಿಗೊಂಬತ್ತು ಲಕ್ಷದೊಳು ॥
ಇಂತು ಭೌಮಂ ಸುಪ್ರವಾಳದ
ಕಾಂತ ಲಿಂಗಮನರ್ಚಿಪಂ ನಿ
ಶ್ಚಿಂತದಿಂ ಪದಿಮೂರು ಲಕ್ಷದ ಯೋಜನದೊಳಿರ್ದು ॥ ೪೨ ॥

ಸಾಂಗದಿಂದಂ ಪದ್ಮರಾಗದ
ಲಿಂಗಮಂ ಸಲೆ ಭಜಿಪನವನಿಗೆ
ಮಂಗಲದೆ ಹದಿನೈದು ಲಕ್ಷದ ಯೋಜನದೊಳಿರ್ದು ॥
ತುಂಗ ಮಂದಂ ಪೂಜಿಪಂ ಸಲೆ
ಕಂಗೊಳಿಪ ತವೆ ತಾಮ್ರಲಿಂಗಮ
ನಂಗಜಾಹಿತ ಮತ್ತೆಯಿಪ್ಪತ್ತೆಂಟು ಘನಲಕ್ಷ ॥ ೪೩ ॥

ಗಾವುದದೊಳಂತಷ್ಟವಸುಗ
ಳ್ಭಾವಿಸಲ್ಕೆ ನವಗ್ರಹಂಗ
ಳ್ತೀವಿದರುಣನ ವರ ಭುವರ್ಲೋಕದ ಸುಸಂಬಂಧ ॥
ಆವಗಂ ತಾನಾಗಿರ್ಪವು
ಭೂವಳಯದಿಂ ಮೇಲೆ ಯೆಂಭ
ತ್ತಾ ವಿಶೇಷದೊಳೈದು ಲಕ್ಷಾಂತರದಿ ಸ್ವರ್ಲೋಕಂ ॥ ೪೪ ॥

ಮುದದೊಳೊಪ್ಪುವುದಲ್ಲಿ ಸಲೆ ನೀ
ಲದ ಸುಲಿಂಗಮನರ್ಚಿಪಂ ಧ್ರುವ
ನದು ಧರೆಗೆ ತವೆ ಮೇಟಿಯೊಲ್ಬರತಾದಿ ನವಖಂಡ ॥
ಒದಗಿದವನೀಶ್ವರರನುಜ ಶಿವ
ಪದ ಭಜಕದೌತ್ತಾನಪಾದನ
ಸದಮಲದ ಸುತನಿಪ್ಪನಂತಾ ಭರತಖಂಡದೊಳು ॥ ೪೫ ॥

ಪರಮ ಪುಣ್ಯಂಗಳನೆ ಮಾಡಿದ
ನರರು ನಾಕವನೆಯ್ದೆ ಭೋಗಿಪ
ರರರೆ ತದ್ಭೋಗಂಗಳೆಲ್ಲಂ ತೀರುತಿರಲಾಗಿ ॥
ಮರಳಿ ಧರಣಿಗೆ ಬರ್ಪರಲ್ಲಿಂ
ತಿರುಗಿ ಸ್ವರ್ಗಕ್ಕೆ ಪೋಗಿ ರಾಟಳ
ದುರುತರದ ಘಟದಂತೆ ತೊಳಲುವರಾಗ ಜೀವಿಗಳು ॥ ೪೬ ॥

ಹರನ ಪಾದದ ಸೇವೆ ದೊರೆಕೊಂ
[ಡರ] ಶಿವಲೋಕನುಂ ಬಂ
ಧುರದೆತಾ [ವೈದಿ] ವರ ತಧ್ರುವಲೋಕದಿಂ ಮೇಲೆ (?)
ಎರಡು ಕೋಟಿಗಳಿರ್ಪುದಾಗಂ
ವರ ಮಹರ್ಲೋಕಂ ಬಳಿಕ್ಕಾ
ಧರೆಯೊಳಿಂದ್ರಾದ್ಯಖಿಳ ಸುರರೊಪ್ಪುವರು ಮತ್ತಲ್ಲಿ ॥ ೪೭ ॥

ನರಮೃಕಂಡುವಿನಣುಗನನಿಶಂ
ಸ್ಥಿರದೆ ಶರ್ವನನರ್ಚಿಸುತ್ತಂ
ಪರಮ ಋಷಿಗಳ್ಸಹಿತ ಮಾರ್ಕಂಡೇಯನೊಪ್ಪುವನು ॥
ಹರನನಂತಾ ಸ್ಥಾಣು ನಾಮದಿಯ
ರರೆಯರ್ಚಿಸುತಾಗ ಮುನಿಗಳೊ
ಳರಿದೆನಲ್ಕರಮೆಸೆದು ನಿತ್ಯತ್ವದೊಳೆ ಸಲೆ ತೋರ್ಪಂ ॥ ೪೮ ॥

ಶ್ರೀಕರದೊಳಾ ಸುಲಲಿತಂ ಮಹ
ರ್ಲೋಕದಿಂದಂ ಮೇಲೆ ತೋರ್ಪುದ
ನೇಕ ಹರುಷದೊಳೆಂಟುಕೋಟಿ ವಿಶಾಲದುದ್ದದೊಳು ॥
ಪ್ರಾಕಟಂ ಮಿಗೆ ದಿವ್ಯಸುಜನ
ರ್ಲೋಕವೊಪ್ಪುವುದನವರತವಾ
ಲೋಕದಲ್ಲಿ ವಸಿಷ್ಠ ಮೊದಲಾದವರು ರಂಜಿಪರು ॥ ೪೯ ॥

ಆ ಜನೋಲೋಕಕ್ಕೆ ಮೇಲೆ ವಿ
ರಾಜಿಪುದು ರವಿಕೋಟಿ ಗಣನೆಯ
ಯೋಜನದೊಳೊಪ್ಪುವುದು ಸುತಪರ್ಲೋಕವದರೊಳಗೆ ||
ನೈಜದಿಂ ಸನಕಾದಿಗಳ್ಸಲೆ
ಪೂಜಿಪರು ಪರಮೇಶನಂ ಮೇ
ಲೋಜೆಯಿಂ ಪದಿನಾರುಕೋಟಿ ವಿಶಾಲದೊಳ್ಸತ್ಯ || ೫೦ ||

ಲೋಕಮಿರ್ಪುದುವಲ್ಲಿ ಬೊಮ್ಮನ
ನೇಕ ಪರಿಯಿಂ ಪೂಜಿಪಂ ಸು
ಶ್ಲೋಕದಿಂದೆ ಶಿಲಾಸುಲಿಂಗಮನಂಗಭವರೊಡನೆ ||
ಆ ಕನಕ ಗರ್ಭನ ವಿಮಲ ಘನ
ಲೋಕದಿಂದಂ ಮೇಲೆ ಕೃಷ್ಣನ
ಲೋಕಮಿರ್ಪುದು ನೀಲಲಿಂಗಮನಚ್ಯುತಂ ಭಜಿಪಂ || ೫೧ ||

ಆ ಲಲಿತ ಹರಿಲೋಕದಿಂದಂ
ಮೇಲೆ ರುದ್ರನಲೋಕವಾರು ವಿ
ಶಾಲ ಕೋಟಿಗಳಿರ್ಪುದಾ ಲೋಕದೊಳು ನವರತ್ನ ||
ದಾಲಯಂ ರಂಜಿಸಿರ್ಪವು
ಲೋಲ ಸರ್ವರ್ತುಕ ಫಲಂಗಳು
ಲೀಲೆಯಿಂ ಸುರವನಿತೆಯರು ಗಂಧರ್ವನಾರಿಯರು || ೫೨ ||

ಪರದು ಘನವಗ್ನಿನಿವರೇಣ್ಯಂ
ವರ ವಸಿಷ್ಠಾ ವರದೆಯುಂ ಬಂ
ಧುರ ಗರಿಷ್ಠೆಯು ನವ ವರಾನುತ ರೋಹಿ ವರಸುತೆಯ ||
ಹರುಷದಿಂದೀಯೆಳು ಗಂಗೆಗ
ಳರರೆ ತೋರ್ಪವುವಲ್ಲಿ ಮತ್ತಂ
ಪರಿಮಳಂಗಳ ದೆಸೆಗೆ ಬೀರುತ ಕಮಲ[ಗಳ]ವಿತತಿ || ೫೩ ||

ಬಳಿಕ ರುದ್ರರು ಸೇವಿಸುತ್ತಿರೆ
ಯಳಿಕಲೋಚನನಿಪ್ಪನಾ ಧರೆ
ಕಳಸವೆಂಬಂದದೊಳೆ ತೋರ್ಕುಂ ಮೂರುಲೋಕಕ್ಕೆ ||
ತಿಳಿಯೆಯುದರಿಂ ಮೇಲೆ ಸಲೆ ಕಂ
ಗೊಳಿಪ ಸನ್ನುತ ದಂಡಪಾಣಿಯ
ಚರಿತ ಭುವನಂ ರಾಜಿಪುದು ಕೇಳ್ಚಂದ್ರಶೇಖರನೆ || ೫೪ ||

ಮುಗಿದುದಾ ಬ್ರಹ್ಮಾಂಡವಿಲ್ಲಿಗೆ
ಮಗನೆಯೊಳವಳೆಯುದ ವಿವರಮಂ
ಸೊಗಸು ಮಿಗೆ ಪೇಳಿದೆವು ಹೊರವಳಯದಲಿ ರಾಜಿಸುವ ||
ಸುಗುಣಿ ರುದ್ರರ ಪೇಳ್ವೆನೆನುತಂ
ಬಗೆದು ತೋಂಟದ ಸಿದ್ಧಲಿಂಗಂ
ಸಗುಣರಹಿತದ ಚಂದ್ರಶೇಖರಮೂರ್ತಿಗಿಂತೆಂದ || ೫೫ ||

ಸುಗುಣಿ ಕ್ಷಿತಿಭೃತ್ಸರ್ವತೋಮುಖ
ವಗಣಿತದೆಯುಗ್ರಾಸನಂ ನಂ
ಬುಗೆಯ ಧೈರ್ಯಂ ಬಳಿಕ ವೃಷದ್ರು ದೃಷ ಸುಪಾತಾಳ ||
ಜಗದ ಪತಿ ವರ ವೀರಭದ್ರಂ
ಮಿಗೆ ಸುಪಾಲಕರೆಂಬ ರುದ್ರರು
ಮಗನೆ ಕೇಳೀ ಹತ್ತುಹೊರಗಣಜಾಂಡದಡಿಯಲ್ಲಿ || ೫೬ ||

ಅರರೆಯಿರ್ದಚ್ಯುತನ ರಕ್ಷಿಪ
ರುರುತರದ ತ್ರಿದಶೇಶ್ವರಂ ಬಂ
ಧುರ ಪಿನಾಕಿಯು ಶಾ[ಸ್ತ್ರೈ]ವನ್ಯಯ ಭೂತಿ ಮರ್ದಕರು ||
ಕರವೆಸೆನ ವಜ್ರಾನಯಂ ಸು
ಸ್ಥಿರದ ಬದ್ಧಂ ನಾಕಪಾಲಿಗ
ಳಿರದೆಯಿಾ ದಶರುದ್ರರಿಂದ್ರನ ರಕ್ಷಿಸುತ್ತಿಹರು || ೫೭ ||

ನಿರುತದಿಂ ಕೇಳಕ್ಷಯಾಂತಕ
ಸರಸ ಭಸ್ಮಾಂತಕ ಮಹಾಜ್ವಲ
ನುರು ಸುಭಭೃವು ಹರಸತೇಜಂ ಪಿಂಗಳಂ ಖಾದಾ ||
ವರ ಹುತಾಶನನಗ್ನಿರುದ್ರ
ರ್ಭರದೊಳಿಂತೀ ಹತ್ತುವಹ್ನಿಯ
ಹರಿದಿನೊಳಗಿರ್ದನಲನಂ ರಕ್ಷಿಪರು ಸಂತಸದೆ || ೫೮ ||

ಹರುಷದಿಂದ ವಿಯೋಕ್ತ್ರ ಘನ ಬಂ
ಧುರದ ಸಲೆ ಸಂಯೋಕ್ತ್ರ ಧರ್ಮ
ಸ್ಥಿರದ ಪತಿ ನವಕಾಲ ರುದ್ರಂ ಕರ್ತುದಾತ್ತ ಮಹಾ ||
ವರ ವಿಧಾತೃ ಸಮೃತ್ಯು ಹರ ಬಂ
ಧುರದ ಕಾಲ ಸರುದ್ರರೀ ದಶ
ಪರಮ ರುದ್ರರು ದಂಡಧರನಂ ರಕ್ಷಿಸುತ್ತಿಹರು || ೫೯ ||

ಮರಳಿದಂಡಂ ರೋಹಿತಂ ಬಂ
ಧುರದ ಧೂಮ್ರಂ ಮುನ್ನರಾಜಿಪ
ವರವಿರೂಪಾಕ್ಷಂ ಬಳಿಕ್ಕತ್ಯೂರ್ಧ್ವ ಘನಶೇಷಂ ||
ಉರು ಭಯಾಂತಕರುದ್ರನುನ್ನತ
ಪಿರಿಯನೆನಿಪಾ ಕ್ರೂರಗುರು ನಿಂ
ತರರೆ ಚಕ್ರಂ ಹಂತ ಮರಣ ಮಹಾ ವಿಮಲ ರುದ್ರ || ೬೦ ||

ಇಂತೆಸೆವ ದಶರುದ್ರರುಗಳೋ
ರಂತೆ ನಿರುತಿಯ ಪಾಲಿಪುದು ಸಲೆ
ಮುಂತೆ ಭೀಷಣನುನ್ನತಂ ಜ್ವಾಲಾಂತಕಂ ಬಳಿಕಾ ||
ನಂತ ಘನ ವಡಬಾಖ್ಯ ದೀರ್ಘಂ
ಸಂತಸದೆ ಘನ ಬಾಹುಜನುವ
ತ್ಯಂತ ಭದ್ರಶ್ವೇತ ಮಹಾಬಿಲರುದ್ರ ಪಾಶಕರ || ೬೧ ||

ಹಿಂಚದಾ ದ್ವೇಷಾಭ್ರಕೇತು ಸು
ಪಂಚ ಸುರುದ್ರರು ಪ್ರಾ (?)
ಪಂಚವರಯದ ಚಾರು ವಿಕ್ಷೇಪೀಕ್ಲೈಯಾತ್ಮಕರು ||
ಮುಂಚೆ ಸಲೆ ಪಂಚಾಂತಕಂ ಕೇ
ಳಂಚಿತದ ಸೂಕ್ಷ್ಮಂ ಪ್ರವರ ನಿ
ರ್ವಂಚನೆಯಲಘು ರುದ್ರರನಿಲನ ಹೊರೆವರೀ ಹತ್ತು || ೬೨ ||

ಕಾಮರೂಪಂ ಸುಪ್ರಸಾದಿಯು
ನಾಮನೆನಿಸಿಪ್ಪಾ ಪ್ರಪಂಚಂ
ನೇಮದ್ರುಸ್ವವ ಸೌಮ್ಯಗಾತ್ರಂ ಧನ್ಯರೂಪಾಗಿ ||
ಕೋಮಲದ ಜಟಾರತ್ನಧಾರಿ
ಪ್ರೇಮದಿಂದೀ ಹತ್ತು ರುದ್ರರು
ಭೂಮಿಯೊಳು ಯಕ್ಷೇಶನಂ ರಕ್ಷಿಪರು ಸಂತಸದೆ || ೬೩ ||

ಪರಮ ಸುಖ ದುಷ್ಕರಣ ವಿದ್ಯಾ
ವರ ವಿಧಾಯಕನುತ್ಕರಂ ಬಲಿ
ಸ್ಥಿರದ ಸುಪ್ರಿಯ ಭೂತಪಾಲಂ ಪಿಂಗಳಂ ವೇದ ||
ಕರಿ ಸುವೇದಂ ಚೇಷ್ಟಿಸಲೆ ಬಂ
ಧುರದ ಸರ್ವಜ್ಞಂ ವಿಶಿಷ್ಟೋ
ತ್ಕರದ ವಿದ್ಯಾಜ್ಞಾನದಶರಿಹರೀಶನಂ ಪೊರೆಯೆ || ೬೪ ||

ಉರು ವಿಚಕ್ಷಣ ನರವಿವಿಷ್ಸಂ(?)
ವರ ನಭೋರುದ್ರಂ ವಿವಾಹಂ
ಸ್ಥಿರದೆ ಸಂವಾಹಂ ಮಹಾಸುರಪೂಜ್ಯನಾ ತ್ರ್ಯಕ್ಷಂ ||
ಧರೆಯೊಳು ಗಣಾಧ್ಯಕ್ಷ ವಿಭು ಬಂ
ಧುರದೆ ಶಂಭುಗಳೆಂಬ ರುದ್ರರು
ಪೊರೆವರೀ ಬ್ರಹ್ಮಾಂಡದಿಂ ಮೇಲಿರ್ದು ಸಂತಸದೆ || ೬೫ ||

ಈ ತೆರದ ಶತರುದ್ರರಿಗೆ ಸಂ
ಪ್ರೀತಿಯಿಂ ಪತಿಯಾಗಿ ಸತತಂ
ಪೂತ ವೀರೇಶನನಿಶವೊಪ್ಪುವನು ಕೇಳೆಂದು ॥
ರೀತಿಯಂ ಸಿದ್ಧೇಶ್ವರಂ ವಿ
ಖ್ಯಾತನಪ್ಪರು ಚಂದ್ರಶೇಖರ
ಗೋತು ಪೇಳಿದನಲ್ಲಿಗಂ ಬ್ರಹ್ಮಾಂಡ ಮುಗಿಯಿತ್ತು || ೬೬ ||

ಬಲದ ಕಣ್ಗಣುಗನನಿರದೆ ನೀಂ
ಸಲೆ ಯೆಡದ ಕಣ್ಗಿಳಿಯ ಮಗನಂ
ವಿಲಸಿತದ ನಡುಗಣ್ಣ ಕಿಡಿಗಾಹುತಿಯನಂದಿತ್ತು ||
ನೆಲದೊಳತಿಶಯ ಪಕ್ಷಪಾತವ
ನೊಲಿಯದೊಲು ಕಾಣಿಸುವೆಯೆನ್ನೊಳು
ನೆಲೆಯ ನೀನು ಸುಭಕ್ತಹಿತ ಸಿತಕಂಠದೇಶಿಕನೆ || ೬೭ ||

ಇದು ವಿಮಲಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರ ||
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣಮು
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವುದು || ೬೮ ||

ಅಂತು ಸಂಧಿ ಲಕ್ಕಂ ಪದನು ೪೨೩ಕ್ಕಂ

ಮಂಗಳಂ

ಒಂಬತ್ತನೆಯ ಸಂಧಿ

ವರ ವಿರಾಡ್ರೂಪನ ವಿವರಮಂ
ಪಿಂಡದೊಳಿಪ್ಪಜಾಂಡನು
ನರರಿ ಪೇಳ್ದಂ ಸಿದ್ಧಲಿಂಗಂ ಜ್ಞಾನಿಗಳು ಮೆಚ್ಚೆ ||

ಗೋಮಿನೀಪತಿಶರ ಪುರಾಂತಕ
ಸೋಮ ಸಕಲ ಕಿರೀಟ ಕಾಮವಿ
ರಾಮ ಸಾಮಪ್ರೇಮ ದೇವಲಲಾಮ ಯಮಭೀಮ ||
ಕೋಮಲಾಂಗ ಕುಮಾರಪಿತ ಹಿಮ
ಧಾಮ ವರತನುಜಾಮನೋಹರ
ತಾಮರಸ ನುತಪದನೆ ಸಲಹೈ ಸಿದ್ಧವಟನಾಥಾ || ೧ ||

ಹರುಷದಿಂದಂ ಭುವನಕೋಶವ
ನಿರದೆ ತೋಂಟದ ಸಿದ್ಧಲಿಂಗಂ
ತ್ವರಿತದಿಂದಂ ಪೇಳೆ ಕೇಳುವ ಚಂದ್ರಶೇಖರ ||
ಕರಕಮಲಮಂ ಮುಗಿದು ನುಡಿದಂ
ಗುರುವೆಯಂಡವಿದೊಂದು ಮತ್ತಂ
ಪರಿಪರಿಯೊಳಂ ಬೇರೆಯುಂಟೊ ನಿರೂಪಿಸೆಂತೆನಲು || ೨ ||

ವರಸುಖಾವಹ ಮೂರ್ತಿ ಮುನಿಗಳಿ
ಗೊರೆದ ತೆರದಿಂ ಪೇಳಿದಂ ಬಂ
ಧುರದ ಗುರು ಸಿದ್ಧೇಶ ಭವನಾಬಲದ ಭುಜದಲ್ಲಿ ||
ಸರಸಿಜಾಸನನೊಗೆದನವನಿಗೆ
ಸರಸನವಸುತರಾದರವರೊಳ
ಗರರೆ ಕಶ್ಯಪವಿಧಿಗೆ ಹದಿಮೂರಂಗನೆಯರುಂಟು || ೩ ||

ಅವರು ಮಾಯಾ ಬ್ರಹ್ಮಪುತ್ರಿಯ
ರವರ ನಾಮ ಬೃಹತಿಯದಿತಿಯು
ನವದಿತಿಯು ಘನಕದ್ರು ವಿನುತೆಯು ಸುಪ್ರಭಾದೇವೀ ||
ಕುವರ ಕುಮುದಿನಿ ಸಲೆ ಸುವರ್ಣೆಯು
ಭುವನದೊಳಗಂ ಕಾಲದಂಡಿಯು
ಮವರಿಗಿಂದಂ ಕಿರಿಯಳಪ್ಪಳು ಮೇಘದಂಡಿಯಲಾ || ೪ ||

ಅವಳನುಜೆ ದಾತ್ರಪ್ರಭೆಯು ಮತ್ತಂ
ತವಳನುಜೆ ಕುಸುಮವತಿ ಬಳಿಕಂ
ತವಳನುಜೆ ಪಾರ್ವಂದಿಯೆಂದಬಲೆಯರು ಪದಿಮೂರು ||
ಯುವತಿಯರಿಗಂದೊಗೆದ ತನುಜರ
ವಿವರವೆಂತೆನೆಯಾ ಬೃಹತಿಗಂ
ತವಕದಿಂ ದೈತ್ಯಾಳಿಯೈವತ್ತಾರು ಕೋಟಿಯಲಾ || ೫ ||

ಅದಿತಿಗಿಂದ್ರಾದ್ಯಮರರಾಗುದಿ
ಸಿದರುದಿತಿಗಂ ರಕ್ಕಸರು ಪು
ಟ್ಟಿದರು ಕದ್ರುವಿನಲ್ಲಿ ನಾಗಗಳೊಗೆದರಿನ್ನು ||
ಮುದದೆ ವಿನುತೆಯೊಳುದ್ಭವಿಸಿದರ್
ಪದಪಿನಿಂ ಸೌದಾಮಿನಿಗಳುರೆ
ಸದಮಲದೊಳಂ ಸುಪ್ರಭಾದೇವಿಯೊಳುವಾಭರಣಂ || ೬ ||

ನವ ಮಹಾರತ್ನಾದಿಗಳು ಸಂ
ಭವಿಸಿದವು ಕುಮುದಿನಿಯೊಳಂ ದಶ
ವಿಧದ ದಿಗ್ಗಜ ವನಮೃಗಾದಿಗಳಾದವಾ ಪ್ರಭೆಯಿಂ ||
ಅವನಿಯೊಳಗಂತಷ್ಟಲೋಹ
ಪ್ರವರ ಪರುಷಾದಿಗಳು ಜನಿಸಿದ
ವವಿರತಂ ಪೇಘಾಳಿಯುದಯಂ ಕಾಳದಂಡಿಯೊಳು || ೭ ||

ಆದಿ ಧಾತು ಪ್ರಭೆಯೊಳಂ ಕೂ
ರ್ಮಾದಿ ಜಲಚರ ಜೀವಿಗಳು ತಾ
ವಾದವಾ ಕುಸುಮಾವತೀ ದೇವಿಯೊಳು ಸುರಧೇನು ||
ಆದಿ ಸುರವೃಕ್ಷಂಗಳಾದವು
ಮೋದದಿಂದಂ ಪಾರ್ವದಿಯೊಳ್ಸಸಂ
ಪಾದಿಸಲ್ಪರ್ವತಗಳಾದವು ಮುಂದೆ ಕೇಳಿನ್ನೂ || ೮ ||

ಆ ಲಲಿತ ಕಶ್ಯಪನ ಸತಿಯರ
ಮೂಲ ಮಲ ಸಂಬಂಧದಿಂ ಕ್ರಿಮಿ
ಜಾಲಮೊಗೆದವು ಬಳಿಕವಾ ವನಿತೆಯರ ಚಿತ್ತದೊಳು ||
ಕಾಲ ಭೀತಿಗಳೊಗೆದವವರ ವಿ
ಶಾಲ ಮಧ್ಯದೊಳೊಗೆದವಖಿಳ
ಸ್ಥೂಲ ನಾಗಗ್ರಹ ಪಿಶಾಚಗ್ರಹ ಮಹಾಗ್ರಹವು || ೯ ||

ಸುಕರದಿಂ ಕೇಳಿಂತಿವಾದಿಯ
ಸಕಲ ಸಂಭವ ಕಾರಣಂ ಸ
ತ್ಪ್ರಕಟ ಕಶ್ಯಪನವರಿರದೆಯಾ ಬ್ರಹ್ಮನೊಳೊಗೆದಂ ॥
ಅಕುಟಿಲದ ಸರ್ವೇಶ ಲೋಕದ
ನಿಕರಕರಂ ತವೆ ಪರವು ಬೀಜಂ
ಮಕರವೈರಿಯ ಅಕ್ಷಿಯ ಎವೆಯ ಚಲನದಲಿ (?) ॥ ೧೦ ॥

ನೋಟದಿಂ ಬ್ರಹ್ಮಾಂಡ ವೃಂದಂ
ಕೋಟಿಗಳ್ಸಲೆ ಪುಟ್ಟಿದವು ಶಶಿ
ಜೂಟನಿಂ ವರ್ತಿಪವು ತವೆ ಲಯವಪ್ಪವಂತಲ್ಲಿ ॥
ಮಿಾಟಿನಿಪ್ಪಾ ಸಾನುಚರವಿಧಿ
ಯಾಟದಿಂದಂ ಪಲವು ಪರಿಯ ಸ
ಘಾಟದ ಬ್ರಹ್ಮಾಂಡವಾದವವೆಂತೆನಲ್ಮತ್ತೆ ॥ ೧೧ ॥

ಶರಧಿ ಖಂಡಂ ದ್ವೀಪವಾದಿಯ
ಪರವು ಲೋಕಂಗಳ ವಿನುತದಿಂ
ಹರುಷದಿಂ ಪರಿವೇಷ್ಟಿಸಿರ್ದತಿಯಂಡವೈದೈದು ॥
ಸರಸಕೋಟಿಗಳುನ್ನತದೊಳೊಂ
ದುರು ಸುಕೋಟಿಯು ಯೋಜನಂ ತಾ
ನರರೆಯಿಪ್ಪ ವಿಶೇಷಧರೆಯೂರ್ಧ್ವದ ಮಹಾಕಾಶ ॥ ೧೨ ॥

ಪರಿಕಿಸಲು ಇಪ್ಪತ್ತನಾಲ್ಕು
ಸ್ಥಿರದ ಕೋಟಿಯ ನೆಲೆಯೊಳಿಪ್ಪುದು
ಹರುಷದಿಂ ತ್ರಿಸ್ಥಾನಮೇಕಂ ತವೆ ಶತಾರ್ಥ ಮಹಾ ॥
ನಿರುತ ಕೋಟಿ ಸಯುಕ್ತ್ರಮಾಣ
ತ್ವರಿತ ತದ್ಧರೆ ಯುಕ್ತನಹ ಜಲ
ಸರಸ ಮಧ್ಯಮದಪ್ಪಜಾಂಡಾಧಾರವೆಂತೆನಲು ॥ ೧೩ ॥

ನೀರ ಮೇಲೊಪ್ಪುವ ಕಮಠ ಸಂ
ಚಾರವಿಲ್ಲದೆ ತಳೆದಜಾಂಡನು
ನಾರಯಲ್ತಾ ನಿರ್ಪುದಾ ಕೂರ್ಮನ ಬಳಸಿಯುಪ್ಪ ॥
ಸಾರ ದಿಕ್ಕಿನ ಸುತ್ತಣರುಗಂ
ಸೇರಿ ಮೇಟಿಗಜಂಗಳಿಪ್ಪವು
ಧೀರನೇಯಾ ಕರಿಗಳುನ್ನತ ನಾಮವೆಂತನಲು ॥೧೪ ॥

ಮಂಡಲದೊಳೈರಾವತಂ ಮಿಗೆ
ಪುಂಡರೀಕಂ ವಾಮನಂ ಸಲೆ
ಜಾಂಡ ಕುಮುದೋಂಜನ ಮಹಾನವ ಪುಷ್ಪದಂತ ಸದಾ ||
ಖಂಡದಿಂದಂ ಸಾರ್ವಭೌಮನೋ
ದ್ದಂಡಮಪ್ಪಾ ಸುಪ್ರತೀಕಗ
ಳಂಡಕಂ ಹೆಗಲಿತ್ತು ದಿಗ್ಗಜಮಿಪ್ಪನಂತವರ || ೧೫ ||

ಕೊರಳುಗಳ ಸಲೆ ಬಳಸಿಕೊಂಡುರೆ
ಯುರಗ ರಾಜಂ ತನ್ನ ದಶಶತ
ವರುಷಣಾಳಿಯನಾಂತಿರುತ್ತಿರೆ ತವೆ ವಿದಿಕ್ಕಿನಲಿ ||
ಭರದೊಳಂ ತಾಯಷ್ಟಕುಲ ಫಣಿ
ನಿರುತದಿಂ ಬಿಗಿದಿರ್ಪವೆಂತೆನೆ
ಸುರಪಶಿಖಿ ಮಧ್ಯಾದಿಯಿಂದಂದೆಂಟು ದೆಸೆಯಲ್ಲಿ || ೧೬ ||

ಉರಗನಾಯಕನಂತ ತಕ್ಷಕ
ನಿರದೆ ವಾಸುಕಿ ಶಂಖಪಾಲಂ
ಧರಣಿಯೊಳಗಂ ಪದ್ಮ ಸಲೆ ಕರ್ಕೋಟಕಂ ಶ್ರೋಡಕಂ ||
ಸರಸಿರುಹ ಗರ್ಭಾಂಡಕಂ ತಾ
ನರರೆಯಾಧಾರಂಗಳಪ್ಪವು
ನಿರುತದಿಂದವರವರ ಭೋಜನಕಾಲವೆಂತೆನಲು || ೧೭ ||

ದಿಗ್ಗಜಂಗಳ ಭೋಜನದೊಳಂ
ಹಗ್ಗವಾಗಿರ್ಪಷ್ಟ ಫಣಿಗಳು
ಮುಗ್ಗದಂತೆಯಜಾಂಡಮಂ ಪೊತ್ತಿರ್ಪವಾ ಶೇಷಂ ||
ಅಗ್ಗಳದೊಳುಂಬಲ್ಲಿಯಾನೆಗ
ಳೊಗ್ಗಿನಿಂ ಪೊತ್ತಿರ್ಪವಹಿಗಳು
ವೆಗ್ಗಳದೆ ಸವಿನಲ್ಲಿ ಪೊತ್ತಿರ್ಪಂ ಮಹಾನಾಗಂ || ೧೮ ||

ಇಂತಿವಕೆಯಾಧಾರಮಪ್ಪುದ
ದೆಂತೆನಲ್ಕೈವಶಕ್ತಿ ಕೇಳೋ
ರಂತೆ ಮೂಲಗ್ರಂಥಿಯಾ ಬ್ರಹ್ಮಾಂಡ ಗರ್ಭದೊಳು ||
ಮುಂತೆ ಸಲೆ ಹದಿನಾಲ್ಕು ಲೋಕಗ
ಳಂತರಾಂತರವಾಗಿ ಕುಹರಗ
ಳಂತಮಿರ್ಪವು ಮತ್ತೆಯಾ ಲೋಕಂಗಳೊಳು ನೋಡೆ || ೧೯ |

ವರ ವಿರಾಡ್ರೂಪನ ಪದಂಗ
ಳ್ಪರದೆ ಕೂರ್ಮನ ಬೆನ್ನನಂಟೆ
ಪ್ಪುರಿಪ ಮಕುಟವೆ ಕಮಲಸಂಭವನಂಡದಿಂ ನೋಡೆ
ಧರೆಯೊಳಂ ಸಲೆ ಹತ್ತು ಮತ್ಸ್ಯ
ಸ್ಥಿರದೆ ತವೆ ಬೆರಲುದ್ದದಿಂ ಸಂ
ಚರಿಸದೊಪ್ಪುವ ನಿಖಿಳವೇದಕಶಕ್ಯವೆಂದೆನಿಸಿ || ೨೦ ||

ಆ ವಿಮಲ ಶಿವನಾಜ್ಞೆಯಿಂದಂ
ಭಾವಿಸಲ್ಕಂತಾ ಮಯೇಶಂ
ಭೂವಳಯಕಾಧಾರವಾಗಿರುತಿರ್ಪನಾಮಯನು ||
ತೀವಿದಾ ಹರಿರೂಪನಾಂತಿಹ
ನಾವಗಂ ಕೇಳ್ ತ್ವಷ್ಟ್ರ ಜನನಕೆ
ಯೋವಿಕಾರಣಯೆನಿಕುವಂತಲ್ಲದೆಯುಮಾ ಬಳಿಕ || ೨೧ ||

ಸಕಲ ರಕ್ಷಕನಾ ಮಹೇಂದ್ರಂ
ಸುಕರ ಭಾಸ್ಕರ ರೂಪಕಂ ತಾಂ
ಪ್ರಕಟದಿಂದಂ ಸ್ವರ್ಣಕಾರಿಗಳೆಂಬರ್ರೈವರಲಾ ||
ಅಕುಟಿಲದೊಳಿಂತಮರವಶನ್ವೆ
ವ್ಯಕಲನೇ ಬ್ರಹ್ಮಾಂಡಗಳ ಸತಿ
ನಿಕರವಿನ್ನೆಂತೆಂದೊಡಾತನೆ ಮಧ್ಯವೆನಿಸಿರ್ಪಾ || ೨೨ ||

ಪುಂಡರೀಕ ಭವಾಂಡಮುಂ ಬಹಿ
ರಂಡಗಳು ಒಂದಾದಡಲ್ಲಿಯ
ಖಂಡಿತ ಬ್ರಹ್ಮಾಂಡ ಚಕ್ರಾಕೃತಿ ಮಹಾತ್ರಯದ ||
ಚಂಡ ವಿಸ್ತರ ಪಂಚಶತಕೋ
ಟ್ಯಂಡ ಮಾನವರೀ ಪರಿಯೊಳಂ
ತಂಡದಿಂದಂ ಬಾಹ್ಯಘನ ಸಕ್ಷೋಭದಿಂದೆಸೆವ || ೨೩ ||

ಚಾರು ಸಂಖ್ಯಾಧಿಕವಲ್ಲೈ ಮ
ತ್ತಾರಯಲ್ಪಟ ಫಲ ಸಮಾನವ
ನಾರತಂ ಬ್ರಹಾಂಡವಿರದೆ ಮಹಾಂಡನಂತು ಮಹಾ ||
ವಾರಿರುಹ ಗರ್ಭಾಂಡ ವರಗಂ
ಭೀರಮಪ್ಪಪರಾಂಡ ನುತಪರ
ಸಾರದಿಂದೆಯಜಾಂಡನಂತಲ್ಲದೆಯು ಕೇಳಿನ್ನೂ || ೨೪ ||

ಭೈರವಾಂಡಂ ಕುಕ್ಕುಟಾಂಡಂ
ಚಾರುತರದಪರಾಂಡನಂತುರೆ
ಸಾರದಿಂದಂ ವರ ಮಯೂರಾಂಡಾದಿ ಮೊದಲಾದ ॥
ಭೂರಿಯಂಡಗಳಾಗ ಶಿವನಾ
ಧಾರದಿಂದಂ ತೋರ್ಪವೆಂದಾ
ಮಾರಹರ ಸಿದ್ಧೇಶನುಸುರ್ದಂ ಚಂದ್ರಶೇಖರಗೆ ॥ ೧೫ ॥

ತರುಣ ಕೇಳ್ ಬ್ರಹ್ಮಾಂಡವೃಂದಂ
ಪರಮನಾ ಉದರದೊಳಗಿರ್ಪವು
ನಿರುತದಿಂದೆಂತೆನಲುವತ್ತಿಯ ಮರದೊಳುಂ ಪಣ್ಣು ॥
ಪರಿವಿಡಿಯೊಳೆಂತಿರ್ಪವಂತಾ
ಪರಿಯೊಳಬ್ಜಭವಾಂಡನೆಸೆವವು
ಹರಿಯಜರುವಾ ಪಣ್ಣೊಳೊಪ್ಪುವ ಗುಂಗುರುಗಳಂತೆ ॥ ೧೬ ॥

ಎಂದು ತೋರಿಂಟದ ಸಿದ್ಧಲಿಂಗಂ
ಚಂದದಿಂ ಕೈಮುಗಿದು ಕೇಳುವ
ಸೌಂದರದ ಗುರು ಚಂದ್ರಶೇಖರ ದೇವರಿಗೆ ಭುವನ ॥
ವೃಂದವೆಲ್ಲಂ ಪಿಂಡಮೊಳಗಿ
ರ್ಪಂದವಂ ಸಲೆ ಪೇಳತೊಡಗಿದ
ನಂದು ಸುವಿರಾಡ್ರೂಪನುನ್ನತಿಯೆಂತೆನಲು ಕೇಳು ॥ ೧೭ ॥

ಒಂದು ಮಸ್ತಕವೊಂದು ನಾಸಿಕ
ವೊಂದು ರಸನೆ ವಿಲೋಚನಂಗ
ಳ್ಚಂದದಿಂದೆರಡಾ ವಿಶೇಷದ ವರಭುಜದ್ವಯವು ॥
ಒಂದೆರಡು ಶ್ರೋತ್ರಗಳ್ನಲ
ವಿಂದ ಪಾದಗಳೆರಡು ಪೂರ್ಣಾ
ನಂದವೆನಿಪುದು ಭಕ್ತಜಂಗಮವರವಿರಾಡ್ರೂಪು ॥ ೧೮ ॥

ಸಕಲವಿಷ್ಟಪಮಯ ಸುಲಿಂಗಂ
ಸುಕರಲಿಂಗಮಯಂ ವಿಶಿಷ್ಟಾ
ಧಿಕ ಸದಾವಿಭು ಭಸಿತದಿಂದಂ ಭಾವಿಸಲ್ಪಟ್ಟಂ ॥
ಅಕುಟಿಲದ ಶಿವನೀ ತ್ರಿಲೋಕ
ಪ್ರಕಟ ರೂಪಕನಪ್ಪನಾ ಪಾ
ವಕನಯನನ ಪಾದಮತಳಂ ಶರ್ವನದಿ ವಿತಳಂ ॥ ೧೯ ॥

ಹಾನಿಯಲ್ಲದೆ ಜಂಘೆ ಸುತಳಂ
ಜಾನುವೆರಡುಂ ನಿತಳವಲ್ಲಿ ನ
ವೀನದೂರುದ್ವಯ ತಳಾತಳವತಿಶಯದ ಗುಹ್ಯಂ ||
ನೂನದಿಂದೆ ರಸಾತಳಂ ಕಟಿ
ಪೀನ ಪಾತಾಳಂ ಬಳಿಕವನು
ಮಾನವಿಲ್ಲದಧೋಭುವನವೇಳಿನ್ನು ಕೇಳ್ಮುಂದೆ || ೩೦ ||

ಹರುಷದಿಂ ಭೂಲೋಕವೆ ಬಂ
ಧುರದ ನಾಭಿ ಬಳಿಕ್ಕ ಕೇಳ್ಳೈ
ವರ ಭುವರ್ಲೋಕವೆ ಹೃದಯವಂತಾ ಸುವರ್ಲೋಕಂ ||
ಉರೆ ಮಹರ್ಲೋಕವೆ[ಗಳವುಂ] ಸು
ಸ್ಥಿರ ಜನರ್ಲೋಕವೆ ವಿಚಾರಿಸೆ
ಯರರೆ ತೋಳು ಸದಾ ತಪರ್ಲೋಕವೆ ಲಲಾಟವಲಾ || ೩೧ ||

ಸತ್ಯಲೋಕಂ ಜ್ಞಾನಮಯ ಶಿರ
ವತ್ಯಧಿಕದಿಂದಂ ಚತುರ್ದಶ
ನಿತ್ಯಲೋಕಂ ಗಾತ್ರವಾ ನಭ ಸುಪ್ರಭಾಮಯವೂ ||
ಕೃತ್ಯದಿಂ ಪಾತಾಳವೇ ಕೇಳ್
ಶ್ರುತ್ಯಧಿಕ ನಿಜಪದಯುಗಂ ತಾಂ
ಪ್ರತ್ಯಯಿತ ಚಂದ್ರಾಗ್ನಿ ನೇತ್ರಗಳೆರಡು ಮತ್ತಿನ್ನೂ || ೩೨ ||

ಮೇರುಗಿರಿಯೇ ಕರದಲಿಂಗಂ
ತಾರವೃಂದಂ ಕುಸುಮ ಸಂಚಯ
ವಾ ರಮಾಕರ ಪರ್ವತ ಕುಲಂ ಗಳದ ರುದ್ರಾಕ್ಷಂ ||
ಚಾರು ಮಾಲೆಯನಾದಿ ರೂಪಿನ
ಸಾರಭಕ್ತಂಗಾದಿರೂಪಂ
ಗಾರಯಲ್ಕಿ ಜವಾದಿಯಂತ್ಯರಹಿತ ವಿರಾಡ್ರೂಪಂ || ೩೩ ||

ಅವನ ಚರಣದೊಳಂ ಧರಣಿ ಮ
ತ್ತವನ ಪದದೊಳು ಶೂದ್ರರುಂ ಬಳಿ
ಕವನ ನಾಮದೊಳಚ್ಯುತಂ ಬಳಿಕವನ ಬಲದಲ್ಲಿ ||
ತವೆ ಪಿತಾಮಹನವನ ಮುಖದೊ
ಳ್ಪ್ರವರ ರುದ್ರಂ ಬಳಿಕವಾ ಘನ
7 ಶಿವನ ಮನದೊಳ್ಚಂದ್ರರಾದಿಯರುದ್ಭವಂಗಳಲಾ || ೩೪ ||

ಅವನ ನಯನದೊಳರ್ಕನಂತಾ
ಶಿವನ ಗೋಣದೊಳನಿಲನಂತಾ
ಶಿವನ ಶಿರದೊಳ್ಸರ್ವ ನಿರ್ಜರರಾ ಶಿವನ ದಿವ್ಯ
ನವ ಲಲಾಟದೊಳಭ್ರವಂತಾ
ಶಿವನ ತುಂದಿಯೊಳಗ್ನಿಯಂತಾ
ಶಿವನ ಗುಹ್ಯದೊಳುದಕ ತತಿ ಯುದ್ಭವವಲಾ ವುತ್ತೆ || ೩೫ ||

ಅವನ ಸರ್ವಾವಯುವದೊಳಾತ್ಮರು
ವವನ ನಾಭಿಯೊಳಂತರಿಕ್ಷಗ
ಳವನ ಕರ್ಣದೊಳಂ ದಶಾಸುಗಳ ವನ ಘನತರದ ||
ವಿವಿಧ ಸರ್ವಾಂಗದ ಬೆವುರೊಳಂ
ತವೆ ಚರಾಚರರಾದರೆಂದಾ
ಭವಹರಣ ಸಿದ್ಧೇಶನುಸುರ್ದಂ ಚಂದ್ರಶೇಖರಗೆ || ೩೬ ||

ವಿಗ್ರಹಸ್ಥಾಖಿಲ ಸುತತ್ವದೆ
ಯುಗ್ರ ಸವಿರಾಡ್ರೂಪವಾದುದು
ವಗ್ರ ನಿಖಿಲದೊಳಂ ಬಳಿಕ್ಕಾ ಸೂಕ್ಷ್ಮರೂಪಿಂದ ||
ವ್ಯಗ್ರವಿಲ್ಲದೆ ವೋಹಿಕೊಂಡಿ
ಪ್ಪುಗ್ರನಾವಂ ವರಹಿರಣ್ಯ ಗ
ರ್ಭೋಗ್ರವಂತದರಂದವಂ ಮುಂದೊರೆವೆನೆಂತೆನಲೂ || ೩೭ ||

ಸರ್ವಚೇತನ ತತ್ವ ಚೈತ
ನ್ಯೋರ್ವಿನಿಂ ಪರಮೇಶ್ವರಂ ಸಲೆ
ಗುರ್ವಿನಿಂ ಪರತತ್ವ ಪರಶಿವನಿತ್ಯ ನಿಷ್ಕಳನು ||
ಸರ್ವಪೂರ್ಣಂ ತಪ್ತಕನಕಾ
ಖರ್ವಕಾಂತಿ ಸಮಾನಗಾತ್ರಂ
ಸರ್ವತತ್ವಾತ್ಮಕ ಹಿರಣ್ಯಗರ್ಭಂ ಮಹಾದೇವಂ || ೩೮ ||

ಆ ವರಹಿರಣ್ಯ ಗರ್ಭನೆಂಬುದ
ದಾವಗಂ ಸಲೆ ಮೂದೆರಂ ಸ
ದ್ಭಾವಿಯೇ ಕೇಳ್ಪ್ರಾಜ್ಞ ತೈಜಸ ವಿಶ್ವವೆಂದುಮಿದು ||
ಆ ವಿಶೇಷದ ಮೂರು ತತ್ವಂ
ಕೋವಿದನೆ ಕಾಲಾಂಗನಂತಾ
ಯೋವಿ ನಾದಂ ಬಿಂದು ಕಲೆಯಿಾತ್ರಯವದಿನ್ನಿರದೆ || ೩೯ ||

ತರುಣ ಕೇಳ್ ಜೀವಾತ್ಮ ಗುಣದ
ಸ್ಥಿರದವಸ್ಥೆಗಳಿರದೆ ಮೂರ್ವಿಧ
ವರಿದೆನಿಪ್ಪಾ ನವ ಹಿರಣ್ಯಗರ್ಭನೊಳು ತವೆ ಪಂಚ
ಸರಸ ಶಕ್ತಿಗಳುದಿಸಿಯಾ ಬಂ
ಧುರದ ಶಕ್ತಿಗಳಿರದೆ ಮತ್ತಂ
ಭರದೊಳಾಗಿಹವಲ್ಲಿ ಜೀವ ಪ್ರೇರಕಾಯುತ್ತಂ || ೪೦ ||

ಆ ಹಿರಣ್ಯಗರ್ಭಂ ಬಳಿಕ್ಕಂ
ಮೋಹಿಯೆ ಕಾಯತ್ರಯಾತ್ಮ
ಗ್ರಾಹಕ ತ್ರಯ ತತಿಗಳಾದುದನೊರೆವೆನ್ನೆ ಪ್ರಾಜ್ಞ ||
ಆಹ ಘನ ಪರಮಾತ್ಮನಾದಂ
ಬೇಹ ತೈಜಸನಂತರಾತ್ಮಂ
ಸ್ನೇಹಿಯೇ ಸಲೆ ವಿಶ್ವನೇ ಜೀವಾತ್ಮನಾದನಲಾ || ೪೧ ||

ಆ ಶಿವನೆ ಸಲೆ ನಿಷ್ಕಲಂ ಜಿತ
ಪಾಶನೇ ತಾನಾತ್ಮನಿರವಯ
ನೀಶನೆನುತಾ ನಾಮರೂಪ ಕ್ರಿಯೆಗಳಿಲ್ಲವಿದು ||
ಈಶನುಂ ತವೆ ಸ್ವೇಚ್ಛೆಯಿಂ ಮಾ
ಹೇಶ ತನುವಂ ತಳೆವನಾದಿಯೊ
ಳಾಸುವಿಂ ಪರಮಾತ್ಮನೆರಡು ಸುದೇಶದೊಳಗಿನ್ನೂ || ೪೨ ||

ಅಂತರಾತ್ಮಂ ಮೂರರೊಳು ನಿ
ಶ್ಚಿಂತ ಶಿವನೇ ಸಿದ್ಧ ಪರಮಾ
ತ್ಮಾಂತಕಾರಿಯೆ ವರಶಿವಂ ಘನಲಿಂಗವೆಂದಾಗ ||
ಸಂತಸದೊಳಂ ವಿಶ್ವಚೇತನ
ನಂತ ಸಾಕ್ಷಾದ್ವಸ್ತು ಬಳಿಕ
ತ್ಯಂತ ಪರಶಿವನಿಂದ ಮೂವತ್ತಾರು ನಿಜ ತತ್ವಂ || ೪೩ ||

ಜನಿಸಿದವು ಮತ್ತಂ ವಿರಾಡ್ರೂ
ಪನನಜಾಂಡಂ ತಾನೆಯೊಳಕೊಂ
ಡನುನಯದೊಳಿಪ್ಪುದು ಬಳಿಕ್ಕೀವರ ಹಿರಣ್ಯಗರ್ಭಂ ||
ವಿನುತ ಪಿಂಡಮನಂತು ಒಳಕೊಂ
ಡನುವಿನಿಂ ತಾನಿಪ್ಪನದರಿಂ
ದನಘ ಪಿಂಡವಜಾಂಡಯೋರೈಕ್ಯಂ ಮರಳಿಯದರಿಂ || ೪೪ ||

ಬಳಿಕಜಾಂಡದೊಳುಳ್ಳದೆಲ್ಲಂ
ತಿಳಿಯೆ ಪಿಂಡಾಂಡದೊಳಗುಂಟೈ
ಎಳೆಯ ಕೇಳಂತಾ ತ್ರಿಕೋಣೆಯೊಳಿಪ್ಪುದಾಧಾರ ॥
ಚಳಿತ ವರಮಯ ಮೇರು ಮತ್ತ
ಗ್ಗಳದ ದಳ ಕೋಣೆಯೊಳು ಮಂದರ
ವೆಳಸಿ ತೋರ್ಪುದು ದಕ್ಷಿಣದ ಕೋಣೆಯೊಳು ಕೈಲಾಸಂ ॥ ೪೫ ॥

ವಾಮಕೋಣೆ ಹಿಮಾಚಳಂ ಬಳಿ
ಕಾ ಮಹಾಭಾಗದೊಳು ನಿಷಧಂ
ಪ್ರೇಮದಿಂ ದಕ್ಷಿಣದ ದೇಶದೆ ಗಂಧಮಾದನವು ॥
ರೋಮರೇಖೆಯೊಳೇಳು ನಗತತಿ
ಕೋಮಲದೆಯೊಪ್ಪುವುವು ಸತತಂ
ನೇಮಿಸಿದ ತೆರದಿಂದೆ ಸಪ್ತದ್ವೀಪವಂಗದೊಳೂ ॥ ೪೬ ॥

ಸರಸ ಜಂಬೂದ್ವೀಪ ಶಲ್ಯದೊಳ
ರರೆ ಶಾಕಂ ಮಜ್ಜೆಯೊಳಗಂ
ತಿರದೆ ಕುಶ ರಸದಲ್ಲಿ ಕ್ರೌಂಚಂ ತ್ವಕ್ಕಿನೊಳ್ಬಳಿಕ ॥
ಭರದೆ ಶಾಲ್ಮಲಿ ಪ್ಲಕ್ಷ ರೋಮದೊ
ಳುರು ನಖದೆ ಪುಷ್ಕರಗಳಿರ್ಪವು
ಶರೀರದೊಳಗಿನ್ನಿಪ್ಪ ಸಾಗರತತಿಗಳಂ ಪೇಳ್ವೆಂ ॥ ೪೭ ॥

ಕ್ಷಾರ ಶರಧಿಯೆ ಮೂತ್ರದೊಳಗಂ
ಕ್ಷೀರದೊಳ್ಕ್ಷೀರಾಬ್ಧಿ ಕಫದೊಳ
ಗಾರಯಲ್ದಧಿಯಂಬುನಿಧಿ ಮಜ್ಜೆಯೊಳು ಸಲೆಸರ್ಪಿ ॥
ವಾರಿನಿಧಿ ರಕ್ತದೊಳು ಜಗಳದ ?
ಚಾರು ಸಾಗರವಂಬಿಕೆಯೊಳಂ
ಸಾರ ಜಲನಿಧಿ ಶುಕ್ಲದೊಳ [ಗ] ರ್ಬುದ [ದ] ಧಿಗಳಿರ್ಕುಂ ॥ ೪೮ ॥

ನಾದ ಚಕ್ರದೊಳರುಣನಿರ್ಪ ವಿ
ನೋದದಿಂ ಬಿಂದುವಿನೊಳಬ್ಜಂ
ಪೋದದಿಂ ನೇತ್ರಂಗಳಲ್ಲಿ [ಯು] ಕುಜಹೃದಯದೊಳಗೆ ॥
ಸಾದರದೆ ಬುಧಗುಹ್ಯದೊಳ್ಗುರು
ವಾದಿ ಚಕ್ರದೆ ಶುಕ್ರನಂತಾ
ಹ್ಲಾದದಿಂ ನಾಭಿಯೊಳು ಶನಿವದನಾಂತರದೊಳಿನ್ನೂ ॥ ೪೯ ॥

ರಾಹು ಕೇತುಗಳಿರ್ಪವಾಗಂ
ಸಾಹಸದೆ ಪಾದದೊಳಗಶ್ವಿನಿ
ಯಾಹನೊಪ್ಪುವವಿಂತು ಹೃದಯದೊಳಜ ವಿರಾಜಿಸುವಂ ||
ಸ್ನೇಹದಿಂ ಕಂಠದೊಳು ಮತ್ತೆ ಕು
ತೂಹಲಂ ಭ್ರೂಮಧ್ಯದೊಳಗಂ
ತಾಹ ರುದ್ರ ಬಳಿಕ್ಕಮೂರ್ಧ್ವದೊಳೀಶ್ವರಂ ಫಣೆಯ || ೫೦ ||

ಸ್ಥಲದೊಳಿರ್ಪಂ ಪಂಚಭೂತ
ಕ್ಕಲಘುನಾಯಕರಿಪ್ಪರೆಂದಾ
ಚಲಿತ ತೋಂಟದ ಸಿದ್ಧಲಿಂಗಂ ತನ್ನ ಬೆಸಗೊಂಬ ||
ಸುಲಭ ಸನ್ನುತ ಚಂದ್ರಶೇಖರ
ವಿಲಸಿತದ ದೇವರಿಗೆ ಪೇಳ್ದಂ
ಲಲಿತ ಪಿಂಡದೊಳೊಪ್ಪುವಾ ಬ್ರಹ್ಮಾಂಡದುನ್ನತಿಯಂ || ೫೧ ||

ತುಂಟತನದಿಂದಂಟೆದಿಂದ್ರಿಯ
ಕಂಟಕಂಗಳ ಮೀಂಟೆ ಕಳೆದುರೆ
ಬಂಟರಾಗುತೆ ಗಂಟುಕರಹಂಗಜ ಕೃತಾಂತರಿಗೆ ||
ಮಂಟೆಯವರೀ ತುಂಟನಿಸಿ ಮಿಗೆ (?)
ಗೊಂಟುಗಳ ಪೊದ್ದದೆಂಟು ಸೊಕ್ಕನು (?)
ದಾಂಟೆದುತ್ತಮ ತೋಂಟದುರು ಗುರು ಸಿದ್ಧವರ ಸಲಹಾ || ೫೨ ||

ಇದು ವಿಮಲ ಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರ ||
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣಮ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥಮೊಂದುವುದು || ೫೩ ||

ಅಂತು ಸಂಧಿ ೯ ಕ್ಕಂ ಪದನು ೪೭೬ ಕ್ಕಂ

ಮಂಗಳಂ

ಹತ್ತನೆಯ ಸಂಧಿ

ಶಿವನ ಲೋಕದ ವಿವರವುಂ ಶಂ
ಭುವಿನ ವಿಮಲಸ್ಥಾನದಿರವಂ
ಭುವನಕತಿಶಯವೆನಲು ಪೇಳ್ದಂ ಸಿದ್ಧದೇಶಿಕನು ||

ಪೂತ ಶರಣರ ಸಂಗನೆ ಸಂ
ಗೀತ ಚಿತ್ತನೆ ಚಿತ್ತಜಾಹಿತ
ನೂತನಾಂಗನೆಯಂಗನೆಯರಿಗೆಯಂಗವುಂ ಕುಡದಾ ||
ಯಾತನೇ ಯಾತನೆಯ ಗೆಲ್ದನೆ
ದಾತನೇ ದಾತೇಷ್ಟ ವಿನುತ
ಶ್ವೇತನೇ ಶ್ವೇತಂಗೆ ಮೋಕ್ಷವನಿತ್ತ ಸಿದ್ಧೇಶ || ೧ ||

ಗುರುವೆ ತೋಂಟದ ಸಿದ್ಧದೇಶಿಕ
ಹರುಷದಿಂದಂ ಭುವನಕೋಶದೊ
ಳುರುತರದ ಬ್ರಹ್ಮಾಂಡದುನ್ನತಿಯಂ ಬಳಿಕ್ಕೆನಗೆ ||
ಕರುಣದಿಂ ಪೇಳಿದಿರಿ ಮತ್ತಂ
ಪರಮಘನ ಶಿವಲೋಕದಿರವಂ
ನಿರವಿಸೆಂಬಾ ಚಂದ್ರಶೇಖರಮೂರ್ತಿಗಿಂತೆಂದಂ || ೨ ||

ಶಿವಪುರಾಣದ ರುದ್ರಕೋಟಿಯ
ವಿವಿಧ ಸಂಹಿತೆಯಲ್ಲಿ ಪೇಳ್ದುಂ
ಸವಿನಯದಿ ನಂದೀಶ್ವರಂ ಕೃಪೆಯಿಂದ ಪೂರ್ವದೊಳು ||
ತವಕದಿಂದೆ ಸನತ್ಕುಮಾರಂ
ಗವಿರತಂ ತಾನೊರೆದ ತೆರದಿಂ
ಕುವರ ನಿನಗರಿಪುವೆನೆನುತ್ತಂ ನುಡಿದನೆಂತೆನಲು || ೩ ||

ಲಾಲಿಸಲ್ಕೆಯಜಾಂಡದಿಂದಲಿ
ಮೇಲೆ ಮೂವತ್ತೆರಡುಕೋಟಿ ವಿ
ಶಾಲದಿಂ ಶಿವಲೋಕಮಿರ್ಪುದದಂ ಸಕಲವೇದ ||
ಜಾಲವರಿವವು ನಿಖಿಲ ಭುವನಕೆ
ಲೋಲನೇಯಾಧಾರಮಾಗು
ತ್ತಾ ಲತಾಘನ ಕಂದದಂದದೊಳೆಸೆವುದೆಂದುಸುರ್ದಂ || ೪ ||

ವಿೂಟೆನಿಂ ಜ್ಯೋತಿರ್ಮಯನೆ ಸಲೆ
ಕೋಂಟೆ ಶಿವಲೋಕಕ್ಕೆಯೆಂಟತಿ
ಸಾಟೆಯಲ್ಲದ ಬಾಗಿಲೊಪ್ಪೆ ಪುರಂದರನ ದೆಶೆಯ ||
ಹಾಟಕದ ದ್ವಾರದೊಳು ತೋರ್ಪಂ
ಕೋಟೆ ಭಟರೋಲೈಸೆ ದಂಡಂ
ನಾಟಿಸಿದ ಘನತರ ಕಮಂಡಲು ಕರದೆ ರಾಜಿಸಲು || ೫ ||

ಅರುಣಗಾತ್ರಂ ಹಂಸವಾಹನ
ವರರೆ ಬ್ರಾಹ್ಮಿಯೆನಿಪ್ಪ ಶಕ್ತಿಯು
ವಿರೆ ಮಹಾಭೈರವನೆಸೆಸನುರೆ ಮೂರುಕಣ್ಣಿಂದ ||
ಸರಸದಿಂ ಪರಮೇಶನಾಜ್ಞೆಯೊ
ಳರರೆ ಇಂದ್ರನ ದೆಸೆಯೊಳಿರ್ಪನ
ರರೆ ಬಳಿಕ ಪಾವಕನ ದೆಸೆಯೊಳಗೊಪ್ಪುತ್ತಿರ್ಪರುರು || ೬ ||

ಭೈರವಂಗಂ ಕನಕ ಗಾತ್ರಂ
ಚಾರು ಡಮರುಗ ಶೂಲ ಖಡ್ಗಂ
ಸಾರ ಖಟ್ವಾಂಗಂ ವಿರಾಜಿಸೆಯಜನ ವಾಹನದಿಂ ||
ಸೇರಿ ಸಲೆ ಹದಿನೆಂಟು ಕೋಟಿಯ
ನಾರತಂ ಭಟರೋಲವಿಸೆ ಗಂ
ಭೀರದಿಂ ಮಾಹೇಶ್ವರಂ ಶಕ್ತಿಯೊಳು ಕಾಯ್ದಿರ್ಪಂ || ೭ ||

ಶೂಲವಜ್ರಂ ಶಕ್ತಿಶಂಕನೆಂ
ಬಾ ಲಲಿತದ ಚತುರ್ಭುಜಗಳಿಂ
ಮೇಲೆ ವಾಹಿನಿ ಶಕ್ತಿ ಸಲೆ ಕಾಮಾರಿ ಭಟರೈದು ||
ಆ ಲಲಿತ ಕೋಟಿಗಳು ಸೇವಿಸೆ
ಲೀಲೆಯಿಂ ಮುಕ್ಕಣ್ಣ ಸಹಿತನು
ಕೂಲದಿಂದಂ ಚಂಡ ಭೈರವನಿರ್ಪ ನೆಮದಲ್ಲಿ || ೮ ||

ಹೇಮದಂಗಂ ಶಂಖಚಕ್ರಂ
ಪ್ರೇಮದಿಂ ಗದೆ ಶಾರ್ಙ್ಗಮೆಸೆಯ
ಲ್ಯೋಮಲದೆ ಘನ ವೈಷ್ಣವೀ ಶಕ್ತಿಯೊಳು ಖಗಪತಿಯ ||
ನಾಮ ವಾಹನದಿಂದೆಯ್ದೆದೆನಿ
ಪಾ ಮಹಾಘನಕೋಟಿ ಭಟರಿಂ
ನೇಮದಿಂ ನಿರರುತಿಯೊಳಿರ್ಪ ಕ್ರೋಧಿ ಭೈರವನು || ೯ ||

ವರುಣನೊಳಗುನ್ಮತ್ತ ಭೈರವ
ನರರೆ ನೀಲ ಶರೀರದಿಂ ಬಂ
ಧುರದ ಶಂಖಂ ಖೇಟ ಹಲ ಮುಸಲಾದಿ ಕರದಿಂದಾ ||
ವರ ಮಹಿಷವಾಹನದೆ ತನ್ನಂ
ತುರುತರದ ಭಟರಾರುಕೋಟಿಗ
ಳಿರದೆಯೋ[ಲೈ]ಸಲ್ಕೆಯೊಪ್ಪಿದನಿನ್ನು ಕೇಳ್ಮುಂದೆ || ೧೦ ||

ಮರುತನಲ್ಲಿ ಕಪಾಲ ಭೈರವ
ನಿರುವನವನಿಗೆ ಶೋಣ ರತ್ನಂ
ಶರವಶನಿ ಧನುಶಕ್ತಿಯಿಂದಂ ಗಜದ ವಾಹನದಿಂ ||
ಹರುಷದೊಳಗಿಂದ್ರಾಣಿ ಶಕ್ತಿಯೊ
ಳಿರುತಿರಲ್ಮೂರ್ಕೋಟಿ ಭಟರುಗ
ಳುರುತರದೊಳೋಲೈಸಿ ಮೆರೆವಂ ಮುಂದೆ ಕೇಳಿನ್ನು. || ೧೧ ||

ಶೂಲ ಡಮರುಗ ಘಂಟೆ ಕಯ್ಯ ಕ
ಪಾಲದಿಂ ಕಾಗೆಯನಡರಿ ಸುವಿ
ಶಾಲ ಚಾಮುಂಡಿಯೊಳು ಧೂಮಾಂಗದೆ ಬಡಗಲಲ್ಲಿ ||
ಮೇಲೆ ತನ್ನಂದದ ಭಟರುವನು
ಕೂಲದಿಂ ಹನ್ನೆರಡುಕೋಟಿಗ
ಳೋಲವಿಸೆ ಘನಭೀಣಾಖ್ಯದ (?) ಭೈರವಂ ತೋರ್ಪಂ || ೧೨ ||

ಫಲಕ ಖೇಟಂ ಖಡ್ಗ ಗದೆಗ
ಳ್ನಲವಿನಿಂ ಕರದಲ್ಲಿ ರಾಜಿಸೆ
ಇಲಿಯ ವಾಹನದಿಂ ಮಹಾಕಾಳಿಯೊಳು ಭಟರೆಂಟು ||
ಅಲಘು ಕೋಟಿಗಳಾಗ ಸೇವಿಸೆ
ಯೊಲವಿನಿಂ ಸ್ವರ್ಣಾಂಗದಿಂದಂ
ಸುಲಲಿತದ ಸಂಹಾರಭೈರವನೀಶನೊಳಗಿರ್ಪಂ || ೧೩ ||

ಪಲವು ಭಟರಿಂದೆಂಟು ದಿಕ್ಕಿನೊ
ಳೊಲಿದು ಕಾಯ್ವತಿಭೈರವರೊಳಂ
ವಲಿ[ಗಣಾವರ]ಮಂದಿರದೊಳಂ ಹರ್ಮ್ಯದೊಳ್ಚಂದ್ರ ||
ಅಲಘು ರವಿವೀಧಿಗಳೊಳಂ ಮಂ
ಜುಲದೊಳಂತೊಂದೊಂದ ಕೇರಿಗೆ
ಮಲಹರಾಜ್ಞೆಯೊಳಿರ್ಪ ಸಲೆ ಗಣಮುಖ್ಯರೊಳು ತೋರ್ಕುಂ || ೧೪ ||

ಕೋಟಿರವಿಗಳ ತೇಜದಿಂದಂ
ಕೋಟಿ ನವರತ್ನ ಪ್ರಭೆಗಳ ಸ
ಘಾಟದ ಪ್ರಕಾರದಿಂದಂ ಪಂಚವಿಂಶತಿಯ ||
ಕೋಟಿಯೋಜನದಿಂದೆ ಶರ್ವನ
ಮಾಟನಿಪ್ಪರಮನೆ ವಿರಾಜಿಸೆ
ನೋಟಕಗ್ಗಳದುಪ್ಪರಿಗೆ ನಾಲ್ದೆಸೆಯೊಳೊಪ್ಪುವುವು || ೧೫ ||

ಸುರಪ ಯಮ ಶರಧೀಶ ಯಕ್ಷರ
ಹರಿದಿನೊಳಗೊಂದೊಂದು ಲಕ್ಷದ
ಹರವರಿಯ ಯೋಜನದೊಳಂ ಶುಚಿ ನೀಲ ಸಿತ ಪೀತಾ ||
ಸ್ಥಿರದ ವರ್ಣಂ ತೋರ್ಕುಮನಿಶಂ
ಪರಮ ಋಗ್ಯೆಜುವಲ್ಲಿ ಸಾಮಂ
ವರದಥರ್ವಣಮಿಪ್ಪವಾ ಗೋಪುರದ ಬಾಗಿಲೊಳು || ೧೬ ||

ಹರುಷದಿಂ ಕೂಷ್ಮಾಂಡ ರೋಮಜ ರ
ರರೆಯುರು ರುದ್ರಂ ಮಹಾ ಬಂ
ಧುರದ ಸತ್ರುಮಥರುಗಳಿರೆಯವರೊಡನೆ ನಂದೀಶಂ ||
ನಿರುತದಿಂದಂ ವೀರಭದ್ರಂ
ತ್ವರಿತದಿಂದಂ ನೀಲಲೋಹಿತ
ನುರು ಮಹಾಕಾಳರುಗಳಿರ್ದಲ್ಲಿ ವೇತ್ರಗಳಂ || ೧೭ ||

ಕರದೊಳಂ ಪಿಡಿದಿರ್ಪರಂತಾ
ಪರಿಯ ಗೋಪುರಗಳ ನಡುವೆ ಶಂ
ಕರನುಮೂಮೂನಿನಿಯೊಳಂ ಜ್ಯೋತಿರ್ಮಯದ ವಿಮಲಾ ||
ವರ ಭವನದೊಳಗಿರ್ಪ ಭವನಂ
ತ್ವರಿತದಿಂದೊಲ್ಪೆಸೆ ತೇಜದ
ವರಗಣಂಗಳು ನಿಲ್ದಠಾವಂ ಪೇಳ್ವೆನೆಂತೆನಲೂ || ೧೮ ||

ವರಸಭಾ ಮಂಟಪವೆಸೆವುದಾ
ದರದೆ ಯೋಜನ ಮುಂದೆ ಮಸುಳಿಸಿ
ತುರಗರಾಜನ ಪೊಡೆಯ ರತ್ನದ ಕಾಂತಿಯೆಂತೆನಲು* || ೧೯ ||

---

* ಅರ್ಧ ಪದ್ಯ ಈ ಮಾತೃಕೆಯಲ್ಲಿ ಇಲ್ಲ

ಅಂದದಿಂ ರವಿಕೋಟಿ ಬೆಳಗಿನ
ಮುಂದೆ ಪಾರುವ ಮಿಂಚುಬುಳುವಿನ
ದಂದದಿಂದಿಂದ್ರಾಣಿ ತತಿ ನೋಡಲ್ಕೆಯರಿಯವಲಾ ॥
ಕುಂದದಿಭದರ್ಪಣದೊಳಿಪ್ಪಂ
ತಂದಜಾಂಡಾದಿಗಳು ತೋರುವ
ವಿಂದರುಣರುಚಿವೆಳಗನೇಳಿಸಿ ಶಿವನ ಹರಿಪೀಠ ॥ ೨೦ ॥

ಸುರಪ ಶಿಖಿ ಯಮ ನಿರುತಿ ವರುಣಂ
ವರ ಮಾರುತ ಧನದೀಶ ರಾಶಿಯೊ
ಳಿರದೆ ಕೇಳ್ ಕ್ರಮದಿಂದ ಧರ್ಮಂ ಭೂತವೆ ಮೂರ್ತಿ ॥
ಸರಸಧರ್ಮ ವೃಷಭಂ ಬಳಿಕ ಬಂ
ಧುರದೊಳಜ್ಞಾನಂ ವಿಕಟತನು
ಭರದೊಳಂತಾ ಜ್ಞಾನವೇ ಘನಶಾಂತಿ ರೂಪಾದಾ ॥ ೨೧ ॥

ಚಾರುತರ ವೈರಾಗ್ಯವೇಯದು
ಘೋರರೂಪಿಂದರಿವುದೈ ಗಂ
ಭೀರದಿಂ ವೈರಾಗ್ಯವಾನೆಯನೈಶ್ವರಿಯವಿರದೆ ॥
ಸಾರವಿನುತ ವಿಕಾರದಿಂದೆಯ
ನಾರತೈಶ್ವರಿಯನೆ ಹರಿಯವೊ
ಲ್ಮಾರಹರನ ವಿಶೇಷ ಸಿಂಹಾಸನದೊಳಳವಟ್ಟು ॥ ೨೨ ॥

ಎಂಟುದಿಕ್ಕಿನೊಳಷ್ಟಪದಗಳ
ವೆಂಟು ಮಂತ್ರಾ ರುಚಿರ ಮಧ್ಯದೊ
ಳಂಟೆ ಸರ್ಪನನಾಳದೆಂಟೆಸಳಂಬುಜಾತಕ್ಕೆ
ಎಂಟುವಣಿಮಾದಿಗಳು ರಾಜಿಸೆ
ಯೆಂಟು ವಾಮಾದಿಗಳು ದಳಗಳ
ವೆಂಟು ರವಿ[ಶಶಿ] ಶಿಖಿಗಳೀ ಮಧ್ಯಕ್ಕೆ ಕರ್ನಿಕೆಯು ॥ ೨೩ ॥

ಆಗೆಯೊ ಕರ್ನಿಕೆಯೊಳಂ ಚೆ
ನ್ನಾಗಿ ಶುದ್ಧಸ್ಫಟಿಕ ತೇಜದ
ಭೋಗಿ ಭೂಷಂ ಪಂಚವದನದೆ ಹತ್ತು ತೋಳುಗಳಿಂ ॥
ಆಗ ಸಲೆ ಹದಿನೈದು ಕಣ್ಣಿಂ
ದಾಗ ಯಜ್ಞದ ಸೂತ್ರದಿಂದಂ
ನಾಗಕುಂಡಲ ಕಟಕ ಕೇಯೂರಾಂಗುಲಿಯ ಕರದಿಂ ॥ ೨೪

ಉರಗನುರುಕಟಿಸೂತ್ರದಿಂದಂ
ಹರಿಕರಿಗಳಜಿನಾಂಶುಕಗಳಿಂ
ಹರುಷದಿಂದಂ ತೋರ್ಪಭವನುರೆ ನಾಲ್ಕು ದೆಸೆಯಲ್ಲಿ ॥
ಇರದೆ ಈಶಾನಾದಿ ಪಂಚ
ಸ್ಥಿರದ ಮೂರ್ತಿಗಳವರನಾಗಂ
ಭರದೆ ನುತಿಸಲ್ತೊಡಗಿದರು ತಾವೆಂತೆನಲ್ಕೇಳು ॥ ೨೫ ॥

ಅರರೆ ಯೋಂಹ್ರಾಂಯ ನಮುಶಿವಯೆಂ
ದಿರದೆ ಯೋಂಹ್ರೈಂ ವಾಯನಮುಶಿ
ಸ್ಥಿರದಿ ಯೋಂ ಹ್ರೂಂ ಶಿವಯ ನಮು ಓಂ ಹ್ರೀಂ ನಮುಶಿವಯನಾ ॥
ಸ್ಮರಿಸಿ ಯೋಂಹ್ರಾಂ ನಮುಶಿವಾಯಂ
ಬುರುತರದ ಮಂತ್ರದೊಳೆ ಸಂತತ
ಪರಮ ಪಂಚಬ್ರಹ್ಮನಪ್ಪ ಸದಾಶಿವನನನಿಶಂ ॥ ೨೬ ॥

ಸೇರಿ ಈಶಂ ತತ್ಪುರುಷನಾ
ಘೋರ ಸದ್ಯೋಜಾತನಂತಾ
ಚಾರು ವಾಮ ಸುದೇವ ಮೊದಲಾದವರು ತಮತಮ್ಮ ॥
ಸಾರದಿಕ್ಕಿನೊಳಿರ್ದು ಶರ್ವನ
ಧೀರ ಭಕ್ತಿಯೊಳೊಲಿದು ನುತಿಸ
ಲ್ಮಾರಹರ ಶಿವೆಯೊಡನೆಯಾ ಸಿಂಹಾಸನದೊಳಿರ್ದಂ ॥ ೨೭ ॥

ಕರಿವದನ ಗುಹ ವೀರಭದ್ರರ
ಹರುಷದಿಂ ಮುಂಡಾಡುವೀಶನ
ನಿರದೆ ನೋಡುವಪರ್ಣೆಯಂ ಸುರಸತಿಯ ಸುರಸತಿಯರೋಲೈಸೆ ॥
ಪರಮನೋಲಗವೆಸೆದುದೆಂತೆನೆ
ಸುರಪನಾಶೆಯೊಳೊಲಿದು ಭೃಂಗೀ
ಶ್ವರ ಮಹಾಕಾಳರ್ಕಳೆಂಟರ್ಬುದವಲಾ ಬಳಿಕ ॥ ೨೮ ॥

ಸರಸ ವಿಶ್ವಕಿರೀಟಿ ಭೀಮಂ
ವರದ ಘಂಟಾಕಾಲ ಗಣ ಬಂ
ಧುರದ ಘಂಟಾಕರ್ಣ ಸುರಪೋಷಂ ಬಳಿಕದಂಡಿ ॥
ಧರೆಯೊಳಂ ವೃಷಕೇತುವೀಶಂ
ಪರಿವಿಡಿಯ ಹನ್ನೊಂದು ರುದ್ರರು
ಹರನ ಮೂಡಣ ದೆಸೆಯೊಳೊಪ್ಪುವರಿವರ ಸೇರುವೆಯ ॥ ೨೯ ॥

ವರಗಣಂಗಳ ಲೆಕ್ಕವೆಂತೆನೆ
ಯುರುತರದೊಳೆಂಟರ್ಬುದಂಬಳಿ
ಕಿರದೆ ಕೇಳಿಂತೇಳು ಪದ್ಮಂ ಶಂಖ ಸಾವಿರವು ||
ನಿರುತದಿಂದಂ ನಾಲ್ಕು ಪದ್ಮಂ
ಭರದೊಳಂ ತವೆ ಹತ್ತು ಘನ ಸು
ಸ್ಥಿರದ ಸಾವಿರಕೋಟಿ ಮೂವತ್ತುವುಲ ಪದ್ಮಗಣಂ || ೩೦ ||

ಬಲದೊಳಿರ್ದಜನಮೃತ ಮಂತ್ರದೊ
ಳೊಲಿದು ಕೀರ್ತಿಸಲಲ್ಲಿ ರೋಮಶ
ವೊಲಹು ನವಕಾಲಾಗ್ನಿರುದ್ರಂ ವೀರಭದ್ರೇಶಂ ||
ಸಲೆ ಪಿನಾಕಿಯು ಕಾಲಕಂಠಂ
ಬಲು ಕರಾಳ ಕರಾಂಘ್ರಿ ನೇತ್ರವ
ಚಲಿತ ಸುಕರಾಳಾಂಗರಾದಿಯ ಚಾರು ಗಳವೃಂದಂ || ೩೧ ||

ರುಂಡ ಮಾಲಾಧೀಶನಂ ತಾ
ಖಂಡದಿಂ ತ್ರ್ಯಕಶೂಲಿ ಸಲೆಯು
ದ್ದಂಡ ಘನತರ ವಿಶ್ವಮಾಲಾದಿಪರವರ ಹಿಂದೆ ||
ಅಂಡನಾಥಂ ಕಾಲರಿಪು ಮುಂ
ಕೊಂಡು ಲಕುಲೀಶಂ ಮಯೂರ ಸು
ಕುಂಡಲಿಪ ಹದಿನೆಂಟು ವರಗಣ ವಿತತಿ [ದಿಟ್ಟಿಸಲು] || ೩೨ ||

ಬೇರೆಬೇರೆ ಗಣಂಗಳಾಗಂ
ತೋರುವರು ಒಬ್ಬೊಬ್ಬರಿಗೆ ನೆಲ
ವೇರಿ ಪದ್ಮಂ ಹತ್ತುಹತ್ತು ಬಳಿಕ್ಕೆ ಮತ್ತೈದು ||
ನೀಳನೇ ಶಂಖಂಗಳಾಗವೆ
ಯಾರು ಸಪ್ತಾರ್ಬುದ ವಿರಾಜಿಸೆ
ಮೂರು ನೇತ್ರದ ಶಿವನ ಬಲದೋಲಗವೆಸೆದುದಿನ್ನು || ೩೩ ||

ವಿವಿಧ ಪಾಶುಪತಾಸ್ತ್ರ ರೂಪಿಂ
ಶಿವನ ಪಶ್ಚಿಮದಾಶೆಯಲ್ಲಿಹ
ರವಿ ರಥಂ ಮತ್ತಲ್ಲಿ ದಂಡಧರಾಂಡ ಮೊದಲಾದ ||
ನವಬಲ ಪ್ರಮಥಾದಿಗಳಿಗಂ
ತವೆಯನೇಕಾರ್ಬುದಗಣಂಗಳು
ಸವಿನಯದಿ ರಾಜಿಸಲು ಭವನೋಲಗದೊಳೊಪ್ಪಿದರು || ೩೪ ||

ದಿಟ್ಟ ಲಿಂಗದಿ ನಟ್ಟು ಶವೆುಯಳ
ವಟ್ಟು ಕೇಣವ ಬಿಟ್ಟು ದವೆುಯನು
ತೊಟ್ಟು ಕಾಮುವ ಸುಟ್ಟು ಭಸಿತವನಿಟ್ಟು ಕರಿಗೆಟ್ಟು ||
ಹುಟ್ಟು ಹೊಂದಿನ ಬೆಟ್ಟಗಳ ಸಲೆ
ಹಿಟ್ಟು ಸೂಸಲು ಕುಟ್ಟುವಂ ಭವ
ಗಟ್ಟಿಗೊಳಿಸಿಯ ತುಟ್ಟ ತುದಿಯನು ಮುಟ್ಟಿದವರೆಸೆಯೆ || ೩೫ ||

ಹರಿ ಸುರಪ ದಿಕ್ಪಾಲರಾ ಹ
ನ್ನೆರಡು ತರಣಿಗಳಷ್ಟು ವಸುಗ
ಳ್ಭರದೊಳೇಕಾದಶ ಮಹಾರುದ್ರಾದಿಗಳ್ಬಂದು ||
ಹರುಷದಿಂ ಸರ್ವೇಶ್ವರನ ಬಂ
ಧುರದೆ ಸೇವಿಸೆಯಾಗ ಮೆರೆದುದು
ಪರಶಿವನ ವಾಮಾಂಗದೊಡ್ಡೋಲಗವನಿಶವಿಂತು || ೩೬ ||

ಶಸ್ತ್ರರುಚಿರ ಯಶೋವಿಲಾಸದ ಸ
ಮಸ್ತ ಸುರಮಣಿಖಚಿತ ಮೌಳಿ ಮ ಗ
ಭಸ್ತಿ ಸುತ ವಿರಾಜಿತ ಪದಾಂಬುಜ ನಖರ ಸುಖ ಪತ್ರೀ (?)
ಪುಸ್ತಕಾಕ್ಷ ಸುಮಾಲಿಕಾಂಚಿತ
ಹಸ್ತ ಹರಿ ಹರಿ ಹರಿದ್ರುಗಂಕಿತ
ಕಸ್ತವ ಪ್ರಿಯ ಶರಣು ಪರಶಿವ ಸಿದ್ಧವಟ ಸೀತ || ೩೭ ||

ಇದು ವಿಮಲಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರ ||
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣವ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವುದು || ೩೮ ||

ಅಂತು ಸಂಧಿ ೧೦ ಕ್ಕಂ ಪದನು ೫೧ಳ ಕಕ್ಕಂ

ಮಂಗಳಂ

ಹನ್ನೊಂದನೆಯ ಸಂಧಿ

ವಸ್ತು ನಿರ್ದೇಶದ ವಿವರಮಂ
ಶಸ್ತ್ರ ಮಾಗಿಯೆ ತೋಂಟದಾರ್ಯಂ
ವಿಸ್ತರಿಸಿದಂ ಸಕಲ ಭಕ್ತರು ನುತಿಸೆ ಧರೆಯಲ್ಲಿ ||

ಅರುಪಿ ತೋಂಟದ ಸಿದ್ಧನೆಂದೆಂ
ಬುರಿವ ಪೆಸರಂ ಧರಿಸಿ ಮತ್ತಂ
ಮೆರೆದನಿಳೆಯೊಳಗೆಂದು ಸರ್ವರು ಪೊಗಳೆಯೊಪ್ಪಿದನು ||
ಕುರುಹಿಡಲ್ಬಾರದ ಶಿವಂ ತಾಂ
ನೆರೆ ಧರಾತಳದಲ್ಲಿ ದೇಹಮು
ನುರೆ ತಳೆದು ಚರಿಸುತ್ತೆ ಶಿವಭಕ್ತ ಸ್ವರೂಪಂ || ೧ ||

ತರುಣ ಕೇಳುಮಲಕ್ಷ್ಯಮದ್ವಯ
ಮಿರದೆ ಶೂನ್ಯಮಮೂರ್ತಮವ್ಯಯ
ಪರಮನಾಮಯಮಕುಲ ಶುದ್ಧಮನಾದ್ಯಮೆಂದೆಂಬೀ ||
ಪರಿಯ ಪೆಸರಿಂದೀಶನಂತನ
ವರತವಿಪ್ಪನದಲ್ಲಿದೇ ಸು
ಸ್ಥಿರದ ಲಿಂಗ ಪುರಾಣದೊಳಗಜ ಹರಿ ನುತಿಸಿದಿರವಂ || ೨ ||

ಮೇಲು ನಡುತಳವಾದಿ ಮಧ್ಯಂ
ಲೀಲೆಯಿಂ ಕಡೆಯಿಲ್ಲದುದು ಸಲೆ
ಲೋಲನೆ ಬಳಿಕೊಳಗು ಹೊರಗಿಲ್ಲಾಗವಿಲ್ಲೆಂಬಾ ||
ಬಾಲಭಾಷೆಯದಿಲ್ಲದಿಪ್ಪುದು
ಲಾಲಿಸಲ್ದಶದಿಕ್ಕದಿಲ್ಲದು
ದಾ ಲಲಿತದಾಲಂಬವಿಲ್ಲದುದೆರಡರಾಲಾಪಂ || ೩ ||

ಪರಮಪದಮುಂಟಾದುದದು ಬಂ
ಧುರದೆ ವಾಙ್ಮನಭಾವನುಂ ಸು
ಸ್ಥಿರದೆ ಮೀರಿದುದದು ಪರಶಿವಂ ಸರ್ವಶೂನ್ಯವದು ||
ವರ ನಿರಾಕಾರಂ ಬಳಿಕಲದು
ಪರಮ ಪದದಾನಂದವೆಂದೇ
ಭರದೆ ಪೇಳುವುದುಪನಿಷದ್ವಾಕ್ಯದೊಳಗೆಂತೆನಲು || ೪ ||

ಪೆಸರು ಹಿಡಿತನದವಧಿ ಕಾರಣ
ವೆಸೆವ ಸಂಗೋಪಾಧಿ ಕಲೆ ರಂ
ಜಿಸುವ ಪುಣ್ಯಕ್ರಿಯೆಯು ಪಾಪಂ ವಾಸನೆಯು ಮತ್ತೆ ॥
ಪಸರಿಸಿಪ್ಪಾದ್ವೈತರಂಜನೆ
ವಸುಧೆಯೊಳಗಂ ಚಲನೆಗುಣತತಿ
ಮಿಸುಪದಿರ್ಪನೊಳೆನ್ನ ನೋಡೆಂದಂ ಬಳಿಕ್ಕಾರ್ಯಂ ॥ ೫ ॥

ಪೆಂಪಿನಿಂದೆ ಚಿದೋಪದೇಶದೆ
ಪೆಂಪು ಹೊಂಬಣ್ಣಂ ಬಿಳಿದು ಸಲೆ
ಸೊಂಪೆನಿಪ್ಪಾ ಕಪ್ಪು ಮೊದಲಾದಖಿಳ ವರ್ಣಗಳು ॥
ಗುಂಪಿನಿಂ ತಾನಿಲ್ಲದಿಪ್ಪುದ
ಲಂಪಿನಿಂ ಜ್ಞಾನಾತಿಶಯದುರು
ಮಿಂಪಿನುನ್ನತ ವಸ್ತುವೇ ಸದ್ಭಕ್ತ ಚರಲಿಂಗಂ ॥ ೬ ॥

ವರ ಪುರಾತನ ವಚನ ಶಾಸ್ತ್ರೋ
ತ್ಕರ ಪುರಾಣ ಶ್ರುತಿಗಳೊಳು ಬಂ
ಧುರದೆ ಪೇಳ್ವುದು ಶಿವನೆ ಭಕ್ತಂ ಭಕ್ತನೇ ಶಿವನು ॥
ಎರಡು ಕೂಡಿದಡಂತವೆನುತಂ
ಕರತೆನುತ್ತೀಶಂ ನುಡಿದನಂ
ದರರೆಯೆನಗಂ ಭಕ್ತನೇ ಘನ ಚೇತನಂ ಬಳಿಕ ॥ ೭ ॥

ಪ್ರೀತಿಯಿಂ ಭಕ್ತಂಗೆ ನಾನೇ
ಚೇತನಂ ಸದ್ಭಕ್ತನೆಂತಿ
ಪ್ಪಾ ತೆರದೆ ಶಿವಲಿಂಗಮಿರ್ಪುದು ಲಿಂಗಮಿರ್ಪಂತೆ ॥
ರೀತಿಯಿಂ ರಾಜಿಸುವ ಭಕ್ತಂ
ನೀತಿಯಿಂದುಭಯಕ್ಕೆ ಭೇದಂ
ಭೂತಳದೊಳಿಲ್ಲೆಂದು ಸಿದ್ಧೇಶ್ವರನುಸುರುತಿರ್ದಂ ॥ ೮ ॥

ಚರವೆ ಲಿಂಗದ ರೂಪು ಲಿಂಗವೆ
ಚರದ ರೂಪಾ ಲಿಂಗ ಜಂಗಮ
ವೆರಡದೇ ಯೇಕಾಂಗದಲ್ಲಿಯನಾದಿಯೆನಿಸಿಪ್ಪಾ ॥
ಪರಮ ಭಕ್ತನ ರೂಪು ಲಿಂಗವೆ
ಹರುಷದಿಂದಂ ಬಿಂದು ಶೂನ್ಯಂ
ಸರಸ ಚರವೇ ನಾದಶೂನ್ಯಂ ಭಕ್ತ ಭಾವಿಸಲು ॥ ೯ ॥

ಹೆಂಗೆನಲು ಭಕ್ತಂಗೆ ಮತ್ತಂ
ಲಿಂಗವೇ ಸಲೆಯಂಗವದರಿಂ
ಲಿಂಗಕಂ ಬೇರಂಗವಿಲ್ಲವವಾಗಿ ಭಕ್ತಂಗೆ ||
ಜಂಗಮವೆ ಸತ್ಪ್ರಾಣವದಸಿಂ
ಜಂಗಮಕೆಯಸುವಿಲ್ಲನಾದಿಯು
ತುಂಗ ಭಕ್ತನ ಕುರುಪದೆಂತೆನೆಯಂಗವೇ ಲಿಂಗಂ || ೧೦ ||

ಜಂಗಮವೆ ತಾ ಪ್ರಾಣವಾಯಿತು
ಲಿಂಗ ಜಂಗಮ ಭಕ್ತ ಗಾ ಕಲೆ
ಹೆಂಗೆನಲು ಘನಲಿಂಗವೇಯಂಗಂ ಚರಂ ಜೀವಂ ||
ಮಂಗಲಾಂಗ ಮದಾಂಗಜಾಹಿತ
ಸಾಂಗದಿಂ ಕೇಳೆಂದು ತೋಂಟನ
ಲಿಂಗನೊರೆವುತ್ತಿರ್ದನಂತಾ ಭಕ್ತಗಿಂಗಿತಮಂ || ೧೧ ||

ಭಕ್ತನಾತ್ಮಂ ಜ್ಞಾನದೊಳ್ಕ್ರಿಯೆ
ಯುಕ್ತಮಪ್ಪುದದಾ ಕ್ರಿಯೆಯೊಳಂ
ಶಕ್ತ ಸುಜ್ಞಾನ[ದ]ಕರುಣ ಬೆರಸಿರ್ಪುದಾ ಕ್ರಿಯೆಯು ||
ವ್ಯಕ್ತ ಸುಜ್ಞಾನಂಗಳೆರಡು ನ
ಯೋಕ್ತಿಯಿಂ ಕೂಡಿದ ಸುಮೂರ್ತಿಯೆ
ಭಕ್ತನೆಂದರಿವುದು ಬಳಿಕ್ಕದು ಕಾರಣಂ ಕೇಳು || ೧೨ ||

ಜ್ಞಾನವೇ ಚರವಾ ಕ್ರಿಯೆಯೆ ಸಲೆ
ನೂನ ಲಿಂಗಂ ಮತ್ತೆಯಂತಾ
ಜ್ಞಾನ ಘನ ಸತ್ಕ್ರಿಯೆಗಳೆರಡುಂ ನಾಡೆ ಕೂಡಿರ್ದಾ ||
ಪೀನ ರೂಪವೆ ತಾನನಾದಿ ನಿ
ಧಾನ ಭಕ್ತಂ ಬಳಿಕ ಪೇಳ್ವುದು
ಸೂನುವೇ ವೀರಾಗಮದ ತಂತ್ರದೊಳಗೆಂತೆನಲು || ೧೩ ||

ಅಂಗವಿಲ್ಲದುದೇ ಮಹಾಘನ
ಲಿಂಗವಸುವಿಲ್ಲದುದೆ ವಿವರಿಸೆ
ಜಂಗಮಂ ಭಕ್ತಂಗಿವೆರಡರೊಳಂಗವೇ ಲಿಂಗಂ ||
ಜಂಗಮವೆ ಜೀವಂ ವಿಚಾರಿಸೆ
ತುಂಗಭಕ್ತನನಾದಿ ರೂಪಾ
ವಂಗದಿಂದಾತಂಗೆಯಂಗಂ ಜೀವಲಿಂಗ ಚರಂ || ೧೪ ||

ಭಕ್ತನೇ ಚರವಾದಿನಾವಂ
ವ್ಯಕ್ತಲಿಂಗವನಾದಿಶರಣಂ
ಮುಕ್ತನೇ ಎರಡಾದೊಡೇನಿವರೊಳಗೆ ಚರವೇಕಂ ॥
ಭಕ್ತ ಸಕಲಂ ನಿಷ್ಕಲಂ ಶಿವ
ನುಕ್ತಿಸಲ್ಕೀಯುಭಯವೇಕಂ
ರಕ್ತಿಯಿಂ ಜಂಗಮದ ರೂಪೆಂದರಿವುದೈ ಮಗನೆ ॥ ೧೫ ॥

ಶಿವನ ಕಾಯವೆ ಶರಣ ಶರಣನ
ನವ ತನುವೆ ಶಿವನಿಂತು ಮತ್ತಂ
ವಿವರಿಸಲ್ಕೈವಭಕ್ತ ಸನುಯೋಗಂ ಬಳಿಕ್ಕಾಗಂ ॥
ಭುವನದೊಳ್ತನ್ನಿಚ್ಛೆಯಿಂದಂ
ತವೆ ಶರೀರವನಿರವೆ ಪಡೆವಂ
ಸವಿನಯದಿ ಲಿಂಗವನೆ ಧರಿಸಿದ ಮಹಿಮನೇ ಲಿಂಗಂ ॥ ೧೬ ॥

ಶಿವನೊಳಾ ಭಕ್ತನೊಳು ಭೇದಂ
ವಿವರಿಸಲ್ಕಿನಿತಿಲ್ಲವೈ ಕೇ
ಳ್ಭುವನದೊಳಗಂ ಕರ್ತೃರೂಪಂ ಭಕ್ತನೇ ಭೃತ್ಯ ॥
ಅವನಿಯೊಳು ವರ ವೀರಶೈವನ
ನವಿರತಂ ಮಿಗೆಯಾಶ್ರಯಿಸಿದಂ
ಗವಗಡದೊಳೆಣೆಯಾರು ವಚನಾಂತರದೆ ಕೇಳಿನ್ನು ॥ ೧೭ ॥

ಲಿಂಗಜಂಗಮವಾದಿಗಳು ತವೆ
ತುಂಗಭಕ್ತನನಾದಿರೂಪಂ
ಲಿಂಗ ಜಂಗಮ ಭಕ್ತರಿಂತೀ ಮೂವರೇಕವಲಾ ॥
ಅಂಗವೇ ಘನಲಿಂಗವೆಂದರಿ
ಜಂಗಮವೆ ಸುಪ್ರಾಣವೈ ನಿಜ
ಲಿಂಗ ಜಂಗಮದೇಕತೆಯ ಘನರೂಪು ಸದ್ಭಕ್ತಂ ॥ ೧೮ ॥

ತನುವೆ ಸಕಲಂ ಪ್ರಾಣವೇ ತವೆ
ಘನ ಸಕಲ ನಿಷ್ಕಲನಲ್ಲೈ ಪಾ
ವನನೆ ನಿಷ್ಕಲ ವಿಮಲ ಪರಮಾತ್ಮ ತ್ರಿವಿಧವೇಕಂ ॥
ವಿನುತ ಭಕ್ತಂ ಸಕಲನಪ್ಪಂ
ತನಯ ಜಂಗಮ ಸಕಲ ನಿಷ್ಕಲ
ವನುವಿನಿಂ ಶಿವ ನಿಷ್ಕಲಂ ಮೂರೊಂದವೆಂದರಿಯೈ ॥ ೧೯ ॥

ಜಂಗನುವೆ ಸಲೆ ನಾದರೂಪಂ
ಲಿಂಗವೇ ತವೆ ಬಿಂದುರೂಪುವ
ಭಂಗನೇಯಿಾಯೆರಡು ಕೂಡಿದ ಭೇದವೇ ವಿವರ ||
ತುಂಗ ಶೈವೋತ್ತಮದ ಭಕ್ತಂ
ಪಿಂಗದವನೇ ಸರ್ವ ಬೀಜಂ
ಸಾಂಗದಿಂದೆಯನಾದಿ ರೂಪಂ ಭಕ್ತ ಪರತತ್ವಂ || ೨೦ ||

ಸಾಂಗದಿಂದಾ ಭಕ್ತನೇ ಲಿಂ
ಗಾಂಗಿ ಕೇಳಾಭಕ್ತನೇಯು
ತ್ತುಂಗದಿಂದಂ ಲಿಂಗಧಾರ್ಯುತ್ತಮನಲಾ ಭಕ್ತಂ ||
ಲಿಂಗ ಘನಮೂರ್ತಿ ಸ್ವರೂಪಂ
ಜಂಗಮಾಂಗಪ್ರಾಣಿ ರೂಪನ
ಸಂಗಹರ ತದ್ರೂಪನವ ದಾಸೋಹಿ ನಿಜ ನಿಷ್ಠಂ || ೨೧ ||

ವೀರಶೈವ ವ್ರತ ಸಮಾಶ್ರಯ
ನಾರಯಲ್ಕಾ ಭಕ್ತ ಸರ್ವಾ
ಚಾರ ಸಂಪನ್ನಂ ಬಳಿಕ ಸದ್ವೃತ್ತನಾ ಲಿಂಗ ||
ಚಾರು ಜಂಗಮ ರೂಪವೆನಿಸನ
ನಾರತಂ ಕೇಳೆಂದು ತೋಂಟದ
ಧೀರ ಸಿದ್ಧೇಶ್ವರನುಸುರ್ದಂ ಚಂದ್ರಶೇಖರಗೆ || ೨೨ ||

ಪರಪರಾಕ್ರಮ ಚೋಳನೆಂಬತಿ
ಧರಣಿಪತಿಯಾಸ್ಥಾನದೊಳು ಬಂ
ಧುರದೆ ಮಧುರಾಲಾಪದಿಂದಂ ಶಂಕರಯ್ಯಗಳು ||
ಬಿರಿದಿನಿಂ ಪಾಡಲ್ಕೆ ಕೇಳುತೆ
ಯರರೆ ತಾಳೇ ಈಳದೇಶದ
ಸರಸಗಾನಂ ಬಂದು ಭೂಪನ ಸಂಧಿಸುತೆ ಪಾಡೆ || ೨೩ ||

ಕೇಳಿ ರಾಗರಸಾಂಕ ರಾಗಂ
ಪಾಳಿಯಿಂ ಚಿಂತಿಸುತೆ ಮತ್ತಂ
ಭಾಳಲೋಚನನಂ ನೆನೆಯೆಯಾ ಗಾನನಿದ್ದೆಡಗೆ ||
ಪೇಳಲೇಂ ಶಿವನೆಯ್ದೆ ಪಾಡ
ಲ್ಕೇಳಿ ನೀನಾರೆಂಬ ಗಾನನೊ
ಳೇಳಿಗೆಯೊಳೆಂದಂ ಮಹಾದೇವಂ ವಿಶೇಷದೊಳು || ೨೪ ||

ನಾನು ರಾಗರಸಾಂಕದೇವರ
ನೂನ ದಾಸಿಯ ಮಗನೆನುತ್ತಾ
ಗಾನನಂ ರಾಗದೊಳು ಭಂಗಿಸಿ ದೇಶ ಮಧ್ಯದೊಳು
ಹೀನಮಂ ನೆರೆಹರಿಸಿ ತಗುಳಿದ
ನಾನತರ ರಕ್ಷಿಸುವ ಶಿವನನೆ
ನೆನೆಯಾ ನವೀನದ ಭಕ್ತನೇ ಸರ್ವಂಗೆ ಮಿಗಿಲಪ್ಪಂ || ೨೫ ||

ವಿವರಿಸಲ್ಕೆಯನಾದಿಮೂರ್ತಿ
ಪ್ರವರಭಕ್ತಂ ಚಿದ್ವಿಲಾಸಂ
ವಿವಿಧ ಚಿನ್ಮಯ ಚಿದ್ಘನಾನಂದಂ ಸಚಿದ್ರೂಪಂ ||
ಶಿವನೆಯಾತಂ ವೀರಶೈವನ
ಭುವನದೊಳು ಬಣ್ಣಿಸುವಡಳವೇ
ಯವನಸುತ್ತರ ಚಾರು ವಾತೂಲಾಗಮದೊಳೊರೆಸೆಂ || ೨೬ ||

ಇಂಬಿನಿಂ ಲಯವಿಲ್ಲದುದು ಸಲೆ
ತುಂಬಿ ತುಳ್ಕುತ ನವ ಚಿದಾನಂ
ದಾಂಬುಧಿಯೆನಿಪ್ಪುದು ಸದಾ ಸದ್ರೂಪವಾ ಬ್ರಹ್ಮಾ ||
ಡಂಬರದ ಘನಕೀರ್ತನಂ ತಾಂ
ನಂಬುಗೆಯೊಳುವಖಂಡರೂಪಂ
ಸಾಂಬನಂತಪ್ಪವನೆ ಭಕ್ತನೆನುತ್ತ ಪೇಳುವದು || ೨೭ ||

ಕಾಣಲಾದುದು ಭೂಮಿಯೊಳಗ
ಕ್ಷೀಣದಿಂದಂ [ಲೀನವಾಂತು ಧು ?]
ರೀಣದಿಂದೊಳಕೊಂಬ ಲಿಂಗವೆ ನಿತ್ಯವೈ ಬಳಿಕಾ ||
ವೂಣಯಂ ಲಘುವಲ್ಲದಲ್ಲಾ
ಕ್ಷೋಣಿಯೊಳು ಪರಿಪೂರ್ಣವೇ ಗುರು
ಮಾಣದಾಗಂ ತನ್ನ ತಾನೇ ಕೇಳ್ಪ್ರಕಾಶಿಸುವ || ೨೮ ||

ಚಾರು ರೂಪುಳ್ಳವನೆ ಜಂಗಮ
ವಾರಯಲ್ಕೆಯನಂತ ಗುಣದಿಂ
ಸಾರವಾದುದು ಸುಪ್ರಸಾದಂ ಲಿಂಗ ಗುರು ಚರವು ||
ಸೇರಿದಾ ಪ್ರಸಾದವನ್ನಿನ
ರೋರಣದ ಸುಸ್ವಾನುಭವ ಗಂ
ಭೀರ ವರ ಸುಜ್ಞಾನರಸದುನ್ನತದೆ ಕೇಳಿನ್ನು || ೨೯ ||

ಸುಪ್ರವಾಹದೆ ತವೆಯಖಂಡಾ
ಯ ಪ್ರತರ್ಕ್ಯಾನಂದವಾಗಿ ನಿ
ಜ ಪ್ರಯತ್ನದೆ ನಾಡೆ ಮಾಡಲ್ಪಟ್ಟುದುರು ನೋಡೆ
ಕ್ಷಿಪ್ರ ಚೈತನ್ಯ ಸ್ವರೂಪದ
ಸುಪ್ರಭೇದ ವಿತಾನ ಮುಳ್ಳುದೆ
ಈ ಪ್ರಕಾರದ ಪದಜಲದ ಸದ್ರೂಪನೇ ಭಕ್ತಂ || ೩೦ ||

ಗುರು ಮಹಾ ಶ್ರೀಲಿಂಗ ಜಂಗಮ
ಪರಮ ಸುಪ್ರಾಸಾದಮಂ ತಾ
ಚರಣಜಲದೊಬ್ಬುಳಿಕೆಯುನ್ನತದಾ ಸ್ವರೂಪು ಸದಾ ||
ಅರರೆ ನಾಡೆಯನಾದಿಯಪ್ಪಾ
ಸರಸ ಘನತರ ವೀರಶೈವಂ
ಧರೆಯೊಳಿಂತಿವರಿರವನೊರೆವೆಂ ಕೇಳದೆಂತೆನಲು || ೩೧ ||

ನೆಮ್ಮುಗೆಯೊಳಾಚಾರವೇ ಗುರು
ಸಮ್ಮತಂ ನಿಜನಿಷ್ಠೆ ಲಿಂಗ ಸು
ಸಮ್ಮತಂ ಸುಜ್ಞಾನವೆಂಬುದೆ ಭಾವಿಸಲ್ಕೆ ಚರ ||
ಸಮ್ಮತಂ ಕೇಳಿನ್ನು ಮತ್ತಂ
ದಿಮ್ಮಿತಪ್ಪಿವರುನ್ನತಾಖಿಲ
ಸಮ್ಮತ ಪ್ರತ್ಯಕ್ಷವೇ ಪ್ರಸಾದವಿದು ನೈಜಂ || ೩೨ ||

ತತ್ತದೋಕ್ತಿ [ಯ] ರಸವೆ ಪದಜಲ
ಮುತ್ತಮನೆ ಚರಣಾಂಬು ರೂಪನೆ
ಯುತ್ತರೋತ್ತರಮಪ್ಪನಾದಿಯ ಭಕ್ತನಂತವನಾ ||
ಉತ್ತರದ ವರಮಹಿಮೆಯಂ ನಾಂ
ಬಿತ್ತರಿಸುವೆಂ ಕೇಳೆನುತ್ತಂ
ಚಿತ್ತಜಾಹಿತ ಸಿದ್ಧಲಿಂಗ ಚಿದಂಗನಿಂತೆಂದಂ || ೩೩ ||

ವಾಯುಪೌರಾಣದೊಳು ಮುನ್ನಂ
ಕಾಯಜಾಹಿತ ದೇವಿಗೊರೆದುದ
[ಧೀಯು]ತನೆ ಪೇಳುವೆನೆನುತ್ತಂ ಚಂದ್ರಶೇಖರಗೆ ||
ಆಯತದೆ ಗುರು ಸಿದ್ಧಲಿಂಗನ
ಜೇಯ ಮತಿಯಿಂ ಪೇಳತೊಡಗಿದ
ನೋಯರದೆ ಸದ್ಭಕ್ತನಂ ಗಡ ಮಹಿಮೆಯೆಂತೆನಲು || ೩೪ ||

ನನಗೆ ಮೋಹಂ ಭಕ್ತನನಿಶಂ
ನನಗೆ ಮೋಹಂ ಭಕ್ತ ನಿತ್ಯಂ
ನನಗೆ ಭಕ್ತಂ ಮಿಗಿಲೆನುತ್ತಂ ಸ್ತೋತ್ರಮಂ ಮಾಡಿ ॥
ಅನಘ ಘನಭಕ್ತಂಗೆ ನಿಜ್ಜಂ
ವಿನುತನಪ್ಪಂ ಶಿವನೆನುತ್ತಂ
ಸನಯದಿಂ ಸಿದ್ಧೇಶನುಸುರ್ದಂ ಚಂದ್ರಶೇಖರಗೆ ॥ ೩೫ ॥

ಶಿವವಚನವಿಂತೆಂದುದಾಗಂ
ಬುವಿಯೊಳಂತಾಪೇಕ್ಷೆಯಿಲ್ಲದ
ಭವನ ಮೌನವೃತ್ತಿ ಶಾಂತಿಸುಚಾರು ನಿರ್ವೈರಂ ॥
ತವಕದಿಂದಳವಟ್ಟನಂ ಸಲೆ
ಯವನಿಯೊಳ್ಸಮದರ್ಶಿಯಂ ಮಿಗೆ
ತವೆ ಕರುಣಿಯೆನಿಸಿರ್ಪ ಭಕ್ತನ ಬಳಿಪಿಡಿದು ನಾನು ॥ ೩೬ ॥

ಪೋಪೆ ನಾಂ ತದ್ಭಕ್ತನಂಘ್ರಿಯ
ಸ್ಪೈಪಿನಡಿಯಣ ಧೂಳ ನಾನು ವಿ
ಲೋಪವಿಲ್ಲದೆ ಮಸ್ತಕದ ಮೇಲಾಗ ಬೀಳಲ್ಕೆ ॥
ಶ್ರೀಪರಮ ಭನ ಪೂತನಪ್ಪೆಂ
ಕೊಪಳೀ ಕೇಳೆಂದು ಮಧುರಾ
ಲಾಪದಿಂ ದೇವಿಯರ್ಗೊರೆದಂ ಶಂಕರಂ ಮತ್ತೆ ॥ ೩೭ ॥

ಶೈವಪೌರಾಣದೊಳು ಮತ್ತಂ
ತಾವಗಂ ವರವಾಯುವೀಯೆಯೊ
ಳೋವಿ ಸಂಹಿತೆಯಲ್ಲಿ ಭಕ್ತಶರೀರವೇ ಶಿವನು ॥
ದೇವ ಭಕ್ತ ಪ್ರಾಣ ಶಿವಗಂ
ತೀವಿದಂ ತಾನಾಗಿವೀಗಂ
ಭಾವಿಸಲ್ಕೆರಡಿಲ್ಲವೆಂಬುದು ನಿಶ್ಚಯಂ ಕೇಳು ॥ ೩೮ ॥

ಶರಣನಂಗವೆ ಶಂಭುವಿನ ತನು
ಶರಣ ಜೀವವೆ ಶಿವನ ಜೀವಂ
ಭರದೊಳೆರಡಕ್ಕನ್ಯವಿಲ್ಲವದಾಗಿಯಾ ದಿವ್ಯ ॥
ಶರಣನೇ ಸರ್ವಾಂಗ ಲಿಂಗಿಯು
ಶರಣನೇ ಶಿವನಾದ ಕಾರಣ
ಪರಮ ಭಕ್ತನ ಮಹಿಮೆಯಂ ನುತಿಸಲ್ಕಶಕ್ಯವಲಾ ॥ ೩೯ ॥

ಶ್ರೀ ಮಹಾಘನ ಲಿಂಗವೇ ಕೇ
ಳಾ ಮನವನೆಡೆಗೊಂಡುದ್ಧೈ ಸ
ತ್ರೀಮದಿಂದವೆ ಯಿಷ್ಟಲಿಂಗಂ ತನುವನೊಳಕೊಂಡು ||
ಈ ಮಹಿಯೊಳಾ ಮನತುಗಳೆ (?)
ಸ್ವಾಮಿಯಪ್ಪಾ ಶಿವನ ದಾನಿಯೆ
ರಾಮಣೀಯಕ ಭಕ್ತನಂ ಪೊಗಳಲ್ಕಶಕ್ಯವಲಾ || ೪೦ ||

ಲಿಂಗಮಂ ಬಿಡದಪ್ಪಿದವನ ಚಿ
ದಂಗವೇಯೆನ್ನಂಗವ್ವೆ ಸಲೆ
ಲಿಂಗಮಂ ಬಿಡದಪ್ಪಿದವನೇ ಯೆನ್ನ ಸತ್ಪ್ರಾಣ ||
ಲಿಂಗಮಂ ಬಿಡದಪ್ಪಿದವನೇ
ಸಾಂಗದಿಂದೆನ್ನಾತ್ಮನಪ್ಪಂ
ಲಿಂಗಮಂ ಬಿಡದಪ್ಪಿದವನೇ ಯೆನ್ನ ರಕ್ಷಿಸುವಂ || ೪೧ ||

ಲಿಂಗಮಂ ಬಿಡದಪ್ಪಿದವನೇ
ಹಾಂಗೆಯೆನ್ನ ಪ್ರಾಣವಾತಂ
ಲಿಂಗಮಂ ಬಿಡದಪ್ಪಿದಾತಂ ನನಗೆ ಸತ್ಪ್ರಭುವು
ಲಿಂಗಮಂ ಬಿಡದಪ್ಪಿದಾತನೆ
ತುಂಗವಿಕ್ರಮನಂತದಂಗಂ
ಪೊಂಗಿ ನಿಚ್ಚಂ ಪೊಡಮಡುವೆ ನಾನೆಂದನೀಶ್ವರನು || ೪೨ ||

ಲಿಂಗಮಂ ಬಿಡದಪ್ಪಿದಾತನ
ಹಂಗಿನೊಳಗಾನಿರ್ದು ಮತ್ತಂ
ಪಿಂಗದಾತನ ಸೇವೆಯಂ ತಲೆಯಲ್ಲಿ ನಾಂ ಪೊತ್ತು ||
ಸಾಂಗದಿಂದವನಾಜ್ಞೆಯಂ ಸಲೆ
ಯಂಗವಿಸಿ ಮಾಡುವೆನೆನುತ ಮಿಗೆ
ಯಂಗಜಾಹಿತನೆಂದನೆನುತಂ ನುಡಿದ ಸಿದ್ಧೇಶಂ || ೪೩ ||

ಲಿಂಗ [ಮಧು] ಪಂಚಾರ್ಣ ರೂಪಂ
ಹಾಂಗೆ ಭಕ್ತ ಷಡರ್ಣ ರೂಪಂ
ಲಿಂಗ ಭಕ್ತರೊಳಧಿಕನ್ವೈ ಸದ್ಭಕ್ತನಂತಾಗಿ ||
ಹಿಂಗೆ ಕೇಳ್ವೈ ಸ್ಕಂದದೊಳಗಂ
ತಂಗಜಾಹಿತನೆಂದನೆನ್ನಯ
ತುಂಗ ಭಕ್ತನ ಮಹಿಮೆಯಂ ಪೊಗಳಲ್ಕಶಕ್ಯವಲಾ || ೪೪ ||

ದೇವಿ ಕೇಳ್ನಾಂ ಬಲ್ಲೆ ಮತ್ತಂ
ಭಾವಿಸಲು ನೀಂ ಬಲ್ಲೆ ಬಳಿಕಂ
ಭೂವಳಯದೊಳು ನಂದಿ ಬಲ್ಲಂ ಮೂವರಲ್ಲದೆಯು ||
ಈ ವಿಧಂಗಳನಱಿಯನೊ ಗುಹ
ನೋವಿ ತಾನೇನರಿಯನೋ ಯೆನೆ
ಯಾವವಂ ನೆರೆಯರಿವನೆನ್ನಯ ಭಕ್ತನುನ್ನತಿಯ || ೪೫ ||

ಕೋಟಿ ಜಿಹ್ವೆಯನುಳ್ಳವರುಗಳು
ಕೋಟಿಯಾಯುಷ್ಯವನೆ ಪಡೆದರು
ಕೂಟನಹಿತಂ ಪೊಗಳೆಯೆನ್ನಯ ಭಕ್ತರುರು ಮಹಿಮೆ ||
ಮಾಟಿನಲು ಪೊಗಳುವನದಾವಂ
ಸಾಟಿಯೇ ಶಿವಭಕ್ತಗೆಂದು ಲ
ಲಾಟ ಲೋಚನನೆಂದನಂದಾ ಗಿರಿಜೆ ಕೇಳಲ್ಕೆ || ೪೬ ||

ಗುರು ಮಹಾಘನ ಲಿಂಗ ಜಂಗಮ
ಪರಮ ಸುಪ್ರಸಾದ ಮೆಂಬೀ
ಯುರುತರದ ನಾಲ್ಕರೊಳು ವರ್ತಿಪುದದುವೆ ವರ್ತನೆಯು ||
ತರುಣ ಕೇಳದರಿಂದ ವೀರ
ಸ್ಥಿರದ ಶೈವವ್ರತದ ನಿಷ್ಠೆಯು
ಪರಮ ಮೋಕ್ಷಾಪೇಕ್ಷಭಕ್ತನದೆಂಬುದಧಿಕಾರಿ || ೪೭ ||

ಲಿಂಗದಲ್ಲಿಯ ನಿಷ್ಠೆಯಿಂದಂ
ಲಿಂದಲ್ಲಿಯ ಪೂಜೆಯಿಂದಂ
ಲಿಂಗದಲ್ಲಿಯ ಭಕ್ತಿಯಿಂದಂ ವರ್ತಿಸುತೆ ಮತ್ತಂ ||
ಲಿಂಗದಲ್ಲಿಯ ಸುಪ್ರಸಾದದೆ
ಲಿಂಗದಲ್ಲಿಯೆ ಚರಿಸುತಿರ್ಪಾ
ಲಿಂಗ ಭಕ್ತನ ವಿವರವೇಯಧಿಕಾರ ಮೆಂದರಿಯ್ಯೆ || ೪೮ ||

ಲಿಂಗವಾರ್ತೆಯ ಕೇಳುತಿರ್ಪುದು
ಲಿಂಗದಲ್ಲಿಯೆ ಧ್ಯಾನವನಿಶಂ
ಲಿಂಗವೇ ತಾನಂಗವಾಗಿಯೆ ವರ್ತಿಸುತ್ತಿಹುದು ||
ಸಂಗದಿಂದೆವಿದೇ ಪ್ರಯೋಜನ
ವಂಗವಿಸೆ ವಿಷಯಂಗಳಂ ಸಲೆ
ಹೆಂಗೆನಲು ಪೇಳುವೆನದೆಂತೆನಲಾವು ಮುಂದಿನ್ನು || ೪೯ ||

ಗುರು ಮಹಿಮನಹ ಲಿಂಗ ಜಂಗನು
ದರುತರ ಪ್ರಸಾದ ತೀರ್ಥಂ
ಪರಿಕಿಸಲ್ಕೊಂದೆಂದು ತಿಳಿವುದು ವಿಷಯವ್ವೈ ಕೇಳು ||
ಹರುಷದಿಂದವೆನುತ್ತ ತೋಂಟದ
ನಿರುತ ಸಿದ್ಧೇಶ್ವರ ನುಡಿದನಂ
ತರದೆ ಕೇಳುವ ಚಂದ್ರಶೇಖರದೇವರಿಗೆ ಕೂರ್ತು || ೫೦ ||

ಮಗನೆ ಕೇಳ್ವೈ ಚಂದ್ರಶೇಖರ
ಸುಗುಣಿಯೇ ಪದವೆನಲು ಶರಣಂ
ಬಗೆಯೆಯರ್ಥವೆನಲ್ಕೆ ಲಿಂಗಂ ತಾನೆ ಸುಪದಾರ್ಥ ||
ಅಗಣಿತದ ಶಿಖಿಯುಷ್ಣದಂತಾ
ವಗ ಕುಸುಮ ಸದ್ಗಂಧದಂದದೆ
ಮಿಗೆ ಪದಾರ್ಥದ ರೂಪದೆಂದಂ ಸಿದ್ಧಲಿಂಗೇಶಂ || ೫೧ ||

ಮತ್ತೆಯಧಿಕಾರಿ ಪ್ರಯೋಜನ
ಮುತ್ತಮದ ವಿಷಯಂ ಬಳಿಕ ಸಂ
ಪತ್ತನುಳ್ಳ ಪರಾಪರದ ಸಂಬಂಧ ಸುಪದಾರ್ಥ ||
ವೃತ್ತಿಗಳ ಕೇಳೆಂದು ತೋಂಟದ
ಚಿತ್ತಜಾಹಿತ ಸಿದ್ಧಲಿಂಗನು
ದಾತ್ತ ಸನ್ನುತ ಚಂದ್ರಶೇಖರ ದೇವರಿಗೆ ಪೇಳ್ದಂ || ೫೨ ||

ಮುಡಿಯ ಬಾಬೊಳೆಯೆಡೆಯ ತಾರೆಗ
ಳೊಡೆಯನೆಳೆವೆಳಗಗ್ಗಳಿಸಿ ಮಿಗೆ
ಜಡಿದು ಝುಂಕಿಡುತಿರಲೊಡಲ ಕಳೆ ಕಳೆಗೊ[ಡು]ತ್ತದನು ||
ಜಡಗಲಸಿ ಥಳಥಳಿಸುತಿರೆ ಪಾ
ಲ್ಗಡಲಿದೆಂದಡಕಿರದೆ ಸುಂಡಿಲ
ತುಡುಕುವಣುಗನ ಮುದ್ದಿಸುವ ಸಿದ್ಧಲಿಂಗ ವಿಭುವೆ ಜಯ || ೫೩ ||

ಇದು ವಿಮಲಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರ ॥
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣಮು
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವುದು ॥ ೫೪ ॥

ಅಂತು ಸಂಧಿ ೧೧ಕ್ಕಂ ಪದನು ೫೭೦ಲಕ್ಕಂ

ಮಂಗಳಂ

ಹನ್ನೆರಡನೆಯ ಸಂಧಿ

ಶರಣನೆಂಟಂಗದ ವಿವರಮುಂ
ಪರಮ ಜಂಗಮದಾ ಸ್ವರೂಪಂ
ಗಿರಿಜೆಗೀಶ್ವರನೊರೆದ ತೆರದಿಂ ಸಿದ್ಧನುಸುರಿದನು ||

ಕಾಮಹರ ನಿಸ್ಸೀಮ ಮಂಜುಲ
ನಾಮ ಸತ್ಸುಖಧಾಮ ಸರಸ
ಪ್ರೇಮ ಘನ ನಿಷ್ಕಾಮ ಧರ್ಮಸ್ತೋಮ ನುತಭೌಮ ||
ಸೋಮಧರ ವಿಶ್ರಾಮ ಸಂಹತ
ಹೋಮ ಜಿತ ಸಂಗ್ರಾಮ ಪುರಹರ
ಭೀಮ ವಿಮಲ ವ್ಯೋಮಶಿರ ಸಿದ್ಧೇಶ ಚೆನ್ನೇಮ || ೧ ||

ಕಾರಣಾಗಮ ಪಾರಮೇಶ್ವರ
ವೀರತಂತ್ರ ವಿವಾದಿಯಾದತಿ
ಚಾರುವೇದಂಗಳೊಳು ಪೇಳ್ವುದು ಗುರು ಮಹಿಮೆ ಮತ್ತೆ ||
ಚಾರು ಗುರುವೇ ಲಿಂಗವಾಗಿ ವಿ
ಚಾರದಿಂ ಶ್ರುತಿ·ಶಿರದೊಳಿರ್ದುವ
ಪಾರ ಘನತರ ಪಂಚಸಂಜ್ಞೆಯನುಳ್ಳುದೇ ಲಿಂಗಂ || ೨ ||

ಲಿಂಗವೇ ಧಾರುಣಿಯ ರಕ್ಷಿಸೆ
ಜಂಗಮಂ ತಾನಾಗಿ ಲೋಕದ
ಹಂಗದಿಲ್ಲದೆ ಚರಿಸುತಿರ್ಪಂ ಮುಂದೆಯೂ ಶಿವನ ||
ಮಂಗಲದ ಪರಮ ಪ್ರಸನ್ನತೆ
ತುಂಗ ಸುಪ್ರಸಾದವಾಗಿಯೇ
ಲಿಂಗ ಗುರುವಿಗೆ ಹರಷವೀವುದು ಮುಂದೆ ಕೇಳಿನ್ನೂ || ೩ ||

ಗುರುಪದಾಂಬುವೆಯಷ್ಟ ಷಷ್ಠಿಯ
ಉರುತರದ ತೀರ್ಥಕ್ಕೆಯಧಿಕವ
ದರಿಯೆಯಘಪಂಕಗಳ ಶೋಷಿಸಿ ಕಲ್ಮಷವದೆಂಬ ||
ತರುವನೊಣಗಿಸಿ ಮತ್ತೆ ಜ್ಞಾನಾಂ
ಕುರವನಾಗಿಪುದಾಗಿ ಧರಣಿಯೊ
ಳರಿದೆನಿಸಿ ಮೆರೆದಿಪ್ಪುದೈ ಚರ ತೀರ್ಥವಂತಾಗಿ || ೪ ||

ಕ್ಷಿಪ್ರದಿಂ ಗುರುಲಿಂಗ ಜಂಗಮ
ಸುಪ್ರಸಾದ ಪದಾಂಬುಗಳು ತಾ
ನೀ ಪ್ರಕಾರದ ವಸ್ತುವೆನಿಸುವ ಭಕ್ತನ ಚಿದಂಗ ||
ಅಪ್ರತರ್ಕ್ಯದ ಭೂತಿಯಾಗಿಯೆ
ಭೂಪ್ರದೇಶದೊಳಜ್ಞರಂ ಜರ
ದಪ್ರತಿಯ ಪಾವನವೆನಿಸಿ ಜಂಗಮದಲೊಪ್ಪುವುದು || ೫ ||

ಆ ವಿಭೂತಿ ಸ್ಫುರಣೆಯೇ ಶೋ
ಭಾವಹದ ರುದ್ರಾಕ್ಷಿಯೈ ಸಲೆ
ಪಾವನತ್ವವದಾಗಿಯೊಪ್ಪುವುದಿನ್ನು ಫಣೆಯಲ್ಲಿ ||
ಓವಿ ಭಸಿತಂ ಗಳದೊಳಗೆ ನೆರೆ
ತೀವಿ ರುದ್ರಾಕ್ಷಿಯದೆಸೆಯೆ ಮ
ನೋವಿಕಾರವದಿಲ್ಲದಾ ಸದ್ಭಕ್ತನಾನನದೆ || ೬ ||

ವರ ಷಡಕ್ಷರವೊಪ್ಪುವುದು ಕೇ
ಳರರೆಯಾ ಪರಿಯೆಂತೆನಲು ಮೊದ
ಲುರುತರದ ಘನ ಬಿಂದುವದರಿಂ ನಾದದುತ್ಪತ್ತಿ ||
ಧರೆಯೊಳದರಿಂ ಧ್ವನಿ ಜನಿಸಿತೈ
ಅರಿದೆನಿಪ್ಪಾ ಧ್ವನಿಯೆ ಮತ್ತಂ
ಪರಕೆ ಪರವಾಗಿರ್ಪುದದರ ಮಹತ್ವವತಿಶಯವು || ೭ ||

ಪ್ರಣವವೆ ಸಲೆ ಪಂಚಭೂತಂ
ಪ್ರಣುತದಿಂದನ ಕಾರವೇ ಕೇ
ಳಣಿಯರದೆ ದಶಮಿಂದ್ರಿಯಂ ಮನಪಂಚ ಸುಮಕಾರಂ ||
ತ್ರಿಣಯ ರೂಪಪ್ಪಾ ಶಿಕಾರಂ
ಗಣಿಯಿಸಲ್ತಾಂ ಪ್ರಾಣನಾಯಕ
ವೆಣಿಸಬಾರದ ವಾಯುದಶವಾಕಾರವಂತಲ್ಲಿ || ೮ ||

ಆ ಯಕಾರಂ ತ್ರಿಗುಣವೈ ಸಲೆ
ಯೋಯರದೊಳೀ ಬಗೆಯನರಿಯದ
ಕಾಯಜಾರಿಯ ಪೂಜೆಯೆಲ್ಲಂ ನಿಷ್ಫಲಂ ಬಳಿಕ ||
ಆಯತದ ಷಡ್ವರ್ಣವೆನುತ ಮ
ಹಾಯದಿಂದಂ ತೋಂಟದಾರ್ಯಂ
ನ್ಯಾಯಮಾರ್ಗದ ಚಂದ್ರಶೇಖರ ದೇವರಿಗೆ ಪೇಳ್ದಂ || ೯ ||

ಮುಂದೆ ಕೇಳ್ವೈ ಚಂದ್ರಶೇಖರ
ಹಿಂದೆ ಪೇಳ್ದಿಂಟಂಗವೇ ಸಹಿ
ತೊಂದು ರೂಪಾಗಿರ್ಪುದೇ ಸದ್ಭಕ್ತಿಯದೆ ಪರಮಾ ॥
ನಂದನದ್ವಯನಮೃತರಸವದು
ಕುಂದದಾ ಭಕ್ತಿಸ್ವರೂಪದು
ಚಂದದಿಂ ಭಕ್ತಿಸ್ವರೂಪೇಯಂಗಮಂ ತಳೆದ ॥ ೧೦ ॥

ಭಕ್ತನೇ ಭವವಿಲ್ಲದಾತಂ
ಯುಕ್ತಿಯಿಂದವನೊಳಗೆ ಸತ್ಕ್ರಿಯೆ
ರಕ್ತಿಯಿಂದಿರುತಿರ್ಪುದವನಂ ಸ್ತುತಿಸು ನೀನೆಂದು ॥
ವ್ಯಕ್ತವಾಗಿಯೆ ಚಂದ್ರಶೇಖರ
ಮುಕ್ತನಪ್ಪ ಮಹೇಶ್ವರಂಗಂ
ಶಕ್ತ ತೋಂಟದ ಸಿದ್ಧಲಿಂಗ ಚಿದಂಗನಿಂತೆಂದಂ ॥ ೧೧ ॥

ಪಿಂದೆ ಪೇಳ್ದಿಂಟಂಗವೇ ತಾ
ನೊಂದು ರೂಪಾಗಿರ್ಪುದಂತದೆ
ಯೊಂದಿದಾ ಸದ್ಭಕ್ತಿಯಾ ಸದ್ಭಕ್ತಿಯವಿರಳವು ॥
ಮುಂದಖಂಡಿತವದ್ವಯಂ ಮು
ದದಿಂದೆಯನುಪಮ ಚಾರುಪರಮಾ
ನಂದವೇ ತಾಂ ತೀವಿದಮೃತದ ರಸವೆ ವರಭಕ್ತಿ ॥ ೧೨ ॥

ಆ ವಿಮಲ ಸದ್ಭಕ್ತಿಯಂತದೆ
ಯಾವಗಂ ಮನ ಜೀವ ಕರ ಪದ
ತೀವಿದುರು ಸರ್ವಾಂಗವಾದಾತನೆ ಮಹಾಭಕ್ತಂ ॥
ಪಾವನದೊಳಂತೇಕವಾದುದೆ
ಭೂವಿನುತ ಸದ್ಭಕ್ತಿ ಭವತತಿ
ಕೋವಿದನೆ ತಾನಿಲ್ಲದವನೇ ಭಕ್ತ ತಾನವನೆ ॥ ೧೩ ॥

ಹರುಷದಿಂ ತೋರುವನು ತನ್ನಿಂ
ದುರುತರದ ಘನ ಸತ್ಕ್ರಿಯಾ ರೂ
ಪರಿದೆನಲ್ತಾನೊಳವು ತನಗೆಯಭಿನ್ನತೆಯೊಳಿಂತು ॥
ಇರುತೆಯವನಿಂ ಭಕ್ತಿಯಂ ಬಂ
ಧುರದೆ ಪಸರಿಪ ತನ್ನ ಮಾರ್ಗದೊ
ಳರರೆಯಾಗಂ ತನ್ನೊಳಂ ಸಲೆ ಸರ್ವಮಂ ಬಳಿಕ ॥ ೧೪ ॥

ಇರಿಸುವನೆ ಸದ್ಭಕ್ತನವನಂ
ತರುಣ ಕೊಂಡಾಡಯ್ಯ ಭಕ್ತನೆ
ಹೊರೆಯೆನುತ್ತಂ ಚಾರು ತೋಂಟದ ದಿವ್ಯಸಿದ್ಧೇಶಂ ||
ಹರುಷದಿಂದಂ ಚಂದ್ರಶೇಖರ
ಪರಮ ಮೂರ್ತಿಗೆ ನುಡಿಯತೊಡಗಿದ
ಧರೆಯೊಳು ಸದ್ಭಕ್ತನುನ್ನತಿಯಂ ವಿಶೇಷದೊಳು || ೧೫ ||

ನಾಮ ರೂಪು ಕ್ರಿಯೆಗಳಿಂ ತವೆ
ಭೂಮಿಯೊಳು ತತ್ವಾಂಗದಿಂ ಸ
ತ್ರೈಮದಿಂ ಮಂತ್ರಾಂಗ ಸದ್ಬ್ರಹ್ಮಾಂಗ ಲಿಂಗಾಂಗ ||
ಆ ಮಹಾ ಶಕ್ತ್ಯಂಗದಿಂದಂ
ರಾಮಣೀಯಕವಾದ ಸ್ಥಲಾಂಗದ
ಕೋಮಲದ ದೃಗ್ದೃಶ್ಯ ಸುಪದಾರ್ಥಂಗಳಿಂದಿರ್ಪಂ || ೧೬ ||

ಅವನ ರೋಮದ ಕುಣಿಗಳೊಳಗಂ
ತವಿರತಂ ಕೋಟಾನುಕೋಟಿಯ
ನಿವಹದ ಬ್ರಹ್ಮಾಂಡವೊಪ್ಪುವವಿನ್ನು ಕೇಳ್ಕಂದೆ ||
ಅವನ ಕುಕ್ಷಿಯೊಳಾ ಚಿದಭ್ರಂ
ಸವಿನಯದೆ ಮೆರೆಯಲ್ಕೆಯದನೇ
ಭವನಮಂ ಮಾಡುತ್ತ ಚಿತ್ಪ್ರಾಣಾನಿಲಂ ತೋರ್ಕುಂ || ೧೭ ||

ಆ ಚಿದಾನಿಲನಲ್ಲಿ ಚಿತ್‌ಶಿಖಿ
ಯಾ ಚಿದಾನಲನಲ್ಲಿ ಚಿದ್ರಸ
ವಾ ಚಿದಂಬುವಿನಲ್ಲಿ ಚಿದ್ಧರೆಯೊಪ್ಪಿ ಚಿದ್ಗಾತ್ರಾ ||
ಆ ಚಿದಂಗಂ ಚಿತ್ಕಲಾಧಿಪ
ರೋಚಿ ಸೆವರುದಾಯಂಗಳಂ ಸಲೆ
ನಾಚಿಸುವ ಘನಶಾಂತಿಯಿಂ ರಂಜಿಪುದು ಕೇಳ್ಕಂದೆ || ೧೮ ||

ಅಂತು ತೋರುವ ಚಿದ್ಘನವನುರೆ
ಮುಂತೆ ನೆಲೆಯಂ ಮಾಡಿಯಾತನ
ನಂತ ಹೃತ್ಕಮಲಾಂತರದೊಳೇ ನಾದ ಬಿಂದು ಕಲೆ ||
ಅಂತೆಸೆವ ಸಿಂಹಾಸನದೊಳಂ
ಕಂತುಮರ್ದನ ಮೂರ್ತಿ ಜಂಗಮ
ವಂತದರ ಮಧ್ಯದೊಳಗಿರ್ಪಂ ಕೇಳು ಮುಂದಿನ್ನು || ೧೯ ||

ಆತನಮಲ ಜ್ಞಾನನಮಂ ಬಳಿ
ಕಾತನುರುತರ ನಾಮ ರೂಪಂ
ತಾತನೂರ್ಜಿತ ಮಹಿಮೆಯಂ ಕೊಂಡಾಡೆ ಪವಣಲ್ಲ ||
ನೀತಿಯಿಂ ಗಿರಿರಾಜ ನಂದನೆ
ಸಾತಿಶಯದಿಂ ರಜತಗಿರಿಯೊ
[ಳ್ಭೂ] ತಪತಿಗೆರಗುತ್ತೆ ಕೇಳಿದಳಂದು ಜಂಗಮದಾ || ೨೦ ||

ಮಹಿಮೆಯೆಂತೆನೆ ಪೇಳ್ದನೀಶಂ
ತುಹಿನ ನಗಸುತೆಯೊಡನೆ ಮತ್ತಾ
ಯಹಿಕಟಕನಿಂತೆಂದನಾ ಜಂಗಮದ ದೇಹದಲ್ಲಿ ||
ಬಹುವಿಧದ ಸಚರಾಚರಂಗಳು
ವಿಹಿತದಿಂದಿರುತಿರ್ಪವೆನಲಾ
ಸಹಜವೇಯೆನಲಾಗಿ, ಕೋಪಿಸಿಯುಮೆಯೊಳಿಂತೆಂದಂ || ೨೧ ||

ಜಲಲಿಪಿಯ ಬರೆದಂತೆ ಕುರುಡಗೆ
ವಿಲಸಿತದ ಕನ್ನಡಿಯ ತೋರ್ದಂ
ತಲಘು ಶಂಖಮನೂದೆ ಕಿವುಡಂ ಕೇಳದೇ ನೋಡಿ ||
ಮೇಲುತಮಿರ್ಪೀ ಗೆಡ್ಡೆಯ [ದ] ನೆಂ
ದುಲಿದು ನುಡಿದಂದದೊಳು ಹರವಿಯ
ತಲೆಕೆಳಕು ಮಾಡುತ್ತೆ ನೀರಂ ಸುರಿದ ತೆರನಾಯ್ತು || ೨೨ ||

ಇಂದು ಶಂಕರನಾಗ ನುಡಿಯ
ಲ್ಕಂದಿ ಮನದೊಳು ದೇವಿಯರು ಭಯ
ದಿಂದೆ ನಡುಗುತ್ತಾಗ ಬಿನ್ನವಿಸಿದಳು ಪೊಡೆವಂಟು ||
ಇಂದುಶೇಖರ ನಿನ್ನ ದಾಸಿಯ
ನೊಂದಿ ರಕ್ಷಿಪುದೆನಲು ತಾ ಕೃಪೆ
ಯಿಂದ ವೀಕ್ಷಿಸಿ ಬಳಿಕಮಿಂತೆಂದಂ ಗಿರೀಶ್ವರನು || ೨೩ ||

ಸಾಗರದ ನಡುವಿರ್ಪ ಮರಳ್ಗಳ
ಬೇಗದಿಂದೆಣಿಸಲ್ಕೆ ಬರ್ಪುದೆ
ಹಾಗೆ ಶಿವಶರಣರ ಮಹತ್ವಂ ಬಹಳವಾಗಿರ್ಕುಂ ||
ರಾಗದಿಂದಂ ಪ್ರಾಣಲಿಂಗಿಗ
ಳಾಗ ಮಹಿಮೆಯೊಳೆಸೆವರಾ ಶಿವ
ಯೋಗಿಗಳ ಸೌಭಾಗ್ಯಮಂ ಕೊಂಡಾಡೆ ಪವಣಲ್ಲ || ೨೪ ||

ಜಂಗಮದ ದೇಹದೊಳಖಿಳ ಲೋ
ಕಂಗಳಿರ್ಪವಜಾಂಡವೇ ಸಲೆ
ತುಂಗ ಮಕುಟಂ ಗಗನವೇ ಮೊಗ ತೋಳ್ಗಳೇ ದಿಕ್ಕು ||
ಕಂಗಳೇ ರವಿ ಶಶಿಗಳೆರಡಾ
ಯಂಗವೇ ವ್ಯೋಮಸ್ವರೂಪವ್ನೈ
ಪಿಂಗದಾ ಪಾತಾಳವೇ ಪದವಾ ಕರಸ್ಥಲದೆ || ೨೫ ||

ಶೂನ್ಯಲಿಂಗಂ ಮೇಘತತಿ ಸಲೆ
ಯನ್ಯವಿಲ್ಲದೆ ಜಡೆಗಳಿಂದು ವ
ದಾನ್ಯನೇಯಾತಂಗೆ ಮೋದವೇ ಭಸ್ಮಂ ಕ್ರಿಯೆಯು ||
ಮಾನ್ಯ ನಕ್ಷತ್ರಂಗಳೇ ಸೌ
ಜನ್ಯ ಪುಷ್ಪ ಸಮೂಹಮುರೆ ಸಾ
ಮಾನ್ಯನೇಯಾ ಜಂಗಮಕೆ ರುದ್ರಾಕ್ಷೆ ಕುಲಗಿರಿಯು || ೨೬ ||

ಶರಧಿಯುದಕದ ಪಾತ್ರೆ ಸೃಷ್ಟಿಯು
ಪರಮಯವೆ ಯಾಕಂಥೆ ಪೀಠಂ
ಧರೆಯಹೋರಾತ್ರಿಯೆ ಗುಹೆಯು ಸೌಭಾಗ್ಯವಾತಂಗೆ ||
ಧರಣಿಯೊಳು ಮತ್ತಾ ತ್ರಿಕಾಲಂ
ಪರಮ ಷಟ್‌ಸ್ಥಲ[ವಾರು]ಋತುಗಳ
ದಿರದೆ ಶೇಷಂ ಕಟಿಯ ಸೂತ್ರಂ ಜ್ಞಾನ ಸನ್ಮುದ್ರೆ || ೨೭ ||

ಚಾರು ವಾಙ್ಮಯವಾಗಿ ತೋರ್ಪುದು
ಮೇರುವೇ ವರದಂಡವಾತಂ
ಗಾರಯಲು ಗುಣವೇ ಸಪಾತ್ರಂ ಕುಲವೆ ಶಿವಕುಲವು ||
ಸಾರ ಗಾತ್ರದ ರೋಮವೇ ಗಂ
ಭೀರವೆನಿಪ ವನಸ್ಪತಿಗಳೌ
ಗೌರಿ ಕೇಳೆಂದೀಶನೊರೆದಂ ಜಂಗಮದ ರೂಪಂ || ೨೮ ||

ವೀರ ತಂತ್ರದೊಳುಂಟು ಕೇಳಾ
ಗೌರಿ ಜಂಗಮದುರು ಮಕುಟದೊಳು
ಸಾರವಾಗಿಹ ಶೂನ್ಯಲಿಂಗಂ ಹುಟ್ಟೆ[ತ]ದರಿಂದ ||
ಚಾರುತರದ ಚಿದಂಬರಂ ಬಳಿ
ಕಾರಯಲು ಜನಿಸಿತ್ತು ಮತ್ತಾ
ಪಾರವೆನಿಪ ಚಿದಂಬರದೊಳಾಯಿತ್ತು ಶಿವಶಕ್ತಿ || ೨೯ ||

ಮತ್ತೆಯೂ ಶಿವಶಕ್ತಿಯಿಂದವೆ
ಯುತ್ತಮದ ಪರಶಕ್ತಿ ಜನಿಸಿತು
ದಾತ್ತ ವರ ಪರಶಕ್ತಿಯಿಂದಿಂತಾದಿ ಘನ ಶಕ್ತಿ ||
ಇತ್ತಲೊಗೆಯಿತ್ತಾದಿ ಶಕ್ತಿಯೊ
ಳಿತ್ತಲುಂ ನೋಡಲ್ಕೆಯಿಚ್ಛಾ
ಯತ್ತ ಶಕ್ತಿಯದಾಯಿತಿಚ್ಛಾ ಶಕ್ತಿಯಿಂ ಬಳಿಕ || ೩೦ ||

ಆದುದಾ ಕ್ರಿಯೆಯದಱೊಳಂ ತಾ
ನಾದುದದರ ಸಹಸ್ರ ಭಾಗೆಯೊ
ಳಾದುದಾ ಸುಜ್ಞಾನ ಶಕ್ತಿಯೆಯದರ ಸಾಹಸ್ರ ||
ವಾದ ಭಾಗೆಯೊಳಾಯಿತಾಗಂ
ನಾದ ಕೋಟಿಗಳಲ್ಲಿ ಮತ್ತಾ
ನಾದದುರ ಸಾಹಸ್ರದಂಶದೊಳೊಗೆದವಾ ಕ್ರಮದೆ || ೩೧ ||

ಪಂಚ ಸಾದಾಖ್ಯಂಗಳಂತಾ
ಪಂಚಘನ ಸಾದಾಖ್ಯದಿಂ ನಿ
ರ್ವಂಚನೆಯ ಮಾಹೇಶನೊಗೆದಂತವನ ವರ ಕೋಟಿ ||
ಸಂಚಲಂ ತಾನಿಲ್ಲದಂಶದೊ
ಳಂ ಚಮತ್ಕೃತಿಯಿಂದೆ ದೇವಿಯೆ
ಪಂಚವಿಂಶತಿಗಾತ್ರವಾದವನ ತದಂಶದೊಳು || ೩೨ ||

ರುದ್ರನಾಥನೊಳೊಗೆದನಂತಾ
ರುದ್ರನರು ಸಾಹಸ್ರಭಾಗೆಯೊ
ಳದ್ರಿಜಾತೆಯೆ ವಿಷ್ಣುವೊಗೆದಂತವನ ಸಾವಿರದ ||
ಭದ್ರವೆನಿಸುವ ಭಾಗೆಯಲ್ಲಿಯೆ
ಸದ್ರಮಾಕರ ವಿಧಿ ಜನಿಸಿದಂ
ಚಿದ್ರಹಿತದಜನಿಂದ ಲೋಕೋತ್ಪತ್ತಿಯಾಯಿತ್ತು || ೩೩ ||

ಜಂಗಮಾಂಗ ಸೃಷ್ಟಿಯಿಂತಿದು
ಪಿಂಗದಾ ಜಂಗಮದೊಳೊಗೆದಿಹ
ತುಂಗ ಪರಮೇಷ್ಠಿಯ ನಯನಯುಗದಿಂದ ಉದಿಸಿದವು ||
ಪಿಂಗದಾ ಶಶಿರವಿಗಳಾತನ
ಸಾಂಗ ಮುಖದಿಂ ಬ್ರಾಹ್ಮಣಂ ಸಲೆ
ಹೊಂಗಿ ಭುಜದೊಳೆ ಕ್ಷತ್ರಿಯರ ನಿವಹಂಗಳಾದರಲಾ || ೩೪ ||

ಅವನ ತೊಡೆಗಳೊಳಾರ್ಯರಾದರು
ಅವನ ಪದದಿಂ ಶೂದ್ರರೊಗೆದರು
ವವನ ರೋಮದ ಕೂಪತತಿಯೊಳಗಖಿಳ ಗಂಧರ್ವ ||
ನಿವಹವಾ ದೇವರ್ಕಳುದಿಸಿದ
ರವರ ಮನದೊಳಗುದ್ಭವಿಸಿದ ಸು
ವಿವಿಧ ವಸ್ತುಗಳಾವವೆಂದಡೆ ಒರೆವೆವೌ ಮುಂದೆ || ೩೫ ||

ಮೂರು ಕಾಲಂ ಮೂರು ಸಂಜೆಯು
ನೀರೆಯೇ ದಿವ ರಾತ್ರೆ ಮಂತ್ರಂ
ಮೂರು ವೇದಂ ಯಜ್ಞಸಿದ್ಧಿಗಳಾಗ ಷಟ್ಕರ್ಮ ||
ಬೇರೆ ಬೇರಾ ಸಮಯ ತತಿಗಳು
ಮೂರು ಗುಣಗಳ್ಜನಿಸಿದವು ವಿಧಿ
ಯಾರೆನೆನ್ನದೆ ಹುಟ್ಟಿದವುವಾವಾವುಮೆನೆ ಮುಂದೆ || ೩೬ ||

ಪುನ್ನಪುಂಸಕ ಸುದತಿಯರು ಸಂ
ಪನ್ನದುದ್ಭವವಾದ ಸುಸ್ಥಿತಿ
ಪನ್ನತಿಯಸಂಹಾರಲೋಕದ ಸಕಲ ಸಸ್ಯಾಳಿ ||
ಸನ್ನುತದ ಮೇಘಂಗಳುಂ ಸಲೆ
ಯುನ್ನತದ ವಿದ್ಯಂಗಳುಂ ರಸ
ವಿನ್ನು ತಾಂ ಕ್ರಿಮಿಕೀಟ ಸರ್ಪಂಗಳು ಚತುಷ್ಪಾದ || ೩೭ ||

ಎರಡು ಚರಣಂ ಷಟ್ಪದಗಳಾ
ಚರಣೆಯುಳ್ಳ ಮೃಗಾದಯಂಡಜ
ವರರೆಯುದ್ಭಿಜವೆನಿಸುತಿಪ್ಪ ಸ್ವೇದಜಂ ಬಳಿಕ ||
ವರ ಜರಾಯುಜವೆಂಬ ನಾಲ್ದೆರ
ದುರುತರದ ಯೋಗಿಗಳು ಮತ್ತೇ
ಪರಿಯ ಸತಿ ಸುತ ಬಂಧು ಧನಧಾನ್ಯಾದಿಗಳು ವಿಧಿಯ || ೩೮ ||

ಅಂಗದಲ್ಲಿಯೆ ಪುಟ್ಟಿದವು ಕೇ
ಳಂಗನೆಯೆಯಿವಕೆಲ್ಲಕಂ ನೆರೆ
ಜಂಗಮಂ ಮೊದಲಿಗನಲಾ ನೀಂ ಗೋಪ್ಯಮಂ ಮಾಡು ||
ತುಂಗ ದೀಕ್ಷೆಯದಿಲ್ಲದರ್ಗಂ
ಹಾಂಗೆ ಕೇಳಲ್ಬಾರದಾ ಜನ
ನಂಗಳಲ್ಲಿಯೆ ದೊರಕದಾ ಚರಸೇವೆ ದುರ್ಲಭವು || ೩೯ ||

ಮತ್ತೆ ಲಾಲಿಸನಾದಿ ಭಕ್ತನ
ಚಿತ್ತ ಕಮಲದ ಕರ್ಣಿಕೆಯ ಸಂ
ಪತ್ತಿನುರು ಮಧ್ಯದೊಳವಂ ತವೆ ಭಾವಿಸಲ್ಕಿಂತು ||
ಉತ್ತಮದ ಭಾವದೊಳು ಪೂರ್ಣಾ
ಯತ್ತವಾಗಿಯೆ ಬೆಳಗುತಿರ್ಪನು
ದಾತ್ತಜಂಗಮವವನ ಚಿನ್ಮಯವಾಗಿ ರಾಜಿಸುವ || ೪೦ ||

ಪ್ರಕಟ ಸದ್ಬ್ರಹ್ಮಾಂಡವೆನಿಸುವ
ಮಕುಟದಗ್ರದ ಮಧ್ಯದೊಳಗಂ
ಸುಕರದಿಂದಲನನ್ಯವಾಗಿಯನಿರ್ವಚನವೆನಿಸಿ ||
ಅಕುಟಿಲತ್ವದ ಶೂನ್ಯಲಿಂಗಂ
ಮುಕುರ ಕಾಂತಿಯ ತೆರದೆ ಪುಟ್ಟಿತು
ಚಕಿತಲೋಚನೆಯಾ ಸ್ವರೂಪಂ ಕೇಳು ನೀನೆಂದು || ೪೧ ||

ಎಂದು ಮಿಗೆ ಸರ್ವೇಶ ಪೇಳಿದ
ದಂದದಿಂದಂ ಚಂದ್ರಶೇಖರ
ಗಂಡೊರೆದನುರೆ ತೋಂಟದುನ್ನತ ವಿಮಲ ಸಿದ್ಧೇಶಂ ||
ಮುಂದೆ ಕೇಳು ಶಿವಾಗಮಂಗಳ
ವೃಂದದೊಳು ಪೇಳುವುದು ಮತ್ತಾ
ನಂದವೆನಿಸುವ ಶೂನ್ಯಲಿಂಗವದೆಂತೆನಲ್ಪೇಳ್ವೆಂ || ೪೨ ||

ಶರಿರವಿಲ್ಲಂ ಕುಲವದಿಲ್ಲಂ
ಕರಣ ಕಾಲಿಂದ್ರಿಯಗಳಿಲ್ಲಂ
ಪರಿಕಿಸಲ್ಸುಖಮಿಲ್ಲಮಂತಾ ಶೂನ್ಯಮನವರತಂ ||
ಅರರೆ ಮತ್ತಂ ಹೊರಗು ಶೂನ್ಯಂ
ಹರುಷದಿಂದೆ ದಶಾದಿಗ........(?)
ಳಿರದೆ ಶೂನ್ಯಂ ಮದ ಮುಖಾದಿಗಳಿಲ್ಲದುದು ಬಳಿಕ || ೪೩ ||

ತನು ಮನಂ ಸಲೆ ಭುವನ ಭೋಗಂ
ವಿನುತ ಕಾಮಕ್ರೋಧವಂತಾ
ತನುವೆ ಶೂನ್ಯಮದಾಗಿ ಶೂನ್ಯಸುಲಿಂಗವೆನಿಸಿತ್ತು ||
ಸನಯದಿಂದೆಯನಾದಿ ಭೂತಿಯ
ವಿನುತ ರೂಪಂ ನಾದ ಬಿಂದುಗ
ಳಿನಿತುವಿಲ್ಲವದಾಗಿ ಲಿಂಗವೆ ಶೂನ್ಯವೆನಿಸಿತ್ತು || ೪೪ ||

ಬಳಿಕ ದೇಹ ಪ್ರಾಣಶೂನ್ಯಂ
ತಿಳಿಯಲದರಿಂ ಶೂನ್ಯಲಿಂಗವ
ದಿಳೆಯೊಳಾಗಂ ತಾಯಿತಂದೆ ಸಹೋದರಂ ಬಂಧು ||
ಗಳು ಕುಲಂ ಛಲವಿಲ್ಲದವರಿಂ
ಮಿಳಿತನಾಮವೆ ಶೂನ್ಯವೆಂದೇ
ಯಳಿಕಲೋಚನನೆಂದುದಂ ಸಿದ್ಧೇಶನುಸುರಿದನು || ೪೫ ||

ಆ ಮಹಾಘನ ಶೂನ್ಯ ಲಿಂಗದ
ರಾಮಣೀಯಕ ಸುಪ್ರಭೆಯೆ ಸೌ
ದಾಮಿನಿಯ ಬೆಳಗುಗಳ ಕೀಳ್ಪಡಿಸುತ್ತೆ ಜಂಗಮದ ||
ಶ್ರೀ ಮಕುಟದಗ್ರದೊಳಗಿಪ್ಪುದು
ಕೋಮಲದೆ ನವಸೂಕ್ಷ್ಮರೂಪಿಂ
ಪ್ರೇಮದಿಂ ಚಿದ್ರೂಪಮಪ್ಪ ಕಲಾದಿನಾಮದಲಿ || ೪೬ ||

ಆ ಪರಮ ಸತ್ಕಲೆಯೆ ಸಲೆ ಚಿ
ದ್ರೂಪ ಭಕ್ತನ ದಿವ್ಯ ಭಾವ
ಕ್ಕೀ ಪರಿಯೊಳಂ ತೃಪ್ತಿ ಲಿಂಗವದಾಯ್ತವನ ಮನಕೆ ||
ಸ್ಪೈಪಿನಿಂದಂ ಪ್ರಾಣಲಿಂಗಂ
ರೂಪನೇ ತಾನಾಯ್ತು ಮತ್ತಂ
ಪಾಪ ರಹಿತನ ಕರಕೆಯೊಯಿತ್ತಿಷ್ಟಲಿಂಗವದು || ೪೭ ||

ಈ ವಿಧದ ಘನ ಶೂನ್ಯ ಲಿಂಗಂ
ಭಾವಿಸಲ್ಜಂಗಮದ ಮಕುಟದೊ
ಳೋವಿ ಜನಿಸುತೆ ಸರ್ವಕಾರಣವಾಗಿ ಸತ್ಪ್ರಾಣ ||
ಆ ವಿಚಾರದೆಯಾತ್ಮನಂತಾ
ಜೀವಕಂ ಸಲೆ ಬೀಜವೆನಿಸು
ತ್ತಾವಗಂ ತತ್ತ್ವಂಗಳಂ ತವೆ ಪುಟ್ಟಿಸುತ್ತಿಹುದು || ೪೮ ||

ವೀರತಂತ್ರದೆ ಕೇಳು ಮತ್ತಂ
ಚಾರುತರ ಶೂನ್ಯಾಂತರಾಳದೊ
ಳಾರಯಲ್ಪುಟ್ಟಿತ್ತು ಘನತರಮಪ್ಪ ಪರಶಕ್ತಿ ||
ಸಾರದಿಂದಾ ಶಕ್ತಿಯಿಂದಂ
ಧೀರನೇ ಸಲೆ ನಾದ ಬಿಂದು ವಿ
ಚಾರಿಸಲ್ಕಾನಂದ ಬಿಂದುಗಳಿಂದವಾ ಜ್ಞಾನ || ೪೯ ||

ಜನಿಸಿತಂತಾ ಜ್ಞಾನದಿಂದಂ
ಘನ ಶಿವೇಚ್ಛೆಗಳಾದವವರಿಂ
ದನಘ ಕೇಳಾ ವರ ಶಿವೇಚ್ಛಾಶಕ್ತಿಯಿಂ ಬಳಿಕ ||
ಅನುವಿನಿಂದವೆ ಈಶ್ವರಾತ್ಮರ
ಜನನವವರಿಂ ರುದ್ರಸತ್ಕ್ರಿಯೆ
ಯನುನಯದೊಳಾ ರುದ್ರ ಸತ್ಕ್ರಿಯೆಯಿಂದ ಕೇಳ್ಮುಂದೆ || ೫೦ ||

ಹರಿ ಮಹಾಲಕ್ಷ್ಮಿಗಳು ಪುಟ್ಟಿದ
ರರರೆಯವರಿಂ ಬ್ರಹ್ಮವಾಣಿಗ
ಳಿರದೆ ಜನಿಸಿದರವರ ದೆಸೆಯಿಂ ಸೃಷ್ಟಿಯಾಯ್ತೆಂದು ||
ಹರುಷದಿಂ ಶಿವನೊರೆದ ತೆರದಿಂ
ಶರಣ ತೋಂಟದ ಸಿದ್ಧಲಿಂಗಂ
ತರುಣನೆನಿಸುವ ಚಂದ್ರಶೇಖರ ಮೂರ್ತಿಗಂ ಪೇಳ್ದಂ || ೫೧ ||

ಅಂಜನಾತ್ಮಜದೇಶಿಕನ ಪಿತ
ಕಂಜಸುತ ಕಮನೀಯ್ಯ ಮಸ್ತಕ
ಮಂಜುಹಸ್ತ ಸಮಸ್ತ ದಿವಿಜಾಗ್ರಣಿ ಚಿತಿ ದ್ಯುಮಣಿ ||
ನಂಜುಗೂರಲನತಾಮರದ್ರುಮ
ಮಂಜರೀಕೃತ ದಿವ್ಯ ಸದ್ಗುಣ
ಪುಂಜ ಪುರುಹೂತಾತ್ಮಜಾಸ್ತ್ರದ ಶರಣು ದೇಶಿಕನೆ || ೫೨ ||

ಇದು ವಿಮಲ ಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರ ||
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣಮ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವುದು || ೫೩ ||

ಅಂತು ಸಂಧಿ ೧೨ಕ್ಕಂ ಪದನು ೬೨೧ಕ್ಕಂ
ಮಂಗಳಂ

ಹದಿಮೂರನೆಯ ಸಂಧಿ

ವರ ಚಿದಂಬರದಾ ಸ್ವರೂಪಂ
ಧರಣಿಯೊಳ್ಸುಜ್ಞಾನಿಗಳ್ಗಂ
ಧುರದೆ ಮೆಚ್ಚುವ ತೆರದೊಳೊರೆದಂ ಸಿದ್ಧದೇಶಿಕನು ॥

ಕಾಲಹರ ಸುಖದಾಲವಾಲಂ
ಶಾಲಶಂಕರ ಲೋಲ ಸತ್ಸುಖ
ಜಾಲ ಸಜ್ಜನಪಾಲ ಶಾಂತಿಯಶೀಲ ಸುಖಮೂಲ ||
ಸ್ಥೂಲಜನದನುಕೂಲ ಕಾಷ್ಮದ
ಚೇಲ ವಿರಸಾಭೀಲ ಕರಧರ
ಶೂಲ ಮಂಜುಲ ನೀಲಗಳ ನೀಂ ಪಾಲಿಸೈ ಸಿದ್ಧಾ || ೧ ||

ಸರಸ ಸನ್ನುತ ಸಚ್ಚಿದಾನಂ
ದುರುತರದ ಘನನಿತ್ಯವಂತಾ
ಸ್ಥಿರದ ನವಪರಿಪೂರ್ಣನಹ ಶಿವಭಕ್ತನತಿಶಯದ ||
ಸುರುಚಿರದ ಹೃತ್ಕಮಲದೊಳಗಂ
ಪರಮ ಜಂಗಮಲಿಂಗದುದಯಂ
ಹರುಷದಿಂದಾ ಜಂಗಮದ ವರಮುಕುಟ ಮಧ್ಯದೊಳು || ೨ ||

ಶೂನ್ಯಲಿಂಗೋತ್ಪತ್ತಿಯಂತಾ
ಶೂನ್ಯಲಿಂಗದ ಮಧ್ಯದೆಡೆಯೊಳ
ನೂನವಿಲ್ಲದೆ ವರಚಿದಂಬರಮೊಗೆವುದದರಿರವಂ ||
ಮಾನ್ಯನೇ ನಿನಗೊರೆವೆನೆಂದ ವ
ದಾನ್ಯ ಸಿದ್ಧೇಶ್ವರ ಹರುಷದಿಂ
ಮನ್ಯುರಹಿತದ ಚಂದ್ರಶೇಖರದೇವರಿಗೆ ಪೇಳ್ದ || ೩ ||

ತರುಣ ಕೇಳು ಚಿದಂಬರವನು
ದ್ಧರಿಸುತಿರ್ಪ ವಿಚಾರವೆಂತೆನೆ
ಯರರೆ ಹೇಮಾದಿಗಳೊಳೊದಗಿದ ಪತ್ರ ಮಧ್ಯದೊಳು ||
ಹರುಷದಿಂ ಹನ್ನೆರಡು ರೇಖೆಗ
ಳಿರದೆ ಚೌಕಂದಪ್ಪದಂತಾ
ಪರಿಯೊಳಡ್ಡಂ ನೀಳಮೂಗಿಯೆ ತೆಗೆವುದೈ ಬಳಿಕ || ೪ ||

ತೆಗೆದ ರೇಖೆಗಳಗ್ರದೊಳಗಂ
ಮಿಗೆ ಬರೆವುದಂತಾ ತ್ರಿಶೂಲಗ
ಳೊಗುಮಿಗೆಯೊಳವರವರ ಮಧ್ಯದೊಳುಂ ಬರೆವುದಾಗಂ ||
ಸೊಗಸಿನಿಂ ಶ್ರೀಕಾರತತಿಗಳ
ನಡುವೆ ನಾಲ್ವತ್ತೆಂಟುನಾಗಂ
ಸುಗುಣಿಯೇ ಬರೆಯೆಂದು ನುಡಿದಂ ಸಿದ್ಧದೇಶಿಕನು || ೫ ||

ಹರುಷದಿಂದಾ ರೇಖೆಗಳ ಬಂ
ಧುರದೆ ಕೇಳಿಪ್ಪತ್ತನಾಲ್ಕಂ
ತ್ವರಿತದಿಂದಂ ಬಳಿಕವಡ್ಡಂ ನೀಳದಿಂ ತೆಗೆಯೆ ||
ತರುಣ ಕೇಳೊಂದೊಂದು ಸಾಲಿಗೆ
ಯುರುತರದ ಹನ್ನೊಂದು ಮನೆಗಳು
ವಿರದೆಯೂ ಹನ್ನೊಂದು ಪಙ್ತಿಗೆ ವಾಸವೆಷ್ಟೆನಲು || ೬ ||

ನೂರ ಇಪ್ಪತ್ತೊಂದು ಮನೆ ಸರಿ
ನೀರನೇಯಾ ಚವುಕದೆಡೆಯೊಳು
ತೋರುವುದು ಮಧ್ಯಕೆ ಪದಿನೈದಾಲಯಂ ಬಳಿಕ ||
ಮೀರಿದಾ ಮನೆ ಮನೆಗೆಯರ್ಣಂ
ಜಾರದೊಂದೊಂದಾಗೆ ಸತತಂ
ನೂರ ಮೂವತ್ತಾರಲಾ ಯಂತ್ರಕ್ಕೆ ಲೆಕ್ಕದೊಳು || ೭ ||

ಸುರಪನಾಸೆಯೊಳಾಗ ಕುಳಿತು
ದ್ಧರಿಸೆ ಈಶಾನ್ಯಾಗ್ನಿ ನೈರುತಿ
ಮರುತನಾಸೆಯ ನಾಲ್ಕು ದೆಸೆಯೊಳು [ಬರೆಯುತೊಂದೊಂದು] ? ||
ಸರಸದಿಕ್ಕಿಗೆ ಮನೆಗಳನಿಶಂ
ಭರದೊಳಿಪ್ಪತ್ತೈದು ನಾಲ್ಕ
ಕ್ಕರರೆ ಕೂಡಿದ ಚಾರುಸದನವೆ ನೂರಲಾ ಇನ್ನು || ೮ ||

ನಡುವೆ ಸುತ್ತ ಪ್ರಣವದಾಲಯ
ವೊಡನೆಯದರಿಂ ನಾಲ್ಕುಬೀದಿಗ
ಳಡರಿ ಮೂಡಲ್ಪಡುವಲುತ್ತರ ದಕ್ಷಿಣದೊಳೊಪ್ಪೆ ||
ತಡೆಯದಾ ಒಂದೊಂದು ಬೀದಿಗೆ
ಬಿಡದೆ ಮನೆಯೈದೈದು ಮತ್ತಂ
ಸಡಗರದೊಳಾ ನಾಲ್ಕು ಬೀದಿಗೆ ವಾಸವಿಪ್ಪತ್ತು || ೯ ||

ಒಂದು ಮೂಲೆಗೆ ಮನೆಗಳೈ[ದೈ]
[ದಂದ]ದಿಂ ನಾಲ್ಕಕ್ಕೆ ಮನೆಗ
ಳ್ಕಂದದಾದವು ನೂರು ಮನೆಗಳ್ನಡುವೆ ರಾಜಿಸುವಾ ||
ಒಂದು ಮನೆಯೊಳ್ಪ್ರಣವಮಿಪ್ಪುದಿ
ದೊಂದು ಸಹಿತಂ ಮನೆಗಳೇ ನೂ
ರೊಂದದಾದವು ನಾಲ್ಕು ಬೀದಿಯ ಮನೆಗಳಿಪ್ಪತ್ತು || ೧೦ ||

ಒಂದಿ ತಾನಿರೆ ನೂರಯಿಪ್ಪ
ತ್ತೊಂದು ಮನೆಗಳ್ಪಿಡದೆಯಾದವು
ಮುಂದೆಯಾ ವೃತ್ತತ್ರಿಪಂಚಾಕ್ಷರಿಯ ಹದಿನೈದು ||
ಮಂದಿರಂಗಳು ಸಹಿತವಾದವು
ಕಂದನೇ ಯಂತ್ರಕ್ಕೆ ಗೇಹಗ
ಳಂದವಾದವು ನೂರ ಮುವತ್ತಾರು ವಾಸಗಳು || ೧೧ ||

ಅಣಿಯರದೊಳೊಪ್ಪುವುದು ಸುತ್ತ
ಪ್ರಣವ ಮಧ್ಯಾಗಾರವಲ್ಲಿಯ
ಗಣಿತದಿಂದಂ ಬಳಸಿ ಬರೆವುದು ಮೂಡಲೊಳ್ತೊಡಗಿ ||
ಗುಣಿಯೆ ಎಡದಿಂ ಬಲದದಿಕ್ಕಿಗೆ
ಯೆಣಿಸಿಯಾಗ 'ನಮಶ್ಶಿವಾಯಾ'
ಗ್ರಣಿಯ ವಾಸ ಮ[ಧಃ] 'ಶಿವಾಯ ನಮೋ'ಯೆನುತ ಮತ್ತೆ || ೧೨ ||

ಬರೆವುದೈ ಪದಿನೈದು ವರ್ಣಮ
ನಿರದೆಯೂ ಪ್ರಣಮುಕ್ಕೆ ಈಶನ
ಸರಸ ದಿಕ್ಕಿನೊಳೆಸೆವ ಪಂಜ್ತಿಗಳೈದಕಂ ಬಳಿಕ ||
ಹರುಷದಿಂದಂ ಪಂಚವಿಂಶತಿ
ವರಗೃಹಂಗಳ್ತೋರೆಯವರೊ
ಳ್ಗಿರುವನೇ ಕೇಳ್ಮೊದಲು ಮೇಲೆಯವಾಶಿಮನಮೆಂದು || ೧೩ ||

ಬರೆವುದೈ ['ಶಿಂಮನಯವಾ'ಯೆಂ]
ದಿರದೆ ['ನಯವಾಶಿಮ'ವೆನುತ್ತಂ]
ಬರೆವುದಾಗಂ ['ವಾಶಿಮನಯಂ' 'ಮನಯವಾಶಿ'ಯಹ] ||
ಪರಿಯ ಪಂಚಾಕ್ಷರಿಯ ಬರೆವುದು
ನಿರುತಮಪ್ಪಾ ಪ್ರಣವದಿಂದಂ
ಸುರಪನಾಶೆಗೆ ಬರೆವ ಬೀಜಾಕ್ಷರ[ವದೆಂ]ತೆನಲು || ೧೪ ||

ಭರದೊಳಾ[ಕ್ಷ್ಣಂ ಹ್ರೀಮೆ]ನುತ್ತಾ
ದರದೆ ಓಂ ಸೌಂ ಕ್ಲೀಮೆನುತ್ತಂ
ಬರೆವುದೈ ಯಂತ್ರ ಪ್ರಣವವಿಡಿದಾಗ ವಾಸವನ ||
ಸರಸ ದಿಕ್ಕಿನ ಬೀದಿಯಲ್ಲಿ
ಸ್ಥಿರದೆ ಪುತ್ರನೆ ಕೇಳೆನುತ್ತಾ
ಗೊರೆದನಂದಾ ಸಿದ್ಧಲಿಂಗಂ ತನ್ನ ಕುವರಂಗೆ || ೧೫ ||

ತರುಣ ಮಧ್ಯಪ್ರಣವ ವಾಸ
ಕ್ಕಿರದೆಯಗ್ನಿಯ ಪಙ್ತಿಯೈದ
ಕ್ಕರರೆಯಕ್ಷರ ವಿವ[ರವಿ]ಪ್ಪತ್ತೈದವಾವವೆನೆ ||
ವರ 'ನವಾಮಯಶಿಂ' ಯೆನಿಪ್ಪ
ಕ್ಷರಗಳಂತಾ ['ಮಯಶಿನವ'ಯೆಂ]
ಬುರುತರದ 'ಶಿನವಾಮಯಾ'ಕ್ಷರವಿನ್ನವೆಂತೆನಲು || ೧೬ ||

['ವಾಮಯಶಿನಂ' ಮತ್ತೆ 'ಯಶಿನಂ]
ವಾಮಾ'ಯೆಂಬೀಯಕ್ಷರಂಗಳು
ರಾಮಣೀಯಕವಾಗಿಯಿಪ್ಪತ್ತೈದಿವಂ ಶಿಖಿಯ ||
ಆ ಮಹಾದಿಕ್ಕಿಂಗೆ ಬರೆ ಸ
ತ್ರ್ರೀಮದಿಂದಂ ಪ್ರಣವವಿಡಿದು
ದ್ದಾಮ ದಕ್ಷಿಣ ದೆಸೆಯ ಬೀದಿಗೆ ಲಿಖಿಪ ಬೀಜಾರ್ಣಂ || ೧೭ ||

ಎಂತೆನಲು 'ಸಾಂಕ್ಲೀಂ' ಬಳಿಕ್ಕಂ
ಮುಂತೆ [ಕ್ಷ್ಣಂ] ಹ್ರೀಂ [ಓಂ] ಸತತ ನಿ
ಶ್ಚಿಂತನೇಯೆಂಬೀ ಪರಿಯ ವರ್ಣಂಗಳಂತಾಗಿ ||
ಅಂತಕನ ದೆಶೆಯಲ್ಲಿ ತೋರ್ಪವ
ನಂತರದೆ ನೈರುತ್ಯನಾಶೆಯೊ
ಳಿಂತು ರಾಜಿಪ [ಶಿವನ] ಪಂಚಾಕ್ಷರಿಗಳಂ ಕೇಳು || ೧೮ ||

'ಶಿಯಮವಾನಂ' ವಾನಶಿಂ ಯಂ
ಮ''ಯಮವಾನಶಿ''ನಶಿಯ ಮಂ ವಾ
ಪ್ರಿಯದೆ ಕೇಳು 'ಮವಾನಶಿಂ ಯಂ' ದಾಗೆ ನಿರುತಿಯಲ್ಲಿ ||
ನಯದೆ ಬರೆ ಪಶ್ಚಿಮದ ದೆಶೆಯೊ
ಳ್ನಿಯತದಿಂ[ದಂ 'ಹ್ರೀಂ ಶ್ರಿಂ ಸೌಕ್ಲಿಂ]
ಭಯ ಜಿತ [ಕ್ಷ್ಣಿಮ್ಮೆಂಬ] ಬೀಜಾರ್ಣಂಗಳಂ ಲಿಖಿಸು || ೧೯ ||

ಮರುತನೊಳಗಂ ಪಂಚ ಪಂಚಾ
ಕ್ಷರಗಳೊಪ್ಪುವವಾನವೆಂದೆನೆ
ಹರುಷದಿಂದ 'ನಮಶ್ಶಿವಾಯಾ' 'ವಾಯನಮಶಿ' ಮಹಾ ||
ವರದ '[ಃಮ]ಶಿವಾಯನ' ಕಣಾ ಬಳಿ
ಕಿರದೆ'ಯನಮಶಿವಾ'ಯೆನುತ್ತಂ
ತ್ವರಿತದಿಂದೆ 'ಶಿವಾಯ ನಮ'ಯೆಂಬಕ್ಷರಾಳಿಗಳು || ೨೦ ||

ಮತ್ತೆ ಸುಪ್ತ ಪ್ರಣವವಿಡಿದದ
ರುತ್ತರಾಶೆಯೊಳೆಸೆವವೈಯ್ದ
ತ್ಯುತ್ತಮದ ಬೀಜಾಕ್ಷರಂಗಳು ಮೆರೆವವೆಂತೆನಲು ||
ಉತ್ತರದೆ 'ಕ್ಲೀಂ ಸೌಂ ಬಳಿಕ್ಕವೆ
ನುತ್ತ[ಕ್ಷ್ಮಂ] ಶ್ರೀಂ ಹ್ರೀಂ' ಯೆನಿಪುದು
ಚಿತ್ರಜಾಹಿತ ವರಚಿದಂಬರದುದ್ಧರಣೆ ಕೇಳು || ೨೧ ||

ತನುಜ ಕೇಳ್ಳೆ ಚಂದ್ರಶೇಖರ
ನಿನಗೆ ನಾವೀಗೊರೆದ ಸನ್ನುತ
ಘನ ಚಿದಂಬರದೊಳಗೆ ಹ್ರಸ್ವಂ ದೀರ್ಘ ಸುವಿಸರ್ಗಂ ||
ವಿನುತ ಬಿಂದ್ವಾದಿಗಳೆಡರು ಬರೆ
ಯನುವಿನಿಂದವ ನೋಡದಿರು ಘ
ನ್ಮನೆ ಸಕಲರರಿವಂತೆ ಪೇಳಿದೆವೆಂದ ಸಿದ್ಧೇಶಂ || ೨೨ ||

ವರ ಚಿದಂಬರದಕ್ಷರಂಗಳು
ಪರಿಕಿಸಲ್ಸಾಸ್ವತಂತ್ರ್ಯಕರ್ತೃಗ
ಳರರೆಯದರೊಳಗಿರ್ಪ ವಿಮಲ ಪ್ರಣವವೇ ಸುಪ್ತ ||
ಉರಗನಂದದೆ ತೋರ್ಪುದನಿಶಂ
ತರುಣನೇಯದರಿರವನೊರೆವೆಂ
ಪರಮ ವಾತೂಲಾಗಮಾರ್ಥದೊಳೆಂತೆನಲು ಕೇಳು || ೨೩ ||

ವರಕುಮಾರಂಗೀಶನೆಂದಂ
ಪರಮಘನ ಸತ್ಪ್ರಣವವನಿಶಂ
ತರುಣ ಸಕಲಾಗಮಕೆ ಮೊದಲಾ ಪ್ರಣವ ಪಂಚಕವು ||
ಹರುಷದಿಂದಂ ಕೋಟಿಮಂತ್ರ
ಕ್ಕಿರದೆ ತಾಯಾಗಿರ್ಪುದಂತಾ
ಪರಿಯವಾಗ್ಜ ಪ್ರಣವವೆಂಬುದುಮದು ಹಕಾರವಲಾ || ೨೪ ||

ಪ್ರಣವವೇ ನೆರೆನಾದವಂತಾ
ಪ್ರಣವವೇ ಓಂಕಾರವಂತಾ
ಪ್ರಣವಕಂ ಪರವಾ ಹಕಾರಂ ಬಳಿಕ ಕೇಳಂತಾ ||
ಪ್ರಣವವಂತು [ಮ]ಕಾರವಂತಾ
ಪ್ರಣವವಿರದೆಯುಕಾರವಂತಾ
ಪ್ರಣವದಂಶದಕಾರನುಂ ಸಲೆ ಮತ್ತುಕಾರವನು || ೨೫ ||

ಎರಡನೊಂದಿಸಲಾ ಮಕಾರಂ
ತರುಣನೇ ಸತ್ಪ್ರಣವವಲ್ಲಭವ
ರರೆ ಕೇಳಿದು ತತ್ಪ್ರವೃತ್ತಿಯ ಸೂರ್ಗವೈ ಮುಂದೆ ||
ವರ ನಿವೃತ್ತಿಯ ಪಥವನೊರೆವೆವು
ಭರದೆ ಗೋಪ್ಯವದಾಗಬೇಕೆಂ
ದಿರದೆ ತೋಂಟದಲಿಂಗನೆಂದಂ ಶರ್ವನೆಂದಂತೆ || ೨೬ ||

ಹರುಷದಿಂದೊಂದರೊಳುಕಾರವ
ದೆರಡರಲ್ಲಿಯಕಾರವಂತಾ
ಪರಿಯ ಮೂರರೊಳಂ ಮಕಾರಂ ಮತ್ತೆ ನಾಲ್ಕರೊಳು ||
ಸರಸದಿಂದೋಂಕಾರವೈದರೊ
ಳಿರದವಾಗ್ಜವೆನಿಪ ಹಕಾರಂ
ತರುಣನೇ ಕೇಳ್ಪ್ರಣವ ಪಂಚಕವೆಂಬುದೆಂದರಿಯೈ || ೨೭ ||

ಮುಂದೆ ನೀ ಕೇಳೈಯುಕಾರಂ
ಬಿಂದು ರೂಪದೆ ಜಾಗ್ರದೊಳ್ಸಲೆ
ಸಂದು ತೋರ್ಪುದಕಾರವೇ ನೆರೆ ನಾದರೂಪಿಂದಾ ||
ಅಂದದಿಂ ಸ್ವಪ್ನದೊಳು ರಾಜಿಪು
ದಿಂದು ಶೇಖರ ವರ ಮಕಾರವೆ
ಕುಂದದನಿಶಂ ಸುಪ್ತಿಯೊಳು ಮೆರೆವುದು ಕಲಾರೂಪಿಂ || ೨೮ ||

ಮುಂದೆ ಕೇಳೋಂಕಾರ ಶಕ್ತ್ಯಾ
ನಂದ ರೂಪದೆ ತುರಿಯದಲ್ಲಿಹು
ದಂದವಾಗ್ಜ ಪ್ರಣವ ಶಿವರೂಪಿಂದೆಯನವರತಂ ||
ಹೊಂದಿ ತುರಿಯಾತೀತದಲ್ಲಿಹು
ದೆಂದು ತೋಂಟದ ಸಿದ್ಧದೇಶಿಕ
ನಿಂದುಶೇಖರಗೊರೆದನೈದೋಂಕಾರ ರೂಪುಗಳಂ || ೨೯ ||

ಮೊದಲಕಾರದೊಳಂತುಕಾರಮು
ನೊದವಿದಾ ವ್ಯಾಕರಣ ಸೂತ್ರದೆ
ಪುದಿಯಲಿಂತೋಂಕಾರವಾಯಿತು ಕೇಳ್ಮಕಾರವನು ||
ಪದುಳದಿಂ ಕೂಡಿದೊಡೆ ಸಲೆಯೊ
ದುದು ಬಳಿಕ್ಕೋಂಕಾರಮದರ
ಗ್ರದ ವಿಮಲ ದೋಂಕಾರವೊಂದಲ್ತುವೆ ನಿರಂಜನವು (?) || ೩೦ ||

ಅದು ಹಕಾರಪ್ರಣವರೂಪಂ
ತದುವಾಗ್ಜ ಪ್ರಣವವೆನುತಂ
ಸದಮಲದ ಗುರು ಸಿದ್ಧಲಿಂಗಂ ವರಚಿದಂಬರದ ||
ವಿದಿತ ಮಧ್ಯ ಪ್ರಣವದಿರವಂ
ಮುದದೆ ಪೇಳ್ದಂ ಚಂದ್ರಶೇಖರ
ಗದರ ಘನತರ ಮಹಿಮೆಯಂ ಸದ್ಭಕ್ತತತಿ ಮೆಚ್ಚೆ || ೩೧ ||

ಅಂತವಾಚ್ಯ ಪ್ರಣವಮೆಸೆವುದ
ದೆಂತೆನಲ್ವೇದಾದಿ ಮೂಲಂ
ಮುಂತೆಯಾ ಸ್ವರತತಿಗೆ ತಾನೇ ಕೀರ್ತಿವೆತ್ತಿಹುದು ||
ಕಾಂತಿಯಿಂ ಹದಿನೂರರೆಡೆಯೊಳ
ಗಂತು ಶಶಿ ರವಿ ಬಿಂಬಗಳನ
ತ್ಯಂತದಿಂ ಕೀಳ್ಪಡಿಸಿ ತೋರ್ಪುದು ಮುಂದೆ ಕೇಳಿನ್ನು || ೩೨ ||

ಹರುಷದಿಂದಂ ಸುಪ್ತಸರ್ಪನ
ಪರಿಯೊಳಿರ್ಪುದು ಮೂರು ತತ್ವ
ಕ್ಕರರೆ ಮೊದಲಾಗಿರ್ಪುದೈ ಇಂತಿರ್ಪ ಸನ್ನುತದ ||
ಉರುತರದ ಸತ್ಪ್ರಣವವಂ ಕುಱಿ
ತಿರದೆ ಸಲೆ ಶರಣೆಂಬರೆನುತಂ
ಶರಣ ತೋಂಟದ ಸಿದ್ಧಲಿಂಗ ಚಿದಂಗನಿಂತೆಂದ || ೩೩ ||

ಪರಮ ರಾಹಸ್ಯದೊಳು ಕೇಳ್ಮೆ
ಯುರುತರದ ಸತ್ಪ್ರಣವವುಳ್ಳಾ
ಸ್ಥಿರದ ನಾದಂ ಬಿಂದು ಕಲೆಗಳ್ಕೂಡಿದಾ ವಿಮಲ
ವರ ಷಡಕ್ಷರಿಗಾದಿಯೆನಿಪುದು
ನಿರುತದಿಂದೆ ಯಕಾರದೊಳಗಂ
ತಿರದುಕಾರಂ ಕೂಡಲೋಂಕಾರಸ್ವರಂ ತೋರ್ಕುಂ || ೩೪ ||

ಆ ಮಹಾ ಓಂಕಾರಮಂ ಮಿಗೆ
ಭೂಮಿಯೊಳ್ಸದ್ಬ್ರಹ್ಮವೆಂದುರೆ
ರಾಮಣೀಯಕ ಯೋಗಿಗಳು ನುಡಿವುತ್ತಮಿರ್ಪರಲಾ ||
ಪ್ರೇಮದಿಂದೆಯಕಾರನುಂತಾ
ಕೋಮಲದುಕಾರನತಿಶಯಃ
ದಾ ಮಕಾರವಿವೊಂದೆಯೋ ಮಿತಿರೂಪಮೇ ಜ್ಯೋತಿ || ೩೫ ||

ಇರದಕಾರೋಕಾರವಂತಾ
ಸ್ಥಿರ ಮಕಾರಮನುರೆ ಪುದಿಯಲಾ
ಪರಿಯೊಳೋಂಕಾರಂ ಬಳಿಕ್ಕದು ಸರ್ವಬೀಜವಲಾ ||
ಗಿರಿಜೆ ಕೇಳಾ ನನ್ನ ಸನ್ಮತ
ದುರುತರ ಪ್ರಣವಗಳು ಕೆಲವತಿ
ನಿರುತದಿಂದಂ ನಿನ್ನ ಸಂಬಂಧ ಪ್ರಣವವೃಂದಂ || ೩೬ ||

ಕೆಲವು ಮಂತ್ರಂಗಳಿಗೆ ಕೇ(?)
ಳಲಘು ಶಕ್ತಿಮಯಂ ಬಳಿಕ್ಕಂ
ಸಲೆಯಕಾರೋಕಾರವಂತು ಮಕಾರವೊಂದಿರ್ದಾ ||
ಲಲಿತದೋಂಕಾರ ಪ್ರಣವವದು
ಲಲನೆ ನನ್ನದು ನಿನ್ನ ಸನ್ಮತ
ದೊಲವಿನ ಪ್ರಣವಂಗಳಂ ಕೇಳೆಂದು ಶಿವನೆಂದಂ || ೩೭ ||

ಆ ವುಕಾರಂ ಘನಮಕಾರದೊ
ಳಾವಗಂ ಕೇಳಂತಕಾರಂ
ತೀವಿದುರುತರ ದೀರ್ಘಮುರೆಯಾವರಿಸೆಯದು ನಿನ್ನ ||
ಪಾವನದ ರೂಪ ಪ್ರಣವ ಶೋ
ಭಾವಹದೊಳೀ ಮೂರು ನಿನ್ನೆ
ನ್ನಾ ವಿಶೇಷಾಚಾರ ಸಲೆ ಸಂಬಂಧವಂತಾಗಿ || ೩೮ ||

ಈ ಪ್ರಕಾರದ ಲಿಂಗಜಂಗಮ
ವಪ್ರತರ್ಕ್ಯವಿದಾರು ಬಲ್ಲರು
ಭೂ ಪ್ರದೇಶದೊಳಂತಕಾರ[ಮುಕಾರ] ಸುಮಕಾರಂ ||
ಕ್ಷಿಪ್ರದಿಂದೀ ಮೂರರೊಳಗಂ
ಸುಪ್ರಸನ್ನದೆ ವೇದದೇವತೆ
ಗಳ್ಪ್ರಮೋದದೆ ಜನಿಸಿಯುಡಗುವರಕ್ಷಕರತ್ರಯದೆ || ೩೯ ||

ಎಂದು ಶಂಕರನಾಡೆಯುಮೆ ಶರ
ಣೆಂದು ಕೇಳಿದಳಭವನಂ ಮುದ
ದಿಂದೆ ಘನ ಷಡ್ವರ್ಣಪರವಪ್ಪಾ ಪ್ರಣವ ರೂಪಂ ||
ಇಂದು ಪೇಳೆನೆ ನುಡಿದನೀಶ್ವರ
ನಂದದಿಂದೋಂಕಾರ ನಾದಂ
ಬಿಂದು ಸರ್ವವ್ಯಾಪಿ ಪರಮೇಶ್ವರನ ಗೋಪ್ಯ ಮುಖಂ || ೪೦ ||

ನೆಟ್ಟನಂತಾ ಪ್ರಣವದಾದಿಯ
ಹುಟ್ಟಿ ತಾರಕವೆಂಬುದಂತಾ
ಹುಟ್ಟನಿಂದದನಿಳೆಯ ತೆಗೆದುದೆ ದಂಡಕವದದಕೆ ||
ಕೊಟ್ಟ ಪೊಕ್ಕುಳೆ ಕುಂಡಲಿಯುಯಳ
ವಟ್ಟ ಹೆರ್[ಯೇ]ಯರ್ಧ ಚಂದ್ರಂ
ಇಟ್ಟ ಸೊನ್ನೆಯೆ ಮುಖದರೇಖೆ ನಿರಂಜನ ಜ್ಯೋತೀ || ೪೧ ||

ವರ ನಕಾರಂ ತಾರಕಂ ಬಂ
ಧುರ ಮಕಾರಂ ದಂಡಕಂ ಸೌಂ
ದರ ಶಿಕಾರಂ ಕುಂಡಲಿಯು ವಾಕಾರವೇಯರ್ಧ ||
ನಿರುತ ಚಂದ್ರಂ ಸೆಲೆಯಕಾರಂ
ಸರಸ ಬಿಂದು ಕ್ರಮದೆಯಜ ಹರಿ
ಪರಮ ರುದ್ರೇಶ್ವರ ಸದಾಶಿವರವರೊಳೆಸೆವರಲಾ || ೪೨ ||

ಆರು ವರ್ಣ ಪ್ರಭೆಗಳುಂ ಮಿಗೆ
ಮೀರಿದತಿಶಯ ತೈಲಧಾರೆಯು
ತೋರುವಂತಾ ಪ್ರಣವದಾಕಾರಂ ವಿರಾಜಿಪುದು ||
ಸಾರೆ ಘಂಟೆಯ ನುಡಿಸಿ ನಿಲಿಸಿದೊ
ಡೇರಿದಾ ಧ್ವನಿಯಂತೆ ನಾದಂ
ಮೂರುಲೋಕದೊಳೆಸೆವುದಾ ಪಿಂಡಾಂಡದೊಳ್ತುಂಬಿ || ೪೩ ||

ಮುಂದೆ ಕೇಳೋಂಕಾರವೆಂದುರೆ
ಯಂದದಿಂದಂ ಪ್ರಣವವೇ ತಾ
ನೆಂದು ಮತ್ತಂ ಬ್ರಹ್ಮವೆಂದು ಜ್ಞಾನವೆಂದು ಶಿವಂ ||
ಎಂದುವಾತ್ಮಂ ಕಾಂತಿ ಬೀಜವ
ದೆಂದು ನಿಷ್ಕಲ ತಾರಕವಿದಿಂ
ತೆಂದು ಸತತಂ ಕುಂದದಿಲ್ಲದೆ ನಿಷ್ಕಲಾತ್ಮಕವೆಂದು ಕೇಳ್ಮಂದೆ || ೪೪ ||

ನಾದವಾ ನಾದಾದಿ ಸಲೆ ಹೃ
ನ್ನಾದವಿರದಾಗಂ ಬಳಿಕ ವೇ
ದಾದಿಯಾ ವರ ವೇದ ಭೂ ಸನ್ಮುಕ್ತಿ ಬೀಜವಲಾ ॥
ಮೋದದಿಂದಂ ಮಂತ್ರಬೀಜಂ
ಸಾದರದೆ ಸಲೆ ವರ್ಣ ಬೀಜಂ
ಮೇದಿನಿಯೊಳೀ ಪ್ರಣವಕಂ ಪದಿನೆಂಟು ಪೆಸರಾಯ್ತು ॥ ೪೫ ॥

ಧರೆಯೊಳ ವ್ಯಂಜನಮಘೋಷವ
ದಿರದೆ ದುಸ್ವರ[ದೋಷ]ವರ್ಜಿತ
ವರದೆ ತಾವುಗಳಾನುನಾಶಿಕವೋಷ್ಠದಿಂ ನುಡಿಯೆ ॥
ನಿರುತದಿಂದಂ ಬಾರದಾಯು
ಕ್ಷರ ಚರಾಚರವಖಿಳ ಲೋಕಂ
ಪರಮ ವೇದಾದಿಗಳು ಪುಟ್ಟಿದವಾ ಪ್ರಣವದಿಂದಂ ॥ ೪೬ ॥

ಸಾದರದೊಳಾ ಪ್ರಣವದಿಂದಂ
ನಾದವಾಗಂ ಪುಟ್ಟಿತಂತಾ
ನಾದದಿಂದಂ ಬಿಂದುವದರಿಂ ಕಲೆಯುದಾಯಿತ್ತು ॥
ಮೋದದಿಂದಾ ಕಲೆಯೊಳಂ ಸಲೆ
ಭೇದವಿಲ್ಲದೆ ಶಕ್ತಿಯುದರೊಳ
ಗಾದುದೌ ಸಂವಿತ್ತುವದರಿಂ ಚಿತ್ತು ಚಿತ್ತಿಂದಾ ॥ ೪೭ ॥

ಪರಮ ತೇಜಂ ಪುಟ್ಟಿತಂತದು
ವರ ಸದಾಶಿವನನವನೊಳಾದಂ
ಸರಸ ರುದ್ರನೆಯೆಸೆವನವನಿಂ ವಿಷ್ಣುಜನಿಸಿದನು ॥
ಹರಿಯೊಳಜನುದ್ಭವಿಸಿದಂ ಬಳಿ
ಕಿರದೆಯಾ ವಿಧಿಯಿಂದ ಸಚರಾ
ಚರಗಳುದ್ಭವಿಸಿದವಿವಕ್ಕಂ ಪ್ರಣವವೇ ಮುಖ್ಯ ॥ ೪೮ ॥

ಎಂದ ಗೌರಿಗೆ ಶಂಭು ಮುನ್ನೊರೆ
ದಂದದಿಂದಂ ತೋಂಟದಾರ್ಯಂ
ಗೊಂದಿಸುತೆ ಬೆಸಗೊಂಬ ಸನ್ನುತ ಚಂದ್ರಶೇಖರಗೆ ॥
ಅಂದದಿಂದಂ ಚಿದಂಬರವನಾ
ನಂದದಿಂದಂ ಪೇಳಿದಂ ಮುದ
ದಿಂದವಿಲ್ಲಿಗೆ ಮುಗಿದುದೀಗಂ ಪ್ರಣವದುತ್ಪತ್ತಿ ॥ ೪೯ ॥

ತರುಣಿ ಕೇಳೋಂಕಾರವೊಂದಿದ
ವರ ಷಡಕ್ಷರಿ ಸರ್ವಸಿದ್ಧಿಯ
ನಿರದೆ ಕೊಡುವುದು ಪಂಚವರ್ಣಕ್ಕಂ ಪ್ರಣವವರ್ಣಂ ||
ಧರೆಯೊಳಿಲ್ಲೀ ಮಂತ್ರಕಂ ಸಲೆ
ಸರಿಯಿಡುವರಾರಿಳೆಯೊಂಳಿತಿದು
ಪರಮ ಷಷ್ಠ ಬ್ರಹ್ಮಮಯವೆನಿಪುದು ಶಿವಂ ತಾನೆ || ೫೦ ||

ಓಮಿತಿಯೆನಿಪ್ಪುದು ಶಿವಂಗಂ
ಪ್ರೇಮದಿಂ ಸದ್ಯಾದಿ ವದನಂ
ನೇಮಿ ಪಂಚಬ್ರಹ್ಮಮಯವಿದು ಬಳಿಕವೋಂಕಾರಂ ||
ಕೋಮಲದ ಷಡ್ವಕ್ತ್ರಮುರೆ ನಿ
ಸ್ಸೀಮನೇ ಷಡ್ಬ್ರಹ್ಮ ಲಕ್ಷಣ
ವೀ ಮಹೀತಳದಲ್ಲಿಯಾರಾರಾದವಾವವೆನೆ || ೫೧ ||

ಪರಮ ಪರಿಪೂರ್ಣಂ ಯಕಾರಂ
ತರುಣನೇ ವಾಕಾರನಿತ್ಯಂ
ಸುರುಚಿರಾನಂದಂ ಶಿಕಾರಂ ಚಿನ್ಮಕಾರವಲಾ ||
ಉರೆ ನಕಾರಂ ಚಿತ್ತು ಮತ್ತಂ
ಹರುಷದಿಂದಂ ಪ್ರಣವಮಿಶ್ರಂ
ತರುಣ ಕೇಳೆಂದೊರೆವುತಿರ್ದಂ ಚಾರು ಸಿದ್ಧೇಶಂ || ೫೨ ||

ಪರವೆನಿಪ ಸಂಜ್ಞಂ ಯಕಾರಂ
ಸರಸ ವಾಕಾರಂ ಸುಗೂಢಂ
ವರ ಶರೀರಸ್ಥಂ ಶಿಕಾರಂ ಲಿಂಗ ಸುಕ್ಷೇತ್ರಂ ||
ಉರು ಮಕಾರವನಾದಿಯಂತಾ
ಸ್ಥಿರ ನಕಾರಾದಿಗಳಿವಂ ಸಲೆ
ಬೆರೆಸಿ ಭಕ್ತನ ಹೃದಯದೊಳ್ಬೆಳಗುವುದು ಸುಪ್ರಣವಂ || ೫೩ ||

ಶಕ್ತಿಯಿಂದೆ ಯಕಾರವಾ ಪರ
ಶಕ್ತಿ ವಾಕಾರಾದಿಯೆನಿಸುವ
ಶಕ್ತಿ ಮತ್ತೆ ಶಿಕಾರವಿಚ್ಛಾಶಕ್ತಿ ಸುಜ್ಞಾನ ||
ಶಕ್ತಿ ತಾನೆ ಮಕಾರವಾದುದು
ಮುಕ್ತನೇ ಕೇಳ್ಪೈ ಕ್ರಿಯಾಘನ
ಶಕ್ತಿ ಬಳಿಕ ನಕಾರವೇ ಚಿತ್ಕ್ರಿ[ಯೆಯದೋಂ]ಕಾರಂ || ೫೪ ||

ವರೆಯಕಾರಂ ಸಲೆ ಶಿವಂ ಬಂ
ಧುರದ ವಾಕಾರವೆಯಮೂರ್ತಂ
ಸ್ಥಿರ ಶಿಕಾರವೆ ಮೂರ್ತವಂತಾ ಕರ್ತೃವೆ ಮಕಾರಂ
ಉರು [ನ] ಕಾರಂ ಕರ್ಮವೈ ಕೇಳ
ರರೆಯೋಂಕಾರಂ ಮಹಾ ಸೌಂ
ದರದ ಘನ ಸಾದಾಖ್ಯವೆ [ನ್ನುತೆ] ಗುರು ನುಡಿವುತಿರ್ದಂ || ೫೫ ||

ಸುಲಭನೇ ಈಶಾನ್ಯವದನಂ
ಸಲೆಯಕಾರಂ ತತ್ಪುರುಷಮುಖ
ವಲಘುವಾಕಾರಂ ಶಿಕಾರನಘೋರಮುಖ ವಾಮಾ
ಚಲಿತ ದೇವ ಮುಖಂ ಮಕಾರಂ
ಲಲಿತ ಸದ್ಯೋಜಾತ ಲಪನಂ
ಬಲು ನಕಾರಂ ಗೊಪ್ಯತುಂಡಂ ಪ್ರಣವವೆಂದರಿಯ್ಯೈ || ೫೬ ||

ಜ್ಞಾನ [ಕಂ] ತಾ ಪ್ರಣವ ಬೀಜವು
ಜ್ಞಾನಕಾಚಾರ [ವೆನ] ಬೀಜಂ
ನೂನ ಗುರು ಬೀಜಂ ಮಕಾರಂ ವರ ವಿಕಾಸನದ
ಪೀನ ಶಿವಬೀಜಂ ಚರಂ ಸ
ಧ್ಯಾನಿಯೇ ವಾಕಾರ ಬೀಜಂ
ಸೂನುವೇ ಪ್ರಾಸಾದ ಬೀಜಂ ಘನ ಯಕಾರವಲಾ || ೫೭ ||

ವರ ಯಕಾರಂ ಶರಣನುರೆ ಬಂ
ಧುರದ ವಾಕಾರಂ ವಿಚಾರಿಸೆ
ಯರಿದೆನಿಪ್ಪಾ ಪ್ರಾಣಲಿಂಗಿ ಶಿಕಾರವೇ ವಿಮಲಾ
ಸುರುಚಿರ ಪ್ರಾಸಾದಿ ಕೇಳ್ಳೈ
ಯುರು ಮಕಾರಂ ನಿರುತ ಮಾಹೇ
ಶ್ವರ ನಕಾರಂ ಭಕ್ತನೈಕ್ಯಂ ಪ್ರಣವವೆಂದರಿಯ್ಯೈ || ೫೮ ||

ಹರುಷದಿಂ ಸುಜ್ಞಾನಹಸ್ತಂ
ವರಯಕಾರಂ ಸುಮನಹಸ್ತಂ
ಪರಮ ವಾಕಾರಂ ನಿರಾಹಂಕಾರ ನವಹಸ್ತಂ
ಉರು ಶಿಕಾರಂ ಸಲೆ ಸುಬುದ್ಧಿಯ
ಕರ ಮಕಾರಂ ತವೆ ಸುಚಿತ್ತದ
ಕರ ನಕಾರಂ ವಿಮಲ ಸದ್ಭಾವದ ಕರಂ ಪ್ರಣವಂ || ೫೯ ||

ಪರಶಿವನೆಯೋಂಕಾರವಂತಾ
ಯುರು ಸದಾಶಿವನೇ ಯಕಾರಂ
ಪರಿ[ಕಿ]ಸಲ್ವಾಕಾರವೀಶಂ ರುದ್ರನೆ ಶಿಕಾರಂ
ವರ ಮಕಾರಂ ಬಿಂದು ಬಳಿಕಂ
ತೆರಡಱಂ ಹರಿ ಸಲೆ ನಕಾರಂ
ಸರಸಿಜಾಸನನಿವನ ವಿನುತ ಸೃಷ್ಟಿಯೆ ವಿಲೋಮಂ ॥ ೬೦ ॥

ನಾರಿ ವರ್ಣವತೀತಮಪ್ಪುದ
ನಾರತಂ ಪ್ರಣವಂ ಯಕಾರಂ
ಗೌರಿ ಕೇಳಾ ಸ್ಫಟಿಕವರ್ಣಂ ಬಿಳಿದು ವಾಕಾರಂ
ಚಾರು ನೀಲಂ ವರ ಶಿಕಾರಂ
ಸಾರರತ್ನ ಸಮಂ ಮಕಾರವ
ಪಾರ ಪೀತ ನಕಾರನೋಂಕಾರಂ ಸಕಲ ಬೀಜಂ ॥ ೬೧ ॥

ವರ ಯಕಾರಂ ಗಗನ ಬೀಜಂ
ಮರುತ ಬೀಜಂ ವಾರ್ಣವನಲನ
ಸರಸ ಬೀಜಂ ನವ ಶಿಕಾರಂ ಬಳಿಕ ಜಲಬೀಜಂ
ಇರೆ ಮಕಾರಂ ಮಿಗೆ ನಕಾರಂ
ಸ್ಥಿರದ ಬೀಜಗಳಿಂತುವವರಿಂ
ಧರೆಯುದಯ ಸರ್ವಾತ್ಮಕಂ ಪರಶಿವನೆಯೋಂಕಾರಂ ॥ ೬೨ ॥

ಉರುಯಕಾರೇಶ್ವರ ಸುತತ್ವಂ
ಸರಸವಾಕಾರಂ ಮಾಹೇಶ್ವರ
ಪರಮ ತತ್ವಂ ನವಶಿಕಾರಂ ಚಾರು ಶಿವತತ್ವಂ
ಇರದೆ ಶಿವತತ್ವಂ ಮಕಾರಂ
ವರ ನಕಾರಮದಾತ್ಮ ತತ್ವಂ
ಧರೆಯೊಳೋಂಕಾರಂ ಸಕಲ ತತ್ವಾತ್ಮಕಂ ಬಳಿಕ ॥ ೬೩ ॥

ಕೇವಲ ಜ್ಞಾನಂ ಪ್ರಣವಮುರೆ
ಯೋವಿ ವೇದಸಹಸ್ರ ಯಾರ್ಣವೆ
ತೀವಿವಾಕಾರವೆ ಯಥರ್ವಣವಂತತಿ ಶಿಕಾರಂ ॥
ಭಾವಿಸಲ್ಕದು ಸಾಮವೇದಂ
ದೇವಿಕೇಳು ಯಜುರ್ಮಕಾರಂ
10 ಪಾವನದ ಋಗ್ವೇದವಂತು ನಕಾರವತಿಶಯದಿಂ ॥ ೬೪ ॥

ಹರುಷದಿಂ ದೇವಿಯರಿಗೀಶ್ವರ
ನೊರೆದ ತೆರದಿಂ ತೋಂಟದಾರ್ಯಂ
ಪರಮನಪ್ಪಾ ಚಂದ್ರಶೇಖರ ದೇವರಿಗೆ ಕೊರ್ತು ||
ನಿರುತದಿಂದಂ ಪೇಳಿದಂ ಬಂ
ಧುರದ ಷಡ್ವರ್ಣವನುಮಿಷಂ
ಸರಸದಿಂದಂ ಕೋಟಿವೇದಕೆ ತಂದೆಯಹುದೆಂದು || ೬೫ ||

ಹರುಷದಿಂದಂ ವೇದಂಗಳಂತಾ
ಸ್ವರ ನಿವಹ ಮಂತ್ರಂಗಳೆಲ್ಲಂ
ನಿರುತದಿಂದಂ ಹುಟ್ಟಿದವು ಸತ್ಪ್ರಣವದಲ್ಲಿ ಸದಾ ||
ಧರಣಿಯೊಳಗಂ ಪ್ರಣವವೇ ಸಲೆ
ಭರದೆ ಪರಮೇಶಂ ಪರಾತ್ಪರ
ವರರೆಯಾದೀ ಪ್ರಣವವಾಗಂ ಸಲೆ ಯಕಾರಾಂತಂ || ೬೬ ||

ಪರಮ ಮಂತ್ರವೆ ಕೀರ್ತಿವೆತ್ತಿಹು
ದರರೆ ಚಾರು ಷಡಕ್ಷರಂ ಶಿವ
ನುರುತರದ ಘನ ರೂಪದಾಗಿಯೆ ಸರ್ವಸಿದ್ಧಿಯನು ||
ಗಿರಿಜೆ ಕೊಡುವುದೆನುತ್ತೆ ಪಶುಪತಿ
ಯೊರೆದ ಛಂದದಿ ತೋಂಟದಾರ್ಯಂ
ಹರುಷದಿಂದಂ ಚಂದ್ರಶೇಖರಮೂರ್ತಿಗಿಂತೆಂದಂ || ೬೭ ||

ಪಂಚಭೂತಂ ಪಂಚಮಾತ್ರೆಯು
ಹಿಂಚದಾ ಪಂಚೇಂದ್ರಿಯಂ ಸಲೆ
ಪಂಚ ಕರ್ಮೇಂದ್ರಿಯ ಸಮೂಹಂ ಪಂಚಸದ್ಬ್ರಹ್ಮಂ ||
ಪಂಚ ಸತ್ಕೃತ್ಯಂಗಳಿವು ನಿ
ರ್ವಂಚನೆಯ ಸಹಿತಾರಿಗಳು ನೆರೆ
ಪಂಚವರ್ಣಂ ವಿವರಿಸಲ್ ಚೋದ್ಯಂಗಳೇಯ್ದೈದು || ೬೮ ||

ಈ ತೆರದೊಳೈದೈದುಮಾಗಿ ಪು
ನೀತಮಪ್ಪ ವಿಶೇಷದೊಳಗಾ
ಖ್ಯಾತಿವಡೆದ ಸಮಸ್ತ ವಸ್ತುಗಳಿರ್ಪವತಿಶಯದ ||
ಪೂತ ಪಂಚಾಕ್ಷರವೆನಿಪ್ಪಾ
ಜ್ಯೋತಿಯೊಳಗಿರ್ಪವು ಶಿವೇಶ್ವರ
ವಾ ತತುಕ್ಷಣದಲ್ಲಿ ಪರಮಾತ್ಮಾದಿ ನಾಮಗಳು || ೬೯ ||

ಇದುವಗೋಚರನಖಿಲ ಸುಜನರ
ಹೃದಯ ಸುಪ್ರೀತಂ ಬಳಿಕ್ಕಂ
ಸದಮಲದೆ ಸನ್ಮೋಕ್ಷವೀವುದು ಗೋಪ್ಯಮಂ ಮಾಡು ||
ಮುದದೊಳಿಂತು ಶಿವಾಗಮದೊಳಂ
ಪದುಳದಿಂ ವರ್ತಿಸಿದವರ್ಗಂ
ಸುದತಿ ಡಂಭಂಗಂ ವಿಷಯಪಾತಂಗೆ ಪೇಳದಿರು || ೭೦ ||

ಸಂಚಲಂಗೆ ಖಲಂಗೆ ಮತ್ತಂ
ವಂಚಕಂ[ಗತಿ]ದುಃಖಿಗಂ ಸಲೆ
ಪಂಚಮಹಪಾತಕಗೆಯಂಜದೆಯನ್ಯ ದೈವಕ್ಕೆ ||
ಮುಂಚಿಯೆರಗುವ ದುಷ್ಟತತಿಗಂ
ಹಿಂಚದನ್ಯಾಂಗನೆಯ ನೋಡುವ
ಸಂಚಿತಾದಿಯ ಪಾಪಿಗಳಿಗಿದನೊರೆಯದಿರು ದೇವಿ || ೭೧ ||

ಕೇಳುವೀ ತೆರದರ್ಗೆ ಮತ್ತಂ
ಪೇಳಿದೊಡೆ ಸಲೆ ಸಿದ್ಧಿ ಕೆಡುವುದು
ಪೇಳುವುದು ಘನಲಿಂಗನಿಷ್ಠರ್ಗಂ ಸದ್ವೈವರ್ಗಂ ||
ಪೇಳು ವೃಡ ಭಕ್ತರಿಗೆ ಸತತಂ
ಪೇಳು ಸತ್ಯಾತ್ಮರ್ಗಿದಂ ನೆರೆ
ಪೇಳೆ ಮುಕ್ತಿಯನೀವುದೆಂದಂ ದೇವಿಯೊಳಗೀಶಂ || ೭೨ ||

ಎಂದು ಸರ್ವೇಶ್ವರನುಮೆಯೊಳಂ
ಚಂದದಿಂದಂ ನುಡಿದ ತೆರದಿಂ
ದಿಂದುಶೇಖರಮೂರ್ತಿಗಂ ಸಿದ್ಧೇಶ್ವರಂ ಪೇಳ್ದಾ ||
ನಂದದಗ್ಗದ ಪಂಚವರ್ಣದ
ಕುಂದದತಿಶಯ ಮಹಿಮೆಯುಂ ನಲ
ವಿಂದ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವದು || ೭೩ ||

ವರದ ಪರಪುರುಷಾರ್ಥಫಲ ವಿ
ಸ್ತರದ [ಸಂವಿತ್ಸುಮನಮಾನಸ ?]
ನಿರುತ ಹಂಸ ನಿಯುಕ್ತಸಾರಸ ರಸಿಕ ಸುರಭೂಜ ||
ಚಿರವಸಂತಸಖಾಹಿತಾಮರ
ಭರಿತ ಪರಮಾನಂದ ನಂದನ
ನಿರುತ ತೋಂಟದ ಸಿದ್ಧಲಿಂಗ ಚಿದಂಗ ರಕ್ಷಿಪುದು || ೭೪ ||

ಇದು ವಿಮಲಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರ ||
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣಮ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವುದು || ೭೫ ||

ಅಂತು ಸಂಧಿ ೧೩ಕ್ಕಂ ಪದನು ೬೯೬ಕ್ಕಂ

ಮಂಗಳಂ

ಹದಿನಾಲ್ಕನೆಯ ಸಂಧಿ

ಹರುಷದಿಂ ಷಡ್ಬ್ರಹ್ಮದುನ್ನತ
ದಿರವನುಸುರ್ದಂ ಸಿದ್ಧಲಿಂಗಂ
ಪರಮ ದಿವ್ಯಜ್ಞಾನಿಗಳು ಮಿಗೆ ಮೆಚ್ಚುವಂದದಲಿ ||

ದೇವದೇವೇಶ್ವರ ಮಹೇಶ್ವರ
ಪಾವನಾತ್ಮನೆ ಪಾಪದೂರನೆ
ಜೀವಿತೇಶ್ವರ ಜೀವಮುಪರಾಜೀವ ಕುಂಜರನೆ ||
ಭೂವಿನುತ ಭವದೂರ ಭರ್ಗನೆ
ಭಾವಜಾಹಿತ ದಿವ್ಯಮೂರ್ತಿಯೆ
ಕಾವುದೆನ್ನುವನಮಿತ ತೋಂಟದ ಸಿದ್ಧದೇಶಿಕನೆ || ೧ ||

ಮುಂದೆಕೇಳ್ಳೈ ಸತ್ತು ಚಿತ್ತಾ
ನಂದ ಪರಿಪೂರ್ಣವೆ ಶರಣನ
ಸ್ಪಂದದಿಂದಂ ಭಕ್ತನುನ್ನತ ಹೃತ್ಕಮಲವನೀಶಂ ||
ಮಂದಿರಂ ಜಂಗಮಕೆಯಂತಾ
ಸೌಂದರದ ಜಂಗಮದ ಮಕುಟದೊ
ಳಿಂದುಶೇಖರ ಶೂನ್ಯಲಿಂಗಂ ಜನಿಸಿತೊಲವಿಂದ || ೨ ||

ಆ ರಮಾಕರ ಶೂನ್ಯಲಿಂಗದೊ
ಳಾರಯಲು ತಾನಾದುದತಿಶಯ
ಚಾರುತರದ ಚಿದಂಬರಂ ಕೇಳಾ ಚಿದಂಬರದಿಂ ||
ಸಾರ ಶಿವಶಕ್ತಿಗಳೊಗೆದವಂ
ತಾ ರುಚಿರ ಶಿವಶಕ್ತಿಯಿಂದಂ
ಧಾರುಣಿಗಳಿಪ್ಪಖಿಳ ಘನ ಭೇದಂಗಳಂ ಪೇಳ್ವೆಂ || ೩ ||

ವರ ಶಿವಾಗಮದಲ್ಲಿ ಗಿರಿಜೆಗೆ
ಹರನೊರೆದನಿದು ಗೋಪ್ಯವೆಂದೆ
ಯರರೆ ಲೋಕಂಗಳೊಳು ದುರ್ಲಭವಾಗಿ ರಂಜಿಪುದು ||
ಹರುಷದಿಂ ಬ್ರಹ್ಮಾಂಗದುದಯದ
ಸರಸ ಭೇದವದೆಂತೆನಲ್ಸಲೆ
ಪರಶಿವಂ ತಾಂ ಬ್ರಹ್ಮವೆಂದೇ ಪೇಳುವುದು ಬಳಿಕಾ || ೪ ||

ಸುರುಚಿರದ ಘನಶಕ್ತಿಯೆಂಗಂ
ಭರದೊಳಾ ಶಿವಶಕ್ತಿಯೋಗಂ
ನಿರುತದಿಂದೀ ಧರೆಯ ಸೃಷ್ಟಿಗೆ ಕಾರಣಂ ಕೇಳು ||
ಹರುಷದಿಂ ನೀನೆಂದು ತೋಂಟದ
ಗುರುವರಂ ಕೈಮುಗಿದು ಕೇಳುವ
ಕರುಣನಿಧಿ ವರಚಂದ್ರಶೇಖರ ದೇವರಿಗೆ ಪೇಳ್ದಂ || ೫ ||

ಮೋದದಿಂ ಹಿರಿದಿಂಗೆಯದು ಹಿರಿ
ದಾದ ಕತದಿಂ ಬ್ರಹ್ಮವೆಂದಾ
ಹ್ಲಾದದಿಂದಂ ಬಳಿಕ ಪೇಳಿಸಿಕೊಂಬುದದರಿಂದ ||
ಸಾದರದೊಳಾ ಬ್ರಹ್ಮದಿರವಂ
ಮೇದಿನಿಯೊಳುಸುರುವೆನದೆಂತೆನೆ
ವೇದಮಾರ್ಗಂ ತಪ್ಪದಂತಾ ಬ್ರಹ್ಮವೇ ಮತ್ತೆ || ೬ ||

ಧರೆಯೊಳಾರು ವಿಧಂಗಳಾದವು
ಇರದೆ ಉದ್ಧರಿಸುತ್ತಮಿರ್ಪಾ
ಪರಿಯನಿಂ ಕೇಳೇಳು ರೇಖೆಯ ಮೇಗಣಿಂ ಕೆಳಗು ||
ವರೆ ತೆಗೆಯಲೌ ನೀಳವಾದವು
ಮರಳಿ ರೇಖೆಗಳೇಳನಡ್ಡಂ
ತರುಣಿ ತೆಗೆದೊಡೆ ರೇಖೆಗಳು ಹದಿನಾಲ್ಕವಾದವಲಾ || ೭ ||

ಆಗ ಸಾಲೊಂದಕ್ಕೆ ಮನೆಯಾ
ರಾಗೆ ಸಾಲಾರಕ್ಕೆಯಾದವು
ರಾಗದಿಂ ಕೂಡಿದೊಡೆ ಮೂವತ್ತಾಱು ಮನೆ ಬಳಿಕಾ ||
ಆಗ ನೀಳದ ರೇಖೆಗಳನನು
ವಾಗಿಯುದ್ದವನಿರದೆ ಮಾಡ
ಲ್ಬೇಗದಿಂದಾರು ಮನೆಗಳ ಪಜ್ತಿಗಳ ಮೇಲೆ || ೮ ||

ನಿಳಯಮಪ್ಪಾ ಬ್ರಹ್ಮವಾರ
ಕ್ಕೆಳಸಿ ಮತ್ತಾಯಡ್ಡ ರೇಖೆ
ಗಳಿಳೆಯೊಳಂ ಜನರರಿವ ತೆರದಿಂದುನ್ನತಮನೆಸಗಿ ||
ವಿಳಸದಿಂದಂ ಬಲದ ಭಾಗ
ದೊಳಳವಿಯಿಂ ಮತ್ತೊಂದು ರೇಖೆಯ
ತಿಳಿದು ನೀಳಕೆ ತೆಗೆಯೆ ಮನೆ ಪನ್ನೆರಡು ಕಡೆಯಲ್ಲಿ || ೯ ||

ಆರು ಶಕ್ತಿಗಳಿಚ್ಛೆಯವರವ
ರಾರರಂಗವ ಒರೆವುದೆಂದಾ
ಮೂರು ಲೋಚನದೀಶನಗಜೆಗೆ ಪೇಳಿದಂತೊಂದು ||
ಮೂರುವಾ ಮೂರಾರು ಮೂವ
ತ್ತಾರು ಸಲೆಯಿನ್ನೂರ ತವೆ ಪದಿ
ನಾರು ಲಿಂಗಾಂಗದ ವಿಮಲ ಸಿದ್ಧೇಶನುರೆ ಪೇಳ್ದಂ || ೧೦ ||

ಲೀಲೆಯಿಂದಾರಾರ ಮನೆಗಳ
ಮೇಲಿರುವ ಷಡ್ಬ್ರಹ್ಮಮಂ ಕೇ
ಳಾ ಲಲಿತಪರಮಮಲ ವಿಜ್ಞಾನಂ ಘನಾನಂದಂ ||
ಹೋಲಿಸಲ್ಕೆ ಕಲಾ ಸುಪಿಂಡಂ
ಲೋಲನೇ ವರ ಮೂರ್ತಿಯೆಂಬ ವಿ
ಶಾಲ ನುತ ಷಡ್ಬ್ರಹ್ಮವಂತಾ ಬ್ರಹ್ಮವಾರಕ್ಕೆ || ೧೧ ||

ತೋರಿದವು ತತ್ವಗಳು ಮೂವ
ತ್ತಾರು ಮೇಲಿಪ್ಪಡ್ಡಸಾಲೊಳು
ನೀರನೇ ಮೊದಲಾ ಪರಬ್ರಹ್ಮದ ಮನೆಯ ಕೆಳಗೆ ||
ಮೀರದೇ ಪಂಙ್ತಿಯೊಳು ಬರೆವುದ
ವಾರು ಘನ ತತ್ವಂಗಳಂ ನಲ
ವೇರಿಯೊಂದೊಂದಕ್ಕೆಯಾದವವಾರು ತತ್ವಗಳು || ೧೨ ||

ಅವರ ಪೆಸರೆಂತೆಂದೊಡಾಲಿಸು
ಶಿವನುಮಾ ಕ್ಷೇತ್ರಜ್ಞನಂತಾ
ವಿವಿಧ ಕರ್ತಾರಂ ಬಳಿಕ್ಕಂ ಭಾ[ಕ]ತಿಶಯದ ||
ಭುವನದೊಳ್ಚೈತನ್ಯಮಂ ಕರ
ಮವನಿಯೊಳಗೀಯಾರು ತತ್ವಂ
ತವಕದಿಂದಂ ವರ ಪರಬ್ರಹ್ಮದೊಳು ಪುಟ್ಟಿದವು || ೧೩ ||

ವರ ಸದಾಶಿವನಾಗಸಧ್ವನಿ
ಯುರುತರ ಜ್ಞಾನ ಶ್ರವಣ ಬಂ
ಧುರದ ವಚನಾದಿಗಳಿವಾರಾದವು ವಿಶೇಷದೊಳು ||
ಹರುಷದಿಂ ವಿಜ್ಞಾನವೆನಿಸಿ
ರ್ಪೆರಡುವನೆಯಾ ಬ್ರಹ್ಮದಿಂದಂ
ಧರೆಯೊಳಾದವು ಮುಂದೆ ಕೇಳೆಂದೊರೆದನಾಚಾರ್ಯಂ || ೧೪ ||

ಚಂದದಿಂ ಮತ್ತೀಶ್ವರಂ ಮುದ
ದಿಂದೆ ವಾಯು ಸ್ಪರ್ಶನಂ ಮನ
ಪಂದು ಕೇಳ್ವ ತ್ವಕ್ಕು ಕರವೇದೆಂಬ ತತ್ವಗಳು ||
ಕುಂದದಂತೀಯಾರು ಮಿಗೆಯಾ
ನಂದಘನ ಸದ್ಬ್ರಹ್ಮದಿಂದಂ
ಹೆಂದದೊಗೆದವು ಮನೆ[ಗಳಾರ]ವು[ಚಂದದಿಂ]ಬಳಿಕಾ || ೧೫ ||

ರುದ್ರನನಲಂ ರೂಪಹಂಕೃತಿ
ಭದ್ರದಿಂ ಲೋಚನಪದಂಗಳು
ಪದ್ರವಿಲ್ಲದೆ ಸತ್ಕಲಾಬ್ರಹ್ಮದೊಳು ಜನಿಸಿದವು ||
ಮುದ್ರಿಸಿದ ಮನೆ ನಾಲ್ಕವಿಲ್ಲಿಗೆ
ಚಿದ್ರಮಣ ಕೇಳೆಂದು ಶಿಷ್ಯಂ
ಗದ್ರಿಜೆಗೆ ಶಿವನೊರೆದ ತೆರದಿಂ ಪೇಳ್ದನಾಚಾರ್ಯಂ || ೧೬ ||

ಹರಿಯುದಕ ರಸಬುದ್ಧಿ ಮತ್ತಂ
ವರ ರಸನೆ ಗುಹ್ಯಂಗಳೆಂಬೀ
ಯುರುತರದ ತತ್ವಂಗಳಾರಾದವು ಮಹಾಪಿಂಡಂ ||
ಪರಮ ಘನ ಸದ್ಬ್ರಹ್ಮದಿಂದಂ
ತರುಣನೇ ಮನೆಯೈದವಿಲ್ಲಿಗೆ
ನಿರುತದಿಂದಂ ಮುಂದೊರೆವೆಂದಂ ಚಾರು ಸಿದ್ಧೇಶಂ || ೧೭ ||

ಸರಸಿಜಾಸನ ಧರಣಿಗಂದಂ
ನಿರುತ ಚಿತ್ತಂ ಘ್ರಾಣ ಗುದ ಬಂ
ಧುರದ ಘನ ತತ್ವಂಗಳಾರಿವು ಮೂರ್ತಿಯೆಂದೆಂಬ ||
ಸರಸ ನುತ ಸದ್ಬ್ರಹ್ಮದಿಂದಂ
ಧರೆಯೊಳೊಗೆದವೆನುತ್ತ ನುಡಿದಂ
ಹರುಷದಿಂದಂ ತೋಂಟದಾರ್ಯಂ ತನ್ನ ಕುವರಂಗೆ || ೧೮ ||

ಇನ್ನು ಕೇಳ್ವೈ ಬ್ರಹ್ಮವಾರಕೆ
ಯುನ್ನತದ ಶಕ್ತಿಗಳ ಬಗೆಯುಂ
ಮುನ್ನ ಬಲದೊಳ್ಮಾಡಿದಂತ್ಯದ ಪಂಙ್ತಿಯಿಂ ಕೆಳಗೆ ||
ನನ್ನಿಯಿಂ ಮನೆಯಾರರೊಳು ಸಂ
ಪನ್ನ ಶಕ್ತಿಗಳಾರ ಬರೆ ಚಿ
ತ್ರಂ ನಲಿದುವದ[ರೊಳಗೆಯಾರಕ್ಷರ ?]ಗಳಂ ಲಿಖಿಸು || ೧೯ ||

ವಿಮಲ ಚಿತ್ಪರೆಯೊದಿಯಿಚ್ಛಾ
ಕ್ರಮುಗಳಿಂ ಜ್ಞಾನಕ್ರಿಯೆಗಳಿವು
ಸುಮನ ಶಕ್ತಿಗಳುಂ ಶಿವಾಂಗಂ ಮತ್ತೆ ಭೂತಾಂಗಂ ||
ಅಮಮ ಯೋಗಾಂಗಂ ಬಳಿಕ್ಕಂ
ತಮರ್ದ ಕಾಮಾಂಗಂ ವಿಶೇಷದೊ
ಳಮಿತ ವಿದ್ಯಾಂಗಂ ಸುಕರ್ಮಾಂಗಂ ವಿಚಾರಿಸಲು || ೨೦ ||

ಮುಂತೆ ಶಕ್ತ್ಯಂಗಂಗಳಾರೋ
ರಂತೆ ತೋರುವ[ವ]ವನೆ ನೀ [ನಿ]
ಶ್ಚಿಂತದಿಂ ಬರೆಯಡ್ಡ ಸಾಲ್ಮನೆಯಾರರೊಳ್ಪಳಿಕಾ ||
ಎಂತೆನಲ್ವಿಧಿ ವಿಷ್ಣು ರುದ್ರನ
ನಂತದಿಂದೀಶ್ವರ (?) ಸದಾಶಿವ
ರಿಂತಿವರುವಾರಾ ಶಿವಾಂಗವದಾದಿ ಚಿಚ್ಛಕ್ತಿ || ೨೧ ||

ಧರೆ ಜಲಾನಲವನಿಲ ಗಗನಂ
ಹರುಷದಿಂ ಕ್ಷೇತ್ರಜ್ಞರಾರುಂ
ನಿರುತ ಭೂತ ಶರೀರವಾರಕೆ ಬೀಜ ಪರಶಕ್ತಿ ||
ಪರಿಮಳಂ ರಸರೂಪು ಮತ್ತಂ
ಸ್ಪರುಶನಂ ರವವಿರದೆ ಕರ್ತಾ
ರರುಗಳಾರುಂ ಯೋಗವಪು(?)ಹೇತ್ವಾದಿ ಶಕ್ತಿಯಲಾ || ೨೨ ||

ಚಿತ್ತಮತಿಯಭಿಮಾನಮನಸಾ
ಯತ್ತರಿವು ಭಾವಂಗಳಾರ
ತ್ಯುತ್ತಮದ ಕಾಮಾಂಗವಿಚ್ಛಾಶಕ್ತಿಯಿದಕಾದಿ ||
ಮತ್ತೆ ನಾಸಿಕ ರಸನೆ ಲೋಚನ
ಮುತ್ತರದ ತನು ಕರ್ಣ ಹೃದಯಮು
ದಾತ್ತ ವಿದ್ಯಾಗಾತ್ರ ಬೀಜ ಜ್ಞಾನಶಕ್ತಿ ಸದಾ || ೨೩ ||

ಪಾಯು ಗುಹ್ಯಂ ಪಾದಹಸ್ತಂ
ಧೀಯುತನೆ ವಾಗಂತರಂ ಸಲೆ
ಯಾಯತದೊಳೀಯಾರು ಕರ್ಮಾಂಗಂ ಕ್ರಿಯಾಶಕ್ತಿ ||
ವೋಯರದೊಳಿಂತಿದಕೆ ಬೀಜಂ
ನ್ಯಾಯದಿಂದಂ ಮುಗಿದವಿಲ್ಲಿಗು
ಪಾಯದಿಂದಾರಾರು ಮನೆಗಳ ವಿವರವೆಂತೆನಲು || ೨೪ ||

ನಿರುತದಿಂದಂ ಚಿತ್ತು ತೊಡಗೀ
ಪರಿಯೊಳಂ ಕೇಳ್ಸತ್ಕ್ರಿಯಾ ಬಂ
ಧುರದೊಳಂತಾ ಶಕ್ತಿಯಾರೀ ಸೃಷ್ಟಿಯಂ ಬಳಿಕಾ ||
ಹರಷದಿಂ ಬೆಸಸುಪುವು ಮತ್ತಾ
ಪರವೆ ಮೊದಲಹ ಮೂರ್ತಿಕಡೆಯಾ
ದುರುತರ ಬ್ರಹ್ಮಂಗಳೆ ಸಂಹರಿಸುವುವು ಕೇಳು || ೨೫ ||

ಅದು ನಿಮಿತ್ತ ಬ್ರಹ್ಮವೇ ತವೆ
ವಿದಿತ ಶಕ್ತಿಮಯಂ ಬಳಿಕ್ಕಂ
ಸುದತಿ ಶಕ್ತಿಯು ನೋಡೆ ಮತ್ತಂ ಬ್ರಹ್ಮಮಯ ಶಿವನು ||
ಸದಮಲದ ಸದ್ಬ್ರಹ್ಮಶಕ್ತಿಯೆ
ಮುದದೆಯಂಗಂ ಕೂಡೆಯಾಗಂ
ಪದುಳದಿಂ ಬ್ರಹ್ಮಾಂಗಮೆನಿಪುದು ದೇವಿ ಕೇಳ್ಮಂದೆ || ೨೬ ||

ಶಕ್ತಿವರ್ಗಮನಲ್ಲಿ ಮತ್ತಂ
ರಕ್ತಿಯಿಂದಂ ಬ್ರಹ್ಮವರ್ಗವ
ನುಕ್ತಿಸಲ್ಪವಣಲ್ಲದಿರ್ಪವನೊರೆದೆವೌ ದೇವೀ ||
ವ್ಯಕ್ತದಿಂ ಸಾರಕ್ಕೆ ಸಾರಂ
ಮುಕ್ತಿಗಿದು ಪಥನೆಂದು ಶರ್ವಂ
ಭಕ್ತಿಯಿಂ ಬೆಸಗೊಂಬ ಗಿರಿಜೆಗೆ ಪೇಳ್ದನಂದಿರದೆ || ೨೭ ||

ಹರುಷದಿಂದೆ ಶಿವಾಂಗವಾದಿಯು
[ದ]ರರೆ ಮಹಪಾಯ್ವಂಗವಾದಿಂ
ತಿರದೆ ಮೂವತ್ತಾರು ಘನತರಶಕ್ತಿ ತತ್ವಗಳು ||
ಧರೆಯೊಳಿಂತಿವು ಸೃಷ್ಟಿಮಾರ್ಗಂ
ಪರಿಕಿಸಲ್ಪಾಯ್ವಂಗವಾದಿಯ
ವರ ಶಿವಾಂಗಂ ತವೆ ಬಳಿಕ್ಕಂ ಕೇಳು ವರ ತನುಜಾ || ೨೮ ||

ಆಗಲಾ ಬ್ರಹ್ಮಾಂಗ ತಾವನು
ವಾಗಿ ಮೂವತ್ತಾರು ಲಯ ಪದ
ವಾಗಿ ವರ್ತಿಪವೆಂದು ಗೌರಿಗೆ ಶಿವನೊರೆದ ತೆರದಿಂ ||
ರಾಗದಿಂದಂ ತೋಂಟದುರು ಶಿವ
ಯೋಗಿ ಪೇಳ್ದಂ ಚಂದ್ರಶೇಖರ
ಗಾಗಮಾರ್ಥಂ ತಪ್ಪದಂದದೆ ಯಂತ್ರಮಂ ಬರೆದು || ೨೯ ||

ಶಿವ ಸದಾಶಿವನೀಶ ರುದ್ರಂ
ತವೆ ಹರಿ[ಯು ಮೇಣ್] ಬ್ರಹ್ಮ ಗಗನಂ
ಪವನ ಶಿಖಿ ಜಲವವನಿಕರ್ತಾರಂ ಧ್ವನಿ ಸ್ಪರ್ಶಂ ॥
ಅವರ ರೂಪು ರಸಂ ಸುಗಂಧಂ
ವಿವಿಧ ಭಾವ ಜ್ಞಾನ ಮನ ಪೀ
ಠ ವಿರತಾಹಂಕಾರ ಮತಿ ಚಿತ್ತಂ [ಸು] ಚೇತನವು ॥ ೩೦ ॥

ಶ್ರವಣವಂತಾ ತ್ವಕ್ಕು ನೇತ್ರಂ
ತವೆ ರಸನೆ ಘೋಣಂ ಬಳಿಕ್ಕಂ
ಕುವರ ವಿದ್ಯಾಂಗಾಂತರಂ ವಾಕ್ಕರ ಪದಂ ಗುಹ್ಯಂ ॥
ನವಗುದಂ ಘನಪಾಯು ನಾಸಿಕ
ವವಿರತಂ ಮಿಗೆ ಚಿತ್ತ ಗಂಧಂ
ಭುವನ ವಿಧಿ ಗುಹ್ಯಂ ರಸಜ್ಞೆಯು ಬುದ್ಧಿರಸ ಜಲವು ॥ ೩೧ ॥

ಹರಿಪದಂ ನಯನಾಭಿನೂನಂ
ತರುಣನೇ ರೂಪಾಗ್ನಿ ರುದ್ರಂ
ಕರ ಮಹಾ ತ್ವ[ಕ್ಕಂ]ಬಳಿಕ್ಕಂ ಸ್ಪರ್ಶದಾನಿಲನು (?) ॥
ಸರಸದೀಶಂ ವಾಕು ಶ್ರುತಿ ಬಂ
ಧುರದೊಳಂತಾ ಜ್ಞಾನ ಶಬ್ದಂ
ವರ ಗಗನವಾದಂತರಂ ಚೇತನ ಸದಾ ಭಾವಂ ॥ ೩೨ ॥

ಪ್ರಜ್ಞನೇ ಕರ್ತಾರ ಸುಕ್ಷೇ
ತ್ರಜ್ಞ ಶಿವಶಿವ ಮುಖ್ಯರಂತುರೆ
ತಜ್ಞನೇಯಧಿದೇವತೆಗಳಿಂತಾರು ತತ್ವಗಳು ॥
ಅಜ್ಞ (?) ವಿಲ್ಲದೆಯೆನಿಸುವುವು ಕ್ಷೇ
ತ್ರಜ್ಞಗಾದಿಯವಾರು ಕೇಳು ವಿ
ಧಿಜ್ಞ ಕರ್ತಾರಾದಿ ವಿಷಯಂಗಳುವಿರದೆಯೊರು ॥ ೩೩ ॥

ತರುಣನೇ ಭಾವಾದಿ ಕರಣಗ
ಳಿರದೆ ಷಷ್ಠಂ ಚೇತನಾದೀ
ಪರಿಯೊಳಂ ಕೇಳಿಂದ್ರಿಯಂಗಳವಾರು ಮುಂದಿನ್ನೂ ॥
ಧರೆಯೊಳಂತರವಾದಿಯಾದಾ
ತುರದ ಕರ್ಮೇಂದ್ರಿಯಗಳಾರಾ
[ರ್ತರ] ತರದೊಳಿವನೊಂದುಗೂಡಿದ ತತ್ವವೆಷ್ಟೆನಲು ॥ ೩೪ ॥

ನಾಡೆ ಮೂವತ್ತಾರು ತತ್ವಂ
ಗಾಡಿಯಿಂ ಶಕ್ತ್ಯಂಗವಣುಗ [ನೆ]
ನೋಡಲಿಂತಿವು ಸೃಷ್ಟಿಮಾರ್ಗಂ ಪಾಯವಾದಿಯಹ ||
ರೂಢಿಯೊಳ್ಬ್ರಹ್ಮಾಂತ್ಯವಾರಿವು
ಕೂಡೆ ಗುಹ್ಯಾಚ್ಯುತಗಳಾರಿವು
ಆಡಲೇಂ ಪಾದಾದಿ ರುದ್ರಾಂತಂಗಳಾರುವಿವು || ೩೫ ||

ಪಾಣಿಯಾದೀಶಾಂತವಾರು ಧು
ರೀಣ ವಾಗಾದಿಯು ಶಿವಾಂತಂ
ಕೇಣವಿಲ್ಲದೆ ಯಾರುವಂತರವಾಯು ಜೀವಾಂತಂ ||
ಮಾಣದಿಂತಾಱೂರು ಸಲೆಯು
ಕ್ಷೀಣ ಮೂವತ್ತಾರು ತತ್ವಂ
ಕ್ಷೋಣಿಯಲ್ಲಿವು ನಿಯತಿಯಾ ಬ್ರಹ್ಮಾಂಗವ್ಯೆ ತನುಜಾ || ೩೬ ||

ಸತ್ತು ಚಿತ್ತಾನಂದ ನಿತ್ಯವ
ದುತ್ತಮದ ಪರಿಪೂರ್ಣವೇ ಸಲೆ
ಮತ್ತೆ ಭಕ್ತಂ ಬಳಿಕವಂತಾ ಭಕ್ತನತಿಶಯದಾ ||
ಯತ್ತ ಮಾನಸವಾರಿಜದೊಳ
ಜ್ಯೋತ್ತಿದಂದದೆ [ಮಂಡಿಸಿಹ ಚರ ?]
ದುತ್ತಮಾಂಗದೊಳೆಸೆವುದಾಗಂ ಶೂನ್ಯ ಘನಲಿಂಗಂ || ೩೭ ||

ಬಳಿಕ ಕೇಳಾ ಶೂನ್ಯ ಲಿಂಗದೊ
ಳೆಳಿಯನೇಯಾದುದು ಚಿದಂಬರ
ವಿಳೆಯೊಳಂತಾ ವರ ಚಿದಂಬರದಿಂದ ಶಿವಶಕ್ತಿ ||
ತಿಳಿಯೆ ಪುಟ್ಟಿದವಾ ವಿಮಲ ಮಂ
ಗಳ ಮಹಾ ಶಿವಶಕ್ತಿ[ಗಳಿನ]
ಗ್ಗಳದೆ ಮತ್ತಂ ಸೃಷ್ಟಿಯಾಯಿತು ಮುಂದದೆಂತೆನಲು || ೩೮ ||

ಆ ಪರಾಪರ ಶಕ್ತಿಯದರಿಂ
ದೋಪನೇ ಸಲೆಯಾದಿಶಕ್ತಿ ವಿ
ಲೇಪ ಕೇಳಂತಾದಿಶಕ್ತಿಯಿನಾಯ್ತು ತವೆ ಇಚ್ಛಾ ||
ಲೋಪವಿಲ್ಲದೆ ಶಕ್ತಿಯದರಿಂ
ತಾಪದೂರನೆ ಸತ್ಕ್ರಿಯಾ ಸ
ಲ್ಲಾಪಮುಪ್ಪಾ ಸೃಷ್ಟಿಯೊಗೆದುದುವದರ ಸಾಹಸ್ರ || ೩೯ ||

ಭಾಗದಿಂದಂ ಜ್ಞಾನಶಕ್ತಿಯ
ದಾಗವೈಕ್ರಮದಿಂದ ಶಕ್ತಿಗ
ಳಾ ಗಿರೀಶನನುಜ್ಞೆಯಿಂದಂ ಬಳಿಕ ತಮತಮಗೆ ||
ಬೇಗದಿಂದಂ ಸೃಷ್ಟಿಸುತ್ತಿಹ
ವಾಗ ಬಗೆಯಂ ಕೇಳೆನುತ್ತಂ
ರಾಗದಿಂದಂ ನುಡಿಯತೊಡಗಿದನಂದು ಗುರುಮೂರ್ತಿ || ೪೦ ||

ಮಕುಟದಲ್ಲಿಯ ಸೃಷ್ಟಿಮೊದಲೊ
ಳ್ಪ್ರಕಟದಿಂದಂ ಶೂನ್ಯದಲ್ಲಿಯ
ಸುಕರ ಕೇಳ್ಳೈ ಎರಡನೆಯದೆನಿಸುತ್ತಮಿಹ ಸೃಷ್ಟಿ ||
ಅಕಟ ಮೂರರೊಳಾ ಚಿದಂಬರ
ದಕಲವೆಂಬಾ ಸೃಷ್ಟಿ ನಾಲ್ಕರೊ
ಳಕುಟಿಲತ್ವದ ಸೃಷ್ಟಿ ಶಿವತತ್ವದೊಳು ಮುಂದಿನ್ನು || ೪೧ ||

ವರ ಪರೇಚ್ಛಾ ಜ್ಞಾನ ಸತ್ಕ್ರಿಯೆ
ಯರರೆ ಮಾಳ್ಪಾ ಸೃಷ್ಟಿಯದರಾ
ಪರಿಯ ಕೇಳ್ಳೈ ಮೊದಲ ಪರಶಕ್ತಿಯ ದಶಾಂಶದೊಳು ||
ಸರಸದೀಶ್ವರ ಸಂಭವಿಸಿದಂ
ತರುಣನೇ ಮತ್ತೀಶನಿಂದಂ
ಪರ ಸದಾಶಿವನಾ ಸದಾಶಿವನಿಂ ಮಹೇಶ್ವರನು || ೪೨ ||

ಆ ಮಹೇಶ್ವರನಿಂ ತ್ರಿಗುಣದೊಳ
ಗೀ ಮಹಿಯೊಳೊಂದಿರ್ದ ರುದ್ರಂ
ಪ್ರೇಮದಿಂದುದಯಿಸಿದನಂತಾ ರುದ್ರನಿಂ ದ್ವಿಗುಣಾ ||
ಭೂಮಿಯೊಳು ರಾಜಿಸುವ ವಿಷ್ಣು
ಪ್ರೇಮದಿಂ ಸಂಭವಿಸಿದಂ ನಿ
ಸ್ಸೀಮನೇಯವನಿಂ ರಜೋಗುಣಯುತದಜನ ಜನನಂ || ೪೩ ||

ಆ ಕಮಲಸುತನಿಂದೆ ಕೇಳ್ಳೈ
ಪ್ರಾಕಟದ ಸಚರಾಚರಂಗಳ
ನೀಕವಾಯಿತ್ತೆಂದು ತೋಂಟದ ಸಿದ್ಧದೇಶಿಕನು ||
ಲೋಕದೊಳು ಸರಿಯಿಲ್ಲದೆನಿಪಾ
ಸ್ವಾಕ ಷಟ್‌ಸ್ಥಲ ಮಾರ್ಗದತಿಶಯ
ದಾ ಕರುಣೆಯಹ ಚಂದ್ರಶೇಖರ ದೇವರಿಗೆ ಪೇಳ್ದಂ || ೪೪ ||

ಮತ್ತೆ ಕೇಳಿಂತಾದಿಶಕ್ತಿಯ
ಹತ್ತರಂಶದೊಳುಂ ಸದಾಶಿವ
ನಿತ್ತಲಾದಂ ಬಳಿಕಮವನಿಂ ರುದ್ರಕೋಟಿಗಳು ||
ಇತ್ತಲಾದರು ವಿಷ್ಣುಕೋಟಿಗ
ಳತ್ತಲವನಿಂ ಬ್ರಹ್ಮಕೋಟಿಗ
ಳಿತ್ತಲಾದರು ಸಕಲಜೀವರು ಬೇರೆ ಬೇರಾಗಂ || ೪೫ ||

ಮೇಗೆ ಯಿಚ್ಛಾಶಕ್ತಿಯುರು ದಶ
ಭಾಗೆಯೊಳು ಮಾಹೇಶನುದಯವ
ದಾಗೆಯವನಿಗೆ ದಶಭುಜಂ ಮೊಗವೈದು ಲೋಚನವು ॥
ಆಗೆ ಪದಿನೈದಂಘ್ರಿಯುಗಮು
ತ್ತಾಗೆ ಶುದ್ಧಸ್ಫಟಿಕದಂಗ[ದ]
ರಾಗದಿಂ ರಾಜಿಸಲು ಸರ್ವ ಸುಲಕ್ಷಣದೊಳೆಸೆವಂ || ೪೬ ||

ಅವನ ವದನದೊಳಾದವಾಗಂ
ಸವಿನಯದೊಳಾ ಪಂಚಭೂತಗ
ಳವನ ಚಾರು ದಶಾಂಶದಿಂದಂ ರುದ್ರನೊಗೆದನಲಾ ||
ಅವನೊಳಚ್ಯುತನುದಿಸಿದಂ ಸಲೆ
ಯವನೊಳಂ ವಿಧಿ ಜನಿಸಿದಂ ಮಿಗೆ
ಯವನೊಳಂ ತವೆ ಪುಟ್ಟಿದವು ಸಚರಾಚರಂಗಳಿಂತು || ೪೭ ||

ಆ ಕ್ರಿಯಾಶಕ್ತಿಯ ದಶಾಂಶದೊ
ಳೀ ಕ್ರಮದೊಳುದ್ಭವಿಸಿದಂ ಭೂ
ಚಕ್ರದೊಳ್ಸಯಮುಪ್ಪರುದ್ರಂ ಬಳಿಕವವನಿಂ ತ್ರಿ ||
ವಿಕ್ರಮಂ ಸಲೆಯೊಗೆದನವನಿಂ
ವಕ್ರವಿಲ್ಲದೆಯಜ ಜನಿಸಿದನ್
ವಿಕ್ರಮದೊಳವನಿಂ ಚರಾಚರರಾದರ್ವೈ ಕೇಳು || ೪೮ ||

ಜ್ಞಾನಶಕ್ತಿಯ ವರದಶಾಂಶದೊ
ಳಾ ನವೀನದ ರುದ್ರ ಜನನಂ
ಸೂನುವೆಯಾತಂಗೆ ಮೊಗವೈದಿಂತು ದಶಹಸ್ತಂ ||
ನೂನ ಶುದ್ಧ ಸ್ಫಟಿಕ ಗಾತ್ರಂ
ತಾನೆಸೆಯೆಯವನಿಂದ ಪುಟ್ಟಿದ
ವಾ ನಿಖಿಲ ಘನ ಪಂಚಭೂತಾದಿಗಳವನ ಮುಖದಿಂ || ೪೯ ||

ಹರಿಯೊಗೆದನಾ ರುದ್ರನಿಂದಂ
ಹರಿಯೊಳುದಿಸಿದನಜನ[ವ]ನೊಳಂ
ಧರೆಯ ಸಚರಾಚರ[ದ]ಜೀವಿಗಳುದ್ಭವಿಸಿದರಲಾ ॥
ಇರವಿದೆಲ್ಲಂ ಜಂಗಮಾಂಗದ
ಸರಸವೆನಿಪಾ ಸೃಷ್ಟಿಯೆಂದೇ
ಯುರುತರದ ಸಿದ್ಧೇಶನೆಂದಂ ತನ್ನ ಕುವರಂಗೆ ॥ ೫೦ ॥

ಭಕ್ತನೇ ಜಂಗಮುವವನ ಸ
ನ್ಮುಕ್ತ ಮುಕುಟದೀಶಾನ್ಯವದರಿಂ
ಶಕ್ತಮಪ್ಪ ಚಿದಂಬರಂ ತಾನದರ ಶಿವಭಕ್ತಿ ॥
ರಕ್ತಿಯಿಂ ಪರೆಯಾದಿ ಇಚ್ಛಾ
ಶಕ್ತಿಯದರಿಂ ಕ್ರಿಯೆಯದರೊಳಂ
ವ್ಯಕ್ತ ಸುಜ್ಞಾನಾಂತ ಶಕ್ತಿಗಳುಂ ವಿರಾಜಿಸುವ ॥ ೫೧ ॥

ಸೃಷ್ಟಿಗಳು ಬಹುವಾದವಿಲ್ಲೀ
ಸ್ಪಷ್ಟ ವರ ಸುಜ್ಞಾನಶಕ್ತಿಯ
ತುಷ್ಟ ಸಾಹಸ್ರಾಂಶದಿಂದಂ ಕೋಟಿ ನಾದಗಳು ॥
ಅಷ್ಟವಾಗಿಯೆ ಪುಟ್ಟಿದವು ಉ
ತ್ಕೃಷ್ಟನಾದದ ನಾಮರೂಪು ಸಂ
ತುಷ್ಟ ಸುಸ್ಥಾನಂಗಳಂ ಸಕಲಾಗಮದೊಳೊರೆವೆಂ ॥ ೫೨ ॥

ನಾದವೇ ವರಲಿಂಗ ಗುರು ಸಲೆ
ಯಾದಿಯೆನಿಪಾ ಪ್ರಣವರೂಪಿದು
ಮೋದದಿಂ ಸಾದಾಖ್ಯವೈ ಸುತ ತಿಳಿಪುವೆಂ ಕೇಳು ॥
ನಾದವೆಂದು ಸುನಾದವೆಂದಾ
ಹ್ಲಾದದಿಂದಂ ತವೆ ಮಹಾಘನ
ನಾದವೆಂದಾ ವಿಮಲನಾದಾಗ್ರಣಿಯು ನಾದಾಂತಂ ॥ ೫೩ ॥

ಇವರ ಲಕ್ಷಣಗಳನುಸುರುವೆಂ
ಕುವರ ಕೇಳಾ ಬಿಂದು ಮಧ್ಯದೊ
ಳವಿರತಂ ತಾನಿಪ್ಪುದೇ ನಾದಂ ವಿಚಾರಿಸಲು ॥
ತವಕದಿಂದಂ ನಾದಮಧ್ಯದ
ವಿವಿಧ ಬಿಂದುವೆ ವರ ಸುನಾದಂ
ತವೆ ಕಲಾಮಧ್ಯದೊಳು ನೆಲಸಿರ್ಪುದೆ ಮಹಾನಾದಂ ॥ ೫೪ ॥

ನಾದಶಕ್ತಿಯ ಮಧ್ಯದಲ್ಲಿ ವಿ
ನೋದದಿಂದೊಪ್ಪುವದೆ ಕೇಳಾ
ಹ್ಲಾದದಾಗ್ರಣಿಯಖಿಲ ಪೂರ್ಣದ[ಸು]ವಿಮಲ[ದ]ಭಾವಂ ||
ಮೋದದಿಂ ನಾದಾಂತವಾಯಿ
ತ್ತಾದರದೊಳೀ ಪಂಚನಾದಂ
ಮೇದಿನೀವಳಯದೊಳಗೊಪ್ಪುವವೆಂತೆನಲ್ಕೇಳು || ೫೫ ||

ಈ ನವೀನದ ಚಾರು ಘನ ನಾ
ದಾನುಸಂಧಾನಂ ಬಳಿಕ್ಕಂ
ನೂನ ಶಿವಯೋಗಿಗಳ ಹೃದಯದೊಳಿಪ್ಪುದನವರತಂ ||
ನಾನು ಪೇಳ್ದೆಂ ಕೇಳು ಮತ್ತಂ
ಸೂನುವೇ ಸಲೆ ಸರ್ವಪೂರ್ಣಸು
ಪೀನವೆನಿಪಾ ಸ್ವಸ್ವರೂಪಿ[ಯ]ಗೋಪ್ಯವನೆ ಮಾಡು || ೫೬ ||

ಎಂದು ನುಡಿದೀಶ್ವರನ ವಾಕ್ಯವ
ನಂದು ಕೇಳ್ದಾ ಶರ್ವನುಸುರಿದ
ಚಂದದಿಂದೀ ನಾದವೆನ್ನಯ ಹೃದಯದೊಳಗಿರಲಿ ||
ಅಂದದಿಂದೆನುತಾಗ ಶಿಷ್ಯಂ
ಕುಂದದೇ ಕೀರ್ತಿಸಿದನೆನುತೊಲ
ವಿಂದ ನುಡಿದಂ ತೋಂಟದಾರ್ಯಂ ಪರಮಹರುಷದೊಳು || ೫೭ ||

ಸ್ಮರಿಸೆ ಕೇಡಿಲ್ಲದುದು ಸರ್ವಗ
ಮುರುತರದ ಸುಪರಾತ್ಪರಂ ಬಂ
ಧುರದೆ ಸೂಕ್ಷ್ಮಂ ಸಲೆಶಿವಂ ತವೆ ಕೇವಲಜ್ಞಾನಂ ||
ಅರರೆ ತಾನಾನಂದಮಯವದು
ವರ ನಿಜಂ ಕೇಳನುಪಮಂ ಸೌಂ
ದರದೆ ಮೂವತ್ತಾರುತತ್ವಮನಿರದೆ ಮೀರಿ[ದುದು] || ೫೮ ||

ಈಷೆಯಿಂ ನೆನೆವರ ಹೃದಯ ಸಂ
ತೋಷಿಯಚಲಂ ತಾನೆನಿಸಿ ಗುಣ
ಭೂಷನಿರ್ಪ ನಿರಂತರಂ ಸಲೆ ಮೊದಲೆ ಕಡೆಯನಿಶಂ ||
ಭಾಷಿಸಲ್ಕಾನಿಲ್ಲದಗ್ಗದ
ಶೇಷ ನಾದವದಾವುದುಂಟೆದು
ಪೋಷಿಸುತ್ತದು ಎನ್ನ ಮನದೊಳ್ನೆಲಸಿರುತ್ತಿರಲೀ || ೫೯ ||

ಜೀವಿ ಚೈತನ್ಯಂ ಬಳಿಕ್ಕಂ
ಕೇವಲದ ನೈರ್ಮಲ್ಯ ತತ್ವಂ
ಕೋವಿದನೆ ಕೇಳ್ಬ್ರಹ್ಮದಾ ಘನ ವಿಮಲ ರೂಪನಿಶಂ ||
ತೀವಿ ನೆಲಸಲಿಯೆನ್ನನವ ಸ
ದ್ಭಾವದೊಳಗಣುರೇಣು ತೃಣ ಕಾ
ಷ್ಠಾ ವಿವಿಧ ಚೈತನ್ಯ ಚೇತನವಾದುದದು ಮತ್ತೆ || ೬೦ ||

ಶಿವನಖಿಲಮುಂ ವ್ಯಾಪಿಸಿಹ ನುತ
ವಿವಿಧ ಶುದ್ಧಾಖಿಲಮುಖಂ ಮಿಗೆ
ತವೆ ಸಕಲ ತತ್ವಾಶ್ರಯಸ್ಥಾನಂ ವಿಚಾರಿಸಲು ||
ಕುವರ ನಾದವೆ ನೋಡೆ ಬಳಿಕಂ
ಭುವನದೊಳು ಸರ್ವಜ್ಞರೂಪಂ
ದವಿರತಂ ಸಲೆ ನೆನೆದು ವಂದಿಸಿ ಬದುಕುವುದು ಸತತಂ || ೬೧ ||

ಈಕ್ಷಿಸಲ್ಕೆಂಬತ್ತುನಾಲ್ಕಂ
ಲಕ್ಷ ಜೀವಕೆ ಪರಮ ಪಾವನ
ವಕ್ಷಯದ ಚೈತನ್ಯರೂಪದು ವರ ಪರಾತ್ಪರವು ||
ದಕ್ಷದಿಂದಂ ನಾದ ಪರಶಿವ
ನಕ್ಷರಾನಕ್ಷರ (?) ಮಹಾತ್ಮಂ
ಮೋಕ್ಷವಲ್ಲಭ ವೇದ ಶಾಸ್ತ್ರಾಗಮವಿರದೆ ಮತ್ತೆ || ೬೨ ||

ಉರುತರ ಸ್ಮೃತಿ ರೂಪವಂತಾ
ವರ ಪುರಾಣಾದ್ಯಖಿಲ ಮಂತ್ರ
ಸ್ಥಿರ ಸದಾ ಸುವ್ಯಾಪಿ ನಾದಂ ಬಳಿಕವಾ ನಾದಂ ||
ಧರೆಯೊಳಂ ಸ್ವರ ಸಪ್ತಕಂ ಬಂ
ಧುರದ ವ್ಯಿದ[ಕೆ] ವಾದ್ಯಕಂ ಸಲೆ
ಪರಮ ನಾದವೆ ಹರಣವೌ ಶಿವೆ ಗೋಪ್ಯಮಂ ಮಾಡು || ೬೩ ||

ಎಂದು ಶಂಕರನಾಡಿದಂತೊಲ
ವಿಂದೆ ತೋಂಟದ ಸಿದ್ಧದೇಶಿಕ
ನಿಂದುಶೇಖರ ಮೂರ್ತಿಗುಸುರ್ದಂ ಸಕಲ ಶಾಸ್ತ್ರದೊಳು ||
ಚಂದದಿಂದಂ ಪೇಳ್ವ ಪರಮಾ
ನಂದದತಿಶಯ ನಾದರೂಪನೆ
11 ಕುಂದದೆಲ್ಲಾ ಭಕ್ತರಾಲಿಸಿ ಸುಖದೊಳೊಪ್ಪುವುದೂ || ೬೪ ||

ಪ್ರಕಟ ಭಕ್ತಂ ಜಂಗಮಂ ಸಲೆ
ಮಕುಟದಲ್ಲಿಯೆ ಶೂನ್ಯ ಲಿಂಗವ
ಧಿಕವಲಾ [ಸು] ಚಿದಂಬರ [ವು] ಶಿವಶಕ್ತಿ ಪರಿಯಾದಿ ||
ಸುಕರದಿಚ್ಛಾಶಕ್ತಿ ಸತ್ಕ್ರಿಯೆ
ಯಕುಟಿಲದ ಸುಜ್ಞಾನ ಶಕ್ತಿಯು
ವಿಕಲವಿಲ್ಲದ ನಾದ ರೂಪಂಗಳನೊರೆವೆವಿನ್ನೂ || ೬೫ ||

ಪಂಚಸಾದಾಖ್ಯಂಗಳುರೆ ನಿ
ರ್ವಂಚನೆಯೊಳ್ಬೆವತ್ತೆರಡು ಸಲೆ
ವಂಚಿಸದೆ ಘನಮೂರ್ತಿ ಕಲೆಗಳ ನಾದವೆಂತೆನಲು ||
ಮುಂಚೆಯೊ ಸಾದಾಖ್ಯಮೀಶ್ವರ
ವಂಚಿತದೆ ಮಾಹೇಶ ರುದ್ರಂ
ಹಿಂಚದುಂಟೈ ಕೇಳ್ತ್ರಯಾವಯವೆಂಬವೀಸ್ಟೈದೂ || ೬೬ ||

ಇವರೊಳಂ ಸಾದಾಖ್ಯಸೈದುಂ
ಪ್ರವರ ಕೇಳೀಶ್ವರನೆಯೆಂಟುರೆ
ಭುವನದೊಳ್ಮಾಹೇಶನಿಪ್ಪತ್ತೈದು ಬಗೆ ರುದ್ರಂ ||
ತವಕದಿಂ ಹನ್ನೊಂದು ಭೇದಂ
ಸವಿನಯದೊಳಂತಾ ತ್ರಯಾವಯ
ವವನಿಯೊಳಗಂ ಮೂರು ಸಹಿತೈವತ್ತೆರಡು ತೆರನೂ || ೬೭ ||

ಶಿವನಮೂರ್ತಕ ಮೂರ್ತಕರ್ತಾ
ಪ್ರವರನೇ ಕರ್ಮಂಗಳೈದಿವು
ಕುವರನೇ ಸಲೆ ಪಂಚ ಸಾದಾಖ್ಯಂಗಳಧಿದೈವಂ ||
ತವೆ ಧರೆಗೆ ಭವ ಸರ್ವರುದಕಕೆ
ನವಶಿಖಿಗೆ ವರ ರುದ್ರ ಭೀಮಂ
ಪವನಕಂತಾಕಾಶಕಂ ಸಮ್ಮತ ಮಹಾದೇವಂ || ೬೮ ||

ರವಿಗೆಯುಗ್ರೇಂದುವಿಗೆ ಸೋಮಂ
ತವಕದಿಂದಾತ್ಮಂಗೆ ಪಶುಪತಿ
ಭುವನದೊಳಗಿಂತಷ್ಟಮೂರ್ತಿಗಳಾದನೀಶ್ವರನು ||
ಅವನಿಯೊಳ್ಮಾಹೇಶ್ವರಂ ಕೇ
ಳ್ಪುವರ ಸನ್ನುತ ಪಂಚವಿಂಶತಿ
ವಿವರ[ಮಂ] ತಾನೆಂದು ನುಡಿದಂ ಸಿದ್ಧದೇಶಿಕನು || ೬೯ ||

ಉರುತರದ ಸರ್ವಂ ಶಿವಂ ಬಂ
ಧುರ ಮಹಾದೇವಂ ಬಳಿಕ್ಕಂ
ಧರಣಿಯೊಳಗಂ ನೀಲಕಂಠಂ ಸಲೆ ವೃಷಧ್ವಜನು ||
ಪರಮಪದದೀಶಾನ ಶಂಕರ
ನರರೆ ಭೀಮಂ ತವೆ ಪಿನಾಕಿಯು
ವಿರದೆ ಸನ್ನುತ ಚಂದ್ರಶೇಖರ ಘನ ಕಪರ್ದಿ ಮಹಾ || ೭೦ ||

ವರ ವಿರೂಪಾಕ್ಷಂ ಬಳಿಕ್ಕಂ
ತರುಣನೇ ಕೇಳ್ವಾಮದೇವಂ
ಭವದೆ ಮೃಡ ಭೂತೇಶ ಶೂಲಿಯು ವಿಮಲ ಸರ್ವಜ್ಞನ ||
ಧರಣಿಯೊಳಗಂ ಸ್ಥಾಣು ಪಾರ್ವತಿ
ಯುರುತರಪ್ರಿಯನಂತು ಮತ್ತಂ
ಸ್ಥಿರ ಮಹಾಕಾಳಂ[ಸು]ದೀರ್ಘಂ[ಶ್ರೀ]ಮಹಾದಿವ್ಯಾ || ೭೧ ||

ಸರಸ ತಾಂಡವರೂಪ ಗಂಗಾ
ಧರ ಗಣೇಶಂ ಕೇಳು ಮತ್ತಂ
ವರಗಜಧ್ವಂಸಗಳೆನಿಪ್ಪಾ ಪಂಚವಿಂಶತಿಯ ||
ಪರಮ ಭೇದದೊಳಂ ಮಹೇಶ್ವರ
ನಿರುವನೆನುತಂ ತೋಂಟದಾರ್ಯಂ
ತರುಣನೆನಿಸುವ ಚಂದ್ರಶೇಖರದೇವರಿಗೆ ಪೇಳ್ದಂ || ೭೨ ||

ಶಿವಮಹೇಶ್ವರ ರುದ್ರನುನ್ನತ
ಭುವನದೊಳ್ಶ್ರೀಕಂಠನತಿಶಯ
ದವನಿಯೊಳಗಂ ಶಂಭು ಸಲೆಯಿಾಶ್ವರ ಮಹಾದೇವಂ ||
ವಿವಿಧ ಪಶುಪತಿ ನೀಲಕಂಠಂ
ತವೆ ವೃಷಧ್ವಜರೆಂಬ ರುದ್ರರು
ತವಕದಿಂ ಹನ್ನೊಂದು ಬಗೆಯೆಂದರಿವುದೈ ಮಗನೆ || ೭೩ ||

ಇಷ್ಟದಿಂ ಭವನೆಂಬ ನಾಮಂ
ಸೃಷ್ಟಿಘನಕಾರಣದೊಳಂತು
ತ್ಯಷ್ಟ ಮೃಡನೆಂಬಾಭಿಧಾನವದಾಯ್ತು ಲೋಕದೊಳು ||
ತುಷ್ಟನೇ ರಕ್ಷಾರ್ಥದಿಂದೆಯ
ಭೀಷ್ಟಹರನೆಂದೆಂಬುದೇ ತವೆ
ನಷ್ಟರೂಪದೆಯಾದುದೀ ಸಲೆ ಮೂರುವರಭೇದಾ || ೭೪ ||

ಅವನಿಯೊಳಗಂ ಕ್ಷೇತ್ರಯಾವವು
ನವಿರತಂ ನೆರೆತೋರ್ಪವಿವರೊಳು
ಭುವನದೊಳಗೈವತ್ತೆರಡು ಸಾದಾಖ್ಯಗಳು ಕೂಡಿ ||
ತವೆ ವಿರಾಜಿಪನೆಂದು ತೋಂಟದ
ಸವಿನಯದಿ ಸಿದ್ಧೇಶನೊರೆದಂ
ತವಕದಿಂದಂ ಚಂದ್ರಶೇಖರದೇವರಿಗೆ ಕೂರ್ತು || ೭೫ ||

ಮಂಜುಲನೆ ಮಹಿಮಾಭಿರಾಮನೆ
ಕಂಜಗೋನಯನಾಂಕಪಾದನೆ
ನಂಜುಗೊರಲನೆ ನತಜನಾಘಪ್ರಚಯ ಭಂಜನನೆ
ಕುಂಜರಾಸುರಕೃತ್ತಿವಸನನೆ
ಪಿಂಜರಿಯ ಗಿರಿ ಮಂದಿರನೆಯಪ
ರಂಜಿಯ[ಣುಗಿಯ ವರನೆ] ತೋಂಟದ ಗುರು ನಿರಂಜನನೆ || ೭೬ ||

ಇದು ವಿಮಲಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರಾ ||
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣಮು
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವದು || ೭೭ ||

ಅಂತು ಸಂಧಿ ೧೪ಕ್ಕಂ ಪದನು ೭೭೩ಕ್ಕಂ

ಮಂಗಳಂ

ಹದಿನೈದನೆಯ ಸಂಧಿ

ನಿರುತದಿಂ ಬಾವನ್ನ ಕಲೆಗಳ
ಸರಸ ಭೇದವನೊಲ್ದು ಪೇಳ್ದಂ
ಧರಣಿಯೊಳಗಂ ತೋಂಟದುನ್ನತ ಸಿದ್ಧದೇಶಿಕನು ||

ಪಂಚಮುಖನಪರಾವತಾರನ
ಸಂಚಿತಾದಿಗಳಿಲ್ಲದೀಶನ
ಕಾಂಚನಾದ್ರಿಯೆ ವಾಸವಾದನ ವಿಮಲ ಶಂಕರನಾ ||
ಮಿಂಚಿನಂತೆಂದೀಷಣಾದಿಯ
ವಂಚನೆಗಳಂ ಬಿಟ್ಟದೇವನ
ನಾಂ ಚದುರಿನಿಂ ನುತಿಪೆ ತೋಂಟದ ಸಿದ್ಧದೇಶಿಕನಾ || ೧ ||

ಚಕ್ರವಾಲವೆ ಬೇಲಿ ಶರಧಿಗ
ಳುಂ ಕ್ರಮದಿ ಕೂಪಂಗಳಲ್ಲಿಯು
ಪಕ್ರಮಿತ ಸುದ್ವೀಪವೇಳುಂ ತೋಂಟಮುಯವಾಗೆ ||
ಶಕ್ರಪದವಿಯನೊಲ್ಲದಮಲ
ಪ್ರಕ್ರಿಯಾಧೀಶಕ್ತಿಯುಳ್ಳಾ
ದೃಕ್ರಿಯಾಶಕ್ತಿ ಸ್ವರೂಪಂ ತೋಂಟದುರು ಸಿದ್ಧಂ || ೨ ||

ಸತ್ತು ಚಿತ್ತಾನಂದಮುಂ ಸಂ
ಪತ್ತನುಳ್ಳತಿ ನಿತ್ಯವತಿಶಯ
ದುತ್ತಮದ ಪರಿಪೂರ್ಣವೇ ಸದ್ಭಕ್ತನಂತವನ ||
ಚಿತ್ತದೊಳು ಜಂಗಮವವನ ವಿಮ
ಲೋತ್ತಮಾಂಗದೆ ಶೂನ್ಯಲಿಂಗಂ
ಚಿತ್ರಜಾಹಿತ ಕೇಳು [ಮಾ] ವರಶೂನ್ಯ ಲಿಂಗದೊಳು || ೩ ||

ವರ ಚಿದಂಬರವೆಸೆಯಿತಂತಾ
ಸ್ಥಿರ ಚಿದಂಬರದಲ್ಲಿ ಪುಟ್ಟೆ[ತ್ತ]
ರರೆ ಘನ ಶಿವಶಕ್ತಿಯುದರಿಂದ ಪರಾಶಕ್ತಿ ||
ಭರದೆಯೊದಿಯ ಪಂಚಶಕ್ತಿಗ
ಳಿರದೆಯೂ ಜ್ಞಾನದೊಳು ನಾದಂ
ಹರುಷದಿಂ ಜನಿಸಿತ್ತುವದರೊಳ್ಪಂಚಸಾದಾಖ್ಯಂ || ೪ ||

ಉಗ್ರದಿಂದಾ ಪಂಚಸಾದಾ
ಖ್ಯಾಗ್ರ ಸಾದಾಖ್ಯದೆ ಮಹೇಶಂ
ವ್ಯಗ್ರವಿಲ್ಲದೆಯೊಗೆದನಾತನ ಕೋಟಿಭಾಗೆಯೊಳು ||
ವಿಗ್ರಹದೊಳಂ ಪಂಚವಿಂಶತಿ
ವಿಗ್ರಹಂಗಳು ಪುಟ್ಟಿದವು ಸ
ವ್ಯಗ್ರ ಚನೆಯಿಂ ಪೇಳ್ವೆನಾತನ ರೂಪದೆಂತೆನಲೂ || ೫ ||

ಆ ಮಹೇಶನ ರೂಪನುರೆ ಕೇ
ಳ್ಸೋಮಶೇಖರ ವರ ಶಿವಂ ಸಲೆ
ನೇಮದಿಂದಂ ಸಾವಿರಂ ಕಿವಿ ಮೂಗು ಬಾಯಿ ನೊಗಂ ||
ಕೋಮಲದ ಕರಪದವನಂತಂ
ಭೂಮಿ ವಿಶ್ವವನರರೆ ಬಳಸಿ[ಯೆ]
ಶ್ರೀ ಮಹಿಮೆಯಿಂದಿರ್ಪುದಾತನ ಚಾರುತರದಂಗಂ || ೬ ||

ಆವನಂ ನೆರೆ ಬಗೆವ ರೂಪಿಂ
ಭಾವಿಸಲ್ಕೆ ದಶಾಂಗುಲುನ್ನತ
ವಾವರಿಸೆ ಪುರುಷಾವಳಿಯ ತನ್ನನ್ನರಂ ಬಳಿಕಾ ||
ತೀವಿ ಪುಟ್ಟಿಸುತಿರ್ಪನೆಂತೆನೆ
ಭೂವಳಯದೊಳಗಂತುದನ್ಮುಖ
ನೋವಿಯಾದಿಯ ಸಕಲ ಶರಣರು ವರ ಮಹೇಶ್ವರನಿಂ || ೭ ||

ಜನಿಸಿದರು ಬಳಿಕಾ ಮಹೇಶನ
ವಿನುತ ಮೂರ್ತಿಯೊಳಾಗ ಸತತಂ
ಜನಿಸಿದರು ನವ ಪಂಚವಿಂಶತಿ ಮೂರ್ತಿಗಳು ಕಡೆಯಾ ||
ವಿನುತ ಮೂರ್ತಿಯೊಳಿರವೆ ರುದ್ರಂ
ಜನಿಸಿದಂ ಮತ್ತಾತನಿಂದಂ
ಜನಿಸಿದವು ತತ್ವಂಗಳಾಗಮಮಾರ್ಗದಿಂ ಮತ್ತೆ || ೮ ||

ರುದ್ರನುರುತರ ರೂಪದೆಂತೆನೆ
ನಿದ್ರೆಯಿಲ್ಲದದೇಕವಕ್ತ್ರಂ
ಭದ್ರದಿಂದಂ ವರಜಟಾ ಬಂಧಂ ತ್ರಿಲೋಚನವು ||
ಸದ್ರವಾಕರದುರು ಚತುರ್ಭುಜ
ವದ್ರಿಜೇಶಂಗೊಪ್ಪೆ ಶೂಲಮು
ಪದ್ರವಿಲ್ಲದ ಡಮರುಗಂ ಸಲೆ ಹಸ್ತವಿಂತೆರಡೂ || ೯ ||

ಮತ್ತೆಯುಭಯಂ ವರದವೆನಿಸೀ
ಯುತ್ತಮುದ ಸಲೆ ನಾಲ್ಕು ಹಸ್ತಂ
ಚಿತ್ರಜಾರಿಗೆ ಪದವೆರಡು ಪದ್ಮಾಸನಂ ಸ್ಫಟಿಕಾ ||
ಉತ್ತರದ ವರ್ಣದೊಳೆ ಥಳಥಳಿ
ಸುತ್ತೆಯಿರ್ಪಂ ದಿವ್ಯಗಂಧಾ
ಯತ್ತ ಭೂಷಣನಂಬರಾದಿಯ ಸಿಂಗರಂ ತೋರೆ || ೧೦ ||

ಧಾರುಣಿಯೊಳುತ್ಪತ್ತಿ ಸುಸ್ಥಿತಿ
ಗಾ ರಮಾಕರ ರುದ್ರನೇ ಕೇ
ಳ್ಕಾರಣಂ ಬಳಿಕಾದಿರುದ್ರನೊಳಾದ ತತ್ವಗಳು ||
ಚಾರುಕಲೆ ವಿದ್ಯಾ ಸರಾಗಂ
ಸಾರ ಕಾಲಂ [ನಿಯತಿ]ಭಾವಕ
ಮಾರಯಲ್ಬೋಧಕವು ಬಳಿಕೀಶ್ವರ ಸದಾಶಿವನೂ || ೧೧ ||

ಶಕ್ತಿಶಿವರೆಂದೆಂಬ ಹನ್ನೊಂ
ದುಕ್ತಿಸಲ್ಸಲೆ ರುದ್ರನೊಳಗಂ
ವ್ಯಕ್ತದಿಂ ಜನಿಸಿದವವರ ನಿಜಮಿಶ್ರವರ್ಗಗಳಾ ||
ರಕ್ತಿಯಿಂ [ಚರ್ಚಿಸಲದೇಂ] ಮಧು
ರೋಕ್ತಿಯಿಂ ಪೇಳುವೆನೆನುತ್ತ ವಿ
ರಕ್ತ ಸಿದ್ಧೇಶ್ವರನುಸುರ್ದಂ ಚಂದ್ರಶೇಖರಗೆ || ೧೨ ||

ಕಲೆಯವಿದ್ಯಂ ರಾಗ ಕಾಲಂ
ಸಲೆ[ನಿ]ಯತಿ ವರ ಭಾವಕಂ ಮುಂ
ಜುಲದ ಬೋಧಕಮೀಶ್ವರಂ ಸನ್ನುತ ಸದಾಶಿವನೂ ||
ಸುಲಭಶಕ್ತಿ ಶಿವಾದಿಗಳಿಗು
ಜ್ವಲದೊಳೈದೈ[ದೈ]ದು ಮೂನೂ
ರ್ಕಲಿತ ಷಡ್ದಶವೆರಡುಮೂರೈದೈದು ಮತ್ತೈದೂ || ೧೩ ||

ಹರುಷದಿಂದೀ ಪರಿಯೊಳೈನ
ತ್ತೆರಡು ತತ್ವಂಗಳ್ವಿರಾಜಿಪ
ವಿರವೆ ಕಲೆಯೊಳ್ಶಾಂತ್ಯತೀತೆಯು ಶಾಂತಿಕಲೆವಿದ್ಯಾ ||
ಪರಮಕಲೆಯಂತಾ ಪ್ರತಿಷ್ಠಾ
ವರಕಲೆಯು ಮತ್ತಂ ನಿವೃತಿಯು
ವರರೆ ಕೇಳೀಯೈದು ಪುಟ್ಟಿದವಾದಿ ಕಲೆಯಲ್ಲಿ || ೧೪ ||

ನಯುದೆ ತನುವಜ್ಞಾನ ಮೋಹಾ
ಮಯುವನೃತವೆಂಬೈದು ವಿದ್ಯಂ
ಪ್ರಿಯುದೆ ಬಹುಜೀವಾಶ್ರಿತಂ ರಾಗಂ ವಿರಾಗ ಸಮಾ ॥
ಶ್ರಯುದ ರಾಗಂ ರಾಗತತ್ವಂ
ನಿಯತ ಭೂತಂ ವರ್ತಮಾನಂ
ಶಯ(?)ಭವಿಷ್ಯತ್ತೆಂಬ ಮೂರೇ ಕಾಲವೆಂದರಿಯೈ ॥ ೧೫ ॥

ಅರರೆಯಾಯುಂ ಕರ್ಮ ವಿತ್ತಂ
ಸರಸ ವಿದ್ಯಾಧನಸುಖ[ಗಳಿಂ]
[ಬರು]ವು ನಿಯತಿ ತತ್ವಂ ಮತ್ತೆ ರತಿಹಾಸಂ ॥
ವಿರಸದಿಂ ಕ್ರೋಧೋತ್ಸಹಂ ಭಯ
ವರ ಜುಗುಪ್ಸಾ ವಿಸ್ಮಯಂ ಬಂ
ಧುರದ ವೀರಂ ಕರುಣವಿಂತಿವು ಹತ್ತು ಭಾವಕವೂ ॥ ೧೬ ॥

ಮಾಯೆ ನಿರ್ಮಾಯೆಗಳೆರಡು ಕೇ
ಳೊಯ್ಯರದೆ ಬೋಧಕಗಳಿವು ಜಿತ
ಕಾಯ ಸತ್ವ ರಜಸ್ತಮಂಗಳು ಮೂರುವೀಶ್ವರನು ॥
ಒಯ್ಯರದೊಳಂ ಶಿವನಮೂರ್ತಿ ವಿ
ಧೇಯ ಮೂರ್ತಿ ಸಕರ್ತೃ ಕರ್ಮಗ
ಳಾಯತದೊಳೀಯೈ[ದು] ಸಾದಾಖ್ಯಂ ಸದಾಶಿವನೂ ॥ ೧೭ ॥

ಮಾನದಿಂ ಪರಿಯಾದಿಯಿಚ್ಛಾ
ಜ್ಞಾನ ಸತ್ಕ್ರಿಯೆಯೈದಿವೈಯ್ದನು
ಮಾನವಿಲ್ಲದ ಶಕ್ತಿ ತತ್ವಂ ಸತ್ತು ಚಿತ್ತು ಸದಾ ॥
ಹೀನವಪ್ಪಾನಂದ ನಿತ್ಯ
ಸ್ಥಾನ ಪರಿಪೂರ್ಣಂಗಳೈದಿವು
ಸೂನುವೇ ಶಿವತತ್ವವೈವತ್ತೆರಡು ತತ್ವವಿವೂ ॥ ೧೮ ॥

ಇರದೆ ರುದ್ರನೊಳೊಗೆದವೈವ
ತ್ತೆರಡು ಸಲೆ ತತ್ವಂಗಳಂತಾ
ಪರಸು ರುದ್ರನೊಳಾದನಂ[ತರ]ವಿಷ್ಣುವವನಿಂದಾ ॥
ಧರೆಯೊಳಖಿಳ ಸೃಷ್ಟಿಯಪ್ಪುದು
ತರುಣ ಕೇಳೆಂದಿತ್ತ ತೋಂಟದ
ಗುರುವರಂ ಇಂದುಶೇಖರಾಖ್ಯಂಗಾಗ ಉಸುರಿದನು ॥ ೧೯ ॥

ಸಚ್ಚಿದಾನಂದಂ ಬಳಿಕ್ಕಂ
ಸಚ್ಚರಿತ್ರದ ನಿತ್ಯವನವರ
ತಚ್ಚಪರಿಪೂರ್ಣಸ್ವರೂಪೇ ಭಕ್ತನಂತವನ ||
ನಚ್ಚಿತಗ್ಗದ(?)ಹೃದಯ ಚರಕಂ
ಹೆಚ್ಚುಕುಂದಿಲ್ಲದ ನಿವಾಸಂ
ಚೆಚ್ಚರದೊಳಾ ಜಂಗಮದ ಮಕುಟದೊಳು ವಿವರಿಸಲು || ೨೦ ||

ಶೂನ್ಯಲಿಂಗಂ ಪುಟ್ಟಿತಂತಾ
ಶೂನ್ಯಲಿಂಗದೊಳಂ ಚಿದಂಬರ
ವನ್ಯವಿಲ್ಲದೆ ಜನಿಸಿದಂತಾ ವರ ಚಿದಂಬರದಿಂ ||
ಮಾನ್ಯನೇ ಶಿವಶಕ್ತಿಯೊಗೆದವು
ಧನ್ಯಮಾನಸ ಕೇಳು ಮತ್ತೆ ವ
ದಾನ್ಯವಪ್ಪಾ ವಿಮಲ[ವಹ]ಘನಶಕ್ತಿಯಿಂ ಬಳಿಕಾ || ೨೧ ||

ಪರೆ ಮೊದಲ್ ಜ್ಞಾನಾಖ್ಯ ಶಕ್ತಿಗ
ಳಿರದೆಯೊಗೆದವು ಕಡೆಯೊಳೊಪ್ಪುವ
ಪರಮಘನ ಸುಜ್ಞಾನ ಶಕ್ತಿಯೊಳಾದುದತಿ ನಾದಂ ||
ಧರೆಯೊಳಂತಾ ನಾದದಿಂದಂ
ಹರವರಿಯೊಳಂದೊಗೆದವ್ವೆ ಬಂ
ಧುರದೊಳಂ ಸಲೆ ಪಂಚಸಾದಾಖ್ಯಂಗಳಂತವರಾ || ೨೨ ||

ಇರದೆ ಕೇಳ್ವೆಯಂಶಭೇದ
ಕ್ಕರರೆಯಳವಟ್ಟೊಗೆದನಾ ಬಂ
ಧುರ ಮಹೇಶ್ವರನಾತನಿಂದಂ ಪುಟ್ಟಿದಂ ರುದ್ರಂ ||
ಧರೆಯೊಳಂತಾ ರುದ್ರನಿಂದಂ
ಹರಿ ಜನಿಸಿದಂ ಬಳಿಕನಾಸು
ಸ್ಥಿರದ ವಿಷ್ಣುವಿನಿಂದಲಾದ ಸೃಷ್ಟಿಯೆಂತನಲು || ೨೩ ||

ಶೈವ ಪೌರಾಣದೊಳು ಮತ್ತಂ
ಭಾವಿಸಲ್ಸಲೆ ವಾಯುವೀಯ್ಯೆಯೊ
ಳೋವಿ ಸಂಹಿತೆಯಲ್ಲಿಯಾದಿಯ ಮಾಧವನ ಪರಿಯಂ ||
ಆವಗಂ ಕೇಳುವದದೆಂತೆನೆ
ಯಾ ವಿಶೇಷದ ವಿಷ್ಣು ಸತತಂ
ಪಾವನಂ ತಾಂ ಸ್ತೋತ್ರಪಾತ್ರಂ ಚಾರು ದೀಪ್ತಾಂಗಂ || ೨೪ ||

ದೇವಮುನಿಗಣ ಸಕಲ ಕಿನ್ನರ
ಸೇವಿತಂ ಸರ್ವಾಂಗ ಲೇಪನ
ದಾ ವಿಭೂತಿಯ ತತ್ರಿಪುಂಡ್ರದೆ ಸೌಖ್ಯಮಯವಾದಾ ||
ಪಾವನತ್ವದ ಜಡೆಯು ಮಕುಟಂ
ತೀವಿದತಿ ಶ್ರುತಿಕುಂಡಲದ ಶೋ
ಭಾವಹ ರುದ್ರಾಕ್ಷಿಯಗ್ಗದ ತೊಡಿಗೆಯಾನನದಾ || ೨೫ ||

ಶಾಂತಿರಸವಾತ್ಮಜನೆ ಕೇಳೋ
ರಂತೆ ಹಸ್ತಸ್ಥಲದ ನಡುವೆಯ
ನಂತ ತೇಜದೆ ರಾಜಿಸುವ ಸಲೆ ಇಂದ್ರವರ ನೀಲ ||
ಕಾಂತಲಿಂಗಮನರ್ಚಿಸುತ್ತಂ
ಸಂತತಂ ನಿಜನಿಷ್ಠೆಯಿಂದಂ
ಸಂತಸದೆ ಪಿಡಿದಕ್ಷಮಾಲೆ ಬಳಿಕ್ಕ ಜಿಹ್ವೆಯೊಳೂ || ೨೬ ||

ನುಡಿವುತಂ ಪಂಚಾಕ್ಷರಿಯ ಸಲೆ
ಬಿಡಗಿನಿಂದಂ ಹೃದಯದೊಳಗಾ
ವೆಡೆಯೊಳಂ ತವೆ ತೊಲಗಲೀಯ್ಯದೆ ಲಿಂಗರೂಪಮುಮಂ ||
ಮಡಗಿ ಜಾನಿಸುತಿರ್ಪನ್ನೆ ಹರಿ
ಸಡಗರದೊಳೆಂದೆನುತ ತೋಂಟದ
ವೃಡ ಮಹಾಸಿದ್ಧೇಶನೊರೆದಂ ತನ್ನ ಕುವರಂಗೆ || ೨೭ ||

ಗುರುಕರುಣದಿಂ ಕೇಳ್ಬಳಿಕ್ಕಂ
ಪರಮಗುರುವಾದಂತೆ ಜಂಗಮ
ದುರುತರದ ಪರಿಯಾಯದಿಂದಂ ಪುಟ್ಟಿದಚ್ಯುತನ ||
ವರಮಹಿಮೆ ಪೇಳಲ್ಕೆ ಘನವ್ವೆ
ತರುಣನೇ ವಿಶ್ವದೊಳು ಮತ್ತಂ
ಧರಣಿಯೊಳು ಪರಿಪೂರ್ಣನಾಗೆರವಿಲ್ಲದೊಳ ಹೊರಗೆ || ೨೮ ||

ಇರ್ದುರಕ್ಷಿಪ ನೆರೆ ಪರೀಕ್ಷಿಸಿ
ಬರ್ದಿನಿಂದಂ ವಿಷ್ಣುಮಯದಿಂ
ತೋರ್ದ ಚಾರು ಜಗತ್ತುಮೆಂಬಾ ವೇದವೇ ಮತ್ತೆ ||
ಸಾರ್ದ ಸುಪ್ರಾಮಾಣವದರಿಂ
ಪಾರ್ದ ಮಾಧವನೇಯಧಿಕನ್ವೆ
ನಿರ್ದಯಂ (?) ಸಲೆ ಪೊರ್ದದಾ ಕೇಶವನ ಮಸ್ತಕದೆ || ೨೯ ||

ಪಂಚಭೂತಾದಿಗಳು ಜನಿಸಿದ
ವಂಚೆಗಮನನ ಪಿತನ ಮುಖದಿಂ
ತಾಂ ಚಮತ್ಕೃತಿಯಿಂದೆ ದೇವಾಸುರರು ದಿಕ್ಕುಗಳು ||
ಹಿಂಚದೇ ಪುಟ್ಟಿದವುವಾತನ
ವಂಚನೆಯ ಪೊಡೆಯಲ್ಲಿ ಮತ್ತಂ
ಸಂಚರಿಸದೇ ವಿಶ್ವಲೋಕಂಗಳು ವರುಣ ಚಂದ್ರಂ || ೩೦ ||

ಆದಿಯಾಗಿರ್ದಖಿಳ ಮುನಿಗಳು
ಮೋದದಿಂದಂ ವರ ಚರಾಚರ
ವಾದಿಯಪ್ಪತ್ಯಂತ ಜೀವಿಗಳೊಗೆದವಂತಾಗಿ ||
ಮೇದಿನಿಯೊಳಾ ವಿಷ್ಣುವಂಗವೆ
ಭೇದಿಸಲ್ಕೆ ಜಗನ್ಮಯಂ ಕೇ
ಳಾದಿ ವಿಷ್ಣುವಿನಿರವೆನುತ್ತಂತಾದಿ ಜಂಗಮದ || ೩೧ ||

ಸೃಷ್ಟಿಗಳ ಭೇದಂಗಳಂ ತಾಂ
ಸ್ಪಷ್ಟದಿಂ ಶೂನ್ಯಾದಿಯಿಂದು
ತ್ಕೃಷ್ಟದಿಂದಂ ಎಷ್ಟುಕಡೆಯಾದವನೊರೆವೆವಿನ್ನೂ ||
ದುಷ್ಟರಿಗೆ ಬೋಧಿಸದೆಯಿದ ನೀ
ನಿಷ್ಟದಿಂ ಗೋ[ಪ್ಯ]ವನೆ ಮಾಡೆಂ
ದಷ್ಟತನುವೇ ಗಾತ್ರವಾದೀಶ್ವರನು ಮಿಗೆಯುಸುರ್ದಂ || ೩೨ ||

ಕಗ್ಗೆರೆಯ ಪುರವನ ಸಮೀಪದಿ
ಸಗ್ಗದೊರೆಯೆನೆ ಪರಿವ ನಾಗಿಣಿ
ಯಗ್ಗದುರುತರದೆಸೆವ [ವಲ್ಮೀಕದ ಸು]ಮಧ್ಯದಲಿ ||
ಸುಗ್ಗಿಗೆಳೆಯನ(?)ಜರಿದು ಪೊಗದೊಳ
ಗಗ್ಗಳಿಗನೆನಿಸಿರ್ದು ಭೋಗಿಗ
ಳುಗ್ಗಡದ ಗುರುವಾದ ತೋಂಟದ ಸಿದ್ಧನಾಥ ಜಯಾ || ೩೩ ||

ಇದು ವಿಮಲಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರಾ ||
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣವ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥವೊಂದುವುದು || ೩೪ ||

ಅಂತು ಸಂಧಿ ೧೫ಕ್ಕಂ ಪದನು ೮೦೭ಕ್ಕಂ

ಮಂಗಳಂ

ಹದಿನಾರನೆಯ ಸಂಧಿ

ಹರುಷದಿಂದಂ ಪಂಚವಿಂಶತಿ
ಯುರುತರದ ಲೀಲೆಗಳನೊರೆದಂ
ಪರಮ ತೋಂಟದ ಸಿದ್ಧಲಿಂಗಂ ಭಕ್ತತತಿ ಮೆಚ್ಚೆ ||
ಶರಣಜನ ಮುಖಕಮಲ ಸೂರ್ಯನೆ
ಸುರುಚಿರದ ಸನ್ಮಾರ್ಗಯುಕ್ತನೆ
ನಿರುತ ನಿತ್ಯಾನಂದ ರೂಪನೆ ಚಾರು ನಿರ್ಮಾಯ ||
ನಿರವಧಿಕ ನಿರ್ಭೇದ್ಯನೇ ಬಂ
ಧುರದ ನಿತ್ಯನೆ ನಿಷ್ಕಳನೆ ನಿಜ
ವರದನೇ ಜಯ ನಿರ್ಮಲದ ಘನ ಸಿದ್ಧದೇಶಿಕನೆ | ೧ ||

ಶಿವ ಸದಾಶಿವ ವರ ಮಹೇಶಂ
ತ್ರಿವಿಧವವರೊಳಗೊಂದು ಭೇದಂ
ಶಿವನದಲ್ಲದೆಯೊ ಸದಾಶಿವನ್ಯೈದು ತೆರನಮಲಾ ||
ನವ ಮಹೇಶಂ ಪಂಚವಿಂಶತಿ
ಕುವರ ಕೇಳೆಂದೊರೆವುತಿರ್ದಂ
ಸವಿನಯದೊಳಂ ತೋಂಟದುನ್ನತ ಸಿದ್ಧದೇಶಿಕನು || ೨ ||

ಆ ಮಹೇಶನ ಶಿರ[ದೆ] ಸುಧೆಯಾ
ಸೋಮನುದಯಂ ಬಳಿಕ ಚಂದ್ರಂ
ಸೋಮಶಕ್ತಿಗಳಲ್ಲಿ ತಾರಾ ಮಾತೃಕೆಯರಭಂ (?)
ಪ್ರೇಮದಿಂ ಚಂದ್ರಂಗೆ ತನ್ನಯ
ಕೋಮಲದ ಸದ್ರೂಪದೋರುವ
ರಾಮಣೀಯಕ ಮಾಳ್ಕೆಯಿಂದಂ ಬೊಮ್ಮ ನೆನೆದಂತೆ || ೩ ||

ತಾನೆಯುಗ್ರದ ರುದ್ರನಾದಂ
ತಾನರುಣ ನವವರ್ಣನುಮೆಯನು
ಮಾನವಿಲ್ಲದೆ ಕಾಳಿಯಾಗಿರ್ದಜನ ಪಣೆಯೊಡೆದು
ನೂನತನುವೆರಡಾಗಿ ಸೀಳು
ತ್ತೀ ನೆಲದೊಳಂ ಬಿದ್ದುದಾಗಂ
ಹೀನವಾಗದೆಯಸದಳವ ನೆನೆಯ[ಲ್ಕೆ]ಮನುಜಂಗೆ || ೪ ||

ಕಾಳಿಯೊಳಗಿರ್ದಾದಿರುದ್ರಂ
ಪಾಳಿಯಿಂದಂ ನೀಲಲೋಹಿತ
ರೇಳಿಗೆಯೊಳಂ ಪುಟ್ಟಿಸುತ್ತಂ ಬಲವಿಕರಣಿಗಳ
ಭೀಳದಿಂ ಸೃಜಿಸುತ್ತ ಬ್ರಹ್ಮನ
ಸೀಳನೆರಡಂ ಕೂಡಿ ಕರುಣವ
[ತಾಳಿ] ಹರಣಮನೀಯೆ ಶಿವನೊಡನೆಂದನಾ ಬ್ರಹ್ಮ ॥ ೫ ॥

ಹರುಷದಿಂದೀಗರ್ಧನಾರೀ
ಶ್ವರನ ರೂಪಿಂ ಧರಿಪುದೆಂದೆನೆ
ಪರಮನೆಂದಂ ಬಳಿಕ ನೀನೀ ರುದ್ರರೊಡನಿರ್ದು ॥
ಧರೆಯ ಜನರಂ ಪುಟ್ಟಿಸೆಂದೆನೆ
ಹರನೆಯಮ್ಮಂ ನಿನ್ನ ಸೇವೆಯೊ
ಳಿರಲವರ್ತಾವೆಂದು ಶಿವನಂ ಪೊಗಳಿದಂ ಬ್ರಹ್ಮ ॥ ೬ ॥

ನೀಲಕುಂತಳದಂ[ಗ]ಗಂ ಸ
ಲ್ಲೀಲೆಯಿಂದಂ ಮಿಂಚಿನಂತಾ
ಸ್ಥೂಲ ಮಕುಟನನುಳ್ಳ ಸರ್ವೇಶಂಗೆ ವಂದಿಪೆನು ॥
ಮೇಲೆ ಪಣೆಗಣ್ಣುಳ್ಳುಮೆಗೆಯನು
ಕೂಲದಿಂ ಮುಕ್ಕಣ್ಣನೀಶಂ
ಗಾಲಿಸುತ್ತಾನೆರಗುವೆಂ ಭಯ ಭಕ್ತಿಯಿಂ ಬಳಿಕಾ ॥ ೭ ॥

ಸಕ[ಲನಾ]ಟ್ಯದೆ ಪುಟ್ಟಿದಬಲೆಗೆ
ಸಕಲ ನಟನದೆ ಹತಿಪ ಶಂಭುಗೆ
ಮಕರಕೇತನನೊಲ್ದು ಪಾಲಿಸಿದುಮೆಗೆ ಬಳಿಕಿಂತು ॥
ಮಕರಕೇತನ ವೈರಿಗಂ ಸಲೆ
ಸುಕರದಿಂ ನತನಪ್ಪೆನೆನುತಂ
ಪ್ರಕಟದಿಂದಂ ನುತಿಸಿದಂ ಸದ್ಭಕ್ತಿಯಿಂ ಬ್ರಹ್ಮಂ ॥ ೮ ॥

ಚರಣ ಕಮಲಕೆ ಚಾರುಹಂಸಕ
ಸರಸಿ ಕಟಕದ ದೇವಿಗಂ ಷ
ಟ್ಚರಣವನಜಕೆ ಸುರಶಿರೋಮಣಿ ನೂಪುರಾಭರಣ ॥
ದುರು ಶಿವಂಗಂ ಶಿವನೆಡೆಗೆ ಬಂ
ಧುರದ ಮೋಹವನುಳ್ಳ ದೇವಿಗೆ
ಗಿರಿಜೆಯೆಡೆಗಂ ಮೋಹಿಯಾದೀಶಂಗೆ ನತನಪ್ಪೆಂ ॥ ೯ ॥

ರನ್ನದೋಲೆಯ ದೇವಿಗಂ ಸಂ
ಪನ್ನದಹಿ ಕುಂಡಲದ ದೇವಂ
ಗುನ್ನತದ್ಧ ಸತ್ಕಲೆಯ ದೇವಿಗೆ ವಿಕಲದಧಿ[ಪಂ]ಗೆ ||
ನನ್ನಿಯಿಂ ಕನ್ನೈದಿಲಕ್ಷ್ಮಿಯ
ಕನ್ನೆಗಂ ಜಲಜಾತ ನಯನದ
ಚಿನ್ನಿಥಾನಂಗಾನು ನತನಪ್ಪೆಂ ವಿಶೇಷದೊಳು || ೧೦ ||

ಜಗದ ಜನನಿಗೆ ಜಗದ ತಾತಗೆ
ಮಿಗಿಲೆನಿಪ ಮಂದಾರ ಮಾಲೆಯು
ಸೊಗಸುವಗಜೆಗೆ ಸುರಕಪಾಲಾಂಕಿತದ ಶರ್ವಂಗೆ ||
ಮಿಗೆ ದುಕೂಲವನುಟ್ಟ ದೇವಿಗೆ
ಜಗದೊಳಾಶಾಂಬರದ ಶಂಭುಗೆ
ಬಗೆಯ ಸಂತಸದಿಂದ ನತನಪ್ಪೆಂ ವಿಶೇಷದೊಳು || ೧೧ ||

ಚಂದನಾದಿಯ ಗಂಧದಗಜೆಗೆ
ಚಂದದಂಗಜ ಭಸ್ಮದಂಗದ
ಇಂದು ಜೂಟಂಗೆರಗುವೆಂ ನಾನೆನುತ ಸಲೆಯರ್ಧ
ಸೌಂದರದ ನಾರೀಶ್ವರನ ಮುದ
ದಿಂದಜಂ ಕೊಂಡಾಡಿದಂ ಕೇ
ಳೆಂದು ತೋಂಟದ ಸಿದ್ಧಲಿಂಗಂ ನುಡಿದನೊಲವಿಂದ || ೧೨ ||

ಎಂದು ನುತಿಸುವ ಬೊಮ್ಮನಂ ಕರೆ
ದಿಂದುಶೇಖರ ಸೃಷ್ಟಿಯಂ ಮಾ
ಳ್ಪಂದಮಂ ಮಾಡಲ್ಕೆ ವಿಧಿ ನವಸುತರ ಪುಟ್ಟಿಸಲು ||
ಮಂದದಕ್ಷಂ ದೇವತತಿಗೊಲ
ವಿಂದ ಮಕ್ಕಳಕೊಟ್ಟು ಚಂದ್ರಂ
ಗಂದು ಶಾಪವನೀಯೆ ಶಿವನಿಂ ಕಲೆಗಳಂ ಪಡೆದಂ || ೧೩ ||

ಅಣುಗ ಕೇಳೋಂಕಾರವೆಂಬಾ
ಪ್ರಣವದಲ್ಲಿಯಕಾರವತಿಶಯ
ಗುಣಿಯೆ ಮತ್ತೆಯುಕಾರ ವಿಮಲ ಮಕಾರವೆಂದೆಂಬ ||
ಪ್ರಣುತದಿಂದೀ ಮೂರು ವರ್ಣಾ
ಗಣಿತ ಬೀಜಾಕ್ಷರಗಳಾದವು
ತ್ರಿಣಯನಿಂದೆಯಕಾರ ನಾದ ಉಕಾರ ಬಿಂದುವಲಾ || ೧೪ ||

ಮತ್ತೆ ಕೇಳು ಮಕಾರ ಕಳೆಯು
ತ್ಯುತ್ತಮದ ಘನನಾದ ಬಿಂದು ಉ
ದಾತ್ತ ಕಳೆಗಳು ಮೊದಲ ಮೂರಕ್ಷರಕೆಯೊಧಾರ ||
ಚಿತ್ತಜಾಹಿತನಾದ ಬಿಂದು ಸ
ಮತ್ತವಲ್ಲದ ಕಳೆಗೆಯನಿಶಂ (?)
ಬಿತ್ತರದೊಳಂ ಪ್ರಕೃತಿಯೇ ಆಧಾರವಂತದಕೆ || ೧೫ ||

ಪ್ರಾಣವೇಯಾಧಾರವಂತಾ
ಪ್ರಾಣಕಾಧಾರಾಂಶ ಲಿಂಗಂ
ಕ್ಷೋಣಿಯೊಳಗಾಯೆನಲನಾಹತಉಯೆನಲ್ಕಾಗಿ ||
ತ್ರಾಣಿ[ಸೀ] ಕೇಳ್ನಾದವಿಳಿಯಿ
ತ್ರೂಣಯಂ ತಾನಿಲ್ಲದಾಗಂ
ಜಾಣನೇ ಬಿಂದು[ವನು] ಬಿಂದುರೆ ಕೂಡಲೋಂಕಾರಂ || ೧೬ ||

ತಿರಿಗಿ ಮಧ್ಯದುಕಾರಮಂ ತಂ
ದಿರಿಸಿ ಮೊದಲೊಳಗಂತದಲ್ಲದೆ
ಎರಡನೆಯ ತಾಣದೊಳು ಕೇಳು ಮಕಾರಮನೆ ಇರಿಸಿ ||
ಹರುಷದಿಂದಾಕಾರಮಂ ಬಂ
ಧುರದೆ ಕೂಡಿಯುಮಾಯೆನಿಪ್ಪೀ
ಶ್ವರನ ಶಕ್ತಿಯದಾಯಿತಾ ಘನಶಕ್ತಿಯೊಳ್ಕೂಡಿ || ೧೭ ||

ವರ ಮಹೇಶ್ವರನೊಪ್ಪಿಯಾತನ
ಸುರುಚಿರದ ಕೋಟ್ಯಂಶದೊಳಗಜ
ಹರಿಗಳುದಿಸಿದರವರ ಕಾರಣವಾಗಿ ಜಗದುದಯಂ ||
ಅರರೆಯಾಯಿತ್ತಮಲ ಧರ್ಮವೆ
ನಿರುತದಿಂ ವೃಷರೂಪ ತಳೆದೊಲಿ
ದಿರಲು ವಾಹನವಾಗಿ ಕಲ್ಪಿಸಿಕೊಂಡುದೇ ಶಿವನ || ೧೮ ||

ಮೂರು ಲೀಲೆಯದಲ್ಲದೇ ಕೇ
ಳ್ನರನೇಯಂಧಕನ ತುಳಿವು
ತ್ತೂರಿದಾ ಪದದಲ್ಲಿ ನಾಟ್ಯವನಾಡೆ ನಾಲ್ಕನೆಯ ||
ತೋರವತಿಶಯ ಲೀಲೆಯಾಯಿತು
ಬೇರದಲ್ಲದೆ ಗಿರಿಜೆಯಂ ನಲ
ವೇರಿ ಸಲೆ ಕಲ್ಯಾಣವಾದುದೆಯ್ದೆದನೆಯ ಲೀಲೆ || ೧೯ ||

ಹರಷದಿಂದಜಶಿರವನೀಶಂ
ಧರಿಸಿ ಭಿಕ್ಷಾಟನ[ಕೆ] ಮನೆಯಂ
ಚರಿಸಿದುದೇ ಕೇಳಾರನೆಯ ಘನಲೀಲೆ ಮನ್ಮಥನಂ ॥
ಉರುಪಿದುದೆ ಏಳನೆಯ ಲೀಲೆಯು
ಭರದೊಳೆನುತಂ ತೋಂಟದಾರ್ಯಂ
ಕರುಣದಿಂದಂ ಕೇಳ್ವ ಸದ್ಭಕ್ತರಿಗೆ ಬೆಸಸಿದನು || ೨೦ ||

ಸ್ಕಂದಸತ್ಪುರಾಣದೊಳಗೊಲ
ವಿಂದ ಶೈವರಹಸ್ಯದೊಳಗಾ
ನಂದದಿಂ ದೂರ್ವಾಸನೆಂದಂ ಜೈಮಿನಿಗೆ ಮುನ್ನ ॥
ಇಂದುಜೂಟಂ ಕಾಲದಹನಮ
ನಂದು ಮಾಡಿದ ಕಥೆಯದೆಂತೆನೆ
ಸೌಂದರಾಂಗಂ ವಿಮಲ ರಾಜಶ್ವೇತನೆಂದೆಂಬ || ೨೧ ||

ಧರಣಿಪಂ ಸಕಲ ಪ್ರವೀಣಂ
ನಿರುತದಿಂ ಶಕ್ತಿತ್ರಯಾನ್ವಿತ
ನುರುತರದ ಸಂಧ್ಯಾದಿಯಾರು ಉಪಾಯದಿಂದೆಸೆನಂ ॥
ಪರಮಧರ್ಮ ಪುರಾಣಶಾಸ್ತ್ರೇ
ತ್ಕರಗಳಂ ನೆರೆ ಬಲ್ಲ ಜಾಣಂ
ಹರನ ಪೂಜೆಯ ಮಾಡುವೆಡೆಯೊಳ್ಕಾಲನೈತಂದು || ೨೨ ||

ಗಳಕೆ ಪಾಶವನಿಕ್ಕುವೆಡೆಯೊ
ಳ್ಮುಳಿದು ನುಡಿದಂ ಶ್ವೇತ[ನುತ್ತು]
ಮ್ಮಳಿಸಿ ಕೇಳೆಲೊ ಕಾಲ ಶಿವಪೂಜೆಯನೆ ಮಾಳ್ಪೆನ್ನಂ ॥
ಎಳೆಯದಿರು ತೊಲತೊಲಗೆನುತ್ತಿರೆ
ನಳಿನಸಖ ಸುತನೆಂದನೀಗಂ
ತಳಿಕ ನಯನನನರ್ಚಿಸುತ್ತಿರೆ ಬಿಡುವೆನೇ ಕೇಳು || ೨೩ ||

ಎಂದು ನುಡಿದಾ ಶಮನನೊಳಗೊಲ
ವಿಂದಲೆಂದಂ ಶ್ವೇತರಾಜಂ
ಕುಂದದೀಶ್ವರಪೂಜೆ ನೆರೆ ಮುಗಿದಲ್ಲವೇ ಎನಗೆ ॥
ಚಂದದಿಂ ಬಹುವಿಧದ ಸಕಲಾ
ನಂದದ ವ್ಯಾಪಾರವಾಗದ
ದೆಂದು ನುಡಿದಾ ಶ್ವೇತಗಿಂತೆಂದಂ ಮಹಾಂತಕನು || ೨೪ ||

ಪ್ರಾಯದೊಳ್ ಶಿವನಂ ಭಜಿಸದೆಲೆ
ರಾಯ ಮುಪ್ಪಿನೊಳೀಶ್ವರನ ನೆರೆ
ಯೊಯ್ಯರದಿ ಪೂಜಿಸಲು ಬಿಡುವೆನೆ ನರರ್ಗೆ ಶತನರುಷಂ ||
ಆಯುಷಂ ಬಳಿಕದರೊಳರ್ಧಂ
ಪೋಯಿತಾ ರಾತ್ರೆಯೊಳಗಂ ತಾ
ನೀಯವನಿಯೊಳಗೆಂತು ಮಡಿವೆನೊ ಎಂಬುದಂ ಮರೆದು || ೨೫ ||

ಬಾರೆನೆಂದಡೆ ಬಿಡೆ ಕಮಲಭವ
ಶೌರಿ ಮೊದಲಾದೆಲ್ಲರೆನ್ನಯ
ಚಾರು ಪಾಶಕೆ ಸಿಕ್ಕೆ ಮೃತ್ಯುವಿನೂಟಕೊಳಗಹರು ||
ಸೇರಿ ಪುಣ್ಣಿಗೆ ಪಾರ್ವ ನೊಣ ಶಾ
ಲೂರಗಂ ಸಿಕ್ಕಲ್ಕೆಯದ ಕಾ
ಳೋರಗಂ ನುಂಗಲ್ಕೆಯದಕೊಂದಿತ್ತು ನವಿಲದನು || ೨೬ ||

ಬೇಡ ಕೊಲ್ವಂ ತನ್ನ ಬಾಧೆಗೆ
ನಾಡೊಳೆಲ್ಲ[ರು]ಸಿಕ್ಕುವರು ನಾ
ನಾಡಲೇತಕ್ಕೆಂಬ ಕಾಲನೊಳೆಂದನಾ ಶ್ವೇತ ||
ರೂಢಿಯೊಳು ಭಕ್ತರ್ಗೆ ಶಿವನೇ
ನಾಡೆ ಕರ್ತನದಾಗಿ ನೀಂ ಬಿ
ಟ್ಟೋಡು ಪೋಗದೊಡೀಶ ನಿನ್ನಂ ಕೊಲ್ವನೆಂದೆನಲು || ೨೭ ||

ಆಗ ಕೋಪಿಸಿಯಂತಕಂ ಸೆಳೆ
ವಾಗ ರಾಜಶ್ವೇತನತಿಶಯ
ಕಾಗಿ ಲಿಂಗನೊಳುದಿಸಿ ಯಮನಂ ಕೊಂದನೀಶ್ವರನು ||
ರಾಗದಿಂದಂ ತೋಂಟದುರು ಶಿವ
ಯೋಗಿ ಬೆಸಸಿದನೀ ಕಥೆಯ ಸ
ದ್ಭೋಗಿಭೂಷಣ ಭಕ್ತರಾಲಿಸೆ ಪರಮಹರುಷದೊಳು || ೨೮ ||

ಬಾದರಾಯಣನೊರೆದ ತೆರದಿಂ
ದೋದಿ ಮಾರ್ಕಂಡೇಯ ಘನಸೊಂ
ಪಾದ ಪೌರಾಣದೊಳು ಸೂತಂ ನೈಮಿಶಾರಣ್ಯ ||
ಹ್ಲಾದ ವಾಸಿಗಳಾದ ಮುನಿಗಳಿ
ಗಾದರದೆ ಪೇಳಿದನದೆಂತೆನೆ
ಮೇದಿನಿಯೊಳು ಮೃಕಂಡು ಕನ್ನಡಿಯಂ ಪಿಡಿದು ನೋಡೆ || ೨೯ ||

ನರೆಗಳಂ ಕಾಣುತ್ತೆ ಚಿಂತಿಸಿ
ಪರಮ ಮಾರ್ಕಂಡೇಯನಂ ಪಡೆ
ದಿರಲು ಷೋಡಶವರುಷವಾಗಲ್ಕಾ ಮಹಾಪುತ್ರಂ ॥
ಹರನ ಭಜಿಸುತ್ತಂತಕನ ಸಂ
ಹರಿಸಿ ಮಾರ್ಕಂಡೇಯನೀಶನ
ಪುರಕೆ ಪೋದಂ ನೂರ್ವರುಷದಿಂ ಮೇಲೆ ಕೇಳಿನ್ನು ॥ ೩೦ ॥

[ಪಲ್ಲವಾ]ಧರೆ ಪದ್ಮಲೋಚನೆ
ಮಲ್ಲಿಕಾ ಮೋದಾಂಗಿ ಮದನನ
ಬಿಲ್ಲಿಗೆಣೆಯಾಗಿರ್ದ ಪುರ್ಬಿನಗುರ್ವಿನುರು ವನಿತೆ ॥
ವೆಲ್ಲಡಿಯ ಮನಸಿಜನ ವೀಣೆಯ
ಸಲ್ಲಲಿತ ನವವಾಣಿ [ಕುಟ್ಮಳ]
ಪ್ರೋಲ್ಲಸಿತ ಕುಚೆ ಕುಮುದ ಬಾಂಧವ ವದನೆ ಶುಭ ಗಾತ್ರೆ ॥ ೩೧ ॥

ಕಾಮಶರಸಮನಯನೆ ಮಂಜುಲ
ವಾಮ ಲೋಚನೆ ವಾರಿಜಾನನೆ
ರಾಮೆ ರನ್ನದ ದಂತಪಙ್ಕ್ತಿಯ ಕಾಂತಿಯುತ ಕಾಂತೆ ॥
ಕಾಮಿನೀಜನ ಕುಲಶಿರೋಮಣಿ
ಕೋಮಲಾಮಳ ವರ ತನೂಲತೆ
ಸೋಮಸಮ ನವವದನೆ ವಾರಿಜಗಂಧಿ ದಿವ್ಯಾಂಗಿ ॥ ೩೨ ॥

ಕಮಲಲೋಚನೆ ಕಮಲಪದತಳೆ
ಕಮಲ ಕುಟ್ಮಳ ಕುಚಯುಗಳೆ ನವ
ಕಮಲ ಘನ ಗಂಧಾಂಗಿ ಕಮಲಾಕಾರೆ ವಿಪುಲಾಕ್ಷಿ ॥
ಕಮಲಸಖ ಮುಖಕಮಲೆ ನಿರ್ಮಲ
ಕಮಲ ಕೋಮಲ ಸಧೃತ ನುತಕರ
ಕಮಲೆಯೆನಿಪಾ ರಂಭೆಯಂತಾ ಶ್ವೇತನಂ ನೋಡಿ ॥ ೩೩ ॥

ನಸುನಗುತಲಿರೆ ನೋಡಿಯಾವಿಟ
ನುಸುರಿದಂ ಶಶಿವದನೆ[ನಗೆ ಸಂ
ಧಿ]ಸಿತೇಕೆನೆ ನಿನಗೆಯೆಂಬಾ ಶ್ವೇತನಂ ಕಂಡು ॥
ವಸುಮತಿಯೊಳತಿ ಪಾತಕಂಗಳ
ನೆಸಗಿ ಶಿವನಂ ನೆನೆದು ಸತ್ತೊಡೆ
ರಸಿಕತನದಿಂದೆನ್ನ ಸಂಗ[ವು]ದೊರಕಿತೆಂದೆನುತೆ ॥ ೩೪ ॥

ನೀನು ವ್ಮೈನುರೆದಿರ್ದುದಂ ಕಂ
ಡಾನು ನಕ್ಕೆನೆನುತ್ತೆಯಾತನ
[ಹೀನ]ವೃತ್ತಾಂ[ತಂ]ಗಳಂ ನೆರೆಯರುಪಿ ಬೋಧಿಸುತೆ ||
ಮಾನಿನೀಕುಲರನ್ನೆ ಶಿವನಂ
ಧ್ಯಾನ ಪೂರ್ವಕವಾಗಿ ಭಜಿಸೆನು
ತಾ ನವೀನದ ಕಥೆಯನೊಂದಂ ಪೇ[ಳ್ದ]ಳೆಂತೆನಲು || ೩೫ ||

ಪೂರ್ವದೊಳು ನರವರ್ಮನಂಗನೆ
ಗರ್ವವಿಲ್ಲದೆ ಪೋಗಿ ಭಕ್ತಿ ಸ
ಪೂರ್ವಕದೆ ಪಾಳ್ದೇಗುಲದ ಕಸನಂ ತೆಗೆಯಲಾಗಿ ||
ಸರ್ವವನಿತೆಯರರಸಿಗರುಪಲು
ಖರ್ವದಿಂ ಕೋಪವನೆ ತಾಳು
ತ್ತುರ್ವಿಯಧಿಪತಿಯೆಂದನಂದಾ ತನ್ನ ಸತಿಯೊಡನೆ || ೩೬ ||

ಎಲೆಯಬಲೆ ಕೆಳದಿಯರಿಗುಸರದೆ
ಯೊಲವಿನಿಂದಂ ಪಿಡಿಯಬಹುದೇ
ಲಲನೆ ಕಸಿಕಿಲನೆಂಬ ರಾಯಂಗೆಂದಳಾ ವನಿತೆ ||
ಸುಲಭ ನೀನೇ ತಿಳಿದು ನೋಡೈ
ಪಲವು ತೆರದಿಂ ಮುನ್ನ ನೀನಾ
ರಲಘುಪತಿ ನಾನಾರದೆಂಬುದನೆಂದು ತಿಳುಪಲ್ಕೆ || ೩೭ ||

ಆಗವರ ಜಾತಿಸ್ಮರತ್ವಂ
ಬೇಗದಿಂ ತೋರಲ್ಕೆನುಡಿದಂ
ರಾಗದಿಂದಾನೊಂದು ಮೊಲ ನೀಂ ಮೇಘ ಚಾರಿಣಿಯು ||
ದೇಗುಲದ ಮುಳ್ಳುದುರಿ ಪುಟ್ಟಿಹ
ನಾಗಧರನುಪರಿಯ ತೃಣಂಗಳ
ಪೋಗಿ ಮೇವೆಂ ನೀನು ಬಲಿಪೀಠಕ್ಕೆ ಹಾಕಿರ್ದ || ೩೮ ||

ಅನ್ನವಂ ಕೊಳುವಲ್ಲಿ ಕಸನಂ
ಮುನ್ನವೇ ತೆಗೆದಂದವಾಗ
ಲ್ನನ್ನ ನಿನ್ನಂ ಸತಿಪತಿಗಳಾಗೆಂದು ಕಳುಪಿದರು ||
ಎನು ತಾಗಂ ದೇಗುಲದ ಕಸ
ನಂ ನಿವಾರಿಪರೆಂದು ರಂಭೆಯು
ನನ್ನಿಯಿಂ ಬೋಧಿಸುತೆಯಾ ಶ್ವೇತನನೊಡಂಬಡಿಸಿ || ೩೯ ||

ನನ್ನ ಮೇಲುಂಟಾದ ಮನಮಂ
ಚಿನ್ನಿಧಾನದ ಶಿವನ ಮೇಲಿ
ಟ್ಟುನ್ನತೋನ್ನತ ಫಲವ ಪಡೆಯೆನುತಭವನಾಲಯಕೆ ||
ಮನ್ನಿಸುತ್ತಾತಂಗೆ ಭೂತಿಯ
ನನ್ನಿಯಿಂದಂ ಪೂಸಿ ಮತ್ತಂ
ಪನ್ನತಿಯ ರುದ್ರಾಕ್ಷೆಗಳ ತೊಡಿಸುತ್ತೆ || ೪೦ ||

ಶಿವನ ಭವನಕೆ ಕಳುಪಲಾತಂ
ಭವನ ಭರ್ಗನನರ್ಚಿಸುತ್ತಂ
ತವಕದಿಂ ಭೂರುದ್ರನಂತಾ ಧ್ಯಾನದಿಂದಿರಲು ||
ರವಿಯುದಯದೊಳ್ಬಂದು ಕೋಪದಿ
ಜವನ ದೂತರು ಕೆರಳಿ ರಂಭೆಯು
ಯುವತಿಯರು ದೇಗುಲಕೆ ಪೋದನೆನಲ್ಕೆ ಬಂದಲ್ಲಿ || ೪೧ ||

ನೋಡಿ ಮುಂದಕೆ ಪೋಗಲಮ್ಮದೆ
ಕೂಡೆ ಯಮನಿಗೆ ಪೇಳೆ ಕೋಪಂ
ಮೂಡೆ ನುಡಿದಂ ರಂಭೆ ಕಳುಹಿದಳೇ ಬಳಿಕ್ಕವನ ||
ಪೀಡಿಸದೆ ಬಿಡೆನೆಂದು ಪಾಶವ
ಹೂಡಿ ಎಳೆಯಲ್ಕಾ ಕಲಾನಿಧಿ
ಚೂಡನಾ ಯಮನಂ ಹರಿಸಿದಂ ಸುರರು ಭಾಪೆನಲು || ೪೨ ||

ಬಳಿಕ ಕೇಳ್ಶೈವಧರ್ಮ ಶಾಸ್ತ್ರದೊ
ಳೆಳೆಯ ರವಿಯುದಯದೊಳಗೆ[ದ್ದೆ]
ದ್ದಳವಿಯಿಂ ಪಂಚಾಕ್ಷರಿಯ ಪಲವು ಪ್ರಕಾರದೊಳು ||
ತಿಳಿದು ಉಪಚರಿಸಲ್ಮಹಾ ಮಂ
ಗಳದ ಭಾಗ್ಯವದಪ್ಪುದೆನುತಂ
ಬಳಯುತಂ ಸಿದ್ಧೇಶನುಸುರ್ದಂ ಕೇಳ್ವ ಭಕ್ತರ್ಗೆ || ೪೩ ||

ಶೈವದೊಳಗಿಂತೋಂ ನಮೋಯೆನು
ತಾ ವಿಶೇಷದ ನೀಲಕಂಠಾ
ಯಾ ವಿಮಲದೆಂಟಕ್ಷರಂಗಳ ನುಡಿಯಲಘನಾಶಂ ||
ಭಾವ ಶುದ್ಧದೊಳಂ ಮಹಾಘನ
ದೇವಯೆಂಬೀ ನಾಲ್ಕು ವರ್ಣಮ
ನಾವಗಂ ನುಡಿಯಲ್ಮಹಾ ಪಾಪಂಗಳಂತಳಿಗುಂ || ೪೪ ||

ಲಿಂಗ ಪೌರಾಣದೊಳು ಸಲೆ ಶಿವ
ಲಿಂಗಮಂ ಪ್ರಾಭಾತಕಾಲದೊ
ಳಂಗವಿ[ಸಿ]ದರ್ಶನನ ಮಾಡಲ್ ಶಿವನ ಲೋಕವನು
ಪೊಂಗಿ ಪೊಗುವನು ಮತ್ತೆ ಮಧ್ಯಾ
ಹ್ನಂಗಳೋಳ್ಮಖ ಫಲವ[ದ]ಲ್ಲದೆ
ತುಂಗ ಸಾಯುಂಕಾಲದೊಳ್ಬಹುಶತ ಫಲಂ ನೋಡೆ || ೪೫ ||

ಸ್ಕಂದ ಪೌರಾಣದೊಳಗೀಶಾ
ನಂದ ಸಂಹಿತೆಯಲ್ಲಿ ತಾಂ ಮುದ
ದಿಂದ ಸೂತಂ ಮುನಿಗಳಿಗೆ ಸುಕುಮಾರನುರು ಕತೆಯಂ ||
ಅಂದದಿಂದಂ ಪೇಳ್ದನೆಂತೆನೆ
ಸೌಂದರದ ಘನವಿಂಧ್ಯಪರ್ವತ
ವಂದೆಸೆವುದಂತದಕೆಯುತ್ತರದಿಕ್ಕಿನಲ್ಲಿಹುದು || ೪೬ ||

ವಿಪುಲ ಕೋಟರದೇಶವೆಸೆವುದು
ವಪರಿಮಿತದೀರಾವತೀನದಿ
ಸುಪಥದಿಂದಲ್ಲಿರ್ಪುದದರೊಳಗವಿಪಾಟಿವೆಂಬ (?) ||
ಅಪರಿಮಿತವಹ ನದಿಯ ತೀರದೊ
ಳುಪಮೆಗೆಯ್ದುಕಬ್ಜಕೆ ಕಪುರಂ (?)
ಕಪಟವಿಲ್ಲದೆ ರಾಜಿಪುದುವಂತಾ ಪುರದ ನಡುವೆ || ೪೭ ||

ಪರಪುರಂ ಜಯರಾಯನಿರ್ಪಂ
ಸಿರಿಯೊಳಾತಂಗೊರ್ವ ವಿಪ್ರಂ
ಪರಮ ಮಂತ್ರಿ[ಯದಾ]ಗಿಯೊಪ್ಪುವನವನ ತನುಜಾತಂ ||
ಪರಸತಿಯರಂ ಪೋಗೆಯಾತನ
ನರಸು ಹೊರಡಿಸೆ ಬಿಟ್ಟು ಬಂದಾ
ದುರುಳ ಸುಕುಮಾರಂ ಬಳಿಕ್ಕಂ ಕೀರದೇಶದೊಳು || ೪೮ ||

ಇರಲವಂದಿರು ಪೊರಡಿಸಲ್ಕಾ
ತುರದೆ ಬಂದಾ ಹೂಣಮಂಡಲ
ಪುರದ ಬನದೊಳು ಹೊಲತಿವಿಟ್ಟಲೆ ಕಂಡು ತಾಂ ಬಂದು
ಇರಲವಳ ನೆರೆದಂತುಮಲ್ಲದೆ
ಯರಿದೆನಿಸಿ ತನಗಾದ ಪುತ್ರಿಯ
ರಿರುವರನೆ ಹೆಂಡತಿಯರಂ ಮಾಡಿಕೊಂಡಲ್ಲಿ || ೪೯ ||

ಸುರೆಯ ಕುಡಿವಂ ನಾಯ ತಿಂಬಂ
ಸುರರ ಕೊಲ್ವಂ ಪರರ ಸತಿಯರ
ನೆರೆವನಿಂತಪ್ಪಧಿಕ ಪಾಪದೊಳಿರುತೆಯೊಂದು ದಿನ ||
ಪರಿಮಳದ ಪುಷ್ಪಂಗಳಂ ಕೊಯಿ
ತರುತೆ ಲಿಂಗವ ಕಾಣುತಾಗಂ
ಮರಣವೈದಲ್ಬಂದರಾಗಂ ಜವನ ಕಿಂಕರರು || ೫೦ ||

ಮೂಡೆಗಟ್ಟಂ ಕಟ್ಟಿಯವನಂ
ಕೂಡೆ ಕೊಲ್ವನಿತಕ್ಕೆ ಬಂದ
ನಾಡೆ ಶಿವದೂತಾಳಿಯಾತನ ಬಿಡಿಸಿಕೊಂಡಾಗ ||
ರೂಢಿಸಿದ ಪುಷ್ಪಕದೊಳಿರಿಸುತೆ
ಕೂಡೆ ಶಿವಪುರಕೊಯ್ವ ಕಾಲದೊ
ಳೋಡಿ ಬಂದಂತಕನ ಕಿಂಕರರಡ್ಡಗಟ್ಟುತಿರೆ || ೫೧ ||

ಶಿವನದೂತರು ಕಾಣುತಾಗಂ
ಜವನ ದೂತರ ಬಡಿದು ತಗುಳುತೆ
ತವಕದಿಂದಂ ತಂದು ಸುಕುಮಾರಕನ ತಂದಿರಿಸೆ ||
ಭವನವಂಗಂ ಗಣಪದವಿಯಂ
ಸವಿನಯದೊಳಂ ಕೊಟ್ಟನೆಂದೆನು
ತವನಿಯೊಳು ಸಿದ್ಧೇಶನುಸುರ್ದಂ ಕೇಳ್ವ ಭಕ್ತರ್ಗೆ || ೫೨ ||

ಅಸಿತ[ನ]ಂತಕನರಿದು ನೆರೆಧೂ
ರ್ತನ ಬಿಡಿಸಿಕೊಳ ಬರ್ಪುದೇ ತಾ
ನೆನುತೆ ದೂತರು ಸಹಿತಲೀಶಂಗೆರಗಿ ಮುದ್ರೆಗಳಂ ||
ಕನಲಿ ಬಂದೊಪ್ಪಿಸುವ ಯಮನಾ
ನನವನೀಕ್ಷಿಸಿ ನಸುನಗುತ್ತಂ
ವಿನಯದಿಂದಂ ನುಡಿದನೀಶ್ವರನಾ ಯಮನ ನೋಡಿ || ೫೩ ||

ಕಾಲ ಕೇಳ್ಬೆ ಮಾಘಕೃಷ್ಣ ವಿ
ಶಾಲ ಚಾತುರ್ದಶಿಯ ದಿನದೊ
ಳ್ಬಾಲ ಶಶಿಧರನಮಲ ದರುಶನದಿಂದಲೀತಂಗೆ ||
ಮೇಲೆನಿ ಪಕ್ಕೈವಲ್ಯವಾಯ್ತೆಂ
ದಾಲಿಸುವ ಯಮನಂ ಕಳುಹಿ ನಿಜ
ಲೋಲನೊಪ್ಪಿದನಿಲ್ಲಿಗಾಯಿತ್ತೆಂಟನೆಯ ಲೀಲೆ || ೫೪ ||

ತಾರಕಾಸುತರಜನ ಕುರಿತತಿ
ಘೋರ ತಪಮಂ ಮಾಡಿಯವನಿಂ
ಭೂರಿ ಪದಮಂ ಪಡೆದು ಮತ್ತಾ ತ್ರಿಪುರದಲ್ಲಿರ್ದು ॥
ಹೋರಿ ಮೂಲೋಕಂಗಳಂ ಸಂ
ಹಾರಮಂ ಮಾಡುತ್ತಿರಲುಂವಜ
ಶೌರಿ ದೇವೇಂದ್ರಾದಿಗಳ್ಕೈಲಾಸಕ್ಕೈತಂದು ॥ ೫೫ ॥

ಸುರರು ಮೊರೆಯಿಡೆ ಕೇಳದಂದದೆ
ಗಿರಿಜೆ ಮಗನಂ ಶಿವನ ಕೈಯ್ಯೊಳ
ಗಿರಿಸಲಾಗಂ ನೋಡಿ ಗುಹನಂ ಮುದ್ದನಾಡುತ್ತೆ ॥
ಹರುಷದಿಂ ಹರನಿರುತಿರಲ್ಕಾ
ತ್ತರರೆ ಕುಂಭೋಧರ ಗಣೇಶಂ
ಹರಿಯಜಾದ್ಯರ ನೋಡಿ ಸುಕಶಾದಂಡವಂ ಕೊಂಡು ॥ ೫೬ ॥

ಬಡಿವುತಿರೆಯ್ಯೆನೂರು ಗಾವುದ
ವಡರಿ ಬಿಡದಿರೆಯೋಡುತಮರರು
ಪೊಡೆವ ದನುಜರ ತಂಬಟದ ಧ್ವನಿಗೇಳಿ ಹಮ್ಮೈಸಿ ॥
ನಡುವೆ ಸಿಕ್ಕಿದೆವೆಂದು ಭಯದಿಂ
ನಡುಗುವಜ ಹರಿ ಮುಖ್ಯರುಗಳು
ಗ್ಗಡದ ಭಾಗ್ಯವೆ ತೋರುವಂದದೆ ಬಂದ ನಂದೀಶಂ ॥ ೫೭ ॥

ಉರು ಜಟಾ ಸನ್ಮಕುಟದಿಂ ಬಂ
ಧುರದ ಸರ್ವಾಂಗದೊಳು ಬೆಳಗುವ
ಪರಮ ಭಸಿತೋದ್ಧೂಳನದೊಳಂ ಘನ ಲಲಾಟದೊಳು ॥
ಧರಿಸಿದ ತ್ರೈಪುಂಡ್ರರೇಖೆಗ
ಳಿರವಿನಿಂ ರುದ್ರಾಕ್ಷಮಾಲೆಗ
ಳರರೆಯೊಪ್ಪಲ್ಕಿರದೊಳಿಹ ಶಿವಲಿಂಗದಿಂ ಮತ್ತೆ ॥ ೫೮ ॥

ಕಟಕ ಕೇಯೂರಾದಿಯಾದು
ತ್ಕಟದ ತೊಡಿಗೆಗಳಿಂದ ಮತ್ತಂ
ಚಟುಲ ಗಂಡಸ್ಥಲದೆ ಬೆಳಗುವ ವಜ್ರಕುಂಡಲದಿಂ ॥
ನಿಟಿಲನಯನಂಗರ್ಪಿಸಿದ ನವ
ಪಟು ಕುಸುಮ ಮಾಲೆಗಳ ಗಳದಿಂ
ಘಟಿಸಿ ತೋರುವ ನಂದಿಕೇಶನ ನುತಿಸಿ ವಚಿಸಿದರು ॥ ೫೯ ॥

ಕರುಣಿಯೋ ಚಿತ್ತೈಸು ನಂದೀ
ಶ್ವರನೆ ತಾರಕ ಸುತರಿಗಳ್ಕುತೆ
ಗಿರಿಜೆಯರಸಂಗಾವು ಮೊರೆಯಿಡಲಾಗಿ ಕೇಳುತ್ತ ॥
ಪರಮ ಕುಂಭೋದರ ಗಣೇಶಂ
ವರ ಕಶಾದಂಡದೊಳೆ ಬಡಿಯ
ಲ್ಕರರೆಯ್ಸೈನೂರ್ಗಾವುದಂ ಬಳಸುತ್ತೆ ಕೊಲುತಿರಲು ॥ ೬೦ ॥

ನಾವು ಕೆಟ್ಟೋಡುವ ಸಮಯದೊ
ಳ್ಭಾವಜಾಂತಕಪುರದ ದನುಜರ
ತೀವಿದತಿ ನಿಸ್ಸಾಳ ರವಮಂ ಕೇಳಿ ಕಂಗೆಟ್ಟು ॥
ನಾವಿರುತ್ತಿರೆ ನಮ್ಮ ಭಾಗ್ಯವೆ
ನೀವು ಬಂದಿರಿ ನಂದಿಕೇಶ್ವರ
ಕಾವುದೆನುತಂ ಕೀರ್ತಿಸುವ ದೇವರ್ಕಳಂ ನೋಡಿ ॥ ೬೧ ॥

ಅಂಜಬೇಡೆಂದಭಯವಿತ್ತು ನಿ
ರಂಜನಂ ತನ್ನೊಡನೆ ಕರೆತಂ
ದಂಜಲಿಗಳಂ ಮುಗಿದು[ಮತ್ತೆ]ಗಣೇಶನಿಂತೆಂದಂ ॥
ಭಂಜಿಸುವರೇ ಸುರರೆನುತ್ತಂ
ನಂಜುಗೊರಲಂಗಂಡು ಪೇಳಲು
ರಂಜಿಸುವ ರಥವಾಗಬೇಕೆಂಬಭವನಾಜ್ಞೆಯೊಳು ॥ ೬೨ ॥

ವಿಶ್ವಕರ್ಮಂ ನಿರ್ಮಿಸಿದ ಘನ
ಶಾಶ್ವತದ ರಥಕಿಂದು ತವೆ ಹರಿ
ದಶ್ವಗಳೆ ಎಡಬಲದ ಗಾಲಿಗಳದಕೆ ಹಗ್ಗಗಳು ॥
ವಿಶ್ವದೊಳಗಹಿಗಳ ಸಮೂಹವ
ದೈಶ್ವರಿಯವಾಗಿರಲು ನೆರೆವೈ
ವಶ್ವತಾರಿಯ ತೇರಿನುನ್ನ[ತಿ] ಮತ್ತದೆಂತೆನಲು ॥ ೬೩ ॥

ಸಕಲ ಜಗಮಯ ಸಕಲ ಸುರಮಯ
ಸಕಲ ವಸುಮಯ ಸಕಲ ಮಣಿಮಯ
ಸಕಲ ಸನ್ನುತ ವೇದಮಯ ಬಹು ಭೂತಮಯವಾಗಿ ॥
ಪ್ರಕಟದಿಂ ರಂಜಿಸುವ ತೇರಂ
ಸುಕರದಿಂ ಶಿವನಡರೆ ಸೂತಂ
ಸುಕರದಾ[ಮ್ನಾಯಾಶ್ವ]ಗಳ ನೆರೆ ಸರಿಸಮಂ ಮಾಡೀ ॥ ೬೪ ॥

ಹೊಡೆಯಲಾಗಂ ಗಗನ ಭಾಗ
ಕ್ಕಡರೆ ಪೋದುದುವಾ ತ್ರಿಪುರವಿ
ದ್ದೆಡೆಗೆಯಾಗಂ ನಂದಿ ಭೃಂಗಿ ಗಣೇಶ ಷಣ್ಮುಖರು ||
ಬಿಡದೆ ಇವರಾದಿಯ ಗಣಂಗ
ಳ್ಕಡೆಗೆ ಹರಿಯಜಸುರಪರ್ವೆದುತೆ
ತೊಡಗಿದರು ಕಾಳಗವ ರಕ್ಕ[ಸ]ರೊಡನನೆಂತೆನಲು || ೬೫ ||

ಕರಿಗೆ ಕರಿ [ರಥಕೆ] ರಥ ಮತ್ತಂ
ಹರಿಗೆಯವರಿಗೆ ಹರಿಗೆಯವರು
ತ್ತರದ ಬಿಲ್ಲಾಳ್ಗಳು ಸಮವದಾಗಿ ||
ಭರದಿ ಕಾದುತ್ತಿರಲು ಸುರಪತಿ
ಹರಿಯಜರು ಮುರಿದೋಡಿ ಬರೆ ಬಂ
ಧುರ ಗಣಂಗಳ್ಕೊಂಡರಾ ರಕ್ಕಸರ ಪಡೆಗಳನು || ೬೬ ||

ಆಗ ಹರಿಯಜ ನಾರದರನತಿ
ಬೇಗದಿಂ ಶಿವನಲ್ಲಿಗಟ್ಟಿ ಸು
ರಾಗದಿಂದಂ ವಿಷ್ಣು ಬೌದ್ಧನದಾಗಿ ದನುಜರ್ಗೆ ||
ಪೋಗಿ ದುರ್ಬೋಧೆಯನರುಪಿ ವಿಷ
ಭೋಗಿ ಭೂಷಣನರ್ಚನೆಯನನು
ವಾಗಿ ತೊಲಗಿಸಿ ಬಂದು ಬಿನ್ನೈಸಿದನು ಶರ್ವಂಗೆ || ೬೭ ||

ಮಿತ್ರ ಪದ್ಮವನಾಬ್ಜ ನೀ ಪತಿ
ಚಿತ್ರ ಭಸಿತಾವಹ [ನು] ಸುಚಿ ಸಕ
ಲತ್ರ ರವಿಜ ಭಯ ಪ್ರಹರ ಹರಿಭೂಷ ಗಡ ದೋಷ ||
ಅತ್ರಿಮುಖ ಮುನಿ ನಮಿತಪದಶತ
ಪತ್ರ ಶರಣೆಂದೆರಗಿ ಮುರರಿಪು
ಪುತ್ರ ವಿಜಯನ ಗುರುಕುಲಾರ್ಯನ ಮರಳಿ ಬೆಸಗೊಂಡ || ೬೮ ||

ವಂದಿಸುತ್ತಂ ದೇವದಾನವ
ರಿಂದುಧರನರ್ಚನೆಯ ತೊಲಗಿಸಿ
ಸೌಂದರಿಯರ ಸುಪತಿವ್ರತತ್ವವನಿಂತು ಕೆಡಿಸಿದನು ||
ಎಂದು ಬಿನ್ನೈಸಲ್ಕೆ ಶಿವ ಮುದ
ದಿಂದ ನಿಟಿಲಾಗ್ನಿಯೊಳು ತ್ರಿಪುರಮ
ನಂದು ದಹಿಸಿದನೆಂಬುದೆಯೊಂಬತ್ತು ಲೀಲೆಯಲಾ || ೬೯ ||

ಜಲದೊಳಗೆ ಮುಳುಗುತ್ತ ಬಂದೊಂ
ದಲಘುತರ ನೀರ್ಗಾಗೆ ಬಂದಾ
ವಿಲಸಿತದ ಜೀರ್ಣಾಲಯದ ಕಂಬಾಗ್ರದಲ್ಲಿರ್ದು ||
ನಲವಿನಿಂ ರೆಕ್ಕೆಗಳನೊದರ
ಲ್ಕೊಲವಿನಿಂದ(ಲ್ಲದಿ)ರ್ದ ಪನಿಗ
ಳ್ಕಿಲಕೆ ಪೋಗದೆ ಶಿವನ ಮೇಲುದರಲ್ಕೆಯನಿತರೊಳು || ೭೦ ||

ಮರಣವಾಗಲ್ಕಾಲನಾಜ್ಞೆಯೊ
ಳರರೆ ಬಂದಾ ಕಾಗೆಯಸುವಂ
ಭರದೊಳಂ ಮಿಗೆ ಯಾತನೆಯ ಕಾಯದೊಳು ಬಳಿಕಿಂತು ||
ಇರಿಸಿ ಜೀವ[ವ]ತೃಣ ಜಳೂಕದ
ಪರಿಯನೀತಂ ತಪ್ಪದಂತಾ
ತ್ವರಿತದಿಂದಂ ಧರ್ಮಮಾರ್ಗದೊಳಿಪ್ಪ ಸಮಯದಲಿ || ೭೧ ||

ದೂತರಾ ವಾಯಸನ ತಂದು
ಪ್ರೇತಪತಿಗೊಪ್ಪಿಸಲು ನೋಡು
ತ್ತೋತು ಕರಣಿಕರೆಂದ ನುಡಿಯಂ ಕೇಳಿಯದ ತಂದು ||
ತಾತ ವೃತ್ರಾಸುರನ ಸತಿಯ ವಿ
ನೀತ ಗರ್ಭದೊಳಿರಿಸೆಯುವಳತಿ
ಮಾತೆಯಾಗಿರೆ ಪುಟ್ಟಿ ಬಾಲ್ಯದೊಳಿರಲುವನಿತಕ್ಕೆ || ೭೨ ||

ಮರೆಯದೇ ಜಾತಿಸ್ಮರತ್ವಮ
ನರಿದು ಶುಕ್ರಂ ಕೊಟ್ಟ ನಾಮದೊ
ಳುರೆ ಜಲಂಧರನಿರಲು ವೃತ್ರಾಸುರನ ನಿರ್ಜರರ ||
ಯೆರೆಯ ಕೊಲಲಾಗುಳಿದ ಪುತ್ರಂ
ಮರುಗಿ ತಪಮಂ ಮಾಡಿಯಜನಿಂ
ಕೊರತೆಯಿಲ್ಲದ ಸಂಪದಂಗಳ ಪಡೆದ ಲೋಕಗಳಂ || ೭೩ ||

ಜಡಿವುತಂ ದಿಕ್ಪಾಲಕರಂ ಮೊರೆ
ಯಿಡಿಸಿ ಕಾಡುತೆ ವಿಷ್ಣುವಂ ಕಂ
ಡೊಡನೆ ಕಾದುತ್ತಲ್ಲಿ ಲಕ್ಷ್ಮಿ[ಯ]ಸೆರೆವಿಡಿದು ಬಳಿಕ ||
ಪೊಡವಿಯಂ ಬಿಗಿದಹಿಯ ತೆಗೆದತಿ
ಕಡು ವಿರೋಧದಿ ಮೂಡೆಗಟ್ಟಂ
ಬಿಡದೆ ಕಟ್ಟುತ್ತಾಗಸಕ್ಕಾಗಿಡಲು ಹರಿಪೋದಂ || ೭೪ ||

ಅನಿತಕಂ ತನ್ನಧಟ ಸಿಂಹಾ
ಸನಮುನಡರುತ್ತಸುರನಿರೆ ಗ
ಮ್ಮನೆ ಮಹಾಮುನಿ ನಾರದಂ ಮಂತ್ರಾಕ್ಷತೆಯನೀಯ್ಯೆ ||
ದನುಜನೆಂದಂ ಬಂದಕಾರಣ
ದನುವ[ದೇ]ನೆನೆ ನಗುತೆ ಮತ್ತಂ
ಮುನಿ ನುಡಿದ ಕೇಳೆಲೆ ಜಲಂಧರ ನಿನಗೆ ಬುದ್ಧಿಯನು || ೭೫ ||

ಪೇಳ ಬಂದೆನೆನಲ್ಕೆ ದನುಜಂ
ಕೇಳಿ ನುಡಿದಂ ಹಗೆಗಳಿಲ್ಲೆನೆ
ಭಾಳ ಲೋಚನನಡಿಯ ಕಂಡೆಲೆಯಸುರ ಬದುಕೆನಲು ||
ತಾಳಿಕೋಪಮನಾಗ ಶಿವನಿಗೆ
ದಾಳಿಯಂ ಮಾಡಲ್ಕೆ ಸರ್ವಂ
ಪಾಳೆಯಂಗಳನೆಲ್ಲನುಂ ಸುಡಲೆಂದನಾ ದನುಜ || ೭೬ ||

ಆಳ ಹಂಗಿನ ನಾಯಕನೆ ನಾಂ
ಭಾಳ ಲೋಚನ ನಿನ್ನ ಗುಣಸಹಿ
ತೋಳಿಯಿಂದಂ ಬಂದುನಂಜದೆ ನನ್ನ ಕೂಡಿಗಾ ||
ಕಾಳಗವ ಮಾಡಲ್ಲದಿರ್ದೊಡೆ
ಪೇಳುವೆಂ ಕರಿವದನನಂ ನನ
ಗೇಳಿಗೆಯೊಳಂ ಕ್ಯೆಸೆರೆಯ ಕೊಟ್ಟಲ್ಲಿ ಕಪ್ಪವನೂ || ೭೭ ||

ಕೊಡುವುದೆಂದೆನೆ ಶರ್ವನೆಂದಂ
ಕಡಲ ಮಧ್ಯದಿ ನಾವು ಪಾದದೊ
ಳೊಡನೆ ಬರೆದಿಹ ಚಕ್ರಮಂ ನೀಂ ಕೊಂಡು ಪೋಗೆನಲು ||
ಹಿಡಿದು ತೆಗೆಯಲ್ಬಾರದಿರೆ ಘುಡು
ಘುಡಿಸಿ ನಾದದ ಮೂದಲಿಸಲುರೆ
ದಡಿಗ ರಕ್ಕಸ ಕೊರಳಿಗಿಕ್ಕುತೆ ಎತ್ತುವನಿತಕ್ಕೆ || ೭೮ ||

ಕೊರಳ ಕುಯ್ಯಲ್ಕಾಗ ದನುಜಂ
ಹರಹರಾಯೆನಲಾಗ ಮೆಚ್ಚಿದೆ
ವರರೆ ಬೇಡೆಂದೆಂ[ಬ] ಶರ್ವನ ವಾಕ್ಯಮಂ ಕೇಳಿ ||
ಪರಮಪರ ಪರಮೇಶ ನಿನ್ನಯ
ಸುರುಚಿರದ ತಲೆಮಾಲೆಗಳೊಳಂ
ಧರಿಸು ನಾಯಕರತ್ನದಂದದೊಳೆನ್ನ ಶಿರವನೆನೆ || ೭೯ ||

ಹರುಷದಿಂದಂ ಧರಿಸಿದಂ ಶಿವ
ನಿರದೆಯೆಂದಾಗಮಲ ನಂದೀ
ಶ್ವರನುಸುರ್ದಂ ವಿಧಿಸುತಂಗಂತಾ ತೆರದಿ ಸಿದ್ಧ ||
ಗುರು ನುಡಿದನತಿಶಯದಿ ಕೇಳುವ
ಪರಮ ಭಕ್ತರಿಗೆಂದು ಮತ್ತಂ
ವರ ಕವೀಶ್ವರನುಸುರಿದಂ ಸಂತೋಷದಿಂ ಬಳಿಕಾ || ೮೦ ||

ಶಿವನ ಬಲದೊಳ್ಪುಟ್ಟೆ ಬ್ರಹ್ಮಂ
ಭುವನದೊಳಗಂ ಸೃಜಿಪ ಕಾಲದೊ
ಳವನಿಯೊಳ್ಭಾರತಿಯೊಗೆಯಲಂತವಳ ನೆರೆ ನೋಡಿ ||
ತವಕಿಸುತ್ತಂ ಪಿಡಿವುತಿರಲಾ
ಯುವತಿ ಬೊಮ್ಮನೊಳೆಂದಳಾಗಂ
ಜನಗೆಡುನರೇ ಬೊಮ್ಮ ನಿನ್ನಯ ಪುತ್ರಿ ನಾನಲ್ಲಾ || ೮೧ ||

ಧರೆಯೊಳೆಲ್ಲಂ ಶೀತವಾದರೆ
ಹುರುಷದಿಂದಾ ಕಿಚ್ಚಕಾಯ್ವರು
ಮರಳಿಯಾ ಕಿಚ್ಚಿಂಗೆ ಹಿಮವಾಗಲ್ಕೆಯಾಯಗ್ನಿ ||
ಭರದೊಳೆನುತಂ ಕಾಯ್ವುದಂತಾ
ನಿರದೆ ಸಪ್ಪೆಯದಾಗೆಯುಪ್ಪಂ
ನಿರುತದಿಂದಂ ನೀಡಿಕೊಂಬರು ಬಳಿಕ[ಮಾ]ಲವಣಂ || ೮೨ ||

ಸಪ್ಪೆಯಾದರದೇನ ಮಾಳ್ಪರು
ಒಪ್ಪದಿಂದಾರಾಧ್ಯರೇ ಮಿಗಿ
ಲಪ್ಪ ಸಲೆಯಜ್ಞಾನಿಯಾದರದೇನೆಸಲ್ಬಹುದು ||
ತಪ್ಪದೆಲ್ಲಾ ಜಗಕೆ ನೀನೇ
ಬೊಪ್ಪನಾಗಿರ್ದೀ ಕಪಟದೊಳ
ಗಿಪ್ಪಿರೇ ಕೇಳೆಂದು ನುಡಿದಳ್ವಾಣಿಯಜನೊಡನೆ || ೮೩ ||

ಎಂದ ಮಾತಂ ಕೇಳಿಯಜನಿಂ
ತೆಂದನಾಗಂ ಭಾಷೆ ಕೇಳಾ
ನಂದ ಕಾಮೋದ್ದೀಪನಂ ತಾನೆದ್ದ ಕಾಲದೊಳು ||
ಇಂದು ನಿನ್ನಾ ಬೋಧೆಯರಿವುದೆ
ಯಂದು ಪಿಡಿವುತ್ತಿರಲು ತಾಂ ಭರ
ದಿಂದ ಪೋಗುವ ಕಾಲದೊಳಗಜನ್ನೈದಿದಂ ಬ್ರಹ್ಮಂ || ೮೪ ||

ಆಗ ಭಾರತಿ ಸಿಕ್ಕದೇ ನ್ಮೃಗಿ
ಯೊಗಿ ಯ್ಬೆಯ್ದುವ ಕಾಲದೊಳಗನು
ವಾಗಿ ಎರಳೆಯದಾಗೆ[ಮೊರೆಯಿಡೆ ವಾಣಿ] ಶಶಿಚೂಡಂ ।।
ಬೇಗದಿಂದಾ ವಿಧಿಯ ತಲೆಯಂ
ನಾಗಕಂಕಣನೆಚ್ಚು ಮತ್ತಂ
ರಾಗದಿಂದಾ ವಾಣಿಯಂ ಬ್ರಹ್ಮಂಗೆ ಕೊಟ್ಟನಲಾ ॥ ೮೫ ॥

ದುರುಳತನದಿಂ ಬಂದ ದಕ್ಷನ
ಪರಿಕಿಸದೆ ಶಿವನಿರಲು ನೋವುತೆ
ತಿರುಗಿ ತನ್ನಯ ನಗರಿಗೈತಂದಧಮ ಯಜ್ಞವನು ।।
ಹರ ವಿರೋಧದಿ ಮಾಡಲಾಕ್ಷಣ
ಸುರಮುನೀಂದ್ರಂ ಶಂಭುಗರುಪ
ಲ್ಗರಳಧರನಾಜ್ಞೆಯೆನೆ ಕೈಂಕೊಂಡಾಗುಮಾದೇವಿ ॥ ೮೬ ॥

ಕನಕ ತನ್ಮಯವಾದ ಪುಷ್ಪ[ಕ]
ಕನುವಿನಿಂ ನವರತ್ನ ಚಿತ್ರದ
ಘನ ಪರಿಷ್ಕಾರಂ ಬಳಿಕ್ಕಂ ಮುತ್ತು ತೆತ್ತಿಸಿದ ॥
ವಿನುತ ದಂಡೆಗಳದಕೆ ಮತ್ತಂ
ಮಿನುಪ ವಜ್ರಸ್ತಂಭವನಿಶಂ
ಸನಯ ಸುಪ್ರಾವಾಳ ಸೋಪಾನಂಗಳಿಂ ತೋರ್ಕುಂ ॥ ೮೭ ॥

ಇಂತೆಸೆವ ಪುಷ್ಪಕದೊಳಗಜಾ
ಕಾಂತೆ ಬರುತಿರೆ ದಕ್ಷ ಕಾಣುತೆ
ಯುಂತುದಾಸೀನವನೆ ಮಾಡುತೆ ಶಿವನ ನಿಂದಿಸಲು ॥
ಅಂತರಿಸದಾ ಕ್ಷಣದೊಳಂ ನಿ
ಶ್ಚಿಂತದಿಂದುಮೆ ಹರಣಮಂ ಬಿಡೆ
ಕಂತುಹರ ಕೋಪಿಸಲನಿತಕೆ ಶಿವನ ಹಣೆಗಣ್ಣಿಂ ॥ ೮೮ ॥

ವೀರಭದ್ರಂ ಜನಿಸಿಯಾಗಂ
ಮಾರಹರನಾಜ್ಞೆಯೊಳೆ ಮತ್ತಂ
ಗೌರಿಯಿಂದುದಿಸಿರ್ದು ನಿರ್ಮಲ ಭದ್ರ ಕಾಳಿಯೊಳು ॥
ಸೇರಿ ರೋಮಜ ವರಗಣಂಗಳ
ನಾರತಂ ಬಹುವಿಧದೊಳಾಗಂ
ಭೂರಿಯಿಂದೋಲಯಿಸೆ ಬಂದಂ ದಕ್ಷನಾಲಯಕೆ ॥ ೮೯ ॥

ಬಂದು ದಕ್ಷನ ಯಜ್ಞಶಾಲೆಯ
ನಂದು ಪೊಕ್ಕಿದಿರಾದ ಸುರಕುಲ
ವೃಂದಮಂ ನೋಡುತ್ತೆ ಕೋಪದೊಳಾಗ ವೀರೇಶಂ ||
ಕೊಂದು ದಕ್ಷನ ತಲೆಯ ಖಂಡಿಸಿ
ಯಂದದಿಂ ಕುರಿದಲೆಯನಿತ್ತೊಲ
ವಿಂದ ಶಿವನೆಡೆಗೆಯ್ದಿ ಯೊಪ್ಪಿಸಲನಿತಕಂ ಶಿವನ || ೯೦ ||

ನೆರೆ ಗಣಂಗಳು ಬಿಳಿಯ ಕಬ್ಬಿನ
ಹೊರೆಗಳಂ ಪೂಷಂಗೆ ಕೊಟ್ಟರು
ಮರುಗಿಯದಿತಿಗೆ ಕುಸುಮ ಮಾಲೆಯನಿತ್ತರಂತಲ್ಲಿ ||
ಜರೆದು ರನ್ನದ ಕನ್ನಡಿಯ ಸಲೆ
ಮರೆಯದೆ ತೋರಿದರು ಭಗನಿಗೆ
ಮೆರವಣಿಗೆ ನಿನಗೆಂದು ದಕ್ಷಗೆ ಮಕುಟವಿಕ್ಕಿದರು || ೯೧ ||

ಅಂದು ವೀರೇಶ್ವರನೊಲವಿನಿಂ
ಬಂದ ಸುರರಂ ಹುಚ್ಚಮಾಡುತೆ
ಇಂದುಧರ ಸದ್ಭಕ್ತರೊಪ್ಪಿದರಂತುಮಲ್ಲದೆಯುಂ ||
ಅಂದದಿಂದೆ ಹಿರಣ್ಯ ರಾಕ್ಷಸ
ನೊಂದಿ ತಪಮಂ ಮಾಡಿ ವಾರಿಜ
ಕಂದನಿಂದೆ ವರಂಬಡೆದು ಲೋಕಂಗಳಂ ಹತಿಸೆ || ೯೨ ||

ನರಹರಿಯ ರೂಪಿಂದೆ ಕಂಭದೊ
ಳರರೆ ಪುಟ್ಟುತೆ ವಿಷ್ಣುವಾಗಂ
ಭರದೊಳಂ ತಾ ಘನಹಿರಣ್ಯಕ ದನುಜನಂ ತೊಡೆಯೊ ||
ಳಿರಿಸಿಕೊಳುತಂ ಸಂಜೆಯೊಳಗಂ
ತ್ವರಿತದಿಂ ನಖದಿಂದೆ ಸೀಳುತೆ
ಭರದಿ ಕೊಂದಾತನ ರುಧಿರಮಂ ಕುಡಿದು ಗರ್ವಿಸುತೆ || ೯೩ ||

ಲೋಕಮಂ ಕೊಲುತಿರಲು ವಿಬುಧಾ
ನೀಕವೆಲ್ಲಂ ಕೂಡಿ ಮೊರೆಯಿಡೆ
ಶೋಕಮಂ ಶಿವನರಿದು ವಿರೇಶ್ವರನ ಕರೆದಂದು ||
ಶ್ಲೋಕನೇ ನರಸಿಂಹ ಕೊಬ್ಬಿಯ
ನೇಕರಂ ಕೊಲುತಿರ್ದಪಂ ಗಡ
ನೀ ಕರುಣದಿಂ ಬುದ್ಧಿವೇಳುತೆ ಕೊಂಡು ಬಾರೆನಲು || ೯೪ ||

ಆಗ ವೀರೇಶಂ ನುಡಿದನೆಲೆ
ಭೋಗಿಭೂಷಣ ಚಿತ್ತವಿಸು ಭೂ
ಭಾಗದೊಳು ಮದದಿಂದ ಗರ್ವಿಸಿ ಕೊರ್ಬಿದಚ್ಯುತನ ||
ಬೇಗದಿಂ ಬುದ್ಧಿಯನೆ ಕೇಳದೊ
ಡೀಗಳೇನಂ ಮಾಳ್ಪೆನೆಂದೆನೆ
ನಾಗಕಂಕಣನೆಂದನವನಂ ಕೊಂದು ತಾರೆವಲು || ೯೫ ||

ಅಲ್ಲಿಗೆಯ್ದು ವಿಶೇಷ ಕರುಣನೊ
ಳುಲ್ಲಸನದಿಂ ನಾರಸಿಂಹಂ
ಗೆಲ್ಲ ತೆರದಿಂ ಬುದ್ಧಿಯಂ ಪೇಳಲ್ಕೆ ಕೇಳದಿರೆ ||
ನಿಲ್ಲದೇ ಬಯಲಾಗೆ ಸುರತತಿ
ಮೆಲ್ಲನೆಂದರ್ವೀರಭದ್ರಂ
ಖುಲ್ಲನುಗ್ರಕ್ಕಳ್ಕಿ ಪೋದಂ ಸತ್ತೆವಾವೆಂದು || ೯೬ ||

ಧೀರ ಕರುಣಾಧಾರ ಮಹಿಮಾ
ಗಾರ ವಿಮಲಾಕಾರ ಕಾಮವಿ
ದೂರ ಸಕಲ ವಿಚಾರ ಸದ್ಗುಣಹಾರ ಗಂಭೀರಾ ||
ಕ್ರೂರಮದ ಸಂಹಾರ ನಿಗಮೋ
ದ್ಧಾರ ನಿಶ್ಚಯಪೂರ ಪುಣ್ಯೋ
ದಾರ ನತಮಂದಾರ ನಿರವಿಸೆ ದೇವ ಸುಕುಮಾರ || ೯೭ ||

ಮಾತ್ರದೋಳಾಕಾಶದಿಂದಂ
ನೇತ್ರಕಗ್ಗಳವಾದ ರೂಪಂ
ಚಿತ್ರಮೆನೆ ಧರಿಸುತ್ತೆ ಶರಭಾಂಗ[ವನು]ನರಹರಿಯಂ ||
ಧಾತ್ರಿಯೊಳ್ಪೊಯಿದೆತ್ತಿ ಕೊಲುತಂ
ಸ್ತೋತ್ರಮಂ ಮಾಡಲ್ಕೆ ಕಾಯ್ದಂ
ಪುತ್ರ ಕೇಳೆಂದೊರೆವುತಿರ್ದಂ ಸಿದ್ಧದೇಶಿಕನು || ೯೮ ||

ವರ ದನುಜರಂ ಕೊಂದು ಮತ್ತಂ
ತಿರದೆಯಾ ಜ್ವಾಲಾಂಗ ದನುಜರ
ಕೊರಗಿಸುತ್ತಂ ಬಾಲಿ ಸುಗ್ರೀವರುಗಳೊಡನಂದು ||
ಭರದೆ ಕಾದುವ ಪಂಚಮೇಢ್ರಂ
ಗರರೆ ಷೋಡಶಕರ್ಣವಾತಂ
ಗುರು ಶಿರಂ ಬಳಿಕೆಂಟು ವದನಂ ತೋಳು ಹನ್ನೆರಡು || ೯೯ ||

ಕೋರೆದಾಡೆಗಳೆಂಟು ಮತ್ತಂ
ಮೀರಿ ಚೂರ್ಣಾಂಜನದೊಳೊಂದುತೆ
ತೋರುವುದು ನಾಸಿಕವು ಗಿರಿಯಂತುನ್ನತಾಂಗವದು ॥
ಆರು ಪಾದಂ ಪಂಚ ಮೇಢ್ರಂ
ಮೀರಿ ದಶವೃಷಣಂಗಳೀ ಈ
ರಾರು ಗಾವುದವಾಗೆಯಾತನ ಕೂಡೆ ಸುಗ್ರೀವಂ ॥ ೧೦೦ ॥

ಕಾದುತಿರೆ ನಾವಮರರೆಲ್ಲರು
ಮೋದದಿಂದಂ ನೋಡಲಾಗಂ
ಭೇದಿಸುತ್ತಂ ಬಾಲಿ ಸುಗ್ರೀವರನೆ ನುಂಗುತ್ತ ॥
ಸಾಧಿಸುತ್ತಂ ನಮ್ಮನೆಲ್ಲರ
ಮೋದಿ ನುಂಗಲ್ಕಾವು ಮೊರೆಯಿಡೆ
ಯಾ ದನುಜನಂ ಕೊಂದು ನಮ್ಮಂ ಸಲಹಿದಂ ವೀರಂ ॥ ೧೦೧ ॥

ಬಳಿಕ ಹನುಮಾನುವಿನ ಲಿಂಗವ
ನಳಿಕನಯನದಿ ಸುಟ್ಟರಸುತಿರೆ
ಇಳೆಯ ಜನರುಗಳೆಯ್ದೆ ಮೊರೆಯಿಡೆ ಕೇಳುತೀಶ್ವರನು ॥
ಅಳುಕಿಪಂ ಲೋಕಗಳನೊಬ್ಬಂ
ಗೆಳಸಿ ಮಗನೇಯೆನುತ ಹನುಮನ
ಚಳಿತ ಲಿಂಗಮನೊಲ್ದು ಕೊಟ್ಟಂ ಪಶುಪನಂತವರ್ಗೆ ॥ ೧೦೨ ॥

ಭೃಗು ಮುನೀಶ್ವರನಿತ್ತ ಶಾಪಂ
ಮಿಗೆ ಮಹಾ ಹರಿ ಬಂದನಾಗಂ
ಜಗದೊಳಂದು ದಶಾವತಾರದೆಯಂತುಮುಲ್ಲದೆಯು ॥
ಅಗಣಿತದ ಜನ್ಮಂಗಳೊಳಗಂ
ಬಗೆಗೆ ಚೋದ್ಯಮೆನಲ್ಕೆಯಚ್ಯುತ
ನೊಗೆವನೆಂಬುದೆ ಶಿವನ ಹದಿಮೂರನೆಯ ಲೀಲೆಯಲಾ ॥ ೧೦೩ ॥

ಕ್ಷೀರ ಶರಧಿಯ ನಡುವೆ ಹರಿಯಿರೆ
ವಾರಿಜಾಸನ ಬಂದು ಕಾದ
ಲ್ಧಾರಿಣೀತಳದಲ್ಲಿ ಈರ್ವರ ಪಾಶುಪತವಿರಲು ॥
ಹೋರುತಿರೆ ಹರಿಯಜರು ಭಯದಿಂ
ಮೂರಹರನಂ ನುತಿಸೆ ಕಾಯ್ದನ
13 ನಾರತಂ ತಾನರ್ಧನಾರೀಶ್ವರನದಾಗಿ ಸದಾ ॥ ೧೦೪ ॥

ಇಂದ್ರಕೀಲದೆ ತಪದೊಳಿಹ ದೇ
ವೇಂದ್ರನಣುಗಂಗಾಗಿ ಶಿವ ಶಬ
ರೇಂದ್ರನಾಗುತೆ ಬಂದು ಕಾದಿಯವಂಗೆ ತಾಂ ಮೆಚ್ಚಿ ॥
ರುದ್ರ ಪಾಶುಪತಾಸ್ತ್ರಗಳ ನೆರೆ
ಚಂದ್ರಧರನಂದಿತ್ತನೆಂಬುದೆ
ಸಾಂದ್ರದಿಂ ಪಂಚಾದಶದ ಸಲ್ಲೀಲೆಯೆಂದರಿಯೈ ॥ ೧೧೫ ॥

ಬಲಿಯ ಕೊಂದಚ್ಯುತನ ಕೊಬ್ಬಿದ
ಯೆಲುಗಳಂ ಕಂಕಾಳವಾಗಿಯೆ
ನಲವಿನಿಂ ಶಿವ ಧರಿಸಿದುದೆ ಷೋಡಶದ ಲೀಲೆಯಲಾ ॥
ಚಲಿತದಿಂ ಚಂಡೇಶಪಿಳ್ಳೆಗೆ
ಯೊಲಿದು ಬಂದುದೆಯುಗಜೆಯರಸನ
ಸುಲಲಿತ[ದ] ಹದಿನೇಳನೆಯ[ಶಿವ] ಲೀಲೆಯೆಂದರಿಯೈ ॥ ೧೧೬ ॥

ವಾಸವನ ಸಂಪತ್ತು ಘನ ದೂ
ರ್ವಾಸನಿಂ ಪೋಗಲ್ಕೆ ಕರುಣಾ
ವಾಸನೆನಿಪೀಶ್ವರನನುಜ್ಞೆಯೊಳೈದಿ ಪಾಲ್ಗಡಲಂ ।
ಭಾಸುರದ ಕನಕಾದ್ರಿಯಿಂದಂ
ಲೇಸೆನಿಪ ಸುರದನುಜರೊಲ್ದು ವಿ
ಲಾಸದಿಂ ಕಡೆವಲ್ಲಿ ಹುಟ್ಟಿದ ವಸ್ತುಗಳ ನೋಡಿ ॥ ೧೧೭ ॥

ಒತ್ತಿಯತ್ಯಾಸೆಯೊಳು ಕಡೆಯ
ಲ್ಸುತ್ತಿದಹಿಗರಳವನುಗುಳೆ ಬೇ
ಸತ್ತು ಹರಿಯಜರೋಡೆ ಮೊರೆಯಿಡಲೀಶ್ವರಂ ಬಂದು ॥
ಮತ್ತೆಯಾ ವಿಷಮಂ ಧರಿಸಿ ಕಾ
ಯುತ್ತೆ ಸರ್ವರ ರಕ್ಷಿಸಿದನ
ತ್ಯುತ್ತಮದ ಹದಿನೆಂಟನೆಯ ಶಿವಲೀಲೆಯೆಂದರಿಯೈ ॥ ೧೧೮ ॥

ಹರುಷದಿಂ[ದೆ] ಸಹಸ್ರ ಕಮಲದಿ
ಹರಿ ಶಿವನನರ್ಚಿಸಲು ಬಳಿಕೊಂ
ದರಳು ಕಡಮೆಯುದಾಗೆ ಕಣ್ಣಂ ಕಿತ್ತು ಶಿವನಡಿಗೆ ॥
ತ್ವರಿತದಿಂದರ್ಪಿಸಲು ಶಿವನೊಲಿ
[ದ]ರರೆ ಕೊಟ್ಟಂ ಶಂಖ ಚಕ್ರಮ
ನುರು ಶಿವಂಗಂದಾಯ್ತು ಹತ್ತೊಂಬತ್ತನೆಯ ಲೀಲೆ ॥ ೧೧೯ ॥

ಕರಿದ್ದನುಜನಂ ಕೊಂದು ತಲೆಯಂ
ತರುತಿರಲು ವಿಘ್ನೇಶ ತಡೆದೊಡೆ
ಹರನವನ ತಲೆಗಡಿದು ಬರುತಿರೆ ಬಿಟ್ಟರಾರೆಂದು ||
ಗಿರಿಜೆ ಕೇಳಲ್ಕಭವನಾತನ
ಶರಿರಕಂ ಗಜದಾನವನ ಬಂ
ಧುರದ ತಲೆಯಂ ಸೇರಿಸಿದುದೇ ವಿಂಶತಿಯ ಲೀಲೆ || ೧೧೦ ||

ಗಿರಿಜೆಯಂ ಕಲ್ಯಾಣವಾಗು
ತ್ತುರವಣೆಯೊಳ್ಪೈತಂದು ಸಲೆ ಮಂ
ದರಗಿರಿಯೊಳಂ ದೇವಿಯುಂ ಕೂಡುವ ಸಮಯದಲ್ಲಿ ||
ಸುರರು ತಾರಕಗಳ್ಕಿ ಬಂದಾ
ಹರಗೆ ಮೊರೆಯಿಡಲೆಂದು ಸರ್ವರು
ಬರುತಿರಲು ನಾರದ ಮುನೀಶಂ ಕಾಣುತಿಂತೆಂದಂ || ೧೧೧ ||

ಕೇಳಿರೇ ಅಮರರಿರ ದೇವಿಯ
ರೇಳಿಗೆಯೊಳಂ ಪೆತ್ತ ಮಗನಿಂ
ಪಾಳಿಯಿಂ ನಿವಳಿವರದರಿಂ ಶಿವೆಯುದರದಲ್ಲಿ (?) ||
ಪೇಳಲೇಂ ಬಾಲಕನ ಜನನಂ
ಭಾಳಲೋಚನ ಬೇಡವೆಂದುದೆ
ಏಳಿಗೆಯೊಳಂ ಬೇಡಿಕೊಳ್ಳೆನಲಮರರ್ಪೈತಂದು || ೧೧೨ ||

ಗಿರಿಜೆಯುದರದೊಳಣುಗ ಬೇಡೆನು
ತರರೆ ಶರ್ವನ ವೀರ್ಯಮುಂ ಬಂ
ದುರವಣಿಸಿ ದೇವರ್ಕಳೆಲ್ಲಂ ಕೊಂಡು ತಾವೆಲ್ಲ ||
ಅರಿದೆನಿಪ ಗರ್ಭಂಗಳಾಗ
ಲ್ಕರುಣದಿಂದೀಶಂ ನಿವಾರಿಸಿ
ಶರವಣದೊಳಗಂ ಬಿಡಿಸಿ ಎಲ್ಲರ ಬಾಧೆಯಂ ನೀಗಿ || ೧೧೩ ||

ಇರಲನಿತರೊಳ್ ಸ್ಕಂದನಾಗುತೆ
ಹರನ ವೀರ್ಯಂ ಬಳಿಕ ಬಲಿದಾ
ಗುರುತರದ ಷಟ್ಕೃತ್ತಿಕೆಯರಿಂದಾರು ಮುಖವಾಗಿ ||
ಧರೆಯೊಳೆಲ್ಲರ ಕೊಲ್ವ ತಾರಕ
ವರದನುಜನಂ ಹುಟ್ಟಿದೇಳ್ದಿನ
ಕರರೆ ಕೊಂದುದೆಯೇಕ ವಿಂಶತಿಯೆಂಬ ಲೀಲೆಯಲಾ || ೧೧೪ ||

ಮುಂದೆ ಕೇಳೈ ನಾಲ್ಕು ಮೂರೆರ
ಡೊಂದಡಿಯ ಧರ್ಮಂಗಳಂ ನಲ
ವಿಂದೆ ನಡಸುತೆ ನಾಲ್ಕು ಯುಗದೊಳ್ಧರ್ಮರೂಪಿಂದ ||
ಅಂದದಿಂ ರಾಜಿಷುವ ವೃಷಭನ
ಚಂದದಗ್ಗದ ಲೀಲೆಯ್ಸೆಯೊಲ
ವಿಂದೆ ಇಪ್ಪತ್ತೆರಡಲಾ[ಯೆನುತೆಂ]ದ ಮಹಸಿದ್ಧಂ || ೧೧೫ ||

ದಾರು ವನದಲ್ಲಿರ್ದ ಋಷಿಗಳ
ಪಾರ ಬರನಾಗಲ್ಕೆ ಗೌತಮು
ನಾ ರಮಾಕರದಾಶ್ರಮುಕೆ ಬರೆ ಕಂಡು ಸಂತಸದೆ ||
ಧೀರ ಮುನಿ ಹನ್ನೆರಡು ವರುಷಂ
ಸೇರಿಕೊಂಡಿರ್ಪರಿಗೆ ಬಹು ಸ
ತ್ಕಾರಮಂ ಮಾಡಿರಿಸಿಕೊಂಡಿರ್ದಂ ಮಹಾಪುರುಷಂ || ೧೧೬ ||

ಅನಿತಕಾ ಬರ ತಿಳಿಯೆ ಗೌತಮು
ಮುನಿಯು ತಮ್ಮಾಶ್ರ[ಮು]ಕೆ ಪೋದಪೆ
ವೆನುತೆ ದಾರುವನಾಶ್ರಮುದ ಋಷಿವಿತತಿ ಕೇಳಲ್ಕೆ ||
ಅನಿಬರಂ ಪ್ರಿಯದಿಂದ ಕಳುಹದೆ
ಯನುನಯದಿ ತಡೆಯಲ್ಕೆ ಪಾತಕ
ರನಘನಂ ದೂರಲ್ಕೆ ಮಾಯದ ಪಶುವ ರಚಿಸುತ್ತೆ || ೧೧೭ ||

ಗೌತಮುನ ಗದ್ದೆಯ ತೆವರೊಳದ
ನೋತುವಿರಿಸಲ್ಕಂಡು ಮುನಿಪಂ
ಪ್ರೀತಿಯಿಂದಿದು ಪೈರಮೇಯಲಿಯಂದು ಹೊಡೆಯಲ್ಕೆ ||
ಆ ತತುಕ್ಷಣದಲ್ಲಿ ಬೀಳೆನು
ತಾತುರದೆ ಬೀಳುತ್ತೆ ಸಾಯ
ಲ್ಪಾತಕಂ ಮುನಿಗಾಯಿತೆನುತಂ ಪೊರಮಡಲ್ಕಂದು || ೧೧೮ ||

ಮತ್ತೆ ಯವರಂ ತಡೆದು ಭವಹರ
ನುತ್ತಮಾಂಗದ ಗಂಗೆಯಂ ಪರಿ
ಸುತ್ತೆ ನೋವಂ ಪಡೆಯಲವರ್ಗಳ್ ಕೇಳದೇ ಪೋಗೆ ||
ಚಿತ್ತದೊಳ್ಖತಿ ಹುಟ್ಟೆ ಶಾಪವ
ನಿತ್ತನವರ್ಗಳಿಗೆಂತೆನಲು ಕೇ
ಳುತ್ತಮೋತ್ತಮು ಶಿವನನರ್ಚಿಸ ಬೇಡ[ನೀ]ವೆಂದು || ೧೧೯ ||

ಮರಳಿ ನಾನಾ ಬಗೆಯ ಸಮಯದ
ದುರುಳ ಪಾತಕರಾಗಿ ವರ್ತಿಸಿ
ನರಕಮಂ ನೀವ್ಪೈದಿಯೆನುತಂ ಶಾಪಮಂ ಕೊಡಲು ||
ಹರಿಯವರ್ಗಳಿಗಂದು ಶಿವನಂ
ಪರಿಹರಿಪ ತೆರದಿಂದ ಬೋಧಿಸಿ
ಹರನ ಭಜನೆಯ ಬಿಡಿಸಲೆಲ್ಲರು ಬಹು ಸಮಯರಾಗಿ || ೧೨೦ ||

ಬಂದು ಗೌತಮನೊಡನೆ ಶಿವನಿ
ಲ್ಲೆಂದು ವಾದಿಸಿಯವರ ವಾದವ
ನಂದು ಮುರಿಯಲ್ಕೆಳಿಯಚ್ಯುತನಾ ಮುನಿಯೊಳಾಗ ||
ಕುಂದದೇ ವಾದಿಸಲು ಹರಿ ಮುನಿ
ದಿಂದುಶೇಖರಗರುಪೆ ಶಿವನ್ನೈ
ತಂದು ವಾದಿಸಿ ಸೋತನಿವನೆಂತೆಂದ ಗೌತಮಗೆ || ೧೨೧ ||

ವಸುಧೆಯೊಳು ಶಿವನಿಲ್ಲವೆಂದಾ
ನೊಸಲ ಕಣ್ಣಂ ತೋರಿದಪೆನೆನೆ
ರಸೆಯೊಳಂ ಶಿವನುಂಟೆನುತ್ತಂ ಪಾದದೊಳ್ಕಣ್ಣಂ ||
ಸಸಿನೆ ತೋರ್ಪೆಂ ನೋಡೆನುತ್ತಾ
ಗಸಮನಯನಗೆ ಗೌತಮಂ ತೋ
ರಿಸಲು ಶಿವನೊಲಿದಕ್ಷಪಾದನೆನಿಪ್ಪ ಪೆಸರಿತ್ತಂ || ೧೨೨ ||

ಎಂದು ತೋಂಟದ ಸಿದ್ಧನಾಗೊಲ
ವಿಂದ ಕೇಳಿಪ್ಪತ್ತು ಮೂರನೆ
ಯಂದದತಿಶಯ ಲೀಲೆಯಂ ಕೇಳುತ್ತಿರಲ್ಬಕ್ತ ||
ವೃಂದವೆಲ್ಲಂ ಕೇಳಿ ಸಂತಸ
ದಿಂದೆ ಕೊಂಡಾಡುತ್ತಿರಲ್ಮುದ
ದಿಂದೆ ಮುಂದಣ ಕಥೆಯನೊರೆವುತ್ತಿರ್ದನತಿಶಯದಿಂ || ೧೨೩ ||

ಬಳಿಕ ದಕ್ಷಿಣ ಮೂರ್ತಿಯಾಗು
ತ್ತಳಿಕ ಲೋಚನನಾಜ್ಞೆಯಿಂದಂ
ಇಳೆಯೊಳಾಗಂ ನಂದಿಕೇಶ್ವರ ಬಂದು ಮುನಿಗಳ್ಗೆ ||
ಎಳಸಿ ಬೋಧಿಸಿಯವರನೆಲ್ಲರ
ಕಳುಪಿದಂ ಶಿವಲೋಕಕಿಲ್ಲಿಗೆ
ಎಳೆಯನೇ ಇಪ್ಪತ್ತ ನಾಲ್ಕನೆ ಲೀಲೆಯೆಂದರಿಯೈ || ೧೨೪ ||

ಹರಿಯಜರು ತಮ್ಮೊಳಗೆ ತಾವೇ
ಸರಿಮಿಗಿಲ್ಗಳಿಗಾಗ ಪೋರು
ತ್ತಿರೆ ಶಿವಂ ಬಂದವರ ವಾದವ ನಿಲಿಸಬೇಕೆಂದು ॥
ಧರೆಯೊಳೊಂದುರಿಲಿಂಗವಾಗ
ಲ್ಕೆರಗಿ ಕಿರಿ ಖಗವಾದರಚ್ಯುತ
ಸರಸಿಜಾನನರೆಂಬುದಿಪ್ಪತ್ತೈದು ಲೀಲೆಯಲಾ ॥ ೧೨೫ ॥

ಎಂದು ತೋಂಟದ ದೇಶಿಕಂ ನಲ
ವಿಂದ ಇಪ್ಪತ್ತೈದು ಲೀಲೆಯ
ಚಂದದಿಂದರುಪುತ್ತೆ ಷಟ್ಸ್ಥಲಧೀರ ಭಕ್ತರ್ಗೆ ॥
ಅಂದದಿಂದಂ ನಾವು ಪೇಳುವೆ
ವೆಂದು ತೊಡಗಿದನಮೃತದಗ್ಗದ
ಮಂದವೃಷ್ಟಿಯಿದೆಂಬ ತೆರದಿಂ ತಾನದೆಂತೆನಲು ॥ ೧೨೬ ॥

ಶಸ್ತ ಶಶಿಲೇಖಾವಿಭೂಷಿತ
ಮಸ್ತಕಾಚ್ಯುತ ನೇತ್ರಪಾದ ಸ
ಮಸ್ತನಿಗಮಶಿರೋವರೋಧವಿಬಾಧ ಗತಭೇದ ॥
ನಿಸ್ತುಲಾನಂದಾತ್ಮ ನಿರುಪಮ
ನಿಸ್ತರಂಗ ನಿರಂಗ ತೇಜೋ
ಧ್ವಸ್ತ ದೋಷ ಪತಂಗ ತೋಂಟದ ಸಿದ್ಧಲಿಂಗ ಜಯಾ ॥ ೧೨೭ ॥

ಇದು ವಿಮಲಗುರು ತೋಂಟದಾರ್ಯನ
ಪದಕಮಲ ಷಟ್ಚರಣನೆನಿಸುವ
ಸದಮಲದ ಸನ್ಮಲ್ಲಣಾರ್ಯನ ಕುಲಶರಧಿ ಚಂದ್ರಾ ॥
ಪದುಳದಿಂ ಶಾಂತೇಶನೊರೆದೀ
ವಿದಿತ ಸಿದ್ಧೇಶನ ಪುರಾಣವ
ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥಮೊಂದುವುದು ॥ ೧೨೮ ॥

ಅಂತುಸಂಧಿ ೧೬ಕ್ಕಂ ಪದನು ೯೩೫ಕ್ಕಂ

ಮಂಗಳಂ

ಹದಿನೇಳನೆಯ ಸಂಧಿ

ವಿಮಲ ಷಟ್ಸ್ಥಲದಾ ಸ್ವರೂಪಂ
ಕ್ರಮದೊಳಂ ಸದ್ಭಕ್ತರಾಲಿಸೆ
ರಮಣನೆನಿಸುವ ತೋಂಟದುರು ಸಿದ್ಧೇಶನುಸುರಿದನು ||

[ಇದು 'ಸಿದ್ಧದೇಶಿಕನೆ'ಯೆಂಬ ನಾಮಗೋಪ್ಯದ ಪದ]
ಸಿರಿಯ ಎರೆಯನ ನಯನ ಪಾದನೆ
ಸರಸ ಶುದ್ಧ ಸುದೇಹನೇ ಶಶಿ
ಧರನೆ ಕರುಣಾಗಾರನೇ ಕಮನೀಯ ಮಂದಿರನೇ ||
ಗುರುವೆ ಸದ್ಗುಣದಾಶ್ರಯನೆ ನೀಂ
ಕರುಣದಿಂದಂ ಧರೆಯ ಪಾಲಿಪು
ದುರುತರದ ನವ ಸಿದ್ಧದೇಶಿಕ [ಶ್ರೀ] ಮಹಾಪ್ರಭುವೆ || ೧ ||

ಕ್ರಿಮಿಗಳಿಗೆ ರೆಕ್ಕೆಯ ಪುಳುಗಳವ
ಕಮಮ ಕೀಟಕವಧಿಕವವ[ಕಂ]
ಕ್ರಮದೆ ಖಗತತಿಯವಕೆ ಮೃಗ ಕುಲವವಕೆ ಪಶುಜಾತಿ ||
ಅಮಿತದಿಂದವ[ಕ]ಧಿಕ ನರರಂ
ತಮರ್ದು ಭೂಸುರರಧಿಕವವರಿಗೆ
ಯಮಮ ಕ್ರತುಬುದ್ಧಿಗಳವರ್ಗಂ ಮಿಗಿಲಲಾ ಮತ್ತೆ || ೨ ||

ಕ್ರತು ಬುದ್ಧಿಗ[ಳೊ]ಳವರ್ಗೆಯಧಿಕಂ
ಸುತನೆ ಕೇಳ್ಕರ್ತಾರರಧಿಕಂ
ವಿತತ ಕರ್ತಾರರಿಗೆ ಸನ್ಯಾಸಿಗಳು ಮಿಗಿಲ[ಹರೀ] ||
ಕ್ಷಿತಿಯೊಳಂ ವಿಜ್ಞಾನಿಗ
ಳ್ಮ[ತ್ತೆತಿ]ಶಯರು ಶಿವಪೂಜಕರ್ಸಲೆ
ಯತುಳ ಲಿಂಗಾಂಗಿಳವರ್ಗಂ ಷಟ್ಸ್ಥಲಿಗಳಧಿಕಂ || ೩ ||

ಅವರು ಲಿಂಗಾಂಗಿಗಳು ವಂದ್ಯರು
ವವರು ಮತ್ತೆ ಜಿತೇಂದ್ರಿಯರು ಬಳಿ
ಕವರು ಸನ್ಮಾಹಾತ್ಮರದರಿಂ ಷಟ್ಸ್ಥಲದೊಳೆಸೆವಾ ||
ವಿವಿಧ ಭಕ್ತರಿಗಾರು ಸಲೆ ಕೇ
ಳ್ಪವರ ಮೂಲೋಕದೊಳಗೆನುತಂ
ಸವಿನಯದೊಳಿಂತೆಂದು ನುಡಿದಂ ಸಿದ್ಧದೇಶಿಕನು || ೪ ||

ಪರವೆ ಮಾಯೆಯೆನಿಪ್ಪ ಪಾದಿಯೊ
ಳರರೆ ಪರಮಂ ಜೀವನೆಂಬೀ
ಎರಡು ಪರಿಯೊಳ್ತಿಳಿವನಾ ವೇದಾಂತಿ ಮಲ ಮಾಯೆ ॥
ವರ ಮಹಾ ಕರ್ಮಂಗಳಿವು ಶಂ
ಕರನ ನಿರ್ಮಲ ಶಕ್ತಿ ಪಾತದೆ
ಪರಮ ಮೋಕ್ಷಮನಾತ್ಮನೈದುವನೆಂಬ ಸಿದ್ಧಾಂತಿ ॥ ೫ ॥

ಎರಡು ಮತದವರಾಗ ಸಾಧಿಪ
ಹರನೆಯಂಗಂ ಪ್ರಾಣವಾದಂ
ಶರಣಗೆಂತೆನೆ ಹಲವು ಮತದಗೊಡೆಯ ಬಹವ್ರೋಽಪಿ ॥
ಹರುಷದಿಂ ತಾನೆಂಬ ಶ್ರುತಿಯಿಂ
ಶರಣನೀ ಶಿವನವನ ತನುವಿಂ
ಪರಮ ಮಂತ್ರಂ ತೋರಿತದರಿಂ ಲಿಂಗ ಜನಿಸಿತ್ತು ॥ ೬ ॥

ಲಿಂಗ ಮಂತ್ರಗಳೆರಡು ತನಗಂ
ತಂಗವಾದವನವನೆ ಮತ್ತಂ
ತುಂಗದಿಂದಂ ವೀರಶೈವಂ ಪರಶಿವಂ ಮತ್ತೆ ॥
ಮಂಗಲದ ಮಹದಾದಿ ಘನ ತ
ತ್ವಂಗಳಿಗೆ ಸುಸ್ಥಾನವದರಿಂ
ಪಿಂಗದೇ ಕೇಳ್ತನ್ನ ಶಕ್ತಿಕ್ಷೋಭಮಾತ್ರದೊಳು ॥ ೭ ॥

ಉರುತರ ಸ್ಥಲ ನಾಮ ಪರವೇ
ಯೆರಡರೊಳಗೊಂದಂಗವಂತಾ
ನಿರವೆ ಕೇಳಿತ್ತೊಂದು ಲಿಂಗಸ್ಥಲವವೆಂದೆರಡು ॥
ಸರಸ ಭೇದಗಳಾದವಂತಾ
ಪರಿಯ ಪೇಳುವೆನೆಂದು ತೋಂಟದ
ಗುರುವರಂ ನುಡಿವುತ್ತಮಿರ್ದಂ ಭಕ್ತರುತ್ಸವಿಸೆ ॥ ೮ ॥

ಆಗಸವೆ ಘಟಭೇದದಿಂದೆರ
ಡಾಗಿ ತೋರುವ ಮಾಳ್ಕೆ[ಯಿ]ಂದನು
ವಾಗಿ ಶಕ್ತಿಯೆ ಲಿಂಗ ಸುಸ್ಥಲವಾಯಿತಾ ಭಕ್ತಿ ॥
ಹಾಂಗೆಯಂಗಸುಸ್ಥಲವದಾಯಿ
ತ್ತೀಗ ಶಕ್ತಿಮಹಾಗ್ನಿಯೈಯ್ದನು
ರಾಗದಿಂದಂ ಭಕ್ತಿ ದೀಪವಿವೆರಡುವೊಂದೆಯಲಾ ॥ ೯ ॥

ಶಕ್ತಿಯೊಳ್ಪ್ರಪಂಚವುದಯಿಸಿ
ಭಕ್ತಿಯೊಳು ಲಯವೈದುವುದು ಕೇ
ಳ್ಭಕ್ತಿಯೇ ಮಿಗಿಲಪ್ಪುದಂತಾ ಶಕ್ತಿಗಂ ಬಳಿಕ ||
ಮುಕ್ತನೇ ಕೇಳಿನ್ನವಿಪ್ಪ ಸು
ರಕ್ತಿಯಿಂದಂ ಪ್ರಾಣಭಾವ
ಪ್ರೋಕ್ತದಿಂದೀ ಮೂರು ತೆರನಾಯಿತ್ತು ಬಳಿಕಿಂತು || ೧೦ ||

ನವ ಮಹೇಶ್ವರ ಘನ ಸದಾಶಿವ
ಶಿವ ಮಹಾಲಿಂಗತ್ರಯಂ ಕೇ
ಳವರೊಳಂ ಸಲೆಯಾರು ಲಿಂಗಂಗಳಾ[ದ]ವೆಂತೆನಲು ||
ತವಕದಿಂದಂ ಭಾವಲಿಂಗದೆ
ತವೆ ಮಹಾಪ್ರಾಸಾದ ಲಿಂಗಂ
ಜವದೆ ಸುಪ್ರಾಣದೊಳು ವರ ಶಿವನಿಷ್ಟಲಿಂಗದೊಳು || ೧೧ ||

ಗುರು ಸದಾಚಾರಂಗಳಾರೈ
ತರುಣವಂಗಸ್ಥಲವೆ ಮೂರಾ
ಯ್ತರರೆ ಯೋಗಾಂಗಂ ಮಹಾ ಭೋಗಾಂಗವಂತಾಗಿ ||
ಸ್ಥಿರದೊಳಂ ತ್ಯಾಗಾಂಗವೆಂಬೀ
ಯುರುತರದೆ ಮೂರಾದವವರೊ
ಳ್ತ್ವರಿತದಿಂ ಯೋಗಾಂಗದಿಂದೈಕ್ಯಂ ಶರಣರಿನ್ನು || ೧೨ ||

ಭೋಗತನುವಿಂ ಪ್ರಾಣಲಿಂಗಿಯು
ರಾಗದಿಂ ಪ್ರಾಸಾದಿಗಳ್ಸಲೆ
ಭಾಗಧೇಯನೆ ಹರುಷದಿಂ ತ್ಯಾಗಾಂಗದಿಂ ಮತ್ತೆ ||
ಆಗಲೇ ಮಾಹೇಶ ಭಕ್ತರ
ದಾಗಿಯಾದಪೂರ್ವ ಕಕ್ಷೆಯ
ಬೇಗದಿಂ ವೇದಾಂತಿಗಳ್ಸಿದ್ಧಾಂತಿಗಳ್ಶರಣಂ || ೧೩ ||

ಅಪ್ಪರೆಂತೆನೆ ಷಟ್ಸ್ಥಲನುನಂ
ದಪ್ಪಬೇಕೆಂದೆನುತೆಯಾಗಂ
ತಪ್ಪದೇ ಬಹು ಜನ್ಮದಿಂದಂ ಬಂದು ರಾಗದೊಳು ||
ಒಪ್ಪದಿಂದಂ ಪಿಂಡ ರೂಪಿಂ
ದಿಪ್ಪರೆಂದಾ ಸಿದ್ಧದೇಶಿಕ
ನಪ್ಪ ಮೂರ್ತಿ ವಿಶೇಷದಿಂದಂ ಪೇಳಿದಂ ಕೂರ್ತು || ೧೪ ||

ಆ ನವೀನದ ಪಿಂಡರೂಪಂ
ತಾನೆ ತಳೆದನ ಮೂರ್ತಿ ಮೂರನು
ಮಾನವಿಲ್ಲದೆ ತೋರ್ಪುದಂತಾ ಸ್ಥೂಲ ತನು ಸೂಕ್ಷ್ಮ ||
ತಾನುವೇ ಕಾರಣ ತನುತ್ರಯು
ಹಾನಿಯಿಲ್ಲದೆಯಾಗಿಯಾತನ
ಹೀನವಿಲ್ಲದ ತನುಗಳಂ ಕುರಿತಾಗ ಪರಶಿವನು || ೧೫ ||

ಇಷ್ಟಲಿಂಗಂ ಪ್ರಾಣಲಿಂಗಂ
ತುಷ್ಟನೇ ಕೇಳ್ಭಾವಲಿಂಗಂ
ದೃಷ್ಟದಿಂ ಮೂ[ರಾ]ದವಂಗಸ್ಥಲಗಳೇ ಮೂರು ||
ಶ್ರೇಷ್ಠದಿಂ ಸ್ಥೂಲಾಂಗವೇ ಕೇಳ್
ಶ್ರೇಷ್ಠ ಭಕ್ತ ಮಹೇಶ್ವರಂ ತಾಂ
ಕಷ್ಟವಿಲ್ಲದೆ ಸೂಕ್ಷ್ಮತನುವೆರಡಾದವೆಂತೆನಲು || ೧೬ ||

ಹರುಷದಿಂ ಪ್ರಾಸಾದಿಯಂ ತಾ
ನಿರದೆ ಕೇಳಾ ಪ್ರಾಣಲಿಂಗಿಗ
ಳಿರದೆ ಕಾರಣದೇಹವೇ ಶರಣೈಕ್ಯರೆಂದೀಗಾ ||
ಧರೆಯೊಳಾದರೆನುತ್ತೆ ತೋಂಟದ
ಗುರುತರದ ಘನಸಿದ್ಧಲಿಂಗಂ
ಹರುಷದಿಂದಂ ಪೇಳ್ದನಂತಾ ಭಕ್ತತತಿ ಮೆಚ್ಚೆ || ೧೭ ||

ಇಷ್ಟದಿಂದಾಚಾರ ಗುರುವೈ
ಶ್ರೇಷ್ಠನೇ ಸತ್ಪ್ರಾಣದಿಂದಂ
ನಷ್ಟವಿಲ್ಲದ ಶಿವಚರಂ ಸದ್ಭಾವಲಿಂಗದೊಳು ||
ತುಷ್ಟನೇ ಪ್ರಾಸಾದಲಿಂಗಂ
ಸೃಷ್ಟದಿಂದಂ ಮಹಸುಲಿಂಗಂ
ಕಷ್ಟವಿಲ್ಲದೆಯಾದೆನೆನುತಂ ಪೇಳ್ದ ಸಿದ್ಧೇಶಂ || ೧೮ ||

ವಿದಿತದಿಂ ಲಿಂಗಾಂಗ ಸಂಬಂ
ಧದ ವಿವರವೇನೆಂದು ಕೇಳುವ
ಸದಮಲದ ಷಣ್ಮುಖನೊಳೆಂದಂ ಶಂಭು ದಯದಿಂದೆ ||
ಪದುಳದಿಂದೆ ಪಿನಾಕಿ ತಾನೇ
ಯೊದಗಿ ಲಿಂಗದ ರೂಪನಾಂತಂ
ಚದುರನೇ ನಿನ್ನಂಗರೂಪಂ ಸಚ್ಚಿದಾನಂದಂ || ೧೯ ||

ಸುಲಲಿತದ ಜೀವಾತ್ಮನಲ್ಲಂ
ಸುಲಭದಿಂ ಭವಭಾವಯಂತ್ರಾ
ಕಲಿತನ್ನೈ ಘನತತ್ಪದಂ ಲಿಂಗಂ ಬಳಿಕ್ಕೀಗ ॥
ಒಲವಿನಿಂದಾ ತ್ವಂ ಪದಂ ಮಂ
ಜುಲದೆಯಂಗಂ ಜೀವ ಸಂಸಾರೌ
ಘ ಲಕ್ಷಣವೆಂದು ಪೇಳ್ದಂ ಸಿದ್ಧದೇಶಿಕನು ॥ ೨೦ ॥

ಲೀಯ್ವೆನಲ್ಕದು ಲಯವದಲ್ಲ[ದೆ]
ಯೊಯ್ಯರದಿ ಗಾ ಯೆಂಬುದೇ ಪರಿ
ಯಾಯದಿಂ ಗಮನಾರ್ಥವದರಿಂದಂ ವಿಮಲ ಲಿಂಗಂ
ಕಾಯಜನೆಯಂ ಎನಲನಾರತ
ಧೀಯುತದ ಸದ್ಬ್ರಹ್ಮವನಿಶಂ
ಗಾಯೆನಲ್ಗಮಿಪರ್ಥವಿರ[ದೇಯೊಂ]ದುಗೂಡಲ್ಕೆ ॥ ೨೧ ॥

ಹರುಷದಿಂ ಲಿಂಗಾಂಗ ಘನ ಬಂ
ಧುರದ ನವ ಸ[ಂಬಂಧ]ವೆಂಬುದು
ಮರಳಿ ತತ್ಪದವೆನಲು ಲಿಂಗಂ ತ್ವಂ ಪದವೆಯಂಗಂ ॥
ಅರರೆಯಸಿಪದವೆಂಬುದೇ ಸು
ಸ್ಥಿರದ ಸಂಬಂಧಂಗಳೀ ಮೂ
ರಿರದೆಯೊಗಂ ತತ್ವಮಸಿಯೆಂಬರ್ಥವೆಂದರಿಯ್ಯೆ ॥ ೨೨ ॥

ಶಿವನೆ ಲಿಂಗಂ ದೇವಿಯಂಗಂ
ಭುವಿಯೊಳೆರಡರ ಕೂಟವೇ ಕೇ
ಳವನಿಯೊಳು ಲಿಂಗಾಂಗ ಸಂಬಂಧಂ ಬಳಿಕ್ಕಂಗಂ ॥
ತವಕದಿಂ ಸದ್ಭಕ್ತ ಮತ್ತಂ
ಶಿವನೆ ಲಿಂಗಂ ಕೂಡಲಂತಿವು
ವಿವಿಧ ಲಿಂಗಾಂಗಂ ಮಹಾ ಸಂಬಂಧವೆಂದರಿಯ್ಯೆ ॥ ೨೩ ॥

ಕ್ಷಿತಿಯೊಳಗೆಯಂತೇಕಮೇವಾ
ದ್ವಿತಿಯದೊಳ್ ಲಿಂಗಾಂಗ ಘನ ಸ
ಮ್ಮತವಲಾ ಮೂರರೊಳವಂಗಂ ಲಿಂಗ ಸಂಬಂಧಂ ॥
ನುತಿಸೆ ನಾಲ್ಕರೊಳಲ್ಲಿ[ದ್ವೈವಿಧ]
ದತಿಶಯದ ಲಿಂಗಾಂಗಸಂಗಂ
ಮತಿಯೊಳ್ಳೆದನೆಯಲ್ಲಿ ಕೇಳ್ಳೆ ಮುಂದದೆಂತೆನಲು ॥ ೨೪ ॥

ಲಲಿತದಷ್ಟಾದಶ ಸಲಿಂಗಾ
ಕಲಿತ ಸಂಬಂಧಂ ಬಳಿಕ್ಕಂ
ನಲವಿನಿಂದಾರಗೆಯೊಳಂಗ ಸುಲಿಂಗದಾಕೃತಿಯ್ಕೆ ||
ಸುಲಭದ್ವೈವತ್ತೇಳು ನಾಲ್ವ
ತ್ತಲಘು ನಾಲ್ಕು ಶತೋತ್ತರಂಗಳು
ನಲವಿನಿಂದೊಪ್ಪುವವೆನುತ್ತಂ ನುಡಿದನಂದೀಶಂ || ೨೫ ||

ಇಂತೆಸೆವ ಸುಸ್ಥಲಗಳೊಳಗೋ
